ಶೀ:- ನೀ ನನ್ನ ಬಿಟ್ಟುಬೇಡ

ಲೇ:- ಉಶಿವರಾಜು ರೆಡ್ಡೀಬೂಬು

1954

ಶಾರದಾಪ್ರಕಟನಾಲಯ

ಬೆಂಗಳೂರು.ಸಿ 1954

... ನನ್ನ ಮುಟ್ಟಬೇಡ

ಬಸವರಾಜ ಕಟ್ಟೀಮನಿ



Mr. K. Srinivasa Rao

Sundar Cafe Boarding House.

ಶಾರದಾ ಸಾಹಿತ್ಯ ಮಾಲೆ - ೩೬

ನೀ ನನ್ನ ಮುಟ್ಟಬೇಡ

ಕಾದಂಬರಿ

ಲೇಖಕರು :
ಬಸವರಾಜ ಕಟ್ಟೀಮನಿ

ಶಾರದಾ ಪ್ರಕಟನಾಲಯ
ಬೆಂಗಳೂರು ೨.

ಮುದ್ರಣ :

ಗೋಲ್ಡನ್ ಪ್ರಿಂಟಿಂಗ್ ವರ್ಕ್ಸ್

ಮನವಾರ್ತೆಪೇಟೆ,

ಬೆಂಗಳೂರು.

ರಕ್ಷಾಪತ್ರದ ಮುದ್ರಣ :

ಮೋಹನ್ ಪ್ರೆಸ್

ಬೆಂಗಳೂರು

ರಕ್ಷಾಪತ್ರದ ರಚನೆ :

ಜಿ. ಕೆ. ಮೂರ್ತಿ

ಪಡಿಯಚ್ಚು :

ಷಣ್ಮುಗಂ ಪ್ರೋಸೆಸ್ ಸ್ಟುಡಿಯೊ

ಬೆಂಗಳೂರು

ಬೆಲೆ :

ಒಂದೂವರೆ ರೂಪಾಯಿ

ಪ್ರಥಮ ಮುದ್ರಣ : ಮಾರ್ಚಿ ೧೯೫೪.

'ಮಾಲೆ'ಯ ವಾರ್ಷಿಕ ಚಂದಾ :

ಆರೂವರೆ ರೂಪಾಯಿ

(ಅಂಚೆ ವೆಚ್ಚ ಪ್ರತ್ಯೇಕ)

ಸಮರ್ಪಣ :

ಗೆ|| ಶ್ರೀ. ಅ. ನ. ಕೃಷ್ಣರಾಯರಿಗೆ

ಆದರಪೂರ್ವಕವಾಗಿ

ಈ ಲೇಖಕರ ಇತರ ಕೃತಿಗಳು

ಕಾದಂಬರಿ

ಸ್ವಾತಂತ್ರ್ಯದೆಡೆಗೆ
ಮಾಡಿ ಮಡಿದವರು
ಜ್ವಾಲಾಮುಖಿಯ ಮೇಲೆ
ಮೋಹದ ಬಲೆಯಲ್ಲಿ
ಬೀದಿಯಲ್ಲಿ ಬಿದ್ದವಳು
ಮಣ್ಣು ಮತ್ತು ಹೆಣ್ಣು
ಖಾನಾವಳಿಯ ನೀಲಾ

ಸಣ್ಣ ಕಥೆ

ಕಾರವಾನ್
ಆಗಸ್ಟ್ ಒಂಭತ್ತು
ಗುಲಾಬಿ ಹೂ
ಸೆರೆಯಿಂದ ಹೊರಗೆ
ಜೋಳದ ಬೆಳೆಯ ನಡುವೆ
ಜರತಾರಿ ಜಗದ್ಗುರು

ನೀ ನನ್ನ ಮುಟ್ಟಬೇಡ

ಮೊದಲನೆಯ ಭಾಗ

ತಾಯಿ

೧

ತಲೆಯ ಮೇಲೊಂದು ಪುಟ್ಟ ಗಂಟು ಇಟ್ಟುಕೊಂಡು, ಉಟ್ಟ ಸೀರೆಯನ್ನು ಹಿಂದೆ ಹೊರಳಿಸಿ ಗಂಡುಗಚ್ಚೆ ಬಿಗಿದು, ಎಡಗಡೆಯ ಕಂಕುಳಲ್ಲಿ ಆರೇಳು ವರ್ಷಗಳ ಬಾಲಕನೊಬ್ಬನನ್ನೆತ್ತಿಕೊಂಡು, ಕೆಸರಿನಲ್ಲಿ ಹೆಜ್ಜೆ ಹಾಕುತ್ತ ಬರುತ್ತಿದ್ದ ಆ ಹೆಂಗುಸು ಬಹಳ ಆಕರ್ಷಕವಾಗಿ ಕಾಣಿಸಿದಳು ಶರಣಪ್ಪನಿಗೆ. ಅವಳಿಗೆ ಮೂವತ್ತೈದೋ ಮೂವತ್ತಾರೋ ವರ್ಷ ವಯಸ್ಸಿರಬಹುದು. ಕಂಕುಳಲ್ಲಿದ್ದ ಬಾಲಕನ ಭಾರದಿಂದಾಗಿ ಅತ್ತ ಇತ್ತ ಬಳುಕುತ್ತಿದ್ದ ಅವಳ ತುಂಬು ಶರೀರವನ್ನು ಎವೆಯಿಕ್ಕದೆ ದಿಟ್ಟಿಸುತ್ತ, ಸ್ನಾನವನ್ನೂ ಮರೆತು ಮುಗ್ಧನಾಗಿ ನಿಂತುಕೊಂಡ ಶರಣಪ್ಪ.

"ಏನು ರೂಪ, ಏನು ಬಣ್ಣ, ಏನು ಕಣ್ಣು, ಏನು ಹುಬ್ಬು, ಎಂಥಾ ಎದೆ, ಎಂಥಾ ನಡಿಗೆ...ಲಚುಮಿಯನ್ನ ನಿವಾಳಿಸಿ ಒಗೆಯಬೇಕು ಇವಳ ಮ್ಯಾಲ...." ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಂಡಿತು ಶರಣಪ್ಪನ ಮನಸ್ಸು.

ಅವಳು ಮತ್ತೆ ಹತ್ತು ಹೆಜ್ಜೆ ನಡೆದು ಬಂದು, ತುಂಬಿ ಹರಿಯುತ್ತಿದ್ದ ಹಳ್ಳದ ಆಚೆ ದಡದ ಮೇಲೆ ನಿಂತುಕೊಂಡಳು, ಕಂಕುಳಲ್ಲಿದ್ದ ಬಾಲಕನನ್ನು ನಿಧಾನವಾಗಿ ಕೆಳಕ್ಕಿಳಿಸಿ ಹಳ್ಳದ ಪ್ರವಾಹದ ಮೇಲೆ ದೃಷ್ಟಿ ತೂರಿದಳು.

"ನೀರು ಬಾಳ ಐತೇನವ್ವಾ ?"

ಬಾಲಕ ಪ್ರಶ್ನಿಸಿದ.

"ಹೌದಪ್ಪ. ಬಾಳ ಬಂದೈತಿ. ದಾಟೂದಕ್ಕಾಗುತ್ತೈತೋ ಇಲ್ಲೋ...."
ಎಂದು ಅವಳು ಹೇಳುತ್ತಿದ್ದ ಹಾಗೆ, ಎದುರಿನ ದಡದ ಮೇಲೆ ನಿಂತು ಅವಳ ಚಲನವಲನಗಳನ್ನೆಲ್ಲ ನಿರೀಕ್ಷಿಸುತ್ತಿದ್ದ ಶರಣಪ್ಪನಿಗೆ ಹಠಾತ್ತಾಗಿ ಅವಳಾರೆಂಬು

ದರ ಜ್ಞಾಪಕ ಬಂತು. ತಮ್ಮೂರಿನ ಹೊಲೆಯರ ಯಲ್ಲಪ್ಪನ ಮಗಳು ಶಿವಗಂಗಾ ಅಲ್ಲವೆ ಇವಳು !

"ಎಲ ಎಲಾ. ವಯಸ್ಸಾದ ಹಾಂಗ ನನ್ನ ಕಣ್ಣು ಮಂಜಾಗುತಾ ಇದಾವೊ ಏನೊ. ಶಿವಗಂಗೀನ್ನ ಗುರುತು ಹಿಡಿಯಾಕಾಗಲಿಲ್ಲಲ್ಲ ನನಗ. ಥೂ. ನನ ಮಂಜಾಳ ಹೋಗಲಿ. ಮದುವಿಯಾದ ಮ್ಯಾಲ ಗಂಡನ ಮನಿಗೆ ಹೋದ ಶಿವಗಂಗಿ ಇಲ್ಲಿಯತನಕ ಬಂದಿರಲಿಲ್ಲ. ಈಗ ಮಗನನ್ನು ಕರ ಕೊಂಡು ಬಂದಾಳ, ಗಂಡ ಮಾತ್ರ ಯಾಕ ಬರಲಿಲ್ಲೋ ಏನೋ...." ಎಂದು ತನ್ನಷ್ಟಕ್ಕೆ ತಾನೆ ಹೇಳಿಕೊಳ್ಳುತ್ತ,

"ಅಲ್ಲೇ ನಿಲ್ಲೇ ಶಿವಗಂಗೀ. ಹಳ್ಳ ಬಾಳ ಉದ್ದ ಐತಿ," ಎಂದು ಕೂಗಿ ಹೇಳಿದ ಶರಣಪ್ಪ.

ದಿಗಿಲುಗೊಂಡು ಅವನತ್ತ ದೃಷ್ಟಿ ತಿರುಗಿಸಿದಳು ಶಿವಗಂಗಾ. ಅವನಾ ರಿಂಬುಮ ಅವಳಿಗೂ ತಕ್ಷಣ ಗೊತ್ತಾಗದಿರಲಿಲ್ಲ. ಕಪ್ಪು ಬಣ್ಣದ ದೃಢವಾದ ಮೈಕಟ್ಟು, ದಟ್ಟವಾಗಿ ಬೆಳೆದ ಮೀಸೆ, ಮುಖದಲ್ಲೆಲ್ಲ ತಾನೆ ತಾನಾಗಿ ಎದ್ದು ಕಾಣುವ ಬದನೆಕಾಯಿಯಂಥ ಮೂಗು, ಹುಲುಸಾಗಿ ಬೆಳೆದ ಹುಬ್ಬು, ಕಪ್ಪು ಕೂದಲುಗಳಿಂದ ಆವೃತವಾಗಿದ್ದ ವಿಶಾಲವಾದ ಎದೆ, ಅದರ ಮೇಲೆ ಇಳಿ ಬಿದ್ದಿದ್ದ ಕಟ್ಟಿಗೆಯ ಕರಡಿಗೆ: ಶರಣಪ್ಪ, ಸಾಹುಕಾರ ಶರಣಪ್ಪ...

ಲಗುಬಗೆಯಿಂದ ಹಳ್ಳ ದಾಟಿ ಶರಣಪ್ಪ ಶಿವಗಂಗೆಯ ಬಳಿ ಬಂದ. ಸಹಜ ಸಂಕೋಚದಿಂದ ಅವಳು ಅತ್ತಿತ್ತ ದೃಷ್ಟಿ ತಿರುಗಿಸಿದಳು. ಮಳೆಗಾಲದ ಆ ದಿನಗಳಲ್ಲಿ ಹಳ್ಳದ ಹತ್ತಿರ ಸಾಮಾನ್ಯವಾಗಿ ಹೆಚ್ಚು ಜನರಿರುತ್ತಿರಲಿಲ್ಲ.

"ಎಲ್ಲಿಂದ ಬಂದಿಯೇ ಶಿವಗಂಗೀ ?"

"ಇನ್ನೆಲ್ಲಿಂದ ಬರಲಿ ? ಊರಿಂದಲೇ ಬಂದಿ ?"

"ಅದೇನು ಒಬ್ಬಳೇ ಬಂದಿಯಲ್ಲ ?"

ಶಿವಗಂಗೆಯ ಸುಂದರ ಮುಖದ ಮೇಲೆ ದುಃಖದ ನೆರಳೊಂದು ಹಾದು ಹೋದಂತಾಯಿತು. ದೃಷ್ಟಿಯನ್ನು ನೆಲದ ಕಡೆ ತಿರುಗಿಸಿ ಅವಳು ಹೇಳಿದಳು.

"ಅವ ಹೋಗಿಬಿಟ್ಟ."

"ಹೋಗಿಬಿಟ್ಟ? ಆಂ? ಎಲ್ಲಿ ಹೋಗಿಬಿಟ್ಟ?"

"ಜೇಲಿನಾಗ ತೀರಿಕೊಂಡ."

ಶರಣಪ್ಪ ಕೊಂಚ ಚಕಿತನಾಗಿ ಕೇಳಿದ:

"ಜೇಲಿನಾಗಂದಿಯಾ? ಜೇಲಿಗೆ ಯಾಕ ಹೋಗಿದ್ದ ಅವ?"

"ಅದನ್ನೆಲ್ಲ ಏನ ಹೇಳೂದು ಇಲ್ಲಿ? ಹುಡುಗ ಹಸಿದಾನ. ಮೊದಲು ಮನೀಗೆ ಹೋಗುತೀನಿ. ಬಾರೋ ಮಾದೇವಾ," ಎಂದು ಮಗನನ್ನೆತ್ತಿ ಕೊಂಡು ಹಳ್ಳ ದಾಟಲು ಸಿದ್ಧಳಾದಳು ಶಿವಗಂಗಾ.

"ತಾ ಇಲ್ಲಿ ಹುಡುಗನ್ನ. ನಾ ತಗೋತೀನಿ. ಬಾಳ ಹುಷಾರಾಗಿ ದಾಟಾಕಬೇಕು. ನೀರು ಬಾಳ ಜೋರು ಐತಿ," ಎಂದ ಶರಣಪ್ಪ.

"ಏನೂ ಬ್ಯಾಡ ಬಿಡಿರಿ. ಯಾರಾರೆ ನೋಡಿದರ ಏನಂದಾರು ನಿಮಗ?"

"ಇಲ್ಲಿ ಯಾರೂ ಇಲ್ಲ ಬಿಡೇ ನೋಡುವವರು. ತಾ ಇಲ್ಲಿ ಹುಡುಗನ್ನ," ಎಂದು ಶರಣಪ್ಪ ಕೊಂಚ ಬಲುವೆಯಿಂದಲೇ ಆ ಬಾಲಕನನ್ನು ಶಿವಗಂಗೆಯ ಕೈಯಿಂದ ಕಿತ್ತುಕೊಂಡು ತನ್ನ ಭುಜದ ಮೇಲೆ ಕೂಡಿಸಿಕೊಂಡ. ಅನಂತರ ತಾನೇ ಮುಂದಾಗಿ ಶಿವಗಂಗೆಯ ಕೈ ಹಿಡಿದುಕೊಂಡು ನಡಸುತ್ತ ಹಳ್ಳ ದಾಟಿಸಿ ದಂಡೆಗೆ ಮುಟ್ಟಿಸಿ ಹುಡುಗನನ್ನು ಕೆಳಕ್ಕಿಳಿಸಿದ.

"ಇವ ಯಾರೇ ಅವ್ವಾ?" ಬಾಲಕ ಮಹಾದೇವ ತಾಯಿಯನ್ನು ಪ್ರಶ್ನಿಸಿದ.

"ನಾನು? ನಂದು ಗೊತ್ತಿಲ್ಲೇನೋ ನಿನಗ? ನಾ ನಿನ್ನ ಕಾಕಾ," ಎಂದು ನುಡಿದು ಶಿವಗಂಗೆಯ ಮುಖವನ್ನೇ ದಿಟ್ಟಿಸುತ್ತ ನಿಧಾನವಾಗಿ ಕಣ್ಣು ಮಿಟುಕಿಸಿ ಮೆಲ್ಲಗೆ ನಕ್ಕ ಶರಣಪ್ಪ.

ಶಿವಗಂಗೆಯೂ ಹುಸಿನಗೆ ನಕ್ಕು, ಮತ್ತೆ ಮಗನನ್ನು ಕಂಕುಳಕ್ಕೇರಿಸಿ ಕೊಂಡು, "ಬಾ ಹೋಗೂಣು ಮನಿಗೆ. ಬಾಳ ಹಸಿದಿದ್ದೀ," ಎಂದು ಹೇಳುತ್ತಾ ಮುಂದೆ ಅಡಿಯಿರಿಸಿದಳು. ಶರಣಪ್ಪನ ಹತ್ತಿರ ನಿಂತುಕೊಂಡು ಸರಸ ಸಲ್ಲಾಪದಲ್ಲಿ ತೊಡಗಲು ಅವಳಿಗೆ ಪುರಸತ್ತೂ ಇರಲಿಲ್ಲ, ಇಷ್ಟವೂ ಇರ

ಲಿಲ್ಲ. ಹದಿನೈದು ಮೈಲು ಹಾದಿ ತುಳಿದು ಬಂದಿದ್ದ ಅವಳಿಗೆ ತುಂಬ ಆಯಾಸವಾಗಿತ್ತು, ಹಸಿವೂ ಆಗಿತ್ತು.

"ಹಂಗಾದರೇನು ಇಲ್ಲೇ ಇರುವಾಕಿಯೇನು ಇನ್ನುವ್ಯಾಲ?" ಎಂದು ಕೇಳಿದ ಶರಣಪ್ಪ.

"ಹೂಂ. ಮತ್ತೆಲ್ಲಿಗೆ ಹೋಗಲಿ?" ಎಂದಿಷ್ಟೆ ನುಡಿದು ಅವಳು ನಡಿಗೆಯನ್ನು ವೇಗವಾಗಿಸಿ ಹಳ್ಳಿಯತ್ತ ಸಾಗಿದಳು.

"ಮತ್ತೆ ಯಾವಾಗ ಬೆಟ್ಟಿಯಾಗುತೀಯೇ?" ಎಂದು ಕೂಗಿ ಕೇಳಿದ ಶರಣಪ್ಪ.

"ಕೂಡಿದಾಗ ನೋಡೂಣು," ಎಂದು ಉತ್ತರವಿತ್ತು ಬಿರುಬಿರನೆ ನಡೆದಳು ಶಿವಗಂಗಾ.

ಕಣ್ಣುಗಳಲ್ಲಿ ನಗೆ ತುಳುಕಿಸುತ್ತ ಮತ್ತೆ ನೀರಿಗಿಳಿದ ಶರಣಪ್ಪ.

ಸ್ನಾನ ಮಾಡುತ್ತಿದ್ದ ಹಾಗೆ ಅವನ ಬಗೆಗಣ್ಣುಗಳೆದುರಿಗೆ ಇಪ್ಪತ್ತು ವರ್ಷಗಳ ಹಿಂದಿನ ಹಲವು ಸನ್ನಿವೇಶಗಳು ಮೂಡತೊಡಗಿದುವು.

೨

ಇಪ್ಪತ್ತು ವರ್ಷಗಳ ಹಿಂದೆ....

ಆಗ ಅವನಿಗಿನ್ನೂ ಹೊಸ ಹರೆಯ. ದೇಹದಲ್ಲಿ ಬಿಸಿ ನೆತ್ತರು ತುಂಬಿ ಮದವಾಗಿ ಹೊರಚಿಮ್ಮುತ್ತಿತ್ತು.

ತಂದೆಗೆ ಒಬ್ಬನೇ ಒಬ್ಬ ಮಗ. ಚಿಕ್ಕಂದಿನಿಂದಲೂ ಸುಖದಲ್ಲಿ ಬಳೆದು ಬಂದವನು. ಮನೆಯಲ್ಲಿ ಯಾವುದಕ್ಕೂ ಏನೂ ಕೊರತೆಯಿರಲಿಲ್ಲ. ತಾನು ಬಯಸಿದುದೆಲ್ಲವೂ ದೊರೆಯುತ್ತಿತ್ತು, ಕೇಳಿದಷ್ಟು ಹಣ ಸಿಕ್ಕುತ್ತಿತ್ತು. ತಾನು ಏನನ್ನೆ ಮಾಡಿದರೂ ತಂದೆ ಕೋಪಿಸಿಕೊಳ್ಳುತ್ತಿರಲಿಲ್ಲ. ಅಂತೆಯೆ, ತನ್ನ ಮನಸ್ಸಿನ ಕುದುರೆ ಲಂಗುಲಗಾಮಿಲ್ಲದೆ ಹಾರಾಡುತ್ತಿತ್ತು. ಶಾಲೆಯಲ್ಲಿ ಹೆಚ್ಚು ಓದುವುದಕ್ಕೂ ಆಗಲಿಲ್ಲ. ಐದನೆಯ ವರ್ಗಕ್ಕೇ ತನ್ನ ವ್ಯಾಸಂಗ ಕೊನೆಗಂಡಿತು. ಮುಂದೆ ಗರಡೀ ಮನೆಯ ಸಹವಾಸ, ಗರಡಿಯಾಳುಗಳ ಗೆಳೆತನ, ನಿರುದ್ಯೋಗಿ ಉಡಾಳರ ಸ್ನೇಹ; ಊರೂರು ಅಲೆಯುವುದು, ಜಾತ್ರೆಗಳನ್ನು ಸುತ್ತುವುದು, ಮೋಜು ಮಾಡುವುದು.

ಮೋಜು ...

ಅಂದು, ಇಪ್ಪತ್ತು ವರ್ಷಗಳ ಹಿಂದೆಯೊಂದು ದಿನ ಮರಡಿಯಮಠದ ಜಾತ್ರೆಯ ಕಾಲಕ್ಕೆ ತಾನು ಅನುಭವಿಸಿದ ಆ ಮೋಜು....

ಇಬ್ಬರು ಗೆಳೆಯರೊಂದಿಗೆ ಜಾತ್ರೆಗೆ ಹೋಗಿದ್ದ ತಾನು ಅಂಗಡಿಗಳೆದುರಿಗೆ ಅಲೆಯುತ್ತಿದ್ದಾಗ ಬಳೆಯಂಗಡಿಯೊಂದರ ಹತ್ತಿರ ನಿಂತುಕೊಂಡು, ಬಣ್ಣಬಣ್ಣಗಳ ಬಳೆಗಳನ್ನು ಆಸೆಯ ಕಣ್ಣುಗಳಿಂದ ದಿಟ್ಟಿಸುತ್ತಲಿದ್ದ ಶಿವಗಂಗೆಯನ್ನು ಕಂಡಿದ್ದ. ಆಗ ಅವಳಿನ್ನೂ ಹದಿನೈದರ ಪ್ರಾಯದ ಹುಡುಗಿ.

ಪಕ್ವವಾದ ನಿಂಬೆಹಣ್ಣಿನಂಥ ಮೈ ಬಣ್ಣವಿತ್ತು, ತನ್ನಂಥ ಹರೆಯದವನನ್ನು ಹುಚ್ಚನನ್ನಾಗಿ ಮಾಡುವಂಥ ಚೆಲುವಿಕೆಯಿತ್ತು. ಶಿವಗಂಗೆಯನ್ನು ತಾನು ಕಾಣುತ್ತಿದ್ದುದು ಅದೇ ಮೊದಲ ಸಲವೇನೂ ಆಗಿರಲಿಲ್ಲ. ಅದಕ್ಕೂ ಮೊದಲು ಊರಿನ ಗುಡ್ಡದ ಹತ್ತಿರ ಎರಡು ಮೂರು ಬಾರಿ ಅವಳನ್ನು ನೋಡಿದು ದಾಗಿತ್ತು. ಅವಳನ್ನು ಪಡೆಯಬೇಕೆಂಬ ಬಯಕೆಯೂ ಅಂದಿನಿಂದಲೆ ತನ್ನೆದೆಯಲ್ಲಿ ಮೊಳಕೆಯೊಡೆದಿತ್ತು. ಅಂದು, ಜಾತ್ರೆಯಲ್ಲಿ ಅವಳನ್ನು ಕಂಡ ತಕ್ಷಣ ಸ್ವರ್ಗವೆ ಕೈಗೆ ಬಂದಂತೆ ಭಾಸವಾಗಿತ್ತು ತನಗೆ. ಗೆಳೆಯರನ್ನು ದೂರ ಸಾಗಹಾಕಿ ತಾನು ಅವಳನ್ನು ಮಾತನಾಡಿಸಿದ್ದ:

"ಶಿವಗಂಗೀ."

ಅವಳು ಲಜ್ಜೆಯಿಂದ ಬಳುಕುತ್ತಾ ಮೌನವಾಗಿ ನಿಂತಿದ್ದಳು.

"ಬಳಿ ಇಟ್ಟುಕೋತೀಯಾ ಶಿವಗಂಗೀ? ನಿನಗ ಯಾವ್ಯಾವದು ಬೇಕೋ ಎಲ್ಲಾ ಇಟ್ಟುಕೋ," ಎಂದು ಹೇಳಿ ತಾನು ಎರಡು ರೂಪಾಯಿ ಗಳನ್ನು ಅಂಗಡಿಯವನ ಕೈಗೆ ಹಾಕಿದಾಗ ಅವಳು ಆನಂದದಿಂದಲೂ ವಿಸ್ಮಯದಿಂದಲೂ ತನ್ನ ಕಡೆ ಪ್ರೀತಿಯ ನೋಟ ಬೀರಿದ್ದಳು.

ಅವಳು ಬಳೆಯಿಡಿಸಿಕೊಳ್ಳುತ್ತಿದ್ದ ಹಾಗೆ ತಾನು ಪ್ರಶ್ನಿಸಿದ್ದ:

"ಒಬ್ಬಳೇ ಬಂದೀಯಾ ಶಿವಗಂಗೀ?"

ನಿಧಾನವಾಗಿ ಅವಳ ಸಂಕೋಚ ಕರಗಿ ಹೋಗುತ್ತಿತ್ತು. ಅವಳು ಹೇಳಿದ್ದಳು:

"ಮುದುಕಿಯೊಂದು ಬಂದೈತಿ."

"ಮುದುಕಿ? ಯಾರ ಮುದುಕಿ? ನಿನಗ ಏನಾಗಬೇಕು ಆಕಿ?"

"ಏನಿಲ್ಲ. ಹೀಂಗs ಓಣಿಯವಳು."

"ಎಲ್ಲಿದಾಳ ಆಕಿ?"

"ಎಲ್ಲೋ ಹೋಗಿದಾಳ ತಿರುಗಾಕ."

"ನಿಮ್ಮಪ್ಪ ಬಂದಿಲ್ಲ, ಹೌದಲ್ಲೋ?"

"ಇಲ್ಲ. ಅವಗ ಮೈಯಾಗ ನೆಟ್ಟಗಿಲ್ಲ."

ಶಿವಗಂಗೆಯನ್ನು ಕರೆದುಕೊಂಡು ಜಾತ್ರೆಯಲ್ಲೆಲ್ಲ ಅಲೆದುದಾಗಿತ್ತು. ಜೀಕಿನ ತೊಟ್ಟಿಲಲ್ಲಿ ಅವಳೊಡನೆ ಕುಳಿತು ಜೀಕಿಸಿಕೊಂಡುದಾಗಿತ್ತು. ಅವಳು ಬಯಸಿದ ವಸ್ತುಗಳನ್ನೆಲ್ಲ ಕೊಡಿಸಿದುದಾಗಿತ್ತು. ಅವಳೆಂದೂ ತಿಂದಿರಲಾರದ ಸಿಹಿ ತಿಂಡಿಗಳನ್ನೂ, ಚುರಮುರಿ ಪುಠಾಣಿ ಬೆಂಡು ಬತ್ತಾಸುಗಳನ್ನೂ ಕೊಂಡು ಕೊಂಡು ಗಿಡವೊಂದರ ಬುಡದಲ್ಲಿ ಕುಳಿತು ಅವಳೊಡನೆ ಉಪಾಹಾರ ಮಾಡಿದುದಾಗಿತ್ತು. ಅಂದು ಹುಣ್ಣಿಮೆ. ಸೂರ್ಯ ಮುಳುಗಿದೊಡನೆಯೆ ಚಂದ್ರ ಬೆಳಗಲಾರಂಭಿಸಿದ್ದ. ಜಾತ್ರೆಯಲ್ಲಿ ಸೇರಿದ್ದ ಗೆಳೆಯ ಗೆಳತಿಯರೆಲ್ಲ ಜತೆ ಜತೆಯಾಗಿ ಮರಡಿಯತ್ತ ನಡೆದಿದ್ದರು. ಶಿವಗಂಗೆಯ ಕೈ ಹಿಡಿದುಕೊಂಡು ತಾನೂ ಅತ್ತ ಹೊರಟು ಕೊಂಚ ದೂರ ಹೋಗಿ ಮಾವಿನ ಮರವೊಂದರ ಕೆಳಗೆ ಕುಳಿತುಕೊಂಡುದಾಗಿತ್ತು. ಮನೆಯಿಂದ ಕಟ್ಟಿ ತಂದ್ದಿದ್ದ ಬುತ್ತಿಯನ್ನು ಬಿಚ್ಚಿ ಆ ಮಾತು ಈ ಮಾತು ಆಡುತ್ತ ಇಬ್ಬರೂ ಊಟ ಮುಗಿಸಿದುದಾಗಿತ್ತು. ಗಿಡದ ಬುಡದಲ್ಲಿ ಹಾಸುಗೆಯಂತೆ ಹರಡಿದ್ದ ಮೃದುವಾದ ಮರಳಿನ ಮೇಲೆಯೆ ಅವಳೊಡನೆ ಮಲಗಿದುದಾಗಿತ್ತು. ಆ ವೇಳೆಗೆ ಮಠದ ಆವಾರದಲ್ಲಿ ಬಯಲಾಟ ಕ್ಕಾರಂಭವಾಗಿತ್ತು. ಪಾತ್ರಧಾರಿಗಳು ಉಚ್ಚಕಂಠದಲ್ಲಿ ಹಾಡುತ್ತಿದ್ದ ಹಾಡುಗಳು ಅಲೆ ಅಲೆಯಾಗಿ ತೇಲಿಬರುತ್ತಿದ್ದುವು. ನಿಮಿಷಗಳು ಕಳೆದ ಹಾಗೆ ಹುಣ್ಣಿಮೆಯ ಪೂರ್ಣಚಂದ್ರ ಬೆಣ್ಣೆಯ ಮುದ್ದೆಯಂತೆ ಬಾನಿನಲ್ಲಿ ಮೆಲ್ಲಗೆ ಅಡಿಯಿಡುತ್ತ ಹೊರಟಿದ್ದ. ಆಹ್, ಎಂಥ ಸುಂದರವಾದ ರಾತ್ರಿ ಅದು... ತಾನೆಂದೂ ಮರೆಯಲಾರದಂಥ ರಾತ್ರಿ. ಸುತ್ತಲೂ ಬಿಳಿಯ ಮಲ್ಲಿಗೆಯ ಬಣ್ಣದ ಬೆಳದಿಂಗಳು. ತೋಳ ತೆಕ್ಕೆಯಲ್ಲಿ ಮಲ್ಲಿಗೆಯ ಹಾಗೆಯೆ ಮೃದುವಾದ ಚೆಲುವಾದ ದೇಹದ ಶಿವಗಂಗಾ....

ಹರ್ಷಾತಿರೇಕದಲ್ಲಿ ಅವಳನ್ನು ಪಟಪಟನೆ ಚುಂಬಿಸುತ್ತ ತಾನು ಹೇಳಿದ್ದ:

" ಬಾಳ ದಿನದಿಂದ ನಿನಗಾಗಿ ಕಾದಿದ್ದಿನಿ ಶಿವಗಂಗೀ."

ಅವಳು ಕಿಲಕಿಲನೆ ನಕ್ಕುಬಿಟ್ಟಿದ್ದಳು. ಚಂದ್ರಕಿರಣಗಳ ಬೆಳಕಿನಲ್ಲಿ ಅವಳ ತುಟಿಗಳು ಬಿಳಿಯ ಗುಲಾಬಿಯ ಪಕಳೆಗಳಂತೆ ಹೊಳೆದಿದ್ದುವು.

ತಾನು ಮತ್ತೆ ಕೇಳಿದ್ದ:

"ನಿನಗ ಮದುವಿಯಾಯಿತೇನs ಶಿವಗಂಗೀ?"

"ಆತಲ್ಲ. ಆಗಿ ಆಗಲೆ ಮೂರು ನಾಕು ವರುಷ ಆತು."

"ಅಂತೂ ನೀ ಇಂದು ನಾಳೆ ಹೋಗುವಾಕಿ ಅನ್ನು – ಗಂಡನ ಮನಿಗೆ."

"ಹೋಗಾಕs ಬೇಕಲ್ಲ?"

ಅವಳನ್ನು ಬಿಗಿಯಾಗಿ ಅವಚಿಕೊಳ್ಳುತ್ತ ತಾನು ಹೇಳಿದ್ದ:

"ಹೋಗಾಕs ಬೇಕೇನs ಶಿವಗಂಗೀ? ಅವನನ್ನು ಬಿಟ್ಟು ಬಿಟ್ಟರ ನಡಿಯೂದಿಲ್ಲೇನು?"

"ಅದೆಂಗ ಬಂದೀತು ಬಿಡಾಕ? ಮಂದಿ ಏನಂದಾರು?"

"ಏನಂತಾರ? ನಿನ್ನ ಗಂಡಗ ಏನು ಕೊಡಬೇಕೋ ಕೊಟ್ಟು ನಾ ನಿನ್ನ ಬಿಡಿಸಿಕೊಂತೀನಿ. ತವರುಮನಿಯೊಳಗs ಇದ್ದು ಬಿಡು."

ಅವಳು ಒಡನೆಯೆ ಉತ್ತರವಿತ್ತಿರಲಿಲ್ಲ. ಒಂದೆರಡು ನಿಮಿಷ ಮೌನ ವಾಗಿದ್ದು, ಅನಂತರ ನಿಧಾನವಾಗಿ ಎದ್ದು ಕುಳಿತು ಹೇಳಿದ್ದಳು:

"ಇದ್ದೇನು ಅನ್ನಿರಿ. ಇದ್ದರಾದರೂ ಏನಂತ? ನೀವೇನೂ ನನ್ನ ಮದುವೀ ಮಾಡಿಕೊಳ್ಳುವ ಹಾಂಗಿಲ್ಲ, ಅಲ್ಲ?"

"ಮದುವಿ ಯಾತಕ್ಕ ಬೇಕs ಶಿವಗಂಗೀ? ನಿಮ್ಮ ಜಾತಿಯವರೇಸು ಮಂದಿ ಗಂಡರನ್ನ ಬಿಟ್ಟು ಇಲ್ಲ ಹಂಗs? ನಾ ನಿನಗ ಮಾತು ಕೊಡುತೀನಿ. ಕಡಿತನಕ ನಿನ್ನ ಕೈ ಬಿಡೂದಿಲ್ಲ ನಾ. ಕಾಯಂ ಆಗಿ ಇಟಕೊಂತೀನಿ. ನಿಮ್ಮಪ್ಪ ಏನು ಕೇಳಿದ್ದು ಕೊಡುತೀನಿ. ನಿನಗ ಸೀರಿ ಕುಬಸ ವಸ್ತ ಒಡವೀ ಯಾವದಕ್ಕೂ ಏನೂ ಕಡಿಮಿ ಮಾಡೂದಿಲ್ಲ. ಏನಂತೀ ಶಿವಗಂಗೀ?"

ಒಂದು ಬಗೆಯ ನಗೆನಕ್ಕು ಅವಳು ನುಡಿದಿದ್ದಳು:

"ಅದನ್ನೆಲ್ಲಾ ಮಾತಾಡಿ ಏನುಪಯೋಗ ಬಿಡಿರಿ. ಏನೋ ಇದೊಂದು ದಿನಾ ದೇವರು ಕೂಡಿಸಿದ್ದಾನ. ಇಬ್ಬರೂ ಕೂಡಿ ನಗುನಗುತಾ ಜಾತ್ರೀ ಮಾಡೀವಿ. ನಾಳಿನ ಮಾತು ಯಾಕ ಈಗ? ದೇವರು ಮಾಡಿದಾಂಗ ಆಗುತ್ತೈತಿ."

ಅಷ್ಟು ಹೇಳಿ ಅವಳು ಬಯಲಾಟ ನೋಡಲೆಂದು ಎದ್ದು ಬಿಟ್ಟಿದ್ದಳು. ಅಂದು 'ಪಾರಿಜಾತ' ಆಟವಿತ್ತು. ಅವಳನ್ನು ಪಕ್ಕದಲ್ಲಿ ಕೂಡಿಸಿಕೊಂಡು ಆಟ

ನೋಡಿದುದಾಗಿತ್ತು. "ನೀ ನನ್ನ ರುಕ್ಮಿಣಿ, ನೀ ನನ್ನ ಸತ್ಯಭಾಮಾ," ಎಂದು ಅವಳ ಕಿವಿಯಲ್ಲಿ ಉಸಿರಿದುದಾಗಿತ್ತು.

ಬೆಳಗಾಗುತ್ತಲೂ ಅವಳು ತನ್ನನ್ನು ಬೀಳ್ಕೊಂಡು ಮುದುಕಿಯ ಜತೆಗೆ ಊರಿಗೆ ಹೊರಟುಹೋಗಿದ್ದಳು.

ಅದೇ ತನ್ನ ಅವಳ ಕೊನೆಯ ಭೇಟಿಯಾಗಿ ಪರಿಣಮಿಸಿತ್ತು. ಅನಂತರ ಒಂದು ವಾರದೊಳಗಾಗಿಯೆ ಅವಳು ಗಂಡನ ಮನೆಗೆ ಹೊರಟುಹೋಗಿದ್ದಳು.

ಈ ಮಧ್ಯೆ, ತಂದೆಯನ್ನು ನೋಡಿಕೊಂಡು ಹೋಗಲು ಅವಳು ಕೆಲವು ಬಾರಿ ಊರಿಗೆ ಬಂದು ಹೋಗಿದ್ದಿರಬಹುದು. ತನಗೆ ಮಾತ್ರ ಅವಳು ಕಾಣಿಸಿರಲಿಲ್ಲ....

ಶಿವದಾರವನ್ನು ಜ್ಜುತ್ತ ನೀರಿನಿಂದೆದ್ದ ಶರಣಪ್ಪ. ಬಂಡೆಗಲ್ಲ ಮೇಲಿದ್ದ ಮಡಿ ಧೋತರವನ್ನೆತ್ತಿಕೊಂಡು ಮೈಯನ್ನೊರಸಿಕೊಂಡ, ಒದ್ದೆ ಧೋತರವನ್ನು ಹಿಂಡಿ ಹೆಗಲ ಮೇಲೆ ಹಾಕಿಕೊಂಡು ಅಂಗಿಯನ್ನು ಧರಿಸಿ ಮನೆಯ ಕಡೆ ಸಾಗಿದ. ಮಗನನ್ನೆತ್ತಿಕೊಂಡು ಬಳುಕುತ್ತ ನಿಂತಿದ್ದ ಶಿವಗಂಗೆಯ ಮೂರ್ತಿ ಅವನ ಕಣ್ಣುಗಳೆದುರಿಗೆ ಮೂಡಿತ್ತು.

ಅವಳು ಗಂಡನ ಮನೆಗೆ ಹೋದಳೆಂಬ ವಾರ್ತೆ ತಿಳಿದ ತರುವಾಯ ಎರಡು ಮೂರು ತಿಂಗಳುಗಳ ವರೆಗೆ ಅವಳನ್ನು ಜ್ಞಾಪಿಸಿಕೊಂಡು ತಾನು ಮೂಢನಂತೆ ಆಚರಿಸಿದ್ದುದರ ನೆನಪು ಬಂತು ಶರಣಪ್ಪನಿಗೆ. ಮನೆಯಲ್ಲಿ ಯುವತಿಯಾದ ಮಡದಿಯೇನೊ ಇದ್ದಳಾದರೂ ಅವಳ ಸಂಗ ತನಗೆ ಪ್ರಿಯವೆನ್ನಿಸಿರಲಿಲ್ಲ. ಆ ಬೆಳದಿಂಗಳ ರಾತ್ರಿಯ ಸನ್ನಿವೇಶವನ್ನೆ ಮತ್ತೆ ಮತ್ತೆ ಮೆಲುಕು ಹಾಕುತ್ತ ಮರುಗುತಿತ್ತು ತನ್ನ ಮನಸು. ಒಂದೆರಡು ಬಾರಿ ಹೊಲೆಯರ ಕೇರಿಯತ್ತ ಸುಳಿದು ಬಂದಿದ್ದ. ಲಚುಮಿಯ ಪರಿಚಯ – ಸ್ನೇಹವಾದುದು ಆಗಲೆ. ಎಲ್ಲವ್ವನಿಗೆ ಬಿಟ್ಟ ಸೂಳೆ ಲಚುಮಿ. ಶಿವಗಂಗೆಯ ಹಾಗೆ ಅವಳೇನೂ ಸುಂದರಿಯಾಗಿರಲಿಲ್ಲ. ತೀರ ಸಾಧಾರಣವಾದ ರೂಪು. ಆದರೂ, ಆಗ ಪ್ರಾಯದವಳಾಗಿದ್ದ ಅವಳ ಒಯ್ಯಾರ ಹಾವಭಾವ ಬೆಡಗು ಬಿನ್ನಾಣಗಳ ಬಲೆಗೆ ಬಿದ್ದು ಶಿವಗಂಗೆಯನ್ನು ಮರೆತುಬಿಡಲು ತಾನು ಯತ್ನಿಸಿದ್ದ. ವರ್ಷಗಳು ಕಳೆದ ಹಾಗೆ ಶಿವಗಂಗೆಯ ನೆನಪೂ ಮಸುಳಿಸಿಹೋಗಿತ್ತು. ಆಗ, ಕೆಲವು

ತಿಂಗಳುಗಳ ಕಾಲ ತನ್ನ ಮನಸ್ಸನ್ನು ಆಕ್ರಮಿಸಿಕೊಂಡಿದ್ದ ಆ ಶಿವಗಂಗೆ ಈಗ ಮತ್ತೆ ಇಲ್ಲಿಗೆ ಬಂದಿದ್ದಾಳೆ. ಇಪ್ಪತ್ತು ವರ್ಷ ಕಳೆದಿವೆ, ಒಬ್ಬ ಮಗನ ತಾಯಿಯೂ ಆಗಿದ್ದಾಳೆ ಆಕೆ. ಆದರೂ ಅಷ್ಟೇನು ಮಾಸಿಹೋದ ಹಾಗಿಲ್ಲ ಅಂದಿನ ಆ ಚೆಲುವು. ಸಿಂಪೆಹಣ್ಣಿನಂಥ ಅಂದಿನ ಬಣ್ಣವಿಂದು ಉಳಿದಿಲ್ಲ, ಆ ಹೊಸ ಪ್ರಾಯದ ಕಳೆಯೂ ಉಳಿದಿಲ್ಲ, ನಿಜ. ಆದರೂ ಇನ್ನೂ ಆಕರ್ಷಕ ವಾಗೇ ಇದಾಳೆ ಶಿವಗಂಗೆ. ಆ ಲಚುಮಿಗೋ ಇನ್ನೂ ನಲವತ್ತು ವರ್ಷ ಗಳಾಗಿಲ್ಲ; ಆಗಲೆ ಆವಳ ಚರ್ಮ ಸುಕ್ಕುಗಟ್ಟುತ್ತಾ ಇದೆ, ಮುಖ ವಿಕೃತ ವಾಗುತ್ತಿದೆ, ಕೊಳೆತ ಹಣ್ಣಿನ ಹಾಗೆ ಕಾಣುತ್ತಿದಾಳೆ ಲಚುಮಿ. ಶಿವಗಂಗೆ ಯಾದರೋ ಈಗಲೂ ರಸಭರಿತ ಹಣ್ಣಿನಂತೆ ಕಾಣುತ್ತಾಳೆ. ತನಗಾಗಿಯೆ ಆವಳನ್ನು ಮತ್ತೆ ಇಲ್ಲಿಗೆ ಕಳುಹಿಸಿದೆಯೇನೋ ದೈವ....

ಹಾಗೆ ಯೋಚಿಸುತ್ತ ಶರಣಪ್ಪ ಹಳ್ಳಿಯಲ್ಲಿ ಅಡಿಯಿರಿಸಿ ಬಸವಣ್ಣ ದೇವರ ಗುಡಿಗೆ ಬಂದ, ಕೈಯಲ್ಲಿದ್ದ ಒದ್ದೆ ಧೋತರವನ್ನು ಕಟ್ಟೆಯ ಮೇಲಿಟ್ಟು ಒಳಗೆ ಹೋದ, ಮೇಲೆ ಬಿದಿರು ಗಳವೊಂದರಿಂದ ನೇತಾಡುತ್ತಿದ್ದ ಗಂಟೆಗಳನ್ನು ಹಿಡಿದು ಅಲುಗಾಡಿಸಿದ, ನೆಲಕ್ಕೆ ಅಡ್ಡವಾಗಿ ದೇಹವನ್ನುರುಳಿಸಿ ದೇವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದ, ಮತ್ತೆ ಮೇಲಕ್ಕೆದ್ದು ಕಿವಿಗಳನ್ನು ಜಗ್ಗಿ ಎಳೆದುಕೊಂಡು, ಕೆನ್ನೆಗಳನ್ನು ಮೆಲ್ಲಗೆ ಬಡಿದುಕೊಂಡು 'ಅಂಗಾರ' ಹಚ್ಚಿಕೊಂಡ, ಅನಂತರ ಕಣ್ಣುಗಳನ್ನು ಮುಚ್ಚಿ ಕೈಕಟ್ಟಿ ನಿಂತುಕೊಂಡು ಮನಸ್ಸಿನಲ್ಲಿಯೆ ಬಸವಣ್ಣನನ್ನು ಕುರಿತು ಹೇಳಿಕೊಂಡ:

"ನಿನ್ನ ಈ ಭಕ್ತನ ತಪ್ಪು ಕ್ಷಮಾ ಮಾಡಪಾ ಬಸವಣ್ಣಾ. ಒಂದೆರಡು ವರ್ಷ ಹೊಲೇರ ಓಣಿಗೆ ಕಾಲಿಟ್ಟಿರಲಿಲ್ಲ ನಾ. ಇಂದು ಆ ಶಿವಗಂಗಿ ಮತ್ತೆ ಬಂದಿದಾಳ. ನಾ ಮತ್ತೆ ಹೋದೇನು ಆ ಕೇರಿಗೆ. ಏನೂ ತಿಳಕೋಬ್ಯಾಡಪಾ ಬಸವಣ್ಣಾ. ನಿನಗ ಮಾಡೂದು ಮರ್ಯಾದೆ ಎಲ್ಲಾ ಮಾಡುತೀನಿ."

ಶರಣಪ್ಪ ಕಣ್ಣು ತೆರೆದ, ಮತ್ತೊಮ್ಮೆ ಬಸವಣ್ಣನಿಗೆ ನಮಸ್ಕಾರ ಮಾಡಿದ, ಮತ್ತೊಂದು ಬಾರಿ ಗಂಟೆಗಳನ್ನೆಳೆದು ಥಣ ಥಣಾ ಎಂದು ಸದ್ದು ಮಾಡಿದ, ಮತ್ತೊಮ್ಮೆ 'ಅಂಗಾರ' ಹಚ್ಚಿಕೊಂಡು ಗುಡಿಯಿಂದ ನಡೆದ.

೩

ಹದಿನೈದು ಹದಿನಾರು ವರ್ಷಗಳಿಂದೀಚೆಗೆ ನಿತ್ಯವೂ ತಪ್ಪದೆ ಬಸವಣ್ಣನ ಗುಡಿಗೆ ಬಂದು ವಂದಿಸಿ ಹೋಗುವುದೊಂದು ನಿಯಮವೆ ಆದಂತಾಗಿದೆ ಶರಣಪ್ಪನಿಗೆ. ಮಧ್ಯಾಹ್ನ ತೋಟದಿಂದ ಬರುತ್ತಾ ಹಳ್ಳದಲ್ಲಿ ಸ್ನಾನ ತೀರಿಸಿಕೊಂಡು ಗುಡಿಗೆ ಬರುತ್ತಾನೆ, ಬಸವಣ್ಣನಿಗೆ ಅಡ್ಡಬಿದ್ದು ಮನೆಗೆ ಬಂದು ಊಟಕ್ಕೆ ಕುಳಿತುಕೊಳ್ಳುತ್ತಾನೆ. ಅವನ ಹಾಗೆ ನಿಯಮಿತವಾಗಿ ಬಸವಣ್ಣನ ದರ್ಶನ ಪಡೆಯುವವರಿನ್ನಾರೂ ಇಲ್ಲ ಮರಡಿಹಳ್ಳಿಯಲ್ಲಿ. "ಶರಣಪ್ಪ ಬಸವಣ್ಣನ ದೊಡ್ಡ ಭಕ್ತನಪ್ಪಾ!" ಎಂದು ರೈತರೆಲ್ಲ ಆಡಿಕೊಳ್ಳುತ್ತಾರೆ. ದಿನವೂ ತಪ್ಪದೆ ಗುಡಿಗೆ ಹೋಗುವುದು ಮಾತ್ರವಲ್ಲ, ಬಸವಣ್ಣನೆದುರಿಗೆ ನಂದಾದೀಪ ಉರಿಸಲು ಗಾಣದೆಣ್ಣೆಯನ್ನೂ ಸಲ್ಲಿಸುತ್ತಾನೆ ಶರಣಪ್ಪ. ದೇವರ ಪೂಜಾರಿ ರಾಚಯ್ಯನಿಗಂತೂ ಶರಣಪ್ಪ ಕರ್ಣನ ಅವತಾರ. ರಾಚಯ್ಯ ಕೇಳಿದುದೆಲ್ಲ ಕೇಳಿದೊಡನೆಯೆ ಸಿಕ್ಕುತ್ತದೆ. "ದೇವರ ಪೂಜಾರಿ ಅಂದರ ದೇವರ ಹಿರೇಮಗ ಇದ್ದ ಹಾಂಗ. ಅವ ಸಂತೋಸದಿಂದಿದ್ದರ ದೇವರಿಗೂ ಸಂತೋಸ," ಎಂದು ಹೇಳಿಕೊಂಡು ರಾಚಯ್ಯನ ಬೇಡಿಕೆಗಳನ್ನೆಲ್ಲ ಪೂರಯಿಸಿ ಕೊಡುತ್ತ ಬಂದಿದ್ದ ಶರಣಪ್ಪ.

ಮರಡಿಹಳ್ಳಿಯಲ್ಲಿದ್ದ ಮೂರುನೂರು ಮನೆಗಳಲ್ಲಿ ಎಲ್ಲಕ್ಕೂ ದೊಡ್ಡದಾದ, ಗಚ್ಚಿನಿಂದ ಕಟ್ಟಲ್ಪಟ್ಟ ಮಹಡಿ ಮನೆಯೆಂದರೆ ಶರಣಪ್ಪನದೊಂದೇ ಒಂದು. ಸಾಕಷ್ಟು ವಿಶಾಲವೂ ಅಂದವೂ ಆದ ಮನೆ. ಹೊರಭಾಗದಲ್ಲಿ ವಿಸ್ತಾರವಾದ ಅಂಗಳ. ಕಲ್ಲಿನ ಫರಸಿ ಹಾಕಿ ಸಿದ್ಧಗೊಳಿಸಿದ ದೊಡ್ಡ ಪಡಸಾಲೆ, ಅದರ ಒಂದು ಮೂಲೆಯಲ್ಲಿ ಮಹಡಿಗೆ ಹೋಗಲು ಸೋಪಾನ. ಒಳಗಡೆ

ನಡುಮನೆ, ಉಗ್ರಾಣ, ದೇವರ ಮನೆ, ಅಡುಗೆಯ ಮನೆ, ಮಲಗುವ ಮನೆ ಎಲ್ಲವೂ ಪ್ರತ್ಯೇಕ ಪ್ರತ್ಯೇಕವಾಗಿವೆ. ಅಡುಗೆಯ ಮನೆಯ ಹಿಂಭಾಗದಲ್ಲಿ ಅಗಲವಾದುದೊಂದು ಬಚ್ಚಲು ಮನೆಯೂ ಇದೆ. ಮನೆಯ ಎಡಭಾಗದಲ್ಲಿದ್ದ ಐವತ್ತು ಅರವತ್ತು ಅಡಿಗಳಷ್ಟು ಉದ್ದವೂ ಮೂವತ್ತು ಅಡಿಗಳಷ್ಟು ಅಗಲವೂ ಆದ ದನಗಳ ಕೊಟ್ಟಿಗೆಯಲ್ಲಿ ನಾಲ್ಕು ಜೊತೆ ಎತ್ತು, ಹತ್ತು ಆಕಳು, ಎಂಟು ಎಮ್ಮೆ, ಹಲವು ಜೊತೆ ಕೋಣ, ಲೆಕ್ಕವಿಲ್ಲದಷ್ಟು ಕರುಗಳು ನೆಮ್ಮದಿಯಿಂದ ಪವಡಿಸಲು ಸ್ಥಳ ಸೌಕರ್ಯವಿದೆ.

ಅಂಥ ಭಾರಿ ಮನೆಯಲ್ಲಿ ಈಗ ಇರುವವರು ಮಾತ್ರ ಐವರು. ಶರಣಪ್ಪ, ಅವನ ತಾಯಿ ಎಂಭತ್ತು ವರ್ಷಗಳ ಮುದುಕಿ ಬಸವ್ವ, ರೋಗದಿಂದ ಹಾಸಿಗೆ ಹಿಡಿದು ಬಿದ್ದ, ಶರಣಪ್ಪನ ಪತ್ನಿ ಮಲ್ಲವ್ವ, ಅವರ ಏಕಮಾತ್ರ ಪುತ್ರ - ಎಂಟು ವರ್ಷ ವಯಸ್ಸಿನ ಸಂಗಣ್ಣ, ಗಂಡನನ್ನು ಕಳೆದುಕೊಂಡು ಅಣ್ಣನ ಮನೆಗೆ ಬಂದು ಸೇರಿಕೊಂಡಿದ್ದ ಕೆಂಚವ್ವ. ಹೊಲಗಳಲ್ಲಿ ದುಡಿಯುವುದಕ್ಕೂ ದನಕರು ಗಳನ್ನು ನೋಡಿಕೊಳ್ಳುವುದಕ್ಕೂ ನಿಯಮಿಸಲ್ಪಟ್ಟ ಐದು ಜನ ಆಳುಮಕ್ಕಳೂ ಅಲ್ಲಿಯೆ ನೆಲಸಿದ್ದರು.

ವರ್ಷವೊಂದಕ್ಕೆ ಐದುನೂರು ಚೀಲ ಜೋಳ ಒಕ್ಕುವ ದೊಡ್ಡ ಕಮತ ಶರಣಪ್ಪನದು. ಹಳ್ಳದ ದಂಡೆಗುಂಟೆ ಅವನದೊಂದು ತೋಟವೂ ಇದೆ. ಅಲ್ಲಿ ಕಬ್ಬು, ಬತ್ತ, ಕಾಯಿಪಲ್ಯಗಳನ್ನು ಬೆಳೆಯಲಾಗುತ್ತದೆ. ವರ್ಷಕ್ಕೆ ನಾಲ್ಕೈದುನೂರು ಪೆಂಟಿ ಬೆಲ್ಲವೂ ಸಿದ್ಧವಾಗುತ್ತದೆ. ಆ ಹಳ್ಳಿಗೆ ಮಾತ್ರವಲ್ಲ, ಸುತ್ತಲಿನ ಹತ್ತು ಹಳ್ಳಿಗಳಿಗೆಲ್ಲ ಗಣ್ಯನಾದ ರೈತ ಶರಣಪ್ಪ. ಎಲ್ಲರೂ ಅವನನ್ನು 'ಸಾಹುಕಾರ' ಎಂದು ಸಂಬೋಧಿಸುತ್ತಾರೆ. ಸಾಹುಕಾರಿಕೆಯೊಡನೆ ಅನಿವಾರ್ಯ ವೆಂಬಂತೆ ಇರುವ ಜಿಪುಣತನ ಮಾತ್ರ ಶರಣಪ್ಪನಲ್ಲಿರಲಿಲ್ಲವಾದುದರಿಂದ ಹಳ್ಳಿಯಲ್ಲಿ ಹಲವರಿಗೆ ಆತ ಪ್ರಿಯವ್ಯಕ್ತಿಯಾಗಿದ್ದ. ಅವನದೇ ಆದುದೊಂದು ಪಂಗಡವೂ ರೂಪುಗೊಂಡಿತ್ತು. ತನ್ನ ಪಂಗಡದಲ್ಲಿ ಯಾರಿಗಾದರೂ ಅಡ ಚಣೆಗಳು ಬಂದೊದಗಿದಾಗ ಶರಣಪ್ಪ ಅವರಿಗೆ ಔದಾರ್ಯದಿಂದ ನೆರವಾಗು ತ್ತಿದ್ದ. ಅವನಿಂದ ಕಾಳುಕಡ್ಡಿಗಳನ್ನು ಪಡೆದು ಜೀವಿಸುತ್ತಿದ್ದವರು ಅನೇಕ ರಿದ್ದರು. ಎಷ್ಟೋ ಜನರಿಗೆ ಕಾಗದ ಪತ್ರಗಳಿಲ್ಲದೆ ಸಾಲಗಳನ್ನೂ ಕೊಟ್ಟಿದ್ದ

ಶರಣಪ್ಪ. ಸಾಲ ವಸೂಲು ಮಾಡುವಾಗ ನಿಷ್ಠುರತೆಯನ್ನು ವ್ಯಕ್ತಗೊಳಿಸುತ್ತಿರಲಿಲ್ಲ. ಅವರಾಗಿಯೆ ಹಣ ತಂದುಕೊಟ್ಟಾಗ ನಗು ನಗುತ್ತಲೇ ಅದನ್ನು ಸ್ವೀಕರಿಸುತ್ತಿದ್ದ. ಸಾಲ ಹಿಂದಿರುಗಿಸಲಾರದ ಬಡವರನ್ನು ಎಂದೂ ಪೀಡಿಸುತ್ತಿರಲಿಲ್ಲ. ಇಂಥ ಉದಾರ ಹೃದಯದ ಸಾಹುಕಾರ ಬಡ ರೈತರ ಆದರಕ್ಕೆ ಪಾತ್ರನಾಗುವುದು ಸಹಜವೆ ಆಗಿತ್ತು. ಅವನ ದುರ್ಗುಣಗಳನ್ನೆಲ್ಲ ಮರೆಯಿಸಿತ್ತು ಅವನ ಈ ಔದಾರ್ಯ.

ಹಾಗೆ, ಹಳ್ಳಿಯ ಜನರ ದೃಷ್ಟಿಯಲ್ಲಿ ಎದ್ದುಕಾಣಿಸುವಂಥ ದುರ್ಗುಣಗಳೂ ವಿಶೇಷವಾಗಿರಲಿಲ್ಲ ಶರಣಪ್ಪನಲ್ಲಿ. ಅವನಿಗಂಟಿಕೊಂಡಿದ್ದ ದುರಭ್ಯಾಸವೆಂದರೆ ಅದೊಂದೇ: ಹೆಣ್ಣಿನ ಹುಚ್ಚು. ಅದೊಂದು ದುರ್ಗುಣವೆಂದೂ ಹಳ್ಳಿಗರಿಗೆನ್ನಿಸುತ್ತಿರಲಿಲ್ಲ. ಸಾಹುಕಾರಿಕೆಯ ಜೀವನಕ್ಕೆ ಅದು ಅನಿವಾರ್ಯ, ಸ್ವಾಭಾವಿಕ ಎಂದೇ ಅವರು ಭಾವಿಸಿದ್ದರು. ಧನಿಕರಾದ ರೈತರು ಒಬ್ಬಿಬ್ಬರು ಹೆಂಗಸರನ್ನಿಟ್ಟುಕೊಳ್ಳುವುದು ದೊಡ್ಡಸ್ತಿಕೆಯ ಲಕ್ಷಣವೆಂದೇ ಅಲ್ಲಿಯ ಜನರ ಸಾಮಾನ್ಯ ತಿಳಿವಳಿಕೆಯಾಗಿತ್ತು. ಹರಿಜನ ಕೇರಿಯಲ್ಲಿನ ನಾಲ್ಕೈದು ಜನ ಹೆಂಗಸರೊಡನೆ ಆ ಹಳ್ಳಿಯ ಹಿರಿಯರು ಸಂಬಂಧವಿಟ್ಟುಕೊಳ್ಳುವುದು ಪೂರ್ವ ಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಅದೊಂದು ರಸಿಕತೆಯ ವಿಷಯವೆಂದು ಎಲ್ಲರೂ ತಿಳಿದಿದ್ದರೇ ವಿನಾ ಅದು ಕೆಟ್ಟದೆಂದು ಯಾರೂ ಭಾವಿಸಿರಲಿಲ್ಲ. ಹೊಲೆಯರ ಹೆಂಗಸರ ಸಹವಾಸದಿಂದ ಜಾತಿ ಕೆಡುವುದೆಂದೂ ಅವರು ತಿಳಿದಿರಲಿಲ್ಲ. ರಾತ್ರಿ ಹೊಲೆಯರ ಓಣಿಗೆ ಹೋದವರು ಬೆಳಿಗ್ಗೆ ಹಳ್ಳದಲ್ಲಿ ಮಿಂದು ಮನೆಗೆ ಬರುತ್ತಿದ್ದರು. ಸರಿ. "ಮೈಲಿಗೆ" ತೊಳೆದು ಹೋಗಿಬಿಡುತ್ತಿತ್ತು!

ಶರಣಪ್ಪನ ತಂದೆಯೂ ಹೊಲೆಯರ ಹೆಂಗಸೊಬ್ಬಾಕೆಯನ್ನಿಟ್ಟುಕೊಂಡಿದ್ದ. ಅವನ ತರುವಾಯ ಶರಣಪ್ಪನೂ ಅದೇ ಹಾದಿ ತುಳಿದು ದೇವದಾಸಿ ಲಚುಮಿಯನ್ನು ತನ್ನ ಪ್ರೇಯಸಿಯನ್ನಾಗಿ ಮಾಡಿಕೊಂಡು ಬಂದಿದ್ದ. ಈಚೆಗೆ, ಕೆಲವು ವರ್ಷಗಳಿಂದ ಅವಳಿಗೆ ಕಾಹಿಲೆಯಾಗಿ ಹಾಸಿಗೆ ಹಿಡಿದು ಬಿದ್ದಂದಿನಿಂದ ಶರಣಪ್ಪ ಆ ಕೇರಿಗೆ ಹೋಗುವುದು ನಿಂತುಹೋಗಿತ್ತು. ಲಚುಮಿಯ ಹತ್ತಿರ ಹೋಗುವುದನ್ನಾತ ನಿಲ್ಲಿಸಿದ್ದರೂ ಅವಳಿಗೆ ವರ್ಷ ವರ್ಷವೂ ಸಲ್ಲಿಸುತ್ತಿದ್ದ ಸಂಭಾವನೆಯನ್ನು ಮಾತ್ರ ನಿಲ್ಲಿಸಿರಲಿಲ್ಲ. ದವಸ

ಧಾನ್ಯ, ಸೀರೆ ಕುಬುಸ, ಆಗಾಗ ಅಷ್ಟಿಷ್ಟು ಹಣ ಅವಳಿಗೆ ಸಂದಾಯ ವಾಗುತ್ತಲೇ ಇತ್ತು.

ಶರಣಪ್ಪನ ಸ್ತ್ರೀ ವ್ಯಾಮೋಹದಿಂದಾಗಿ ಹಳ್ಳಿಯ ರೈತರುರಿಗೂ ಎಂದೂ ತೊಂದರೆಯಾಗಿರಲಿಲ್ಲ. ಸಿರಿವಂತಿಕೆಯ ದುರುಪಯೋಗ ಮಾಡಿಕೊಂಡು ರೈತರ ಸ್ತ್ರೀಯರನ್ನು ಕೆಡಿಸುವ ನೀಚ ಬಯಕೆ ಅವನನ್ನೆಂದೂ ಆವರಿಸಿರಲಿಲ್ಲ. ಸಿಂದಿ, ಸೆರೆ, ಗಾಂಜಿ ಮೊದಲಾದ ಮಾದಕ ಪದಾರ್ಥಗಳನ್ನೂ ಆತ ಎಂದೂ ಮುಟ್ಟಿರಲಿಲ್ಲ. ಹೊಗೆಸೊಪ್ಪನ್ನು ಸಹ ಆತ ಹೆಚ್ಚಾಗಿ ಸೇವಿಸುತ್ತಿರಲಿಲ್ಲ. ಸ್ನಾನ, ಶಿವಪೂಜೆ ಮಾಡದೆ ಹಾಗೆಯೆ ಎಂದೂ ಊಟ ಮಾಡುತ್ತಿರಲಿಲ್ಲ. ಮನೆಗೆ ಜಂಗಮರಾಗಲಿ ಸ್ವಾಮಿಗಳಾಗಲಿ ಆಗಮಿಸಿದರೆ ಮೃಷ್ಟಾನ್ನ ಭೋಜನ ಮಾಡಿಸಿ ಕಾಣಿಕೆ ಸಲ್ಲಿಸಿ ಅವರನ್ನು ಸಂತುಷ್ಟಗೊಳಿಸಿ ಕಳಿಸುತ್ತಿದ್ದ. ಯಾರಿಗೂ ಅನವಶ್ಯಕವಾಗಿ ಬಿರುಸು ಮಾತಾಡಿದವನಲ್ಲ ಶರಣಪ್ಪ; ಯಾರ ಜತೆಗೂ ವೈರ ಕಟ್ಟಿಕೊಳ್ಳಲು ಬಯಸಿದವನಲ್ಲ. ಆದರೂ, ಅವನು ಬಯಸ ದಿದ್ದರೂ ಸಹ ಅವನ ವಿರುದ್ಧವಾಗಿ ಪಂಗಡವೊಂದು ರೂಪುಗೊಂಡಿತ್ತು.

ಆ ಊರಿನ ಗೌಡ ಕುಲಕರಣಿಯರು ಆ ವಿರುದ್ಧ ಪಂಗಡದ ಹಿರಿಯರು.

ಪೋಲೀಸು ಗೌಡನಾಗಿದ್ದ ಸಿದ್ದಗೌಡನೂ ಶರಣಪ್ಪನ ವಯಸ್ಸಿನವನೆ. ವತನದ ಮೂವತ್ತು ಎಕರೆ ಭೂಮಿಯನ್ನು ಬಿಟ್ಟರೆ ಅವನಿಗೆ ಬೇರೆ ಆಸ್ತಿ ಯಿರಲಿಲ್ಲ. ಗೌಡಿಕೆಯ ಅಧಿಕಾರ ಕೈಗೆ ಬಂದಂದಿನಿಂದ ಲಂಚ ತಿನ್ನುತ್ತ ಬಂದು ಅಲ್ಪಸ್ವಲ್ಪ ಹಣವನ್ನು ಗಂಟುಮಾಡಿಕೊಂಡಿದ್ದ. ಶರಣಪ್ಪ ಉದಾರಿ ಯಾದರೆ ಸಿದ್ದಗೌಡ ಮಹಾ ಜಿಪುಣ. ಸರಕಾರಿ ಕೆಲಸಗಳಿಗಾಗಿ ಹಳ್ಳಿಗೆ ಬರುವ ಅಧಿಕಾರಿಗಳಿಗಾಗಿ ಅವನೆಂದೂ ಒಂದು ಕಾಸನ್ನು ಖರ್ಚುಮಾಡಿ ದವನಲ್ಲ. ಆದರೂ, ತಾನು ಹಳ್ಳಿಯ ಗೌಡನಾದುದರಿಂದ ಶರಣಪ್ಪನಿಗಿಂತ ಹೆಚ್ಚಾಗಿ ತನಗೇ ಮರ್ಯಾದೆ ಸಲ್ಲಬೇಕೆಂದು ಅವನು ಬಯಸುತ್ತಿದ್ದ. ಹಳ್ಳಿ ಯಲ್ಲಿನ ಮುಕ್ಕಾಲುಪಾಲು ಜನಕ್ಕೆ ಸಿದ್ದಗೌಡನೆಂದರೆ ಆಗುತ್ತಿರಲಿಲ್ಲ. ಅವ ರೆಲ್ಲರೂ ಒಂದಿಲ್ಲೊಂದು ಸಲ ಸಿದ್ದಗೌಡನಿಂದ ತೊಂದರೆಗೊಳಗಾಗಿದ್ದವರೇ. ಲಂಚದ ಹಣವಿಲ್ಲದೆ ಆತ ಯಾರ ಕೆಲಸವನ್ನೂ ಮಾಡಿಕೊಡುತ್ತಿರಲಿಲ್ಲ. ಅಂತೆಯೆ, ರೈತರೆಲ್ಲ ಅವನ ವಿಚಾರವಾಗಿ ಬೇಸರಪಟ್ಟುಕೊಂಡಿದ್ದರು.

ಅವರ ಬೇಸರದಿಂದ ತನಗೆ ನಷ್ಟವೇನು, ತನಗೆ ಹಣವೊಂದು ಬಂದರಾಯಿತು, ಎಂದು ಸಿದ್ದಗೌಡ ಆ ವಿಚಾರ ನಿರ್ಲಕ್ಷ್ಯದಿಂದಿದ್ದ.

ದೊರೆಗೆ ತಕ್ಕ ಸಚಿವನಿರಬೇಕಾದುದು ಅವಶ್ಯವಷ್ಟೆ. ಸಿದ್ದಗೌಡನಿಗೆ ತಕ್ಕ ಕುಲಕರಣಿ ರಂಗಪ್ಪ. ಚಿಕ್ಕಂದಿನಿಂದ ಅವರಿಬ್ಬರೂ ಕೂಡಿ ಆಡಿ ಬೆಳೆದವ ರಾದುದರಿಂದ ಇಬ್ಬರಲ್ಲೂ ಸಾಕಷ್ಟು ಸಲುಗೆ ಬಳೆದು ಬಂದಿತ್ತು. ಕುಲಕರಣಿಗೆ ತಿಳಿಸದೆ, ಅವನ ಸಲಹೆ ಪಡೆಯದೆ ಯಾವ ಕೆಲಸಕ್ಕೂ ಕೈ ಹಾಕುತ್ತಿರಲಿಲ್ಲ ಸಿದ್ದಗೌಡ. ಲಂಚದ ಹಣದಲ್ಲೂ ರಂಗಪ್ಪನಿಗೆ ಒಂದು ಪಾಲು ದಕ್ಕುತ್ತಿತ್ತು. ಗೌಡನಿಗೆ ಗೊತ್ತಾಗದಂತೆ ರೈತರಿಂದ ಅಷ್ಟಿಷ್ಟು ಸುಲಿಯುವ ವಿದ್ಯೆಯಲ್ಲೂ ಪಾರಂಗತನಾಗಿದ್ದ ರಂಗಪ್ಪ. ಅವನಿಗೆ ಹೆಚ್ಚು ಭೂಮಿಯಿರಲಿಲ್ಲ. ವತನದ ಹೊಲದ ಉತ್ಪನ್ನ ಅವನ ಸಂಸಾರದ ಖರ್ಚಿಗೂ ಸಾಲುತ್ತಿರಲಿಲ್ಲ. ಅಂತೆಯೆ, ಸಂಸಾರದ ರಥವನ್ನು ಸಾಗಿಸಿಕೊಂಡು ಬರಲು ರಂಗಪ್ಪ ಯಾರನ್ನಾದರೂ ಸುಲಿಯುವುದು ಅನಿವಾರ್ಯವಾಗಿತ್ತು.

ಶರಣಪ್ಪನ ಬಗೆಗೆ ರಂಗಪ್ಪನಲ್ಲಿ ದ್ವೇಷಭಾವನೆಯೇನೂ ಇರಲಿಲ್ಲ. ಆದರೆ, ಸಿದ್ದಗೌಡನ ಅಂತರಂಗದ ಮಿತ್ರನಾಗಿದ್ದುದರಿಂದ, ಮನಸ್ಸಿಗೆ ಒಪ್ಪಿಗೆ ಯಾಗದಿದ್ದರೂ ಸಹ ಆತ ಶರಣಪ್ಪನ ವಿಚಾರವಾಗಿ ವಿರೋಧ ವ್ಯಕ್ತಗೊಳಿಸ ಬೇಕಾಗಿ ಬಂದಿತ್ತು. ಶರಣಪ್ಪನ ಜನಪ್ರಿಯತೆಯನ್ನು ಕಂಡು ಮತ್ಸರದಿಂದ ತಳಮಳಿಸುತ್ತಿದ್ದ ಸಿದ್ದಗೌಡನ ಎದುರಿಗೆ ಆಗಾಗ ಶರಣಪ್ಪನನ್ನು ನಿಂದಿಸುತ್ತ ಗೌಡನ ಮೆಚ್ಚುಗೆಯನ್ನುಳಿಸಿಕೊಂಡು ಬರುವ ಅತ್ಯಂತ ಅಪ್ರಿಯವಾದ ಕರ್ತವ್ಯಕರ್ಮ ರಂಗಪ್ಪನ ಪಾಲಿಗೆ ಬಂದಿತ್ತು.

ಶರಣಪ್ಪನ ಬಗೆಗೆ ನಿಷ್ಠೆಯನ್ನಿಟ್ಟುಕೊಂಡು ಬಂದಿದ್ದ ರೈತರದೊಂದು ಪಂಗಡವಿದ್ದಂತೆ ಮನಃಪೂರ್ವಕವಲ್ಲದಿದ್ದರೂ ತೋರಿಕೆಗಾಗಿಯಾದರೂ ಸಿದ್ದಗೌಡನಲ್ಲಿ ನಿಷ್ಠೆಯನ್ನು ವ್ಯಕ್ತಗೊಳಿಸುವ ಕೆಲವರದೊಂದು ಪಂಗಡವೂ ಇತ್ತು. ಈ ಪಂಗಡದಲ್ಲಿ ಹೆಚ್ಚು ಜನರು ಗರಡಿಯಾಳುಗಳು. ಸಾಧಾರಣ ವಾಗಿ ಈ "ಪೈಲ್ವಾನ"ರುಗಳೆಲ್ಲ ನಿರುದ್ಯೋಗಿಗಳು. ಮನೆಯಲ್ಲಿ ಊಟ ಗಿಟ್ಟಿಸುವುದು, ಗರಡಿಯಲ್ಲಿ ಸಾಧನೆ ಮಾಡುವುದು, ಕುಸ್ತಿಯ ದಿನಗಳಲ್ಲಿ ಕುಸ್ತಿಯಾಡುವುದು, ಇನ್ನುಳಿದ ಸಮಯದಲ್ಲಿ ಹಳ್ಳಿಯ ನಡುವೆ ಇರುವ ಬಸಿರಿ

ಗಿಡದಕಟ್ಟೆಯ ಮೇಲೆ ಕುಳಿತು ಹರಟೆ ಕೊಚ್ಚುವುದು– ಇಷ್ಟು ಮಾತ್ರ ಅವರ 'ಉದ್ಯೋಗ.' ಹಳ್ಳಿಯಲ್ಲಿ ಆಗಾಗ ಉದ್ಭವಿಸುವ ಕಲಹಗಳಲ್ಲಿ ಭಾಗವಹಿಸಿ ಹಣ ಕೊಟ್ಟವರ ಪಕ್ಷ ಹಿಡಿದು ಹೊಡೆದಾಡುವುದು ಅವರ ಮಹತ್ವದ ಕಾಯಕ. ಸಿದ್ದಗೌಡನಿಂದ ಅವರಿಗೆ ಹಣವೇನೂ ದೊರೆಯುತ್ತಿರಲಿಲ್ಲವಾದರೂ ಅವನ ಪಕ್ಷ ವಹಿಸುವುದರಿಂದ ಪೋಲೀಸರ ತೊಂದರೆಯಾದರೂ ತಪ್ಪುತ್ತಿತ್ತು. ಅವರ ವಿರುದ್ಧ ಎಂಥ ಫಿರ್ಯಾದು ಬಂದರೂ ಗೌಡ ಗಮನಿಸದೆ ಸುಮ್ಮನಿದ್ದು ಬಿಡುತ್ತಿದ್ದ. ಮುಖ್ಯವಾಗಿ ಆ ಒಂದು ಕಾರಣದಿಂದಾಗಿಯೆ ಅವರು ಅವನ ಪಕ್ಷದಲ್ಲಿ ಸೇರಿಕೊಂಡಿದ್ದರು.

ಶರಣಪ್ಪನ ಪಕ್ಷದಲ್ಲಿಯೂ ಕೆಲವರು ಗರಡಿಯಾಳುಗಳಿದ್ದರಾದರೂ ಸಾಮಾನ್ಯವಾಗಿ ಅವರು ಯಾರ ತಂಟೆಗೂ ಹೋಗದೆ ತಮ್ಮಷ್ಟಕ್ಕೆ ತಾವು ಸಭ್ಯತನದಿಂದ ಬಾಳುತ್ತ ಬಂದಿದ್ದರು. ಅವರ ಶಕ್ತಿ ಸಾಮರ್ಥ್ಯಗಳ ದುರ್ಲಾಭ ಪಡೆಯುವ ಬಯಕೆ ಶರಣಪ್ಪನಿಗೆ ಎಂದೂ ಉಂಟಾಗಿರಲಿಲ್ಲ. ಆತ ಬಡಿದಾಟ ಹೊಡೆದಾಟಗಳಿಗೆ ತೊಡಗುವ ವ್ಯಕ್ತಿಯೂ ಆಗಿರಲಿಲ್ಲ. ಸಿದ್ದಗೌಡನ ಚಿತಾವಣೆಯಿಂದಾಗಿ ಅವನ ಪಕ್ಷದ ಪೈಲ್ವಾನರು ಶರಣಪ್ಪನ ಪಕ್ಷದ ಪೈಲ್ವಾನರನ್ನು ಆಗಾಗ ವಿನಾಕಾರಣವಾಗಿ ಕೆಣಕುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಚಿಕ್ಕಪುಟ್ಟ ಕದನಗಳೂ ನಡೆದಿದ್ದವು. ಶರಣಪ್ಪನ ಪಕ್ಷದ ಕೆಲವರು ಗರಡಿಯಾಳುಗಳ ಮೇಲೆ ಮೊಕದ್ದಮೆಗಳನ್ನು ಹಾಕಿಸಿದ್ದ ಸಿದ್ದಗೌಡ. ಶರಣಪ್ಪ ತಾಳ್ಮೆಯನ್ನು ತ್ಯಜಿಸದೆ ತನ್ನ ಪೈಲ್ವಾನರಿಗಾದ ದಂಡದ ಹಣ ತೆತ್ತು ಸುಮ್ಮನಿರುತ್ತ ಬಂದಿದ್ದ. ಅದರಿಂದಾಗಿ ಗೌಡನ ಪಕ್ಷದ ಪೈಲ್ವಾನರಿಗೆ ಸಹಜವಾಗಿಯೆ ಸೊಕ್ಕು ಬಂದಿತ್ತು. ತಾವು ಏನನ್ನು ಮಾಡಿದರೂ ನಡೆಯುವುದು, ತಮ್ಮನ್ನು ವಿರೋಧಿಸಿ ಗೆಲ್ಲುವವರಾರೂ ಇಲ್ಲ– ಎಂದೇ ಅವರು ಭಾವಿಸಿಕೊಂಡಿದ್ದರು. ಶರಣಪ್ಪನ ಶಾಂತವೃತ್ತಿಯ ದುರ್ಲಾಭ ಪಡೆದು ಅವನನ್ನೊಂದು ಬಾರಿ ಚೆನ್ನಾಗಿ ಫಜೀತಿಮಾಡಿ ಅವನ ಮರ್ಯಾದೆ ತೆಗೆದುಹಾಕುವುದೆಂದು ಬಹಳ ದಿನಗಳಿಂದ ಹೊಂಚು ಹಾಕುತ್ತ ಬಂದಿದ್ದ ಸಿದ್ದಗೌಡ.

"ಆ ಶರಣ್ಯಾನ ಸೊಕ್ಕು ಮುರೀದ ಹೊರ್ತು ನಮ್ಮಿಬ್ಬರಿಗೂ ಉಳಿಗಾಲ ಇಲ್ಲ. ಯಾಕೋ ರಂಗಣ್ಣಾ ?" ಎಂದು ಸಿದ್ದಗೌಡ ಕೇಳಿದಾಗಲೆಲ್ಲ ರಂಗಪ್ಪ

ನಗುತ್ತಾ, "ಹೌದು ಮತ್ತೆ! ಹಾಗೇ ಮಾಡಲಿಕ್ಕೆ ಬೇಕು. ಊರಿಗೆಲ್ಲಾ ಗೌಡ ಅಂದರೆ ನೀನು. ನಿನ್ನ ಮುಂದೆ ಸಣ್ಣವನಾಗಿ ನಡಕೋಬೇಕೋ ಬ್ಯಾಡವೋ ಅವ? ಹಾಗೇ ಮಾಡಬೇಕಪ್ಪ ಸಿದಗೌಡ, ಹಾಗೇ ಮಾಡಬೇಕು," ಎಂದು ಅವನಿಗೆ ಪ್ರೋತ್ಸಾಹವೀಯುತ್ತ ಬಂದಿದ್ದ.

೪

ರಸಿಕತನದಲ್ಲಿಯೂ ಶರಣಪ್ಪನಿಗೆ ಹಿಂದೆ ಬಿದ್ದವನಲ್ಲ ಸಿದ್ದಗೌಡ. ಉಪಪತ್ನಿಯೊಬ್ಬಳನ್ನು ಮನೆಯಲ್ಲಿಯೆ ಇಟ್ಟುಕೊಂಡಿದ್ದ. ಹರಿಜನ ಕೇರಿಯಲ್ಲಿಯೂ ಒಬ್ಬಿಬ್ಬರು ಹೆಂಗುಸರು ಅವನ ಪ್ರೇಯಸಿಯರಾಗಿದ್ದರು. "ಶರಣಪ್ಪನಿಗೆ ಯಾತರಲ್ಲಿ ಕಡಿಮಿ ನಾ? ಅವ ಒಬ್ಬಳನ್ನs ಇಟ್ಟುಕೊಂಡಿದ್ದರ ನಾ ಹತ್ತು ಮಂದೀನ್ನ ಇಟ್ಟುಕೊಂಡೀನಿ," ಎಂದು ಆತ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ. "ಕಲಿಯುಗದ ಕೃಷ್ಣನಪಾ ನೀ ಸಿದ್ದಗೌಡ!" ಎಂದು ಹೇಳಿ ನಕ್ಕುಬಿಡುತ್ತಿದ್ದ ರಂಗಪ್ಪ.

ಶಿವಗಂಗೆಯಿನ್ನೂ ಹುಡುಗಿಯಾಗಿದ್ದಾಗಲೆ ಸಿದ್ದಗೌಡ ಅವಳನ್ನು ನೋಡಿದ್ದ, ನೋಡಿ ಮರುಳಾಗಿದ್ದ. ಅವಳನ್ನು ವಶಪಡಿಸಿಕೊಳ್ಳಬೇಕೆಂದು ಆತ ಹೊಂಚು ಹಾಕುತ್ತಿದ್ದ ಹಾಗೆಯೆ ಅವಳು ಗಂಡನ ಮನೆಗೆ ಹೋಗಿಬಿಟ್ಟಿದ್ದಳು. ಈಗ ಅವಳು ಹಳ್ಳಿಗೆ ಹಿಂದಿರುಗಿ ಬಂದಿರುವಳೆಂಬ ಸುದ್ದಿ ಹೊಲೆಯರ ತಿಪ್ಪುವಿನಿಂದ ತಿಳಿದುಬರುತ್ತಲೂ ಸಿದ್ದಗೌಡನ ಹಳೆಯ ಬಯಕೆ ಹೆಡೆಯೆತ್ತಿತು.

ಸಾಯಂಕಾಲದ ಹೊತ್ತು. ಗೌಡ ಕುಲಕರಣಿಯರಿಬ್ಬರೂ ಚಾವಡಿಯಲ್ಲಿ ವಿರಾಮವಾಗಿ ಕುಳಿತುಕೊಂಡಿದ್ದರು. ತಿಪ್ಪು ಬಂದು ಶಿವಗಂಗೆಯ ಆಗಮನದ ವಾರ್ತೆಯನ್ನು ಬೀರುತ್ತಲೂ ಸಿದ್ದಗೌಡ ಸೆಟೆದು ಕುಳಿತು,

"ಎಲ್ಲಿದಾಳ ಆಕಿ ತಿಪ್ಪೂ?" ಎಂದು ಕೇಳಿದ.

"ತಮ್ಮಪ್ಪನ ಮನಿಯಾಗs ಅದಾಳ್ರೀ."

"ಅದೆಂಥಾ ಮನಿಯೋ ಅದು? ಎಲ್ಲಾ ಬಿದ್ದುಹೋಗಿರಬೇಕಲ್ಲ?"

"ಬಿದ್ದುಹೋಗಿತ್ತು. ಬಂದವಳೇ ಅದನ್ನ ನೆಟ್ಟಗ ಮಾಡಾಕ ಹತ್ತಿದಾಳ."

ಎಲೆಯಡಕೆಯ ಚೀಲದಿಂದ ಅಡಕೆಯ ತುಂಡೊಂದನ್ನು ತೆಗೆದು ಬಾಯಿಗಿಟ್ಟುಕೊಳ್ಳುತ್ತ ರಂಗಪ್ಪ ಕೇಳಿದ:

"ಏನು ಸಿದಗೌಡಾ, ಬಹಾಳ ವಿಚಾರಣೆ ನಡಸಿದ್ದೀ? ಮತ್ತೇನು ಮಸಲತ್ತು?"

ಆ ಮಾತಿಗೆ ಉತ್ತರವೀಯದೆ ಸಿದ್ದಗೌಡ ತಿಪ್ಪುವಿನ ಕಡೆ ಹೊರಳಿ ಅರ್ಥಪೂರ್ಣವಾಗಿ ಕಣ್ಣು ಮಿಟುಕಿಸಿದ.

"ನೋಡೂದಕ್ಕ ಹೆಂಗ ಕಾಣುತಾಳೋ ತಿಪ್ಪೂ?"

"ಒಂದು ಹುಡುಗನ್ನ ಹಡದಾಕಿ. ಮೊದಲಿನ ಚೆಲುವಿಕಿ ಹೆಂಗ ಉಳಿದೀತ್ರೀ ಗೌಡರs? ಆದರೂ ಚಿಂತಿಲ್ಲ ಅನ್ನಿರಿ. ಪಸಂದಾಗಿದ್ದಾಳ ಇನ್ನೂ."

"ಇನ್ನ್ಯಾರದಾದರೂ ಕಣ್ಣು ಬೀಳುವ ಮೊದಲೇ ನೀನೇ ಗಟ್ಟಿಮಾಡಿಕೊಂಡು ಬಿಡಪಾ ಗೌಡಾ," ಎಂದ ರಂಗಪ್ಪ.

ಸಿದ್ದಗೌಡ ಮೀಸೆಯ ಮೇಲೆ ಕೈ ಎಳೆಯುತ್ತ ಹೇಳಿದ:

"ಮತ್ಯಾರದಾರ ಕಣ್ಣು ಹಾಕುವವರು?"

"ಅದಾನಲ್ಲ ಅವ ಆ ಶರಣಪ್ಪ. ಒಂದೆರಡು ವರ್ಷದಿಂದ ಅವನೂ ಬಹಳ ಹಸಿದುಕೊಂಡೇ ಇದ್ದಾನಪ್ಪ. ಅಂಥಾ ಹುಲಿಯ ಕಣ್ಣಿಗೆ ಇಂಥಾ ಚಿಗರಿ ಕಾಣಿಸಿದರೆ ಮುಗಿದೇಹೋಯ್ತು."

"ಹೌದೌದು. ನೀನು ಹೇಳೂದೂ ಖರೇನs. ಲಗೂ ಮಾತಾಡಿ ಮುಗಿಸೋ ತಿಪ್ಪೂ. ಈಗಿಂದೀಗ ಹೋಗು ಅವಳ ಹತ್ತರ. ಗೌಡರು ಹುಕುಂ ಕೊಟ್ಟಾರಂತ ಹೇಳು. ನನ್ನ ಬಿಟ್ಟು ಬ್ಯಾರೆ ಯಾರನ್ನೂ ಮುಟ್ಟಿಸಿಕೊಳ್ಳಬಾರದಂತ ತಾಕೀತು ಮಾಡಿದ್ದಾರಂತ ಹೇಳು."

"ಹೂಂನ್ರೀ," ಎಂದು ಹೇಳಿ ಚಾವಡಿಯನ್ನು ತ್ಯಜಿಸಿ ಕೇರಿಯ ಕಡೆ ಹೊರಟ ತಿಪ್ಪು.

ಒಂದು ನಿಮಿಷ ಮೌನವಾಗಿದ್ದು ಅನಂತರ ಸಿದ್ದಗೌಡ ಮಾತನಾಡಿದ:

"ನಿನಗ ಗೊತ್ತಿರಬೇಕಲ್ಲ ರಂಗಣ್ಣ. ಈ ಶಿವಗಂಗಿಯು ಗಂಡ ದೊಡ್ಡ ದರೋಡೆಖೋರ ಇದ್ದ. ನೂರಿನ್ನೂರು ಕಡೆ ದರೋಡೆ ಹಾಕಿತ್ತು ಅವರ ಗುಂಪು. ಸಣ್ಣಪುಟ್ಟ ಕಳ್ಳತನಕ್ಕಂತೂ ಲೆಕ್ಕನೇ ಇರಲಿಲ್ಲ..."

ಹೊಗೆಸೊಪ್ಪಿನ ರಸವನ್ನು ಪಿಚಕ್ಕನೆ ಪಡಸಾಲೆಗೆ ಚಿಮುಕಿಸಿ ರಂಗಪ್ಪ ಹೇಳಿದ:

"ಹೌದು. ನಾನೂ ಕೇಳೀನಿ. ಮೊನ್ನೆ ತಾಲೂಕ ಕಚೇರಿಯೊಳಗ ಮಾತಾಡುತಿದ್ದರು. ಇವರಲ್ಲಿ ಕೆಲವು ಮಂದಿಗೆ ಶಿಕ್ಷಾ ಆಗ್ಯದ ಅಂತಲ್ಲ?"

"ಹೌದಂತೆ. ಶಿವಗಂಗಿಯು ಗಂಡನಿಗೂ ಶಿಕ್ಷಾ ಆಗಿತ್ತು."

"ದರೋಡೆಕೋರನ ಹೆಂಡತಿಯು ಸಹವಾಸ. ಹುಷಾರಿಯಪ್ಪಾ ಸಿದಗೌಡಾ," ಎಂದು ನಗುತ್ತ ನುಡಿದ ರಂಗಪ್ಪ.

"ಊರಿನ ಪೋಲೀಸ ಪಾಟೀಲ ಇದೀನಿ ನಾ! ನನ್ನೇನ ಮಾಡುತಾಳ ಈ ಹೆಣ್ಣು ಹೆಂಗಸು!" ಎಂದು ಸಿದ್ದಗೌಡನೂ ನಕ್ಕ.

೫

ಹರಿಜನ ಕೇರಿಯಿದ್ದುದು ಹಳ್ಳಿಯ ದಕ್ಷಿಣ ಭಾಗದಲ್ಲಿ.

ಅಲ್ಲಿದ್ದುವು ಇಪ್ಪತ್ತು ಇಪ್ಪತ್ತೈದು ಮನೆಗಳಷ್ಟೆ. 'ಮನೆ' ಗಳೆಂದರೆ ಕಲ್ಲಿನಿಂದ ಕಟ್ಟಿದ ಮನೆಗಳಲ್ಲ; ಮಣ್ಣು ಹೆಂಟೆ, ಬಿದಿರುಗಳ, ಜೋಳದ ದಂಟು, ಅಡವಿಯ ಕಟ್ಟಿಗೆಗಳಿಂದ ಸಿದ್ಧಗೊಳಿಸಿದ ಗುಡಿಸಲುಗಳು. ಇಡಿಯಾಗಿ ಮಣ್ಣಿನ ಹೆಂಟೆಗಳಿಂದ ಕಟ್ಟಿದ ಒಂದು ಗುಡಿಯೂ ಇತ್ತು ಕೇರಿಯ ಮಧ್ಯದಲ್ಲಿ. ಅದು ದುರ್ಗಾದೇವಿಯ ಗುಡಿ. ಕೇರಿಯಲ್ಲೆಲ್ಲ ಹಂಚುಗಳು ಕಾಣುತ್ತಿದ್ದುದು ಅದೊಂದು ಗುಡಿಯ ಮೇಲೆ ಮಾತ್ರ. ಇನ್ನಿತರ ಗುಡಿಸಲುಗಳಿಗೆಲ್ಲ ಈಚಲು ಚಾಪೆ, ಹಳೆಯ ತಗಡು, ಹಳೆಯ ಚೀಲ, ಕಾಡಿನ ಹುಲ್ಲು, ತೆಂಗಿನ ಗರಿಗಳದೇ ಛಾವಣಿ.

ಪ್ರತಿವರ್ಷವೂ ಮಳೆಗಾಲಕ್ಕಾರಂಭವಾಗುತ್ತಲೂ ಛಾವಣಿಗಳಿಂದ ನೀರು ಸೋರಿ ಎಲ್ಲ ಗುಡಿಸಲುಗಳಲ್ಲೂ ಚಿಕ್ಕ ಕೆರೆಗಳನ್ನು ನಿರ್ಮಿಸುತ್ತಿತ್ತು. ನಿಂತ ನೀರನ್ನು ಬಳಿದು ಹೊರದೂಡಿ ರಾಡಿನೆಲದ ಮೇಲೆ ಹೇಗೋ ಮಲಗಿ ನಿದ್ದೆ ಮಾಡುವುದು ಆ ಜನರಿಗೆಲ್ಲ ಅಭ್ಯಾಸವಾಗಿತ್ತು. ಅತಿವೃಷ್ಟಿಯಾದ ವರ್ಷಗಳಲ್ಲಿ ಹಳ್ಳಿಯ ಓಣಿಗಳಿಂದ ಹರಿದು ಬಂದ ನೀರು ಇವರ ಕೇರಿಗೆ ನುಗ್ಗಿ ಗುಡಿಸಲುಗಳ ದುರ್ಬಲ ಗೋಡೆಗಳನ್ನು ಕೆಡವಿ ಸಣ್ಣ ಪುಟ್ಟ ಸಾಮಾನುಗಳನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ನೀರಿನ ಹಾವಳಿ ಮುಗಿಯುವ ತನಕ ದುರ್ಗವ್ವನ ಗುಡಿಯೇ ಅವರಿಗೆಲ್ಲ ಆಶ್ರಯಸ್ಥಾನವಾಗುತ್ತಿತ್ತು. ಮಳೆಯ ಅಬ್ಬರ ಕೊಂಚ ಇಳಿದ ಬಳಿಕ ಮತ್ತೆ ಗೋಡೆಗಳನ್ನು ಕಟ್ಟುವುದು, ಚಪ್ಪರಕ್ಕೆ ತೆಂಗಿನ ಗರಿಗಳನ್ನು ಹೊದ್ದಿಸುವುದು, ಆ ಹೊಸ ಕಟ್ಟೋಣವನ್ನು

ಮತ್ತೊಂದು ಮಳೆ ನಾಶಗೊಳಿಸಿದಾಗ ತಮ್ಮ ದೈವವನ್ನು ಹಳಿಯುತ್ತಾ ಅಸಹಾಯರಾಗಿ ಕಂಬನಿ ಸುರಿಸುವುದು. ಶತ ಶತಮಾನಗಳಿಂದ ಅಂಥ ತೊಂದರೆಗಳನ್ನು ಎದುರಿಸುತ್ತ ಬಂದುದರಿಂದಾಗಿ ಒಂದು ಬಗೆಯ ಜಡತೆಯೂ ನಿಷ್ಕ್ರಿಯತೆಯೂ ಅವರನ್ನು ಆವರಿಸಿಕೊಂಡಿತ್ತು. ಆ ಕೇರಿಯಲ್ಲಿನ ಹೆಚ್ಚು ಜನಕ್ಕೆ ಜೀವನದ ವಿಷಯವಾಗಿ ಉತ್ಸಾಹವೂ ಇರಲಿಲ್ಲ, ಆಸಕ್ತಿಯೂ ಇರಲಿಲ್ಲ. ಹುಟ್ಟಿ ಬಂದ ತಪ್ಪಿಗಾಗಿ ಸಾಯುವವರೆಗೆ ಹೇಗೋ ಬದುಕಬೇಕೆಂಬುದೇ ಅವರ ಸಾಮಾನ್ಯಭಾವನೆಯಾಗಿತ್ತು. ಪಶುಗಳಿಗೂ ಅವರಿಗೂ ಹೆಚ್ಚಿನ ವ್ಯತ್ಯಾಸವೇನೂ ಇದ್ದಂತೆ ಕಂಡುಬರುತ್ತಿರಲಿಲ್ಲ. ದನದ ಕೊಟ್ಟಿಗೆಗಿಂತಲೂ ಕೀಳ್ತರದ ಸ್ಥಳದಲ್ಲಿ ಅವರು ತಮ್ಮ ಹೆಂಡಿರು ಮಕ್ಕಳೊಡನೆ ಬದುಕು ಸಾಗಿಸುತ್ತಿದ್ದರು. ದನಗಳನ್ನು ನಡಸಿಕೊಳ್ಳುವ ಹಾಗೆಯೆ ಹಳ್ಳಿಯ ಜನರು ಈ ಹರಿಜನರನ್ನು ನಡಸಿಕೊಳ್ಳುತ್ತ ಬಂದಿದ್ದರು.

ಹಳ್ಳಿಯಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಅದುವರೆಗೂ ಹರಿಜನ ಬಾಲಕರಾರೂ ಪ್ರವೇಶಿಸಿರಲಿಲ್ಲ. ಅವರಿಗೆ ವಿದ್ಯಾಭ್ಯಾಸ ಅನವಶ್ಯಕವೆಂದೇ ಹಳ್ಳಿಯವರು ತಿಳಿದಹಾಗಿತ್ತು. ಸತ್ತ ದನಗಳನ್ನು ಹೊತ್ತುಕೊಂಡೊಯ್ದು ತಿನ್ನುವುದು, ಒಕ್ಕಲಿಗರಿಗೆ ಅವಶ್ಯವಿರುವ ಮಿಣಿ, ಬಾರುಕೋಲು, ಮೊಟ್ಟೆ, ಮೊಚ್ಚೆ ಮೊದಲಾದ ತೊಗಲಿನ ಸಾಮಾನುಗಳನ್ನು ಮಾಡಿಕೊಡುವುದು, ರೈತರು ಕೊಟ್ಟ 'ಆಯ'ದಿಂದಲೇ ತೃಪ್ತರಾಗುವುದು – ಇವಿಷ್ಟೇ ಹೊಲೆಯರ ಕರ್ತವ್ಯಕರ್ಮಗಳೆಂದು ಹಳ್ಳಿಗರು ದೃಢವಾಗಿ ನಂಬಿಕೊಂಡಿದ್ದರು. ಮಾನವರಿಗೆಲ್ಲ ಅವಶ್ಯಕವಾದ ಮಾನ ಮರ್ಯಾದೆಗಳಾಗಲಿ ಶೀಲ ಪಾವಿತ್ರ್ಯಗಳಾಗಲಿ ಹೊಲೆಯರಿಗೆ ಅನವಶ್ಯಕವೆಂದೇ ಹಳ್ಳಿಗರ ತಿಳಿವಳಿಕೆಯಾಗಿತ್ತು. ಹೊಲೆಯರ ಹೆಂಗುಸರನ್ನು ಉಪಭೋಗಿಸುವುದು ಉಚ್ಚಜಾತಿಯವರ ಹಕ್ಕಿನ ಬಾಬು ಎಂದು ಹೇಳುವವರೂ ಇದ್ದರು. ಹಲವು ಶತಮಾನಗಳಿಂದ ಈ ಬಗೆಯ ಪಶುತುಲ್ಯ ಜೀವನವನ್ನೇ ಅನುಸರಿಸುತ್ತ ಬಂದಿದ್ದ ಹೊಲೆಯರೂ ಅದೇ ತಮ್ಮ ಜಾತಿಯ ಸಂಪ್ರದಾಯವೆಂದು ಭಾವಿಸಿದ್ದರು. ಅದು ಕೀಳು ಜೀವನವೆಂಬ ಕಲ್ಪನೆ ಅವರಿಗೆಂದೂ ಬಂದಿರಲಿಲ್ಲ. ಆ ಕಲ್ಪನೆಯನ್ನು ಅವರಲ್ಲಿ ಮೂಡಿಸುವ ಯತ್ನವನ್ನೂ ಆದುವರೆಗೆ ಯಾರೂ ಮಾಡಿರಲಿಲ್ಲ.

ಗ್ರಾಮಸ್ಥರ ಸೇವೆಗೆಂದು ನೇಮಕವಾಗಿದ್ದ ಎರಡು ಮನೆತನಗಳನ್ನುಳಿದು ಆ ಕೇರಿಯಲ್ಲಿನ ಬೇರಾವ ಮನೆತನಕ್ಕೂ ಭೂಮಿಯಿರಲಿಲ್ಲ. ರೈತರಿಂದ ದೊರೆಯುವ 'ಆಯ'ದ ಕಾಳು, ಸತ್ತ ದನಗಳ ಮಾಂಸಗಳಿಂದಲೇ ಅವರು ಹೊಟ್ಟೆ ಹೊರೆಯಬೇಕಾಗುತಿತ್ತು. ಎಂಟು ಹತ್ತು ಮಕ್ಕಳನ್ನೊಳಗೊಂಡ ದೊಡ್ಡ ಸಂಸಾರಗಳಿಗೆ 'ಆಯ'ದ ಕಾಳು ಎರಡು ತಿಂಗಳೂ ಸಾಲುತ್ತಿರಲಿಲ್ಲ. ಮುಂದಿನ ಹತ್ತು ತಿಂಗಳುಗಳವರೆಗೆ ದನದ ಮಾಂಸವೇ ಗತಿಯಾಗುತಿತ್ತು. ರೈತರ ಹೊಲಗಳಲ್ಲಿ ಕೂಲಿಕೆಲಸ ಸಿಕ್ಕಿದಾಗ ಒಂದೆರಡು ಸೇರು ಜೋಳ ಸಿಕ್ಕುತ್ತಿತ್ತು, ಅಷ್ಟೆ - ಮಳೆಗಾಲದ ದಿನಗಳಲ್ಲಿ ಕೂಲಿ ಕೆಲಸವೂ ದೊರೆಯುತ್ತಿರಲಿಲ್ಲವಾದ್ದರಿಂದ ಎರಡು ಮೂರು ತಿಂಗಳುಗಳವರೆಗೆ ಅವರಲ್ಲಿ ಅನೇಕರು ಅರೆಹೊಟ್ಟೆಯಿಂದಲೆ ಇರಬೇಕಾಗುತಿತ್ತು. ಹುಡುಗರು ಹಳ್ಳಿಯಲ್ಲಿ ತಿರುಗಿ ತಂಗಳು ರೊಟ್ಟೆಯ ತುಣುಕುಗಳನ್ನು ಭಿಕ್ಷೆ ಬೇಡಿ ತರುತ್ತಿದ್ದರು. ದೊಡ್ಡವರು ಚಿಕ್ಕವರು ಎಲ್ಲರೂ ಅವುಗಳನ್ನೆ ಹಂಚಿಕೊಂಡು ಹೇಗೋ ಜೀವವುಳಿಸಿಕೊಳ್ಳುತ್ತಿದ್ದರು. ಸೂಳೆಗಾರಿಕೆ ಮಾಡುತ್ತಿದ್ದ ಹೆಂಗುಸರು ಮನೆಯವರಿಗೆ ಮಾತ್ರ ಹೆಚ್ಚು ತೊಂದರೆಯಾಗುತ್ತಿರಲಿಲ್ಲ. ಹಾಗೆಂದು ಕೇರಿಯಲ್ಲಿನ ಎಲ್ಲ ಸ್ತ್ರೀಯರೂ ಸೂಳೆಗಾರಿಕೆ ಮಾಡುವಂತಿರಲಿಲ್ಲ. ಉಪವಾಸ ವನವಾಸ ಕಾಹಿಲೆ ಕಸಾಲೆಗಳಿಂದಾಗಿ ಎಲುಬಿನ ಗೂಡುಗಳಂತಾದ ಆ ಬಡ ಸ್ತ್ರೀಯರನ್ನು ಇಟ್ಟುಕೊಳ್ಳುವವರಾದರೂ ಯಾರು? ಅವರ ಪಾಲಿಗೆ ಮತ್ತೆ ಉಪವಾಸವೆ ಬರುತ್ತಿತ್ತು. ಮಕ್ಕಳು ಹುಟ್ಟುತ್ತಿದ್ದವು, ಸಾಯುತ್ತಿದ್ದುವು. ಬದುಕಿರುವವರೂ ಸತ್ತವರಂತೆಯೆ ಕಾಣಿಸುತ್ತಿದ್ದರು. ಹರಿಜನ ಕೇರಿಯಲ್ಲಿ ಹೆಚ್ಚು ಭಾಗ ಸ್ಮಶಾನದ ನೆನಪನ್ನು ತಂದುಕೊಡುವಂತಿತ್ತು. ಅಲ್ಲಿ ಜೀವವಿರಲಿಲ್ಲ, ಉತ್ಸಾಹವಿರಲಿಲ್ಲ, ಉಲ್ಲಾಸವಿರಲಿಲ್ಲ. ಮಾನವೀಯ ಭಾವನೆಗಳನ್ನೂ ಮೌಲ್ಯಗಳನ್ನೂ ಅರಿಯದ ಪಶುಗಳ ಹಾಗೆ ಅಲ್ಲಿನವರ ಬದುಕು ಸಾಗುತ್ತಿತ್ತು.

ಹಾಗೆ, ಆ ಕೇರಿಯಲ್ಲಿ ಅರವತ್ತು ವರ್ಷಗಳ ಕಾಲ ಬದುಕಿ ಸತ್ತು ಹೋಗಿದ್ದ ಯಲ್ಲಪ್ಪನ ಮಗಳು ಶಿವಗಂಗಾ. ಯಲ್ಲಪ್ಪ ಸಾಯುವುದಕ್ಕೆ ಮೊದಲೇ ಅವನ ಹೆಂಡತಿಯೂ ತೀರಿಕೊಂಡಿದ್ದಳು. ಶಿವಗಂಗೆಯೊಬ್ಬಳನ್ನು

ಳಿದು ಅವನಿಗೆ ಬೇರೆ ಮಕ್ಕಳಿರಲಿಲ್ಲ. ಆವಳಿಗೊಂದು ಮದುವೆಮಾಡಿ, ಅವಳನ್ನು ಗಂಡನ ಮನೆಗೆ ಕಳುಹಿಸಿದ ಬಳಿಕ ಈ ಜಗತ್ತಿನಲ್ಲಿನ ತನ್ನ ಕೆಲಸ ಕೊನೆಗಂಡಿತೆಂಬ ಸಮಾಧಾನದಿಂದಲೇ ಕೊನೆಯ ದಿನಗಳನ್ನು ಕಳೆದು ಒಂದು ದಿನ ಶಾಂತವಾಗಿ ಕಣ್ಣು ಮುಚ್ಚಿಕೊಂಡಿದ್ದ ಯಲ್ಲಪ್ಪ. ಕೇರಿಯಲ್ಲಿ ಆತ ಬಿಟ್ಟು ಹೋಗಿದ್ದ ಆಸ್ತಿಯೆಂದರೆ ಹನ್ನೆರಡು ಅಡಿ ಉದ್ದವೂ ಎಂಟು ಅಡಿ ಅಗಲವೂ ಆದ ಸ್ಥಳದಲ್ಲಿ ನಿಂತಿದ್ದ ಅದೊಂದು ಗುಡಿಸಲು. ಅವನ ತಂದೆಯ ಕಾಲದಿಂದ ಬಂದಿದ್ದ ಹಳೆಯ ಪೆಟ್ಟಗೆಯೊಂದು ಆ ಗುಡಿಸಲಿನ ಮೂಲೆ ಯೊಂದರಲ್ಲಿ ತಳವೂರಿತ್ತು. ಅವನವಾಗಿದ್ದ ಸಾಮಾನುಗಳೆಂದರೆ: ಎರಡು ಗೋಣಿಚೀಲಗಳು, ಒಂದು ಮಣ್ಣಿನ ಕೊಡ, ಮೂರು ಮಡಕೆಗಳು, ಒಂದು ತಗಡಿನ ಡಬ್ಬ, ಒಂದು ಮಾಸಲು ಚಾಪೆ; ಅಷ್ಟೆ.

ಕೇರಿಯವರೆಲ್ಲ ತೀರ ಅಸಂಸ್ಕೃತರಾಗಿದ್ದರಾದರೂ ತಮ್ಮದೆ ಆದು ದೊಂದು ಅಸಾಧಾರಣ ಪ್ರಾಮಾಣಿಕತೆಯಿಂದ ಪರಸ್ಪರರೊಡನೆ ವರ್ತಿಸುತ್ತಿ ದ್ದರು. ಅಂತೆಯೆ, ಯಲ್ಲಪ್ಪ ಸತ್ತುಹೋದ ತರುವಾಯ ಅವನ ಸಾಮಾನು ಗಳನ್ನು ಯಾರೂ ಕದ್ದಿರಲಿಲ್ಲ. ಯಲ್ಲಪ್ಪನ ದೇಹವನ್ನು ಮಣ್ಣಿನಲ್ಲಿ ಮುಚ್ಚಿ ಬಂದ ಬಳಿಕ ಅವನ ಗುಡಿಸಲನ್ನು ಗುಡಿಸಿ ಸ್ವಚ್ಛಗೊಳಿಸಿ, ಲಕ್ಕಿಕಟ್ಟಿಗೆಯ ಬಾಗಿಲನ್ನು ಮುಚ್ಚಿ ದಾರದಿಂದ ಬಿಗಿದು ಭದ್ರಗೊಳಿಸಲಾಗಿತ್ತು.

ಶಿವಗಂಗೆ ಬರುವವರೆಗೂ ಹಾಗೆಯೆ ಮುಚ್ಚಿಕೊಂಡಿತ್ತು ಆ ಬಾಗಿಲು.

೬

ಕೇರಿಯಲ್ಲಿ ಪ್ರವೇಶಿಸಿದೊಡನೆ ಶಿವಗಂಗೆ ಮಗನನ್ನು ಕೆಳಕ್ಕಿಳಿಸಿ ನೇರವಾಗಿ ದುರ್ಗವ್ವನ ಗುಡಿಗೆ ಬಂದಳು, ತಲೆಯ ಮೇಲಿನ ಗಂಟನ್ನಿಳಿಸಿ ದೇವಿಗೆ ನಮಸ್ಕಾರಮಾಡಿ 'ಅಂಗಾರ' ಹಚ್ಚಿಕೊಂಡಳು. ಅವಳು ತನ್ನ ತಂದೆಯ ಗುಡಿಸಲಿನ ಕಡೆ ನಡೆದಿದ್ದ ಹಾಗೆಯೆ ತಿಪ್ಪ ಅವಳನ್ನು ಕಂಡು,

"ಯಾವಾಗ ಬಂದಿಯೇ ಶಿವಗಂಗೀ?" ಎಂದ.

"ಬಂದಿನಿ ಇದೇ ಈಗ."

"ಹ ಹ! ಮತ್ತೇನ ಸುದ್ದಿ?" ಎಂದು ಆತ ತನ್ನ ಕರ್ಕಶ ಸ್ವರದಲ್ಲಿ ಪ್ರಶ್ನಿಸುತ್ತಿದ್ದ ಹಾಗೆ ಕೇರಿಯ ಜನರೆಲ್ಲ ತಮ್ಮ ತಮ್ಮ ಗುಡಿಸಲುಗಳನ್ನು ಬಿಟ್ಟು ಬಂದು ಶಿವಗಂಗೆಯನ್ನು ಸ್ವಾಗತಿಸತೊಡಗಿದರು.

ಕೇರಿಯ ಹಿರಿಯ ಭರಮಜ್ಜ ದೊಣ್ಣೆಯ ಸಹಾಯದಿಂದ ನಡೆದು ಬಂದು ಮಹಾದೇವನನ್ನೆತ್ತಿಕೊಂಡು, "ಹುಡುಗ ದೊಡ್ಡಾಂವ ಆಗಿದಾನಲ್ಲೇ ಶಿವಗಂಗೀ!" ಎಂದ.

ತನ್ನ ಗುಡಿಸಲಿನಲ್ಲಿ ಬಿದ್ದುಕೊಂಡಿದ್ದ ಲಚುಮಿಯೂ ಎದ್ದು ಬಂದು ನುಡಿದಳು: "ಬಾರವ್ವಾ ಮಗಳs. ಬಾಳ ದಿವಸದ ಮ್ಯಾಲ ಬಂದಿ. ಬಾಳ ಚಲೋ ಆತು. ಹೆಂಗಿದ್ದೀ? ಎಲ್ಲಾ ನೆಟ್ಟಗs?"

ಲಚುಮಿಯ ಗುಡಿಸಲಿನ ಪಕ್ಕದಲ್ಲೇ ಶಿವಗಂಗೆಯ ತಂದೆಯ ಗುಡಿಸಲು. ಅದರ ಬಳಿ ಬಂದು, ಗಂಟನ್ನು ನೆಲಕ್ಕಿಟ್ಟು, ಸೀರೆಯ ಸೆರಗಿನಿಂದ ಮುಖಕ್ಕೆ ಗಾಳಿ ಹಾಕಿಕೊಳ್ಳುತ್ತ ಕುಳಿತುಕೊಂಡಳು ಶಿವಗಂಗೆ. ಭರಮಜ್ಜನ

ಹೆಂಡತಿ ಕರಿಯವ್ವ ಮುಂದಾಗಿ ಗುಡಿಸಲಿನ ಬಾಗಿಲು ತೆಗೆದಳು. ಯಾರೋ ಓಡಿಹೋಗಿ ಪೊರಕೆಯೊಂದನ್ನು ತಂದರು. ಯಾರೋ ಕಸ ಗುಡಿಸಿದರು.

ಶಿವಗಂಗೆಯ ಹತ್ತಿರ ಕುಳಿತು ಭರಮಜ್ಜ ಅವಳ ತಂದೆಯ ನೆನಪು ತೆಗೆದ. "ಪಾಪ. ಸಾಯುವಾಗ ನಿನ್ನ ಬಾಳ ನೆನಸಿದನವ್ವ."

"ನನಗ ಏನೂ ಗೊತ್ತಾಗಲಿಲ್ಲ ಅಜ್ಜಾ. ಅಪ್ಪನ ಮಾರಿ ಕೂಡ ನೋಡಾಕಾಗಲಿಲ್ಲ ಕಡೀ ಸರತಿಗೆ," ಎಂದು ಶಿವಗಂಗೆ ಸೆರಗನ್ನು ಕಣ್ಣಿಗಳ ಗೊತ್ತಿಕೊಂಡಳು. ಅನಂತರ ಕಂಬನಿಗಳನ್ನು ದುರಿಸುತ್ತಲೇ ತನ್ನ ಗಂಡನ ಸಾವಿನ ಸಮಾಚಾರವನ್ನೂ ಚಿತ್ರರಿಸಿದಳು. ನೆರೆದವರೆಲ್ಲ ಸಹಾನುಭೂತಿ ವ್ಯಕ್ತಗೊಳಿಸಿ, "ಪಾಪ, ಪಾಪ," ಎಂದು ಮರುಗಿದರು.

"ಏಳವ್ವ. ಊಟಾ ಮಾಡೇಳು ಮೊದಲು," ಎಂದು ತಾಯಿ ಮಕ್ಕಳನ್ನು ಊಟಕ್ಕೆಬ್ಬಿಸಿದ ಭರಮಜ್ಜ.

ಅವನ ಮನೆಯಲ್ಲಿ ರೊಟ್ಟಿ ತಿಂದು ಅಂಬಲಿ ಕುಡಿದುದಾಯಿತು.

"ನಿನ್ನ ಗಂಡ ದರೋಡೆ ಮಾಡುತಾನಂತ ನಾವೂ ಕೇಳಿದ್ದಿವಿ. ಅಂಥವನ ಕೈ ಹಿಡಿದು ನೀ ಬಾಳ ತ್ರಾಸ ಸೋಸಿರಬೇಕಲ್ಲ?" ಎಂದ ಭರಮಜ್ಜ.

"ತ್ರಾಸ ಅಂದರ ಅಷ್ಟs ಇಷ್ಟs ಅಜ್ಜಾ? ಮನಿಯಾಗಿದ್ದಾಗ ಯಾವಾಗಲೂ ಕುಡಿದು ಮಸ್ತ ಆಗಿರುತಿದ್ದ. ಕುಡಿಯೂದಕ್ಕ ರೊಕ್ಕ ಇಲ್ಲದಾಗ ನನ್ನ ದನಾ ಬಡಿಯುವ ಹಂಗ ಬಡೀತಿದ್ದ. ನಾ ಅಲ್ಲಿ ಇಲ್ಲಿ ಕೂಲಿಮಾಡಿ ದುಡಿದು ತಂದ ಜೋಳಾ ಎಲ್ಲಾ ಹೊತ್ತುಕೊಂಡು ಹೋಗಿ ಹೆಂಡದಂಗಡಿಗೆ ಹಾಕುತಿದ್ದ. ಮನಿಯಾಗ ಈ ಹುಡುಗ ಉಪವಾಸ ಸಾಯಬೇಕಾಗುತಿತ್ತು."

"ಕೆಟ್ಟ ಮಂದಿಯ ಸಂಗಕ್ಕ ಬಿದ್ದು ಹಂಗ ಆಗಿದ್ದನೊ ಏನೊ ಅವ. ಇಷ್ಟು ಲಗೂ ಸಾಯುವದಕ್ಕ ಏನಾತು ಅವಗ?"

"ಜೇಲಿನಾಗ ಏನೋ ರೋಗ ಸುರು ಆಯ್ತಂತ. ಅದರಾಗ ಇವನೂ ಹೋಗಿಬಿಟ್ಟ."

"ಹೋದವ ಹೋದ. ಈಗಾದರೂ ಅವನ ಜೀವ ತಣ್ಣಗಿರಲಿ," ಎಂದ ಭರಮಜ್ಜ.

ಊಟ ಮುಗಿಸಿ ಮಗನನ್ನು ಕರೆದುಕೊಂಡು ಮತ್ತೆ ತನ್ನ ತಂದೆಯ ಗುಡಿಸಲಿಗೆ ಬಂದಳು ಶಿವಗಂಗೆ. ಗುಡಿಸಲಿನ ಹಿಂಬದಿಯ ಗೋಡೆ ಅರ್ಧಕ್ಕಿಂತ ಹೆಚ್ಚಾಗಿಯೆ ಬಿರುಕು ಬಿಟ್ಟಿತ್ತು. ಮೊತ್ತಮೊದಲು ಅದನ್ನು ಸರಿಪಡಿಸುವುದೆಂದು ಗೊತ್ತುಮಾಡಿಕೊಂಡು ಅವಳು ಆ ಕೆಲಸಕ್ಕೆ ತೊಡಗಿದಳು.

"ಇವತ್ತೇ ಏನ ದುಡೀತೀ ಬಿಡೇ ಶಿವಗಂಗೀ. ಇದೊಂದು ದಿನ ಅರಾಮು ಇರಬಾರದೇ?" ಎಂದಳು ಲಚುಮಿ.

ಎದುರಿನ ಗುಡಿಸಲಿನ ಹನುಮನಿಗೆ ಎಚ್ಚರವಾಯಿತೇನೊ. ಆತ ಕಣ್ಣುಜ್ಜಿಕೊಳ್ಳುತ್ತಾ ಎದ್ದು ಹೊರಗೆ ಬಂದ, ಖೊಖೊಖ್ಖೊ ಎಂದು ಕೆಮ್ಮಿ ರಭಸದಿಂದ ಉಗುಳಿದ, ಶಿವಗಂಗೆಯನ್ನೊಂದು ಬಾರಿ ದಿಟ್ಟಿಸಿ ನೋಡಿ, "ಯಾರವರು? ನೀನs? ಎಷ್ಟೊತ್ತಾತು ಬಂದು?" ಎಂದು ಪ್ರಶ್ನಿಸಿ, ಉತ್ತರಕ್ಕಾಗಿ ಕಾಯದೆ ಮತ್ತೆ ಒಳಗೆ ಹೋಗಿ ಕಂಬಳಿಯನ್ನೆಳೆದುಕೊಂಡು ಬಿದ್ದುಕೊಂಡ.

ಶಿವಗಂಗೆ ಕೇಳಿದಳು :

"ಹನುಮಣ್ಣಾನ ಮೈಯಾಗ ನೆಟ್ಟಗಿಲ್ಲೇನs ಲಚುಮವ್ವಾ?"

ಲಚುಮಿ ಮುಗುಳ್ನಗೆ ಬೀರುತ್ತಾ ಹೇಳಿದಳು :

"ಅವಗೇನು ಧಾಡಿಯೇ?"

"ಮತ್ತs?"

"ಇನ್ನೂ ಬೆಳಗಾಗಿಲ್ಲೇಳು ಅವನ ಪಾಲಿಗೆ. ಸಂಜೀತನಕ ಬಿದ್ದಿರುತಾನ ಹೀಂಗs."

"ಆ ಹುಡುಗಿ ಎಲ್ಲೈತಿ, ಕಾಣೂದಿಲ್ಲಲ್ಲ?"

"ಎಲ್ಲೆರೆ ಹೋಗಿರುತೈತಿ ತಿರುಗಾಕ. ಈಗ ಬಂದೀತು."

"ಪಾಪ, ಪಾಪ. ಪರದೇಶಿಯಾತು ಚಂದ್ರಿ."

ಹರಿಜನ ಕೇರಿಯಲ್ಲೆಲ್ಲ ಮಹಾ ಸೋಮಾರಿಯೆಂದು ಹೆಸರು ಪಡೆದವನು ಹನುಮ. ಮೂರು ವರ್ಷಗಳ ಕೆಳಗೆ ಅವನ ಹೆಂಡತಿ ವಿಷಮ ಜ್ವರಕ್ಕೆ ಬಲಿಯಾಗಿ ಸತ್ತುಹೋಗಿದ್ದಳು. ಆಗ ಇನ್ನೂ ಎರಡು ವರ್ಷಗಳ ಶಿಶುವಾಗಿದ್ದ ಅವಳ ಮಗಳು ಚಂದ್ರವ್ವನಿಗೂ ಜ್ವರ ಬಂದಿದ್ದಿತಾದರೂ ಆಕೆ

ಹೇಗೋ ಬದುಕಿಕೊಂಡಿದ್ದಳು. ಹೆಂಡತಿ ತೀರಿಕೊಂಡ ತರುವಾಯ ಇನ್ನೊಬ್ಬಳನ್ನು ಕಟ್ಟಿಕೊಳ್ಳುವ ಗೊಡವೆಗೆ ಹೋಗದೆ ಮಗಳನ್ನು ತಾನೇ ಜೋಪಾನ ಮಾಡಿಕೊಂಡು ಬಂದಿದ್ದ ಹನುಮ. ನೆರೆಹೊರೆಯ ಹೆಣ್ಣು ಮಕ್ಕಳ ಮೊಲೆ ಹಾಲು ಕುಡಿದು ದೊಡ್ಡವಳಾಗಿದ್ದಳು ಚಂದ್ರವ್ವ. ಹರಿಜನ ಕೇರಿಯ ಹೆಚ್ಚು ಜನ ಬಾಲಿಕೆಯರಂತೆ ಅವಳು ಕಪ್ಪು ಬಣ್ಣದವಳಾಗಿರಲಿಲ್ಲ. ಸಾಧಾರಣ ಗೌರವರ್ಣ, ಅದಕ್ಕೊಪ್ಪುವ ಅಂಗಾಂಗಗಳು. "ನನ್ನ ಮಗಳು ಚಂದ್ರಾಮನಂಗ ಚೆಲುವಿಯಾಗುತಾಳ," ಎಂದು ಹೆಮ್ಮೆಯಿಂದ ಹೇಳಿ ಕೊಳ್ಳುತ್ತ ಅವಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತ ಬಂದಿದ್ದ ಹನುಮ.

ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಹನ್ನೆರಡು ಗಂಟೆಗಳಷ್ಟು ಸಮಯ ವನ್ನಾದರೂ ಹಾಸಿಗೆಯಲ್ಲಿಯೆ ಕಳೆಯುತ್ತಿದ್ದವನು ಹನುಮ. ಸೂರ್ಯ ಮುಳುಗುವ ವೇಳೆಗೆ ಎದ್ದು ಅಡುಗೆಮಾಡಿ ಮಗಳನ್ನು ಜತೆಗೂಡಿ ಊಟ ಮುಗಿಸಿ ಕಾಯಕಕ್ಕೆ ಹೋಗುತ್ತಿದ್ದ. ಇರುಳಿನಲ್ಲಿಯೆ ನಡೆಯಬೇಕಿದ್ದ ಕಾಯಕವದು; ಮರಡಿಹಳ್ಳಿಯ 'ಪುಢಾರಿ'ಗಳಲ್ಲೊಬ್ಬನಾದ ಕಾಮಣ್ಣ ತನ್ನ ಮನೆಯಲ್ಲಿ ಹೂಡಿದ್ದ ಸೆರೆಯ ಕಳ್ಳಭಟ್ಟಿಯನ್ನು ನೋಡಿಕೊಳ್ಳುವ ಕಾಯಕ. ತನ್ನ ಗುಂಪಿನ ಜನರಿಗೆಲ್ಲ ಅಗ್ಗದಲ್ಲಿ ಸೆರೆಯನ್ನೊದಗಿಸುವ ಉದ್ದೇಶದಿಂದಲೇ ಆ ಭಟ್ಟಿಯನ್ನು ನಡಸಿದ್ದ ಕಾಮಣ್ಣ. ಹನುಮನೂ ಸುರಾದೇವಿಯ ಪರಮಭಕ್ತ. ರಾತ್ರಿಯೆಲ್ಲ ನಿದ್ದೆಗೆಟ್ಟು ಭಟ್ಟಿಯನ್ನು ನೋಡಿ ಕೊಳ್ಳುತ್ತಿದ್ದುದಕ್ಕೆ ಪ್ರತಿಫಲವಾಗಿ ಅವನಿಗೆ ಪ್ರತಿದಿನವೂ ಒಂದು ಬಾಟಲಿ ಸೆರೆ ಉಚಿತವಾಗಿ ದೊರೆಯುತ್ತಿದ್ದುದಲ್ಲದೆ ವಾರವೊಂದಕ್ಕೆ ಒಂದು ರೂಪಾಯಿಯ ಸಂಬಳವೂ ಸಿಕ್ಕುತ್ತಿತ್ತು. ಆ ಒಂದು ರೂಪಾಯಿಯಲ್ಲಿ ಅವನ ಸಂಸಾರದ ಖರ್ಚು ನಡೆಯುತ್ತಿತ್ತು. ಅವನ ಹೆಂಡತಿ ಬದುಕಿರು ವವರೆಗೆ ಹನುಮನಿಗೆ ಯಾವುದರ ಚಿಂತೆಯೂ ಇರಲಿಲ್ಲ. ಅವಳೂ ದುಡಿಯು ತ್ತಿದ್ದಳು, ಚರ್ಮದ ಕೆಲಸಗಳನ್ನು ಮಾಡುತ್ತಿದ್ದಳು. ಹತ್ತು ಜನ ರೈತ ರಿಂದ ಅಷ್ಟು 'ಆಯ' ಬರುತ್ತಿತ್ತು. ಭಟ್ಟಿಯ ಕಾಯಕ ಮುಗಿಸಿಕೊಂಡು ಮನೆಗೆ ಬಂದವನೆ ಊಟ ಹೊಡೆದು ರಾಜನಂತೆ ನಿದ್ದೆ ಹೋಗುತ್ತಿದ್ದ ಹನುಮ. ಅದು ಹಿಂದಿನ ಮಾತು.

ಆದರೆ, ಹೆಂಡತಿಯ ಮೃತ್ಯುವಿನ ತರುವಾಯ ಅವನ ದಿನಚರಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಬೇಕಾದುದು ಅನಿವಾರ್ಯವಾಯಿತು. ಬೆಳಿಗ್ಗೆ ಮನೆಗೆ ಬಂದೊಡನೆ, ಲಚುಮಿಯ ಮನೆಯಲ್ಲಿ ಮಲಗಿಕೊಂಡಿರುವ ಮಗಳನ್ನೆಬ್ಬಿಸಿ ಕರೆದು ತಂದು, ಒಲೆಗೆ ಉರಿಹೊತ್ತಿಸಿ ಗಂಜಿ ಬೇಯಿಸಿ ಅವಳಿಗೆ ಕುಡಿಸಿ ಮಧ್ಯಾಹ್ನದ ಊಟಕ್ಕೆ ರೊಟ್ಟಿ ಬಡಿದು ಮಲಗಿಕೊಳ್ಳಬೇಕಾಗುತಿತ್ತು. ಕೇರಿಯಲ್ಲಿ ಅಲೆದು ಮಗಳು ಹಸಿದು ಮನೆಗೆ ಬಂದೊಡನೆ ನಿದ್ದೆಯನ್ನು ತೊರೆದೆದ್ದು ಮತ್ತೆ ಅವಳಿಗೆ ಊಟಕ್ಕಿಟ್ಟು ತಾನೂ ಉಂಡು ಬಿದ್ದುಕೊಳ್ಳಬೇಕಾಗುತಿತ್ತು. ಸಂಜೆಯಾಗುತ್ತಲೂ ಮತ್ತೆ ಅಡಿಗೆ ಮಾಡಬೇಕು, ಹೋರೆಗೆ ಹೊರಡಬೇಕು.

ಗೀಗೀ ಪದ, ಲಾವಣಿ ಪದ ಹಾಡುವುದು, ಡಪ್ಪ ಬಾರಿಸುವುದೆಂದರೆ ಬಲು ಪ್ರೀತಿ ಹನುಮನಿಗೆ. ಚಿಕ್ಕತನದಲ್ಲಿಯೆ ಅವನಿಗೆ ಆ ಗೀಳು ಅಂಟಿಕೊಂಡಿತ್ತು. ಸುತ್ತಲಿನ ಹಳ್ಳಿಗಳಲ್ಲೆಲ್ಲ ಆತ 'ಹಾಡುಗಾರ'ನೆಂದೂ ಹೆಸರು ಪಡೆದಿದ್ದ. ಜಾತ್ರೆಗಳಲ್ಲೂ ಉತ್ಸವಗಳಲ್ಲೂ ಆತ ಇರಲೇಬೇಕು. ಆ ಉಪಕಾಯಕದಿಂದಲೂ ಆಗಾಗ ಅಲ್ಪಸ್ವಲ್ಪ ಸಂಪಾದನೆ ಮಾಡುತ್ತಿದ್ದ. ಆದರೆ ಆ ಹಣವೇನೂ ಅವನ ಕೈಯಲ್ಲಿ ನಿಲ್ಲುತ್ತಿರಲಿಲ್ಲ. ಹಾಡುಗಾರಿಕೆಯಿಂದ ಬಂದುದು ಹೆಂಡದಂಗಡಿಗೆ ಹೊರಟುಹೋಗುತ್ತಿತ್ತು.

೭

ಬಿರುಕುಬಿಟ್ಟಿದ್ದ ಗೋಡೆಗೆ ದಂಟುಗಳನ್ನು ಹೊಂದಿಸಿ, ಮೇಲೆ ಕೆಸರನ್ನು ಮೆತ್ತಿ ಸರಿಪಡಿಸಿದುದಾಗಿತ್ತು. ಲಚುಮಿಯ ಹತ್ತಿರ ಎಣ್ಣೆಯನ್ನು ಬೇಡಿ ತಂದು ಚಿಮಣಿದೀಪ ಹೊತ್ತಿಸಿದುದಾಗಿತ್ತು. ಗಂಡನ ಮನೆಯಿಂದ ಕಟ್ಟಿತಂದ ಸಾವಿಯ ಅಕ್ಕಿಯನ್ನು ಗಡಿಗೆಗೆ ಹಾಕಿ ಶಿವಗಂಗೆ ಅನ್ನ ಬೇಯಿಸುತ್ತಿದ್ದ ಹಾಗೆ ಬಾಗಿಲಲ್ಲಿ ಯಾರೋ ಬಂದು ನಿಂತಂತಾಯಿತು.

"ಯಾರವರು ?"

"ನಾನು. ನಾ ತಿಪ್ಪ."

ಶಿವಗಂಗೆ ಮುಂದೆ ಮಾತನಾಡಲಿಲ್ಲ. ತಿಪ್ಪನನ್ನು ಅವಳು ಒಳಕ್ಕೆ ಕರೆಯಲೂ ಇಲ್ಲ.

"ಏನು ನಡಸೀಯೇ ಶಿವಗಂಗೀ ?"

"ಕಣ್ಣು ಕಾಣೂದಿಲ್ಲೇನ ?"

ತಿಪ್ಪ ಬಾಗಿಲಲ್ಲಿಯೇ ಕುಳಿತುಕೊಂಡು ಬೀಡಿಯೊಂದನ್ನು ತೆಗೆದು ಹೊತ್ತಿಸುತ್ತ ಹೇಳಿದ :

"ಅಂತೂ ಇಲ್ಲೇ ಕಾಯಂ ಆದಿ ಅಂದಾಂಗ ಆತಲ್ಲ ? ಮುಂದೇನ ಮಾಡಬೇಕಂತ ಮಾಡಿದ್ದೀ ಶಿವಗಂಗಿ ?"

ಮೊದಲಿನಿಂದಲೂ ಶಿವಗಂಗೆಗೆ ತಿಪ್ಪನನ್ನು ಕಂಡರಾಗುತ್ತಿರಲಿಲ್ಲ. ಅವಳಿನ್ನೂ ಹುಡುಗಿಯಾಗಿದ್ದಾಗ ಅವಳ ಶೀಲವನ್ನು ಕೆಡಿಸಲು ಒಂದೆರಡು ಬಾರಿ ಯತ್ನಿಸಿದ್ದ ತಿಪ್ಪ. ಅವಳು ಅವನನ್ನು ತಿರಸ್ಕರಿಸಿ ದೂರವಿರಿಸಿದ್ದಳು. ಅಂದಿನ ಆ ತಿರಸ್ಕಾರ ಇಂದಿಗೂ ನೆಲಸಿತ್ತು ಅವಳ ಎದೆಯಲ್ಲಿ. ಈ ಆವೇಳೆ

ಯಲ್ಲಿ ಯಾವುದೊ ಒಂದು ದುರುದ್ದೇಶದಿಂದಲೇ ಆತ ಬಂದಿರಬೇಕೆಂದು ಅವಳಿಗೆನ್ನಿಸದಿರಲಿಲ್ಲ. ಅಂತೆಯೆ, ಅವನೊಡನೆ ಹೆಚ್ಚು ಮಾತು ಬೆಳಸದೆ ಸಾಧ್ಯವಾದಷ್ಟು ಬೇಗ ಅವನನ್ನು ಸಾಗಹಾಕಬೇಕೆಂದು ಯೋಚಿಸಿ ಅವಳು ಹೇಳಿದಳು :

"ನಾ ಏನರೆ ಮಾಡೇನು. ಅದೆಲ್ಲಾ ನಿನಗ್ಯಾಕ ಬೇಕೋ ಮೂಳಾ! ಸುಮ್ಮನ ಎದ್ದು ಹೋಗು ಇಲ್ಲಿಂದ."

ಸಿದ್ದಗೌಡನಂಥವನ ಕೈಯಲ್ಲಿ ಪಳಗಿದ ಆಸಾಮಿ ತಿಪ್ಪ. ಇಂಥ ಮಾತುಗಳಿಗೆಲ್ಲ ಹೇಗೆ ಹೆದರಿಕೊಂಡಾನು ಆತ?

"ಏನು! ಮಂದೀನ್ನ ತಿಂದು ಬಿಡುವಂಗ ಮಾಡುತೀಯಲ್ಲs ಶಿವಗಂಗೀ! ಬಾಳ ಜೋರು ಆದಂಗ ಕಾಣುತೈತಲ್ಲ ನೀ?"

"ಯಾರವ್ವಾ ಇವಾ?" ಗಾಬರಿಗೊಂಡ ಮಹಾದೇವ ಕೇಳಿದ.

ತನ್ನ ಕೊಳಕು ಅಂಗಿಯ ಜೇಬಿನಲ್ಲಿ ಕೈಹಾಕಿ ಮೂರುಕಾಸಿನ ಬಿಲ್ಲೆ ಯೊಂದನ್ನು ತೆಗೆದು ಬಾಲಕನ ಕೈಗಿರಿಸುತ್ತ ತಿಪ್ಪವೆಂದ :

"ನಾನs? ನಾ ನಿನ್ನ ಮಾಮಾನಪಾ ಮಾದೇವಾ."

ತಿಪ್ಪ ಮುಂದುವರಿಸಿದ: "ನಾ ಹೇಳೂದನ್ನ ಪೂರಾ ಕೇಳು ಶಿವಗಂಗೀ. ನೀ ಇಲ್ಲಿ ಬಂದದ್ದು ಗೊತ್ತಾದ ಕೂಡಲೆ ಗೌಡರು ಹೇಳಿ ಕಳಿಸಿದ್ದಾರ."

ಶಿವಗಂಗೆ ಗಾಬರಿಗೊಂಡ ದನಿಯಲ್ಲಿ ಕೇಳಿದಳು :

"ಗೌಡರು?"

"ಹೂಂ. ಗೌಡರು. ನಿನ್ನ ಈಗಿಂದೀಗ ಕರಕೊಂಡು ಬರಬೇಕಂತ ಹೇಳಿದಾರ."

ಭೀತಿಯಿಂದಾಗಿ ಶಿವಗಂಗೆಯ ಎದೆ ಬಡಿದುಕೊಳ್ಳತೊಡಗಿತು. "ಯಾಕ ತಿಪ್ಪಣ್ಣಾ, ನಾ ಯೇನ ಮಾಡೀನಿ?"

"ಏನ ಮಾಡೀಯೋ ಯಾರಿಗೆ ಗೊತ್ತು. ಕರಕೊಂಡು ಬರಬೇಕಂತ ಹುಕುಂ ಮಾಡಿದಾರ. ಕರಕೊಂಡು ಹೋಗೂದಷ್ಟು ನನ್ನ ಕೆಲಸ."

ತಾನು ದರೋಡೆಗಾರನೊಬ್ಬನ ಹೆಂಡತಿಯಾಗಿದ್ದುದನ್ನು ನೆನೆದು ಕೊಂಡು ಶಿವಗಂಗೆ ತುಂಬ ಭೀತಳಾದಳು. ತನ್ನ ಮೇಲೂ ಕಣ್ಣಿಡಬೇಕೆಂದು ಪೋಲೀಸರು ಗೌಡರಿಗೆ ತಿಳಿಸಿರುವರೇನೊ ಯಾರು ಬಲ್ಲರು. ಗೌಡರು ಅದ ಕ್ಕಾಗಿಯೆ ತನ್ನನ್ನು ಕರೆಸಿರುವರೊ ಏನೊ. ತನಗೇನು ಕಾದಿದೆಯೊ. ಅವರು ತನ್ನನ್ನೂ ಹಿಡಿದು ಜೈಲಿಗೆ ಅಟ್ಟಿದರೇನು ಗತಿ? ತನ್ನ ಮಹಾದೇವ....

ಅವಳ ಕಣ್ಣುಗಳಲ್ಲಿ ಕಂಬನಿಗಳು ಚಿಮ್ಮಿ ಬಂದುವು. ತಿಪ್ಪುವಿನ ಬಗೆಗಿದ್ದ ತಿರಸ್ಕಾರವನ್ನೆಲ್ಲ ನುಂಗಿಕೊಂಡು ಅವಳು ದೀನವಾಣಿಯಲ್ಲಿ ಕೇಳಿ ಕೊಂಡಳು:

"ಏನರೆ ಮಾಡಪಾ ತಿಪ್ಪಣ್ಣಾ. ನನ್ನ ಹೆಂಗಾದರೂ ಉಳಿಸು ಈ ಪರಸಂಗದಿಂದ. ಈ ಕೂಸಿನ ಮಾರೀ ನೋಡಿ ನನ್ನ ಉಳಿಸು."

ತಾಯಿಯ ಕಣ್ಣುಗಳಲ್ಲಿ ನೀರು ತುಂಬಿದುದನ್ನು ಕಂಡ ಬಾಲಕನೂ ಅವಳನ್ನು ತಬ್ಬಿಕೊಂಡು ದನಿ ತೆಗೆದು ಅಳಲಾರಂಭಿಸಿದ. ಶಿವಗಂಗೆಯೂ ಬಿಕ್ಕತೊಡಗಿದಳು.

ಗೆಲವಿನ ನಗೆಯನ್ನು ತುಳುಕಿಸುತ್ತ ತಿಪ್ಪನೆಂದ:

"ನೋಡು. ಹೆಂಗ ಹಾದಿಗೆ ಬಂದಿ! ಮೆತ್ತಗ ಮಾತಾಡಿದರ ನಡಿಯೂ ಹಾಂಗಿಲ್ಲ ನಿಮ್ಮಂಥವರ ಹತ್ತರ."

"ನಾನಾದರೂ ಏನಂದಿನಪಾ ನಿನಗ?"

"ಎದ್ದು ಹೋಗು ಅಂತಿದ್ದಿಯಲ್ಲ. ಎಂಥಾ ಸೊಕ್ಕು ಬಂದೈತಿ ಅಂತೀನಿ ನಿನಗ."

"ನಾಯೇನ ಮಾಡಬೇಕಂತೀ ಹೇಳಪಾ."

"ಗೌಡರ ಹುಕುಮಿನ ಹಾಂಗ ನಡಕೊಳ್ಳೂದಕ್ಕ ತಯಾರಾದಿಯೆಂದರ ನಿನಗೇನೂ ಆಗುವದಿಲ್ಲ. ಇಲ್ಲದಿದ್ದರ ಮಾತ್ರ ಬಾಳ ತ್ರಾಸಾದೀತು ನೋಡು."

ತನ್ನ ಗುಡಿಸಲಿನಲ್ಲಿ ಬಿದ್ದುಕೊಂಡು ಈ ಮಾತುಗಳನ್ನೆಲ್ಲ ಆಲಿಸುತ್ತಿದ್ದ ಲಚುಮಿ ಎದ್ದು ಬಂದಳು.

"ಯಾಕೋ ತಿಪ್ಪೂ, ಏನದು ಗೌಡ ಹೇಳೂದು?"

ತಿಪ್ಪ ಬಾಗಿ ಲಚುಮಿಯ ಕಿವಿಗೆ ಬಾಯಿಯಿಟ್ಟು, ಹೇಳಬೇಕಾಗಿದ್ದುದನ್ನು ಹೇಳುತ್ತಲೂ ಅವಳು ಗಹಗಹಿಸಿ ನಗತೊಡಗಿದಳು. ತಿಪ್ಪನೂ ನಗತೊಡಗಿದ. ಶಿವಗಂಗೆಗೆ ಮಾತ್ರ ನಗು ಬರುವಂತಿರಲಿಲ್ಲ. ಅವಳು ತಲೆ ತಗ್ಗಿಸಿ ಅನ್ನದ ಗಡಿಗೆಯಲ್ಲಿ ಹುಟ್ಟು ತಿರುವುತ್ತಿದ್ದಳು.

“ಇಷ್ಟs'ಹೌದಲ್ಲೋ? ಇಷ್ಟಕ್ಕ ಶಿವಗಂಗೀನ್ನ ಬೆದರಿಸಾಕ ಬಂದಿದ್ದಿಯೇನೋ ಮೂಳಾ! ಮೊದಲs ಹೇಳಿದ್ದರ ಅವಳೇನು ಇಲ್ಲಾ ಅಂತಿದ್ದಳೇನು?” ಎಂದಳು ಲಚುಮಿ. “ಯಾಕs ಶಿವಗಂಗೀ, ಹೌದೋ ಅಲ್ಲೋ?”

ಉತ್ತರವೀಯದೆ ಶಿವಗಂಗೆ ಮೌನವಾಗಿ ಕುಳಿತಿದ್ದಳು. ಅವಳ ತಲೆಯಲ್ಲಿ ವಿಚಾರಗಳ ಬುಗುರಿ ಗಿರಗಿರನೆ ಸುತ್ತತೊಡಗಿತ್ತು. ಗೌಡರ ಆಶಯ ...ತಾನೇನು ಮಾಡಬೇಕು?

“ಏನನ್ನತೀಯೋ ಶಿವಗಂಗೀ? ಗೌಡರಿಗೇನು ಹೇಳಲಿ?”

ಕಟುಕನನ್ನು ಕಂಡು ಹಲುಬುವ ಕುರಿಯಂತೆ ತಿಪ್ಪನನ್ನು ದಿಟ್ಟಿಸುತ್ತ ಶಿವಗಂಗೆಯೆಂದಳು:

“ಇನ್ನೊಂದೆರಡು ವಾರ ಹೋಗಲಿ ತಿಪ್ಪಣ್ಣಾ. ಈಗs ನನ್ನ ಕಾಡಿಸಬ್ಯಾಡಿರಿ.”

ತಿಪ್ಪನಿಗೆ ಕನಿಕರ ಬರಲಿಲ್ಲ. ಆತ ಒರಟು ದನಿಯಲ್ಲಿ ಹೇಳಿದ:

“ನಾ ಯಾಕ ಕಾಡಿಸಲೀ ನಿನ್ನ? ಗೌಡರಂತೂ ಹುಕುಂ ಕೊಟ್ಟದಾರ. ಅವರ ಹೊರತು ಬ್ಯಾರೆ ಯಾರನ್ನೂ ಕರಕೊಳ್ಳಬಾರದು ನೀ.”

ಅಂದು ಮಧ್ಯಾಹ್ನ ಹಳ್ಳದ ದಂಡೆಯಲ್ಲಿ ಕಾಣಿಸಿಕೊಂಡ ಶರಣಪ್ಪನ ಮೂರ್ತಿ ಶಿವಗಂಗೆಯ ಒಳಗಣ್ಣುಗಳೆದುರಿಗೆ ಮೂಡಿದಂತಾಯಿತು. ಅವನೂ ತನಗಾಗಿ ಹೊಂಚು ಹಾಕಿ ಕುಳಿತಿದ್ದಾನೆ. ಗೌಡನೂ ತನ್ನ ಮೇಲೆ ಕಣ್ಣಿಟ್ಟಿದ್ದಾನೆ. ತಾನು ಹೊಲೆಯರ ಹೆಣ್ಣು, ಗಂಡನನ್ನು ಕಳೆದುಕೊಂಡ ಅನಾಥೆ. ತನ್ನನ್ನು ಅವರು ಬಯಸುವುದೇನೊ ಸ್ವಾಭಾವಿಕವೇ ಆಗಿದೆ. ಆದರೆ ತನಗೀಗ ಯಾರ ಸಹವಾಸವೂ ಇಷ್ಟವಿಲ್ಲ. ತನ್ನ ಗಂಡ...ಅವನು ಎಂಥವನೇ ಇದ್ದರೇನಂತೆ, ತನ್ನನ್ನಾತ ಹೊಡೆಯುತ್ತಿದ್ದರೇನಂತೆ, ಪೀಡಿಸುತ್ತಿದ್ದರೇನಂತೆ.

ಅಂತೂ ಅವನು ತನ್ನ ಗಂಡನಾಗಿದ್ದ. ತಾನು ಅವನ ಮದುವೆಯ ಹೆಂಡತಿಯಾಗಿದ್ದಳು. ಆತ ಸತ್ತುದಕ್ಕೆ ಇನ್ನೂ ಒಂದು ತಿಂಗಳು ಕೂಡ ಕಳೆದಿಲ್ಲ. ಅವನ ದೇಹವಿನ್ನೂ ಮಣ್ಣಿನೊಡನೆ ಬೆರೆತಿರಲಿಕ್ಕಿಲ್ಲ. ಇಷ್ಟರಲ್ಲಿಯೆ ತಾನು ಬೇರೆಯವರಿಗೆ ದೇಹವನ್ನೊಪ್ಪಿಸುವುದೇ? ಛೆ. ಅಸಹ್ಯ. ಕೂಲಿನಾಲಿ ಮಾಡಿಕೊಂಡು ಮಗನ ಜತೆಗೆ ಹಾಯಾಗಿ ಕಾಲ ಕಳೆಯುವ ಯೋಚನೆಯಿಂದ ತವರಿಗೆ ಬಂದುದಾಗಿದೆ. ಸೂಳೆಗಾರಿಕೆ ಮಾಡುವ ಅಪೇಕ್ಷೆ ತನಗೇನೂ ಇಲ್ಲ. ಆದರೆ....ಇವರೇನೂ ತನ್ನನ್ನು ಹಾಗೆಯೆ ಬಿಡುವಂತೆ ತೋರುವುದಿಲ್ಲ. ಅತ್ತ ಶರಣಪ್ಪ, ಇತ್ತ ಗೌಡ. ಇಬ್ಬರಿಗೂ ತನ್ನ ದೇಹದ ಮೇಲೆ ಆಸೆ...

"ಏನಂತೀಯೆ ಶಿವಗಂಗೀ? ಗಡಾನs ಹೇಳು. ಗೌಡರು ನನ್ನ ಹಾದೀ ಕಾಯುತಾ ಕುಂತಾರ ಚಾವಡಿಯೊಳಗ."

ಆ ವೇಳೆಗೆ ಎದುರಿನ ಗುಡಿಸಲಿನಲ್ಲಿ ಡಪ್ಪದ ಸಪ್ಪಳಕ್ಕಾರಂಭವಾಯಿತು. ಹನುಮ ಊಟ ಮುಗಿಸಿದ್ದನೇನೊ. ಅವನಿಗೆ ಸ್ಫೂರ್ತಿ ಬಂದ ಹಾಗೆ ತೋರುತ್ತಿತ್ತು. ಆತ ಬಾರಿಸತೊಡಗಿದ್ದ. "ಡಪ ಡಪ್ಪ ದುಮ್ಮ ದುಮ ದುಮ್....."

"ಈಗ ಎದ್ದಿಯೇನೋ?" ಲಚುಮಿ ಕೂಗಿ ಕೇಳಿದಳು.

"ಬಾರಾಕs ಲಚುಮಿ? ಒಂದು ಪದಾನೆರೆ ಅಂದು ಹೋಗ ಬಾರಲಾ," ಎಂದು ಹನುಮ ಕೂಗಿದ.

"ಮಾತಾಡಾಕ ಶಕ್ತಿ ಇಲ್ಲಂತ ಗಂಟಲಿನಾಗ. ಇನ್ನ ಪದಾ ಅನ್ನಬೇಕಂತ? ನಿನಗೇನ ಮೈಯಾಗ ಅರಿವಿದ್ದಂಗ ಕಾಣೂದಿಲ್ಲ," ಎಂದು ನುಡಿದು ಲಚುಮಿ ನಕ್ಕಳು.

ಮತ್ತೆ ಹನುಮನ ಡಪ್ಪ ಕುಣಿಕುಣಿದು ಕೂಗತೊಡಗಿತು. ಆತ ದನಿಯನ್ನೆತ್ತರಿಸಿ ಹಾಡತೊಡಗಿದ:

"ಮಾಯಾ ಇರಲಿ ಗೆಳತೀ
ನನ ಮ್ಯಾಲ ನಿನ್ನ ಪ್ರೀತೀ."

೮

ರಾತ್ರಿಯಾಗುತ್ತಲೂ ಗೌಡರು ಗುಡಿಸಲಿಗೆ ಬರುವರೆಂದೂ, ಅವರನ್ನು ಬರಮಾಡಿಕೊಳ್ಳಲು ಸಿದ್ಧಳಾಗಿರಬೇಕೆಂದೂ ಶಿವಗಂಗೆಗೆ ಹೇಳಿ ಶಿಪ್ಪು ಹೊರಟುಹೋಗಿದ್ದ. ಮಗನಿಗೆ ಊಟಕ್ಕಿಟ್ಟು ಅವನನ್ನು ಮಲಗಿಸಿ, ತಾನೂ ಕೊಂಚ ಉಂಡು, ಹರಿವಾಣವನ್ನು ತೊಳೆದಿಟ್ಟು ಮುಂದೇನು ಮಾಡುವುದೆಂದು ಅವಳು ಯೋಚಿಸುತ್ತ ಕುಳಿತಿದ್ದ ಹಾಗೆ ಬಾಗಿಲಿನಲ್ಲಿ ಪುರುಷಾಕೃತಿಯೊಂದು ಕಾಣಿಸಿಕೊಂಡಿತು.

"ಶಿವಗಂಗೀ," ಶರಣಪ್ಪನ ದನಿ ಅದು.

ಪಾದರಕ್ಷೆಗಳನ್ನು ಹೊರಗಡೆ ಬಿಟ್ಟು, ದೇಹವನ್ನು ಬಾಗಿಸಿ ಗುಡಿಸಲಿನಲ್ಲಿ ಪ್ರವೇಶಿಸಿದ ಶರಣಪ್ಪ, ಕೈಯಲ್ಲಿದ್ದ ದೊಣ್ಣೆಯಿಂದ ಬಾಗಿಲನ್ನು ಮುಚ್ಚಿ ಶಿವಗಂಗೆಯ ಬಳಿ ಕುಳಿತು,

"ಊಟ ಆತೇ ಶಿವಗಂಗೀ?" ಎಂದ.

"ಆತು," ಎಂದಳು ಶಿವಗಂಗೆ.

"ಹುಡುಗನೂ ಮಲಗಿಕೊಂಡನಲ್ಲ?" ಎಂದ ಶರಣಪ್ಪ.

"ಮಲಗಿಕೊಂಡ," ಎಂದಳು ಶಿವಗಂಗೆ.

"ಮತ್ತೇನು ವಿಚಾರ ಮಾಡುತಾ ಕುಂತಿ? ನಾವೂ ಮಲಗೂಣಲ್ಲ?" ಎಂದ ಶರಣಪ್ಪ.

ಹಠಾತ್ತಾಗಿ ಶಿವಗಂಗೆಯ ಕತ್ತು ಬಿಗಿದು ಬಂತು. ಕಣ್ಣುಗಳಲ್ಲಿ ಕಂಬನಿಗಳು ಕಾಣಿಸಿಕೊಂಡುವು. ಶರಣಪ್ಪನ ಕಾಲುಗಳೆರಡನ್ನೂ ಹಿಡಿದುಕೊಂಡು ಅವಳು ನಡುಗುವ ದನಿಯಲ್ಲಿ ನುಡಿದಳು:

"ನನ್ನ ಮ್ಯಾಲ ದಯಾ ಮಾಡ್ರಿ ಸಾವುಕಾರರೆ. ಇನ್ನೊಂದು ತಿಂಗಳಂತೂ ನನ್ನ ಕಾಡಿಸಬ್ಯಾಡ್ರಿ."

ಶರಣಪ್ಪ ಬೆಚ್ಚಿದ, ತನ್ನ ಕಾಲುಗಳನ್ನೆಳೆದುಕೊಂಡ, ಕನಿಕರ ತುಂಬಿದ ದೃಷ್ಟಿಯಿಂದ ಶಿವಗಂಗೆಯನ್ನು ನಿಟ್ಟಿಸುತ್ತ,

"ನಿನಗ ಮನಸಿರದಿದ್ದರ ನಾನೇನೂ ಬಲಾತ್ಕಾರ ಮಾಡೂದಿಲ್ಲ ಶಿವಗಂಗೀ. ಏನೋ ನಿನಗೂ ನನಗೂ ಹಿಂದಿನ ಗೆಳೆತನ.... ಆ ಪ್ರೀತಿಯನ್ನ ನೆನಸಿಕೊಂಡು ಬಂದಿದ್ದಿನಿ. ನೀ ಬ್ಯಾಡ ಅಂದರ ಹೊರಟು ಹೋಗುತೀನಿ."

"ನನ್ನ ಗಂಡ ತೀರಿಕೊಂಡು ಇನ್ನೂ ತಿಂಗಳಾಗಿಲ್ಲರೀ," ಎಂದು ಹೇಳುತ್ತಾ ಅವಳು ಮುಖಕ್ಕೆ ಸೆರಗನ್ನೆಳೆದುಕೊಂಡು ಬಿಕ್ಕಿ ಬಿಕ್ಕಿ ಅಳ ತೊಡಗಿದಳು.

"ಗೊತ್ತಾತು, ಗೊತ್ತಾತು. ನೀ ಅಳಬ್ಯಾಡ ಶಿವಗಂಗೀ. ನಾ ಹೋಗು ತೀನಿ. ನಿನ್ನ ಮನಸ್ಸು ಬಂದಾಗ ನನಗ ಸುದ್ದೀ ತಿಳಿಸು."

"ಆ ಗೌಡ ಬ್ಯಾರೆ ನನ್ನ ಕಾಡಿಸಾಕ ಹತ್ತಿದಾನ."

"ಗೌಡ?"

"ಹೂಂ. ತಿಪ್ಪೂನ್ನ ಕಳಿಸಿಕೊಟ್ಟಿದ್ದ. ಇವತ್ತs ರಾತ್ರಿ ಬರ್ತಾನಂತ."

ಶರಣಪ್ಪ ಒಂದು ನಿಮಿಷ ಯೋಚಿಸುತ್ತಿದ್ದ. ವೃಥಾ ವ್ಯಾಜ್ಯ ಕಾಯುವುದೆಂದರೆ ಅವನಿಗಾಗದು. ಗೌಡನೊಡನೆ ತಂಟೆಗೆ ತೊಡಗುವ ಇಷ್ಟವೂ ಅವನಿಗಿರಲಿಲ್ಲ. ಆದರೆ ಈ ಸಂದರ್ಭದಲ್ಲಿ ಮಾತ್ರ ಸುಮ್ಮನಿರುವುದು ಸರಿಯಾಗಲಾರದೆಂದೇ ಅವನಿಗೆನ್ನಿಸಿತು. ಶಿವಗಂಗೆಯನ್ನು ಗೌಡ ಪೀಡಿಸ ದಂತೆ ನೋಡಿಕೊಳ್ಳಬೇಕಾದುದು ತನ್ನ ಕರ್ತವ್ಯವೆಂದೇ ಆತ ಭಾವಿಸಿದ. ಅದರ ಪರಿಣಾಮವೇನಾಗಬಹುದೆಂಬುದನ್ನೂ ಅವನು ಊಹಿಸಬಲ್ಲ. ಗೌಡನೂ ಹಟವಾದಿ. ಅನೇಕ ವರ್ಷಗಳಿಂದ ತನ್ನ ಬಗ್ಗೆ ಒಳಗೊಳಗೇ ಉರಿಯುತ್ತಿದಾನೆ ಆತ; ಕದನದ ಸಂಧಿಯನ್ನೂ ಕಾಯುತ್ತಿದಾನೆ. ನಿರು ದ್ಯೋಗಿಗಳಾದ ಪುಂಡ ಪೈಲ್ವಾನರ ತಂಡವೇ ಇದೆ ಅವನ ಗುಂಪಿನಲ್ಲಿ. ಅವರಿಗೂ ಬೇಕಾಗಿದೆ ಬಡಿದಾಟ. ಶಿವಗಂಗೆಯ ನಿಮಿತ್ತ ಬಡಿದಾಟ?

ಹೌದು. ಹಾಗೂ ಆಗಲು ಸಾಧ್ಯವುಂಟು. ಏನೇ ಆಗಲಿ, ತಾನು ಹಿಂಜರಿಯ ಬಾರದು. ಗೌಡನ ಹಿಡಿತದಿಂದ ಶಿವಗಂಗೆಯನ್ನುಳಿಸಿಕೊಳ್ಳಬೇಕು....

ಹಾಗೆ ಯೋಚಿಸಿ ಶರಣಪ್ಪ,

"ನೀನೇನೂ ಅಂಜಬ್ಯಾಡ ಶಿವಗಂಗೀ. ನಾನಿದೀನಿ. ನಿನಗೇನೂ ಆಗದಾಂಗ ನೋಡಿಕೋತೀನಿ," ಎಂದು ಅವಳಿಗೆ ಅಭಯವನ್ನಿತ್ತು ಹತ್ತು ರೂಪಾಯಿಗಳನ್ನು ಅವಳ ಕೈಗೆ ಹಾಕಿ ಎದ್ದು ಹೊರಟ.

"ಇವೊತ್ತs ರಾತ್ರಿ ಬರ್ತಾನಂತ ಗೌಡ," ಎಂದು ಮತ್ತೊಮ್ಮೆ ಹೇಳಿದಳು ಶಿವಗಂಗೆ.

"ಇರಲಿ. ನಾನೆಲ್ಲಾ ಮಾಡುತೀನಿ," ಎಂದಿಷ್ಟೆ ಹೇಳಿ ಶರಣಪ್ಪ ಅಲ್ಲಿಂದ ಹೊರಟು ಲಚುಮಿಯ ಗುಡಿಸಲಿಗೆ ಹೋಗಿ ಅವಳನ್ನೆಬ್ಬಿಸಿ ಹೇಳಿದ:

"ನೀ ಇಂದಿನಿಂದ ಶಿವಗಂಗೆಯ ಸಂಗಡಲೇ ಮಲಗಿಕೋ. ಅವಳನ್ನ ಯಾರೂ ತಡವದಂಗ ನೋಡಿಕೋ. ಗೌಡ ಏನೋ ಹೇಳಿ ಕಳಿಸಿದ್ದನಂತ. ಅವ ಬಂದನಂದರ, ಅವಳ ತಂಟೆಗೆ ಬರಬಾರದಂತ ನಾ ಹೇಳೀನಿ ಅಂತ ಹೇಳು ಅವಗ."

"ಹೂಂನ್ರೀ ಧಣೇರs," ಎಂದಳು ಲಚುಮಿ.

"ನಾ ಹೋಗುತೀನಿ ಈಗ," ಎಂದು ಹೇಳಿ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಹರಿಜನ ಕೇರಿಯನ್ನು ತ್ಯಜಿಸಿ ಹಳ್ಳದತ್ತ ಹೊರಟ ಶರಣಪ್ಪ. ಅಂಥ ರಾತ್ರಿಯಲ್ಲೂ ಆತ ಸ್ನಾನಮಾಡಿ ಮೈಲಿಗೆ ಕಳೆದುಕೊಂಡೇ ಮನೆಗೆ ಕಾಲಿಡಬೇಕು.

ಒಂದು ತಾಸು ಕಳೆದುಹೋದ ಬಳಿಕ ಉತ್ಸಾಹದಿಂದ ಸಿಳ್ಳು ಹಾಕುತ್ತ ಸಿದ್ದಗೌಡನ ಸವಾರಿ ಹರಿಜನ ಕೇರಿಗೆ ಆಗಮಿಸಿತು. ಶಿವಗಂಗೆಯ ಗುಡಿಸಲಿನ ಮುಂದೆ ಬಂದು ಆತ ಕೂಗಿದ: "ಬಾಗಿಲಾ ತಗೀಯೋ."

ಚಂದ್ರಪ್ಪನನ್ನು ಕರೆದುಕೊಂಡು ಅಲ್ಲಿಗೇ ಬಂದು ಮಲಗಿಕೊಂಡಿದ್ದ ಲಚುಮಿ ಒರಟುದನಿಯಲ್ಲಿ ಉತ್ತರವಿತ್ತಳು:

"ತಗಿಯೂದಿಲ್ಲ ಹೋಗೋ."

ಅಂಥ ಉತ್ತರವನ್ನು ನಿರೀಕ್ಷಿಸಿ ಬಂದವನಲ್ಲ ಸಿದ್ದಗೌಡ. ಆತ ಬೆಚ್ಚಿಬಿದ್ದು ಒಂದು ಹೆಜ್ಜೆ ಹಿಂದೆ ಸರಿದು ನಿಂತು, ಮೀಸೆಯನ್ನು ಹುರಿಗೊಳಿಸುತ್ತ ದರ್ಪಪೂರ್ಣ ದನಿಯಲ್ಲಿ ಹೇಳಿದ:

"ಯಾರವರು ಹಂಗ ಮಾತಾಡುವವರು? ನಾ ಯಾರು ಅನ್ನೂದು ಗೊತ್ತೈತ್ಯೋ ಇಲ್ಲೋ?"

"ಗೊತ್ತೈತಿ ಹೋಗೋ ಜೋಕುಮಾರಾ," ಎಂದಳು ಲಚುಮಿ.

ಸಿದ್ದಗೌಡ ಲಚುಮಿಯನ್ನು ಚೆನ್ನಾಗಿ ಬಲ್ಲವನು; ಅವಳ ದನಿಯನ್ನು ಗುರುತಿಸಿ ಆತನೆಂದ:

"ಎಲಾ, ಇಲ್ಲ್ಯಾಕs ಲಚುಮೀ ನೀ?"

"ಎಲಾ, ಇಲ್ಲ್ಯಾಕೋ ಗೌಡಾ ನೀ?" ಎಂದಳು ಲಚುಮಿ. ಮುಂದೆ ಮಾತನಾಡಲು ಅವನಿಗೆ ಅವಕಾಶ ಕೊಡದೆ ಶರಣಪ್ಪ ಹೇಳಿದುದನ್ನೆಲ್ಲ ವರದಿ ಮಾಡಿ, "ಶಿವಗಂಗೀನ್ನ ಪಡಿಯೂದು ನಿನ್ನ ದೈವದಾಗಿಲ್ಲ. ಸುಮ್ಮನs ಹಾದೀ ಹಿಡಿದು ಹೋಗೋ ಗೌಡಾ," ಎಂದಳು.

ಕೋಪ, ನಿರಾಸೆ, ಅಸಹನೆ, ಅಸೂಯೆಗಳಿಂದ ತಳಮಳಿಸುತ್ತ ಒಂದೆರಡು ನಿಮಿಷ ನಿಂತಲ್ಲಿಯೆ ನಿಂತುಕೊಂಡಿದ್ದ ಸಿದ್ದಗೌಡ. ಅಂತೂ ರಂಗಪ್ಪ ಹೇಳಿದ ಹಾಗೆಯೆ ಆಗಿತ್ತು; ತನಗಿಂತ ಮೊದಲೇ ಶಿವಗಂಗೆಯನ್ನು ವಶಪಡಿಸಿಕೊಂಡುಬಿಟ್ಟಿದ್ದ ಶರಣಪ್ಪ. ತಿಪ್ಪುವನ್ನು ಕಳಿಸಿಯೂ ಉಪಯೋಗವಾಗಲಿಲ್ಲ. ಇಲ್ಲಿಯತನಕ ಬಂದು ಹಾಗೆಯೆ ಕೈಜಾಡಿಸುತ್ತ ಹೋಗಬೇಕೇ ತಾನು? ಸಿದ್ದಗೌಡನ ಸ್ವಾಭಿಮಾನದ ಸರ್ಪ ಕೆರಳಿ ಹೆಡೆಯೆತ್ತಿತು. ತಾನೇನು ಸಾಮಾನ್ಯನೇ? ಹಳ್ಳಿಯನ್ನೆಲ್ಲ ಆಳುವ ಪೋಲೀಸು ಪಾಟೀಲ ತಾನು. ಹರಿಜನ ಕೇರಿಯಲ್ಲಿನದೊಂದು ಹೆಣ್ಣನ್ನು ವಶಪಡಿಸಿಕೊಳ್ಳದೆ ಹಾಗೆಯೆ ಹೊರಳಿಹೋಗುವುದೆಂದರೆ ಎಂಥ ಅವಮಾನಕಾರಕ ಪ್ರಸಂಗ... ಶರಣಪ್ಪ ಹೇಳಿರುವನೆಂದು ತಾನೇಕೆ ಬಿಡಬೇಕು? ಛೆ. ಅವನೇನನ್ನು ಮಾಡಬಲ್ಲನೊ ನೋಡಿದರಾಯಿತು ಒಂದು ಕೈ. ಆಗುವುದೆಲ್ಲ ಆಗಿ ಹೋಗಲಿ – ಎಂದು ಯೋಚಿಸಿ ಸಿದ್ದಗೌಡ ತಿಪ್ಪುವಿನ ಗುಡಿಸಲಿಗೆ ಹೋಗಿ ಅವನನ್ನು

ಕೂಗಿ ಎಬ್ಬಿಸಿ ಗರಡಿಯಾಳುಗಳನ್ನು ಕರೆದುತರುವಂತೆ ಆಜ್ಞೆ ವಿಧಿಸಿ ಕಳಿಸಿಕೊಟ್ಟ.

ಮುಂದೆ ನಡೆದುದೊಂದು ರುದ್ರಕಾಂಡ.

ಎಂಟು ಹತ್ತು ಜನ ಪೈಲ್ವಾನರು ಬಂದು, ಶಿವಗಂಗೆಯ ಗುಡಿಸಲಲ್ಲಿ ನುಗ್ಗಿ, ಕೂಗಿಕೊಳ್ಳುತ್ತಿದ್ದ ಲಚುಮಿಗೆ ಎರಡೇಟು ಬಿಗಿದು, ಪ್ರತಿಭಟಿಸುತ್ತಿದ್ದ ಶಿವಗಂಗೆಯನ್ನು ಬಲಾತ್ಕಾರದಿಂದ ಹೊತ್ತುಕೊಂಡೊಯ್ದು ತಿಪ್ಪುವಿನ ಗುಡಿಸಲಿಗೆ ತಂದು ಬಿಟ್ಟರು. ಆ ವೇಳೆಗೆ ಕೇರಿಯ ಜನರೆಲ್ಲ ಎಚ್ಚೆತ್ತು ಕೊಂಡು ಭಯಭೀತರಾಗಿ ತಮ್ಮತಮ್ಮಲ್ಲಿ ಪಿಸುಮಾತನಾಡಿಕೊಳ್ಳತೊಡ ಗಿದ್ದರು. ತಿಪ್ಪುವಿನ ಗುಡಿಸಲಿನಲ್ಲಿ ಶಿವಗಂಗೆ ಗಟ್ಟಿಯಾಗಿ ದನಿತೆಗೆದು ರೋದಿಸತೊಡಗಿದಳು. ಸಿದ್ದಗೌಡ, ತಿಪ್ಪು, ಗರಡಿಯಾಳುಗಳು ಎಲ್ಲರೂ ಅವಳನ್ನು ಬೆದರಿಸಿದರೂ ಅವಳು ಕೂಗುವುದನ್ನು ನಿಲ್ಲಿಸಲಿಲ್ಲ.

ಹರಿಜನ ಕೇರಿಗೂ ಶರಣಪ್ಪನ ಮನೆಗೂ ಅಷ್ಟು ದೂರವೇನೂ ಇರಲಿಲ್ಲ. ಆಗತಾನೆ ಮಿಂದು ಬಂದು ಮಲಗಿಕೊಂಡಿದ್ದ ಶರಣಪ್ಪನಿಗೆ ಆ ಗದ್ದಲದಿಂದಾಗಿ ಎಚ್ಚರವಾಯಿತು. ಹರಿಜನ ಕೇರಿಯಿಂದ ರೋದನ ಸ್ವರ ಕೇಳಿಬರುತ್ತಿದ್ದುದು ಗೊತ್ತಾಗುತ್ತಲೂ ಆತನಿಗೆ ಅಲ್ಲಿ ನಡೆಯುತ್ತಿರಬಹುದಾದ ಘಟನೆಯ ಕಲ್ಪನೆ ಬಂತು. ಕದನದ ಬಗೆಗೆ ಕೊಂಚವೂ ಉತ್ಸಾಹವಿರಲಿಲ್ಲ ವಾದರೂ ಆತ ಏಳಲೇಬೇಕಾಯಿತು. ಆಳುಗಳನ್ನೆಲ್ಲ ಎಬ್ಬಿಸಿ ಶರಣಪ್ಪ ದೊಣ್ಣೆಯನ್ನು ಕೈಗೆ ತೆಗೆದುಕೊಂಡ. ಕಂದೀಲುಗಳನ್ನು ಹೊತ್ತಿಸಿದು ದಾಯಿತು. ಕಾಮಣ್ಣನನ್ನೂ ಅವನ ಜನರನ್ನೂ ಕರೆದು ತರಲು ಒಬ್ಬ ಆಳನ್ನು ಕಳಿಸಿದುದಾಯಿತು. ಅವರು ಬರುವ ವೇಳೆಗೆ ಅಕ್ಕಪಕ್ಕದ ರೈತರೂ ಎದ್ದು ಬಂದಿದ್ದರು.

ಶರಣಪ್ಪನ ವೃದ್ಧ ತಾಯಿ ಹಾಸಿಗೆ ಬಿಟ್ಟುಬಂದು ಹೇಳಿದಳು :

"ಮಾರಾಮಾರಿ ಮಾಡಾಕ ಹೋಗಬ್ಯಾಡಿರಪ್ಪಾ. ಏನಾರೆ ಘಾತ ಆದೀತು."

"ಏನೂ ಆಗುವದಿಲ್ಲ ಬಿಡವ್ವ. ಈಗ ಬಂದುಬಿಡುತೀನಿ," ಎಂದು

ತಾಯಿಯನ್ನು ಸಂತೈಸಿ ಗುಂಪಿನವರೊಡನೆ ಹರಿಜನ ಕೇರಿಯತ್ತ ಹೊರಟ ಶರಣಪ್ಪ.

ದೊಣ್ಣೆ, ಕೊಡಲಿ, ಕುಡುಗೋಲುಗಳನ್ನು ಹಿಡಿದುಕೊಂಡು ಇಪ್ಪತ್ತು ಮೂವತ್ತು ಜನರು ಬರುತ್ತಿದ್ದುದನ್ನು ನೋಡುತ್ತಲೂ ಗೌಡನ ಪಕ್ಷದ ಗರಡಿಯಾಳುಗಳಿಗೂ ಕದನದ ಆವೇಶವೇರಿತು. ಅವರೆಲ್ಲರೂ ತಿಪ್ಪುವಿನ ಗುಡಿಸಲಿನೆದುರಿಗೆ ಗುಂಪುಗೂಡಿ ಎದುರಾಳುಗಳ ಬರವನ್ನೆ ಕಾಯುತ್ತ ನಿಂತರು.

ಇಪ್ಪತ್ತು ಮೂವತ್ತು ಜನರು ಆಯುಧಸಮೇತರಾಗಿ ಬಂದ ವಾರ್ತೆ ತಿಳಿಯುತ್ತಲೂ ಸಿದ್ದಗೌಡನಿಗೆ ವಿವಂಚನೆಯುಂಟಾಗದಿರಲಿಲ್ಲ. ಅವನ ಹಟದ ಅಗ್ನಿ ನಿಧಾನವಾಗಿ ಆಡತೊಡಗಿತು. ಇಷ್ಟು ಬೇಗ ಬಡಿದಾಟದ ಪ್ರಸಂಗ ಬರಬಹುದೆಂದು ಆತ ನಿರೀಕ್ಷಿಸಿರಲಿಲ್ಲ. ಈಗ ಮಾರಾಮಾರಿಯಾಗುವುದು ಖಂಡಿತ. ಒಬ್ಬಿಬ್ಬರ ತಲೆಗಳೂ ಬೀಳಬಹುದು. ಹಳ್ಳಿಯ ಪೋಲೀಸು ಪಾಟೀಲನಾದ ತಾನೇ ಈ ಪ್ರಸಂಗಕ್ಕೆ ಕಾರಣನಾದಲ್ಲಿ ತನ್ನ ಗೌಡಿಕೆಯೂ ಕೈತಪ್ಪಿ ಹೋಗಬಹುದು. ಅಪರಾಧಿಗಳನ್ನು ಬಂಧಿಸಿ ಪೋಲೀಸರಿಗೊಪ್ಪಿಸುವ ತಾನೇ ಅಪರಾಧಿಯಾಗಿ ಸೆರೆಮನೆ ಕಾಣಬೇಕಾಗಿ ಬರಬಹುದು. ಹಾಗೇನಾದರೂ ಆದಲ್ಲಿ ಮುಂದೆ ತಾನು ಈ ಊರಲ್ಲಿಯೆ ತಲೆಯೆತ್ತಿ ತಿರುಗಾಡುವಂತಿಲ್ಲ. ಛೆ. ಛೆ. ಒಳ್ಳೆಯ ಕಠಿಣ ಪ್ರಸಂಗವೇ ಬಂದಿತಲ್ಲ....

ಹಾಗೆ ಯೋಚಿಸುತ್ತ ಸಿದ್ದಗೌಡ ಶಿವಗಂಗೆಯನ್ನು ಗುಡಿಸಲಿನಲ್ಲಿಯೆ ಬಿಟ್ಟು, ಹೊರಗಡೆ ಬಂದು ಗರಡಿಯಾಳುಗಳಿಗೆಲ್ಲ ಶಾಂತರಾಗಿರಲು ಸೂಚಿಸಿದ. ಅಷ್ಟರಲ್ಲಿ ಶರಣಪ್ಪನ ಗುಂಪೂ ಅಲ್ಲಿಗೆ ಬಂದು ಸೇರಿತು.

ಶರಣಪ್ಪನಿಂದ ಮೊದಲೇ ಸೂಚನೆ ಪಡೆದಿದ್ದ ಕಾಮಣ್ಣ ಮುಂದೆ ಬಂದು ಮಾತನಾಡಿದ:

"ಏನು ಸಿದಗೌಡಾ, ಏನು ನಡಸಿದ್ದೀ ಇಂಥಾ ರಾತ್ರ್ಯಾಗ?"

"ನಮಗ ಹಗಲೇನು, ರಾತ್ರಿಯೇನು, ಸರಕಾರಿ ನೌಕರದಾರರಾದ ನಮಗ ಎಲ್ಲಾ ಒಂದೇ ಅಪಾ," ಎಂದ ಸಿದ್ದಗೌಡ.

ಶರಣಪ್ಪನ ಗುಂಪು ನಕ್ಕಿತು. ಶರಣಪ್ಪನಿಗೆ ಮಾತ್ರ ನಗು ಬರಲಿಲ್ಲ. ಕಾಮಣ್ಣನೂ ನಗದೆ ಗಂಭೀರಸ್ವರದಿಂದ ಕೇಳಿದ:

"ಅಂಥಾದ್ದೇನು ಸರಕಾರಿ ಕೆಲಸ ನಡಿಸಿದ್ದೀಯೋ ಗೌಡಾ ಈ ಕೇರಿಯೊಳಗ?"

ಕಾಮಣ್ಣನ ಮಾತಿನ ರೀತಿಯನ್ನು ಕಂಡು ಸಿದ್ದಗೌಡನ ರಕ್ತ ಕುದಿಯ ತೊಡಗಿದ್ದಿತಾದರೂ ಆತ ಕೋಪವನ್ನು ತಡೆದುಕೊಂಡು ಉತ್ತರವಿತ್ತ :

"ಕಳವಿನ ಮಾಲು ತಪಾಸು ಮಾಡೂದಿತ್ತು. ಅದಕ್ಕ ಬಂದಿದ್ದಿವಿ."

ಶರಣಪ್ಪನ ಹಿಂಬಾಲಕರು ಮತ್ತೆ ನಕ್ಕರು. ಗೌಡನ ಪೈಲ್ವಾನರಲ್ಲಿ ಕೆಲವರಿಗೂ ನಗು ಬರದಿರಲಿಲ್ಲ. ಎಷ್ಟು ಸುಲಭವಾಗಿ ಸುಳ್ಳಿನ ಮೇಲೆ ಸುಳ್ಳು ಹೇಳುತ್ತಿದ್ದ ಗೌಡ!

"ಕಳವು? ಯಾರು ಕಳವು ಮಾಡಿದವರು?"

"ಇವಳೇ, ಶಿವಗಂಗಿ. ಆ ದರೋಡೆಖೋರನ ಹೆಂಡತಿ. ಊರಿನಿಂದ ಬರುವಾಗ ಒಬ್ಬರ ಮನಿಯಾಗಿನ ಬೆಳ್ಳೀ ತೋಡೆ ತುಡುಗು ಮಾಡಿಕೊಂಡು ಬಂದಾಳಂತ ರಿಪೋರ್ಟು ಬಂದೈತಿ."

"ಹಿಂಗೇನು? ತಪಾಸು ಮಾಡೂದಿದ್ದರ ಅವಳ ಗುಡಿಸಲದಾಗ ಮಾಡ ಬೇಕು, ಹೊರಟುಹೋಗಬೇಕು. ಈ ತಿಪ್ಪ್ಯಾನ ಮನಿಗ್ಯಾಕ ಕರಕೊಂಡ ಬಂದಿದ್ದೀ ಅವಳನ್ನ? ನಮುಗೆಲ್ಲಾ ಗೊತ್ತಾಗೈತಿ ಗೌಡಾ. ನಮ್ಮ ಮುಂದ ಸುಳ್ಳು ಸಾಧಿಸಬ್ಯಾಡ...." ಎಂದು ಕಾಮಣ್ಣ ಹೇಳುತ್ತಿದ್ದ ಹಾಗೆ ಒಳಗಡೆ ಯಿಂದ ಶಿವಗಂಗೆ ಓಡಿಬಂದು ಹಣೆ ಚಚ್ಚಿಕೊಂಡು ಅಳುತ್ತಾ – "ನಾನೆಂದೂ ಯಾರ ಸಾಮಾನೂ ಮುಟ್ಟಿಲ್ಲರಪೋ. ತಾಯಿ ದುರ್ಗವ್ವನ ಆಣೆ. ತಾಯಿ ಯಲ್ಲವ್ವನ ಆಣೆ. ನಾನೆಂದೂ ಅಂಥಾ ಹೇಸಿ ಕೆಲಸ ಮಾಡಿದಾಕಿಯಲ್ಲ. ಇವನ ಸಂಗಾತ ಮಲಗಿಕೊಳ್ಳೂದಕ್ಕ ನಾ ತಯಾರಾಗಲಿಲ್ಲಂತ ಇಲ್ಲಿಗೆ ನನ್ನ ಹೊತ್ತುಕೊಂಡು ಬಂದು ಕಾಡಿಸಾಕ ಹತ್ತಿದಾರ. ನಾ ಬಡವಿ, ಪರದೇಶಿ. ನನ್ನ ಉಳಿಸಿಕೊಳ್ಳಿರಪೋ," ಎಂದು ಬಡಬಡನೆ ಹೇಳಿದಳು.

"ಏನಂತೀಯೋ ಗೌಡಾ, ಏನು ಹೇಳುತೀ ಈಗ?" ಎಂದು ಕಾಮಣ್ಣ ಸವಾಲು ಹಾಕುತ್ತಿದ್ದ ಹಾಗೆ ಶರಣಪ್ಪ ಅವನನ್ನು ತಡೆದು, ಶಿವಗಂಗೆಯನ್ನು ಕುರಿತು ಹೇಳಿದ :

"ಆದದ್ದಾತು. ನೀ ನಿನ್ನ ಮನಿಗೆ ನಡಿ ಶಿವಗಂಗೀ."

೯

ಆ ರಾತ್ರಿ ಶರಣಪ್ಪನೆದುರಿಗೆ ಹಿಮ್ಮೆಟ್ಟಿ ಬಂದ ಸಿದ್ದಗೌಡ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಕುಲಕರಣಿ ರಂಗಪ್ಪನೊಡನೆ ಆಲೋಚಿಸಿ ಒಂದು ಯೋಜನೆಯನ್ನು ಸಿದ್ಧಗೊಳಿಸಿದ.

ಮರಡಿಹಳ್ಳಿಯಿಂದ ಮೂರು ಮೈಲು ದೂರದಲ್ಲಿದ್ದ ರಾಮಾಪುರದಲ್ಲೊಂದು ಪೋಲೀಸು ಠಾಣೆಯಿತ್ತು. ಸುತ್ತುಮುತ್ತಲಿನ ಮೂವತ್ತು ಹಳ್ಳಿಗಳಿಗೆಲ್ಲ ಅದೊಂದೇ ಪೋಲೀಸುಠಾಣೆ. ಒಬ್ಬ ಹವಾಲ್ದಾರ ಅದರ ಮುಖ್ಯಾಧಿಕಾರಿ. ಅವನ ಕೈಕೆಳಗೆ ಇಬ್ಬರು ಪೋಲೀಸರು. ಮೂವತ್ತು ಹಳ್ಳಿಗಳ ಮೇಲೆಲ್ಲ ಅವರು ಪಾಳೆಯಗಾರರಂತೆ ಅಧಿಕಾರ ನಡಸುತ್ತಿದ್ದರು. ಯಾವುದೊಂದು ಹಳ್ಳಿಯಲ್ಲಿ ಏನಾದರೊಂದು ಅಪರಾಧ ಸಂಭವಿಸಿದರಾಯಿತು, ಪೋಲೀಸಿನವರಿಗೆ ಅದೊಂದು ಹಬ್ಬ ಬಂದ ಹಾಗಾಗುತಿತ್ತು. ಅಪರಾಧಿಯನ್ನೂ ಅಪರಾಧಿಗಳಲ್ಲದವರನ್ನೂ ಹಿಡಿದು ಸೆರೆಮನೆಯ ಬೆದರಿಕೆ ಹಾಕಿ ಹಣ ಸುಲಿಯುತ್ತಿದ್ದರು. ಹಳ್ಳಿಗಳ ಪೋಲೀಸು ಪಾಟೀಲರು ಈ ವಿಚಾರದಲ್ಲಿ ಪೋಲೀಸರ ಹಸ್ತಕರಾಗಿ ಹಳ್ಳಿಯ ಅಜ್ಞ ಜನರನ್ನು ಸುಲಿಯುವುದರಲ್ಲಿ ನೆರವಾಗುತ್ತಿದ್ದರು. ಸುಲಿಗೆಯ ಹಣದಲ್ಲಿ ಕೆಲವೊಂದು ಪಾಲು ಗೌಡರುಗಳಿಗೂ ಸಂದಾಯವಾಗುತ್ತಿತ್ತು. ಅಶಿಕ್ಷಿತರೂ ಅಜ್ಞಾನಿಗಳೂ ಆಗಿದ್ದ ಹಳ್ಳಿಗರು ಪೋಲೀಸ್ ಎಂಬ ಶಬ್ದವನ್ನು ಕೇಳಿದರೂ ನಡುಗುತ್ತಿದ್ದರು. ಖಾಕಿ ಬಟ್ಟೆ ಕಣ್ಣಿಗೆ ಬೀಳುತ್ತಲೂ ಪಲಾಯನ ಹೇಳಿಸುತ್ತಿದ್ದರು. ಹಳ್ಳಿಗರ ಈ ಭೀತಿಯ ದುರ್ಲಾಭ ಪಡೆಯುವುದು ಗೌಡರುಗಳ ಕಾಯಕವಾಗಿ ಪರಿಣಮಿಸಿತ್ತು.

ಅಂದು ರಾತ್ರಿ ಹರಿಜನ ಕೇರಿಯಲ್ಲಿ ನಡೆದ ಘಟನೆಗಳ ಬಗ್ಗೆ ಮಾತ ನಾಡುತ್ತ ಕುಲಕರಣಿ ಹೇಳಿದ:

"ಬಡಿದಾಟ ಆಗದ ಹಾಗೆ ನೀ ನೋಡಿಕೊಂಡದ್ದು ಚಲೋದೇ ಆಯಿತು ಸಿದಗೌಡ. ಶರಣಪ್ಪನಂಥವರನ್ನು ಯುಕ್ತಿಯಿಂದ ಮಣಿಸ ಬೇಕಪ್ಪ."

"ಯುಕ್ತಿ ಗಿಕ್ತಿ ಎಲ್ಲಾ ನಿಮಗೇ ತಿಳಿಯೂದು ರಂಗಣ್ಣಾ. ನಾವೆಲ್ಲಾ ಹೇಳಿ ಕೇಳಿ ಒಕ್ಕಲಿಗರು. ಮಾತೆತ್ತಿದರ ತಗೋ ಕುಡಗೋಲು ಅನ್ನುವ ಮಂದಿ."

"ಕುಡಗೋಲೂ ಬೇಕು ಸಿದಗೌಡಾ. ಬರೀ ಯುಕ್ತಿಯಿಂದಲೂ ಏನೂ ಆಗುವದಿಲ್ಲ. ವೇಳೆ ನೋಡಿಕೊಂಡು ಕೆಲಸ ಮಾಡಬೇಕಾಗುತದ. ಆ ಚಂಡಾಲರ ಹೆಣ್ಣನ್ನು ವಶಪಡಿಸಿಕೊಳ್ಳೂದು ಏನು ದೊಡ್ಡ ಕೆಲಸ! ಹವಾಲ್ದಾರಗ ಹೇಳಿ ಕಳಿಸಿದರ ಒಂದು ದಿನದಾಗ ಆದೀತು ಕೆಲಸ."

"ಹೌದೌದು. ಹಂಗs ಮಾಡಬೇಕು. ಚಲೋ ಯುಕ್ತಿ ತಗದಿ ರಂಗಣ್ಣಾ. ಚಲೋ ಯುಕ್ತಿ." ಒಂದು ನಿಮಿಷ ಮೌನವಾಗಿದ್ದು ಸಿದ್ದಗೌಡ ನೆಂದ: "ಆದರs ಅವನ್ನ ಕರಸಿದರ ಮೊದಲು ಅವನೇ ಅವಳನ್ನ ನೋಡಿ ಕೊಂಡು ಬಿಡುತಾನಲ್ಲೋ?"

"ನೋಡಿಕೊಂಡರ ನೋಡಿಕೊಳ್ಳಲೊಲ್ಲನ್ಯಾಕ? ನಿನಗೂ ಸಿಕ್ಕರ ಆಯಿತಲ್ಲ?"

"ಹೂಂ. ಮತ್ತೇನ ಮಾಡೂ ಹಾಂಗೈತಿ? ಹವಾಲ್ದಾರನ್ನ ಕರಸಿ ಬಿಡೂಣು," ಎಂದ ಸಿದ್ದಗೌಡ.

ಹಳಬನೊಬ್ಬನ ಮೂಲಕ ಹವಾಲ್ದಾರನಿಗೆ ಕರೆಹೋಯಿತು. ಸಾಯಂಕಾಲದ ಸಮಯಕ್ಕೆ ಆತ ಮರಡಿಹಳ್ಳಿಗೆ ಬಂದು ಸೇರಿದ.

ಪೋಲೀಸು ಹವಾಲ್ದಾರ ಚಾವಡಿಗೆ ಬಂದ ವಾರ್ತೆ ಪಸರಿಸುತ್ತಲೂ ಮತ್ತೆ ಶಿವಗಂಗೆಯ ಎದೆ ಬಡಿದುಕೊಳ್ಳತೊಡಗಿತು. ತನ್ನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆಂದೇ ಗೌಡ ಹವಾಲ್ದಾರನನ್ನು ಕರೆಸಿರಬೇಕೆಂದು ಅವಳಿಗೆ ಹೊಳೆಯದಿರಲಿಲ್ಲ. ಕೇರಿಯಲ್ಲಿನ ಸ್ತ್ರೀ ಪುರುಷರೆಲ್ಲರೂ ಗಾಬರಿ

ಗೊಂಡರು. ಶಿವಗಂಗೆಯಿಂದಾಗಿ ತಮ್ಮ ಮೇಲೂ ದಾಳಿಯಾಗಬಹುದೆಂಬ ಭೀತಿ ಅವರನ್ನಾವರಿಸಿತು.

ದುರ್ಗವ್ವನ ಪೂಜಾರಿ ಮಾದ ಶಿವಗಂಗೆಯು ಗುಡಿಸಲಿನ ಮುಂದೆ ಬಂದು ದೊಪ್ಪನೆ ನೆಲಕ್ಕೆ ಕುಕ್ಕರಿಸಿ, "ಒಳೇ ಕಠಿಣ ಪರಸಂಗನೇ ಬಂತು. ಇವತ್ತು ನಮಗೆಲ್ಲಾ ಏನಾಗುತೈತ್ಯೋ ದೇವರೇ ಬಲ್ಲ!" ಎಂದು ಅಳು ದನಿಯಲ್ಲಿ ರಾಗ ತೆಗೆದ. ಆತ ನೆಲಕ್ಕೆ ಕುಕ್ಕರಿಸಿದ ರಭಸಕ್ಕೆ ಅವನ ಮೈಯ ಮೂಳೆಗಳೆಲ್ಲ ಲಟಲಟೆಂದು ಸದ್ದುಮಾಡಿದುವು. ಮೂಳೆಗಳನ್ನು ಬಿಟ್ಟರೆ ಇನ್ನೇನೂ ಇದ್ದಂತಿರಲಿಲ್ಲ ಮಾದನ ಶರೀರದಲ್ಲಿ.

"ನಿನಗೇನಾಗುತೈತ್ಯೋ? ನೀ ಯಾಕ ಅಳುತೀ?" ಎಂದು ಅವನನ್ನು ಗದರಿಸಿದಳು ಲಚುಮಿ.

"ಕೇರಿಯವರನ್ನೆಲ್ಲಾ ಹಿಡುಕೊಂಡು ಹೋಗುತಾರಂತ ಮಾತಾಡು ತಿದ್ದರು ಊರಾಗ."

"ನಮ್ಮನ್ಯಾಕ ಹಿಡೀತಾರ? ನಾವೇನು ಮಾಡೀವಿ?" ಎಂದ ಭರಮಜ್ಜ.

"ಅವರನ್ನ ಕೇಳುವರು ಯಾರಪಾ ಅಜ್ಜಾ? ನಾವೇನಾದರೂ ಮಾತಾಡಿದರ ಒದ್ದು ಕೆಡವತಾರ."

ಸಂಜೆ ಕಳೆದು ರಾತ್ರಿಯಾಗುತ್ತಲೂ ಹಳಬರ ಶಿವರಾಯಿ ಹರಿಜನ ಕೇರಿಗೆ ಬಂದು, ಭರಮಜ್ಜ, ಮಾದ, ಹನುಮ, ಶಿವಗಂಗೆ ಮೊದಲಾದವ ರನ್ನೆಲ್ಲ ಕರೆದುತರುವಂತೆ ಹವಾಲ್ದಾರ ಸಾಹೇಬರು ಆಜ್ಞೆ ವಿಧಿಸಿರುವರೆಂದು ತಿಳಿಸಿದ.

ಪೂಜಾರಿ ಮಾದ ಚಳಿಜ್ವರವೇರಿದವರಂತೆ ನಡುಗುತ್ತಾ ದುರ್ಗವ್ವನ ಗುಡಿಗೆ ಧಾವಿಸಿಹೋಗಿ, ಮೂರ್ತಿಯ ಎದುರಿಗೆ ಕುಳಿತುಕೊಂಡು ದನಿ ತೆಗೆದು ಅಳತೊಡಗಿದ. ಕೇರಿಯವರೆಲ್ಲರೂ ಗುಡಿಯಲ್ಲಿ ಗುಂಪುಗೂಡಿದರು. "ದುರ್ಗವ್ವಾ, ನಮ್ಮನ್ನ ಈ ಪರಸಂಗದಿಂದ ಪಾರು ಮಾಡವ್ವಾ," ಎಂದು ಅಂಗಲಾಚಿ ಬೇಡಿಕೊಳ್ಳುತ್ತ ಎಲ್ಲರೂ ಕಂಬನಿಗರೆಯತೊಡಗಿದರು. ದುರ್ಗವ್ವನ ಗುಡಿಗೆ ಸಾವಿನ ಮನೆಯ ಸ್ವರೂಪ ಪ್ರಾಪ್ತವಾಯಿತು.

ಮಕ್ಕಳುಮರಿಗಳ ರೋದನ ಕೇರಿಯಲ್ಲೆಲ್ಲ ದುಮುದುಮಿಸತೊಡಗಿತು. ನಾಯಿಗಳೂ ವಿಕಾರವಾಗಿ ಊಳಿಡತೊಡಗಿದುವು.

"ಇಲ್ಲೇ ಒದರುತಾ ಕುಂಡರತೀರೇನ? ಏಳ್ರಿ. ಸಾಹೇಬ್ರು ಕರೀತಾರ," ಎಂದು ಶಿವರಾಯಿ ಮತ್ತೆ ಮತ್ತೆ ಕೂಗುತ್ತಿದ್ದ.

ಮಗನನ್ನು ಕಂಕುಳಲ್ಲಿರಿಸಿಕೊಂಡು ಶಿವಗಂಗೆ ಚಾವಡಿಗೆ ಹೊರಟಳು. ಆವಳ ಹಿಂದೆಯೇ ಹರಿಜನರ ಗುಂಪು ಹೊರಟಿತು. ಚಾವಡಿಯೆದುರಿಗೆ ಬಂದು ಎಲ್ಲರೂ ಅಡ್ಡಬಿದ್ದು ವಂದಿಸಿದರು. ಕುರ್ಚಿಯಲ್ಲಿ ಸೆಟೆದು ಕುಳಿತಿದ್ದ ಹವಾಲ್ದಾರ,

"ನಾಲ್ಕು ಜನರನ್ನ ಕರಕೊಂಡು ಬಾ ಅಂದರ ಈ ಹಿಂಡನ್ನೆಲ್ಲಾ ಯಾಕ ಕರಕೊಂಡು ಬಂದೀಯೋ?" ಎಂದು ಶಿವರಾಯಿಯನ್ನು ಗದರಿಸಿದ.

"ನಾ ಹೇಳಿದರ ಕೇಳಲಿಲ್ಲ. ಎಲ್ಲರೂ ಬಂದಾರ," ಎಂದ ಶಿವರಾಯಿ.

"ಶಿವಗಂಗಿ ಅಂದರ ಯಾರು?"

ಸೆರಗನ್ನು ಮುಖದ ಮೇಲೆಳೆದುಕೊಂಡು ಕೊಂಚ ಮುಂದೆ ಬಂದು ನಿಂತಳು ಶಿವಗಂಗೆ.

"ತೋಡೆ ತುಡುಗು ಮಾಡಿಕೊಂಡು ಬಂದಿದ್ದೀ ಅಂತ ನಿನ್ನ ಮ್ಯಾಲ ಫಿರ್ಯಾದಿ ಬಂದೈತಿ. ಅದನ್ನ ಎಲ್ಲಿಟ್ಟಿದ್ದೀ ಹೇಳು."

ಮಗನನ್ನು ಕೆಳಕ್ಕಿಳಿಸಿ, ಕೈಗಳೆರಡನ್ನೂ ಜೋಡಿಸಿ ಶಿವಗಂಗೆ ದೀನ ವಾಣಿಯಲ್ಲಿ ಹೇಳಿದಳು:

"ಯಾರ ತೋಡೇನೋ ಎಂಥಾದ್ದೋ ನನಗೊಂದೂ ಗೊತ್ತಿಲ್ಲರೀ ರಾವಸಾಬರ. ನಾ ಅಂಥಾ ಕೆಲಸಾ ಮಾಡುವಾಕಿಯಲ್ಲ."

"ಹಂ. ಹಂ. ಬಾಳ ಸಂಪನ್ನಳು ನೀನಂದರ! ದರೋಡೆಕೋರನ ಹೆಂಡತಿಯಾಗಿದ್ದೂ ಬಾಳ ಸತ್ಯವಂತಳು ನೀ. ಅಲ್ಲಾ?" ಎಂದು ಅಣಕದ ದನಿಯಲ್ಲಿ ನುಡಿದ ಸಿದ್ದಗೌಡ.

"ಇಲ್ಲಿ ನೋಡು ಶಿವಗಂಗೀ. ಒಳ್ಳೇ ಮಾತಿಗೆ ಸಾಮಾನು ತಂದು ಕೊಟ್ಟು ಬಿಡು. ಇಲ್ಲದಿದ್ದರ ಬಾಳ ಫಜೀತಿಯಾಗುತೈತಿ," ಎಂದು ನುಡಿದು ಹವಾಲ್ದಾರ, ಮಾದ, ಭರಮ ಮೊದಲಾದವರ ಕಡೆ ತಿರುಗಿ, "ನಿಮ್ಮನ್ನೂ

ಬಿಡುತೀವಂತ ತಿಳೀಬ್ಯಾಡ್ರೋ. ನಮಗ ಚಲೋ ಗೊತ್ತೈತಿ. ನೀವೆಲ್ಲಾ ಒಂದs. ತುಡುಗ ಬದ್ಮಾಷ ಮಂದಿ. ನಿಮ್ಮನ್ನೆಲ್ಲಾ ಒಮ್ಮೆ ಜೇಲಿಗೆ ಹಾಕಿದಾಗs ಬುದ್ಧಿ ಬರೂದು ನಿಮಗ," ಎಂದು ಹೇಳಿದ.

ಎದೆಯಲ್ಲಿದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಭರಮುಜ್ಜ ಮಾತನಾಡಿದ:

"ನಾವ್ಯಾಕ ತುಡುಗರಾಗೂನ್ರೀ ರಾವಸಾಬರs? ಈಕಿಯ ಗಂಡ ದರೋಡೆಕೋರನಾಗಿದ್ದರ ಈಕಿ ಏನ ಮಾಡ್ಯಾಳು? ನಾವಾದರೂ ಏನು ಮಾಡೇವು?"

"ನೀವೆಲ್ಲಾ ಕಳ್ಳಸೂಳೀಮಕ್ಕಳು. ನಿಮ್ಮ ಆಟಾ ಎಲ್ಲಾ ಬಲ್ಲೆ ನಾ. ಈಕಿ ತುಡುಗುಮಾಡಿ ತಂದ ತೋಡೇ ನೀವೆಲ್ಲಾ ಸೇರಿ ಮುಚ್ಚಿಟ್ಟೇರಿ. ಒಬ್ಬೊಬ್ಬರ ತೊಗಲು ಸುಲಿಯುವ ಹಾಂಗ ಬಾರಿಸಿದಾಗ ತಂದು ಕೊಡುತೀರಿ. ಕುಂಡರ್ರಿ ಅಲ್ಲಿ. ಯಾರೂ ಮನಿಗೆ ಹೋಗಬ್ಯಾಡ್ರಿ," ಎಂದ ಹವಾಲ್ದಾರ.

ಹರಿಜನರ ಗುಂಪು ಮತ್ತೆ ರೋದನಕ್ಕಾರಂಭಿಸಿತು. ಪೋಲೀಸರು ತಮ್ಮೆಲ್ಲರನ್ನೂ ಬಂಧಿಸಿದರೆಂದೇ ಅವರು ಭಾವಿಸಿದರು. ಮನೆಗೆ ಹೋಗುವಂತಿಲ್ಲವಂತೆ. ರಾತ್ರಿಯೆಲ್ಲ ಇಲ್ಲಿಯೆ ಕುಳಿತಿರಬೇಕಾಗುವುದೊ ಏನೊ. ಮುಂದೆ ಏನಾಗಲಿದೆಯೋ? ಗಂಡುಸರು ಹೆಂಗುಸರು ಮಕ್ಕಳು ಎಲ್ಲರೂ ಹೋ ಎಂದು ಆಕ್ರೋಶ ಮಾಡತೊಡಗಿದರು. ನಿಧಾನವಾಗಿ ಹಳ್ಳಿಯ ರೈತರೂ ಒಬ್ಬೊಬ್ಬರಾಗಿ ಚಾವಡಿಯೆದುರಿಗೆ ನೆರೆಯತೊಡಗಿದರು.

ಶರಣಪ್ಪನ ಮನೆಯಲ್ಲಿ ಇದೇ ವಿಷಯವಾಗಿ ವಿಚಾರವಿನಿಮಯಕ್ಕಾರಂಭವಾಗಿತ್ತು. ಈ ಪ್ರಸಂಗದಿಂದ ಹರಿಜನರನ್ನು ಹೇಗೆ ಉಳಿಸಿಕೊಳ್ಳುವುದು?

"ಹವಾಲ್ದಾರನ್ನ ಕರೆಸಿಕೊಂಡು ಅವನ ಕೈ ಬೆಚ್ಚಗ ಮಾಡಿದರ ಹೆಂಗ?" ಎಂದ ಕಾಮಣ್ಣ.

"ಇದುವರೆಗೂ ನಾ ಯಾರಿಗೂ ಲಂಚಾ ಕೊಟ್ಟು ಕೆಲಸ ಮಾಡಿಸಿಕೊಂಡವನಲ್ಲ ಕಾಮಣ್ಣಾ. ನಿನಗೂ ಗೊತ್ತೇ ಐತಿ. ಈ ಪರಸಂಗದಾಗೂ ನಮ್ಮ ಬಿಗುವು ನಾವು ಬಿಡಬಾರದು," ಎಂದ ಶರಣಪ್ಪ.

"ಶಿವಗಂಗಿಯ ವಿರುದ್ಧ ಅವರು ಖೊಟ್ಟಿ ಫಿರ್ಯಾದಿ ತಯಾರುಮಾಡಿದಾಂಗ ಕಾಣುತೈತಿ. ಅದರ ಮ್ಯಾಲ ಅವರು ಅವಳನ್ನ ಹಿಡಿದು ಕುಂಡ್ರಿಸಲಿಕ್ಕೂ ಬರುತೈತಿ. ಈಗ ನಾವು ಏನು ಮಾಡೂದಕ್ಕೂ ಬರುವದಿಲ್ಲ."

"ಹೌದು ಕಾಮಣ್ಣಾ. ನೀ ಹೇಳೂದು ಬರಾಬರಿ. ಅವರಿಗೆ ಅಧಿಕಾರ ಅದಾವು. ಮನಸ್ಸಿಗೆ ಬಂದದ್ದು ಮಾಡಿದರೂ ಅವರನ್ನ ಯಾರೂ ಕೇಳೂದಿಲ್ಲ. ಶಿವಗಂಗೀನ ಜಾಮೀನ ಮ್ಯಾಲ ಬಿಡಿಸಿಕೊಳ್ಳೂಣೇನು?"

"ಜಾಮೀನ ಮ್ಯಾಲ ಬಿಡೂದಕ್ಕ ಇವರಿಗಧಿಕಾರ ಇಲ್ಲ. ಅದು ಜಜ್ಜಗ ಸಮ್ಮಂಧಿಸಿದ್ದಪಾ."

"ಹವಾಲ್ದಾರ ನಮ್ಮ ಮಾತು ಕೇಳಲಿಕ್ಕಿಲ್ಲ. ಅಲ್ಲಾ?"

"ಇಲ್ಲ. ಗೌಡ ಕುಲಕರಣೀರು ಪೋಲೀಸರು ಎಲ್ಲಾ ಯಾವಾಗಲೂ ಒಂದs."

ತಾನೇನನ್ನೂ ಮಾಡುವಂತಿಲ್ಲವಲ್ಲಾ ಎಂದು ವ್ಯಸನಪಟ್ಟುಕೊಳ್ಳುತ್ತ ಶರಣಪ್ಪ ಮನೆಯಲ್ಲಿಯೆ ಕುಳಿತುಕೊಂಡ. ತನ್ನ ಕಳ್ಳಭಟ್ಟಿಯ ಮೇಲೆ ದಾಳಿಯಾಗದಿದ್ದರಾಯಿತು, ಎಂದು ಯೋಚಿಸುತ್ತ, ಕಾಮಣ್ಣನೂ ತನ್ನ ಮನೆಗೆ ಹೊರಟು ನಡೆದ.

ಗೌಡ, ಹವಾಲ್ದಾರ, ಹಳಬರು, ಓಲೆಕಾರರು ಎಲ್ಲರೂ ಸೇರಿ ಆ ರಾತ್ರಿ ಹರಿಜನ ಕೇರಿಯ ಎಲ್ಲ ಮನೆಗಳಲ್ಲೂ ಹೊಕ್ಕು ಅತ್ಯಾಚಾರ ಮಾಡಿದರು. ಅತ್ಯಂತ ದಾರಿದ್ರ್ಯದಲ್ಲೂ ಬಟ್ಟೆ ಬರೆಗಳಿಗೆಂದು ಹರಿಜನರು ಉಳಿಸಿ ಮಡಗಿಸಿಟ್ಟಿದ್ದ ಆಣೆ ಕಾಸುಗಳನ್ನೂ ದೋಚಿಕೊಂಡರು. ಶಿವಗಂಗೆಯನ್ನು ಅವಳ ಗುಡಿಸಲಿಗೆ ಕರೆದೊಯ್ದು ಬೆಳಕು ಹರಿಯುವವರೆಗೂ ಪೀಡಿಸಿದರು. ಹವಾಲ್ದಾರ, ಸಿದ್ದಗೌಡ, ಹಳಬರು, ಓಲೆಕಾರರು ಎಲ್ಲರೂ ಒಬ್ಬರಾದ ಬಳಿಕ ಒಬ್ಬರಂತೆ ಅವಳ ಶೀಲಭಂಗ ಮಾಡಿದರು. ಅತ್ತು ಅತ್ತು ಸೋತು ಬಿದ್ದಿದ್ದ ಬಾಲಕ ಮಹಾದೇವನನ್ನು ಲಚುಮಿ ತನ್ನ ಗುಡಿಸಲಿಗೆ ಕರೆದೊಯ್ದು ಮಲಗಿಸಿದ್ದಳು.

ಸೂರ್ಯೋದಯದ ಸಮಯಕ್ಕೆ ದಾಳಿಗಾರರೆಲ್ಲ ಹರಿಜನ ಕೇರಿಯನ್ನು ತ್ಯಜಿಸಿ ಹೊರಟರು. ಗುಡಿಸಲಿನ ಮೂಲೆಯಲ್ಲಿ ಶವದಂತೆ ಬಿದ್ದುಕೊಂಡಿದ್ದ

ಶಿವಗಂಗೆಯನ್ನು ಎಡಗಾಲಿನಿಂದೊದೆದು, "ಇಂದಿನಿಂದ ಗೌಡರನ್ನ ದಿನಾಲು ರಾತ್ರಿ ತಪ್ಪದೆ ಕರಕೊಂಡಿಯೋ, ನೀ ಇಲ್ಲಿ ಉಳೀತೀ. ಅವರಿಗೇನಾರ ಅಪಮಾನ ಮಾಡಿದಿಯಂದರ ನೋಡು, ಹುಷಾರಿ. ಜೇಡಿ ಹಾಕಿ ಜೇಲಿಗೆ ಸಾಗಿಸುತೀನಿ," ಎಂದು ಎಚ್ಚರಿಕೆಯನ್ನಿತ್ತು ಹೊರಟ ಹವಾಲ್ದಾರ.

ಅವರು ಹೊರಟುಹೋಗುತ್ತಲೂ ಲಚುಮಿ ಮಹಾದೇವನನ್ನೂ ಚಂದ್ರಳನ್ನೂ ಕರೆದುಕೊಂಡು ಶಿವಗಂಗೆಯ ಬಳಿ ಬಂದಳು. ಗೌಡ, ಕುಲಕರಣಿ, ಹವಾಲ್ದಾರ ಮೊದಲಾದವರೆಲ್ಲರ ವಂಶವನ್ನು ಶಪಿಸುತ್ತಾ ಬೆರಳು ಮುರಿದಳು.

"ಅವ್ವಾ, ಅಯ್ಯೋ ಅವ್ವಾ, ಏನಾತs ನಿನಗ?" ಎಂದು ರೋದಿಸುತ್ತ ತಾಯಿಯ ದೇಹದ ಮೇಲೆ ಬಿದ್ದುಕೊಂಡ ಮಹಾದೇವ. ಚಂದ್ರಳೂ ದನಿ ತೆಗೆದು ಅಳತೊಡಗಿದಳು.

೧೦

ಹಾಗೆ, ತನಗೆ ಇಷ್ಟವಿಲ್ಲದಿದ್ದರೂ ಶಿವಗಂಗೆ ಕಾಮುಕರಿಗೆ ದೇಹವನ್ನೊಪ್ಪಿಸಬೇಕಾಗಿ ಬಂದಿತು.

ಅನಂತರ ಪ್ರತಿರಾತ್ರಿಯೂ ತಪ್ಪದೆ ಬರಲಾರಂಭಿಸಿದ ಸಿದ್ದಗೌಡ. ಶಿವಗಂಗೆ ಅವನಿಗೆ 'ಬಾ' ಎನ್ನಲೂ ಇಲ್ಲ, 'ಬೇಡ' ಎನ್ನಲೂ ಇಲ್ಲ. ಕಟ್ಟಿಗೆಯ ಬಾಗಿಲನ್ನು ಕಾಲಿನಿಂದ ನೂಕಿ ಗುಡಿಸಲಿನಲ್ಲಿ ಪ್ರವೇಶಿಸುತ್ತಿದ್ದ ಸಿದ್ದಗೌಡ; ಸಾರ್ವಜನಿಕ ಬಾವಿಯಲ್ಲಿಳಿದು ನೀರು ಕುಡಿಯುವವರ ಹಾಗೆ ಶಿವಗಂಗೆಯ ದೇಹದ ಸವಿಯನ್ನು ಸವಿದು ಹೊರಟುಹೋಗುತ್ತಿದ್ದ.

ಶರಣಪ್ಪನಿಗೆ ಅಂತರಂಗದಲ್ಲಿ ರೊಚ್ಚು ಉಕ್ಕುತ್ತಿದ್ದಿತಾದರೂ ಆತ ಅದನ್ನೆಲ್ಲ ಅದುಮಿಕೊಂಡು ಸುಮ್ಮನಿರಬೇಕಾಯಿತು. ಅನೇಕ ಜನರ ಹಿಡಿತಕ್ಕೆ ಸಿಕ್ಕು ಎಂಜಲಿನಂತಾಗಿದ್ದ ಶಿವಗಂಗೆಯನ್ನು ಅವನ ಮನಸ್ಸು ಆಶಿಸದಾಯಿತು. ಸಿದ್ದಗೌಡ ಅವಳ ಹತ್ತಿರ ಪ್ರತಿನಿತ್ಯ ಹೋಗುವ ವಾರ್ತೆ ತಿಳಿದ ತರುವಾಯವಂತೂ ಅವಳ ಯೋಚನೆಯನ್ನೆ ತ್ಯಜಿಸಿಬಿಟ್ಟ ಶರಣಪ್ಪ.

ಜಿಪುಣನಾದ ಸಿದ್ದಗೌಡನಿಂದ ಶಿವಗಂಗೆಗೆ ಒಂದು ಕಾಸೂ ಸಿಕ್ಕುವಂತಿರಲಿಲ್ಲ. ಅಂತೆಯೆ, ಅವಳು ಜೀವನೋಪಾಯಕ್ಕೆಂದು ತಂದೆಯ ಕಾಯಕವನ್ನಾರಂಭಿಸಬೇಕಾಯಿತು. ಪೆಟ್ಟಿಗೆಯಲ್ಲಿ ಬಿದ್ದುಕೊಂಡಿದ್ದ ರಂಪಿಗೆ, ಉಳಿ ಮೊದಲಾದ ಆಯುಧಗಳನ್ನು ಹೊರದೆಗೆದಳು, ಢೋರರ ಮನೆಗೆ ಹೋಗಿ ಒಂದು ರೂಪಾಯಿಯ ಚರ್ಮವನ್ನು ಕೊಂಡು ತಂದಳು, ದಾರವನ್ನು ಮೇಣವನ್ನು ಸಜ್ಜುಗೊಳಿಸಿಕೊಂಡು ಪಾದರಕ್ಷೆಗಳನ್ನು ಸಿದ್ಧಗೊಳಿಸತೊಡಗಿದಳು. ಎರಡು ದಿನಗಳೊಳಗಾಗಿ ಎರಡು ಜತೆ ಪಾದರಕ್ಷೆ

ಗಳನ್ನು ತಯಾರಿಸಿ ರಾಮಾಪುರದ ಸಂತೆಗೊಯ್ದು ಮಾರಿ ಮನೆಗೆ ಬೇಕಾದ ಸಾಮಾನುಗಳನ್ನೂ ಕಾಳುಕಡ್ಡಿಗಳನ್ನೂ ಕೊಂಡು ತಂದಳು.

ಹಾಗೆ ಅವಳ ಬದುಕಿನ ಬಂಡಿ ಕಾಲದ ಹಾದಿಯಲ್ಲಿ ಓಡತೊಡಗಿತು. ಆರು ವರ್ಷಗಳು ಕಳೆದುಹೋದುವು.

ಶಿವಗಂಗೆಯ ಮಗ ಮಹಾದೇವನಿಗೆ ಈಗ ಹದಿಮೂರು ವರ್ಷ ವಯಸ್ಸು. ಘೋರರ ಕಾಳನ ಬಲವಂತದಿಂದಾಗಿ ತನ್ನ ಮಗನನ್ನೂ ಶಾಲೆಗೆ ಕಳುಹಿಸುತ್ತಿದಾಳೆ ಶಿವಗಂಗೆ. ಮಹಾದೇವ ಈಗಾಗಲೆ ಆರನೆಯ ವರ್ಗಕ್ಕೆ ಬಂದಿದ್ದಾನೆ. ಒಂದು ತಿಂಗಳ ಹಿಂದೆಯಷ್ಟೆ ಆ ಊರಿಗೆ ವರ್ಗವಾಗಿ ಬಂದ ಸಾಂಬಯ್ಯ ಮಾಸ್ತರು ಮಹಾದೇವನ ಬುದ್ಧಿವಂತಿಕೆಯನ್ನು ಕಂಡು ಮೆಚ್ಚಿ ಕೊಂಡಿದ್ದಾರೆ. ಹರಿಜನ ಕೇರಿಯವರಿಗೆಲ್ಲ ಈ ವಿಷಯ ಅಭಿಮಾನಕ್ಕೆ ಕಾರಣವಾಗಿದೆ. ತನ್ನ ಜೀವಮಾನದಲ್ಲಿ ಈ ಮೊದಲೆಂದೂ ಅನುಭವಿಸದಿದ್ದ ಹೆಮ್ಮೆಯ ಆನಂದವನ್ನನುಭವಿಸುತ್ತಿದಾಳೆ ಶಿವಗಂಗೆ.

ಹನುಮನ ಮಗಳು ಚಂದ್ರಳೂ ಈಗ ದೊಡ್ಡವಳಾಗಿದ್ದಾಳೆ. ಮಹಾದೇವ ಶಾಲೆಗೆ ಹೋಗುವುದನ್ನು ಕಂಡು ತಾನೂ ಅವನೊಡನೆ ಹೋಗುವುದಾಗಿ ಹಟ ಹಿಡಿಯುತ್ತಾಳೆ. "ನಿನ್ನಂಥವರಿಗೆಲ್ಲಾ ಸಾಲಿ ಯಾತಕ್ಕs ಹುಚ್ಚಮುಂಡೀ!" ಎಂದು ನಗೆಮಾತಿನಿಂದ ಗದರಿಸುತ್ತಾಳೆ ಲಚುಮಿ.

ಕಳೆದ ಮಳೆಗಾಲದಲ್ಲಿ ಶಿವಗಂಗೆಗೆ ಕಟ್ಟಿನ ಜ್ವರ ಅಂಟಿಕೊಂಡುದು ಇನ್ನೂ ಇಳಿಯದಾಗಿದೆ. ಆರು ತಿಂಗಳುಗಳ ಕಾಹಿಲೆ ಅವಳ ದೇಹವನ್ನು ಅರ್ಧಕ್ಕಿಂತಲೂ ಹೆಚ್ಚಾಗಿಯೆ ಕೃಶಗೊಳಿಸಿದೆ. ಭರಮಜ್ಜ ಅರೆದುಕೊಟ್ಟ ಮದ್ದು ಸೇವಿಸಿದರೂ ಜ್ವರದ ಬಾಧೆ ತೊಲಗಲಿಲ್ಲ. ಗೌಡನ ಪೀಡೆಯೊಂದು ಇಲ್ಲವಾಗಿದೆ, ಅಷ್ಟೆ. ಅವಳಿಗೆ ಕಾಹಿಲೆಯಾದಂದಿನಿಂದ ಆತ ಇತ್ತ ಸುಳಿದುದೇ ಇಲ್ಲ. "ನನಗ ಜಡ್ಡಾದದ್ದು ಚಲೋದೇ ಆತು. ಆ ತಾಯಿಗಂಡನ ಕಾಟ ಆದ್ರೂ ತಪ್ಪಿತು," ಎಂದು ಆಗಾಗ ಹೇಳಿಕೊಳ್ಳುತ್ತಾಳೆ ಶಿವಗಂಗೆ.

ಕಾಹಿಲೆಯಾದಂದಿನಿಂದ ಅವಳ ಕಾಯಕಕ್ಕೆ ಮಾತ್ರ ಆತಂಕ ವುಂಟಾಗಿದೆ. ಮೈಯಲ್ಲಿ ಜ್ವರವಿಲ್ಲದಿದ್ದ ದಿನ ಎದ್ದು ಅಲ್ಪಸ್ವಲ್ಪ ಕೆಲಸ ಮಾಡುತ್ತಾಳೆ. ಕೆಲಸಮಾಡುತ್ತ ಕುಳಿತಿದ್ದಾಗಲೇ ಒಮ್ಮೊಮ್ಮೆ ಜ್ವರ ಬರು

ತ್ತದೆ. ಕೈಯಲ್ಲಿ ಉಳಿ ಹಿಡಿದುಕೊಂಡಿದ್ದ ಹಾಗೆಯೆ ನೆಲದ ಮೇಲುರುಳು ತ್ತಾಳೆ. ಲಚುಮಿಯಾಗಲಿ ಹನುಮನಾಗಲಿ ಯಾರಾದರೂ ಬಂದು ಅವಳ ನ್ನೆತ್ತಿ ಚಾಪೆಯ ಮೇಲೆ ಮಲಗಿಸುತ್ತಾರೆ. "ಮೈಯಾಗ ನೆಟ್ಟಗಿಲ್ಲ. ದುಡೀ ಬ್ಯಾಡವ್ವ," ಎಂದು ಉಪದೇಶಿಸುತ್ತಾರೆ. ಶಿವಗಂಗೆ ಹುಸಿನಗು ನಕ್ಕು ಸುಮ್ಮನಾಗುತ್ತಾಳೆ. ದುಡಿಯದಿದ್ದರೆ ನಡೆಯುವಂತಿಲ್ಲ. ಎರಡು ಹೊಟ್ಟೆಗಳು ತುಂಬಬೇಕಲ್ಲ?

ಒಂದು ಸಂಜೆ. ಮಹಾದೇವನಿನ್ನೂ ಶಾಲೆಯಿಂದ ಬಂದಿರಲಿಲ್ಲ. ಪಾದರಕ್ಷೆಯೊಂದನ್ನು ಹೊಲಿಯುತ್ತಲಿದ್ದ ಶಿವಗಂಗೆಗೆ ಒಮ್ಮಿಂದೊಮ್ಮೆಲೆ ಜ್ವರವೇರಿತು. ರಂಪಿಗೆ, ಉಳಿ, ದಾರ ಮೊದಲಾದ ಸಾಮಾನುಗಳನ್ನೆಲ್ಲ ಡಬ್ಬಕ್ಕೆ ತುಂಬಿ ನಡುಗುತ್ತಾ ಎದ್ದು ಹೋಗಿ ಚಾಪೆಯ ಮೇಲೆ ದೇಹವನ್ನೊ ರಗಿಸಿದಳು. ಮಹಾದೇವ ಶಾಲೆಯಿಂದ ಬಂದಾಗ ಅವಳ ಮೈಮೇಲೆ ಪ್ರಜ್ಞೆಯಿರಲಿಲ್ಲ.

ಆತ ಗಾಬರಿಗೊಂಡು ಚಿಮಣಿದೀಪ ಹೊತ್ತಿಸಿದ, ತಾಯಿಯ ಬಳಿ ಕುಳಿತುಕೊಂಡು ಅವಳ ಹಣೆ ಮುಟ್ಟಿ ನೋಡಿದ. ಎಂದಿಗಿಂತ ಹೆಚ್ಚಾಗಿಯೆ ಅಂದು ತಾಯಿಗೆ ಜ್ವರ ಬಂದುದು ಗೊತ್ತಾಗುತ್ತಲೂ ಆತ ಮುಂದೇನು ಮಾಡುವುದೆಂದು ಯೋಚಿಸತೊಡಗಿದ. ನಾಲ್ಕೈದು ದಿನಗಳ ಹಿಂದೆ ಸಾಂಬಯ್ಯ ಮಾಸ್ತರು, ತನ್ನ ತಾಯಿಯ ಕಾಹಿಲೆಯ ವಿಷಯ ತಿಳಿದು ಔಷಧ ಕೊಡುವುದಾಗಿ ಹೇಳಿದ್ದುದು ಅವನ ನೆನಪಿಗೆ ಬಂದಿತು.

ಮಹಾದೇವ ಎದ್ದು ಲಚುಮಿಯ ಗುಡಿಸಲಿಗೆ ಬಂದ. ರೊಟ್ಟಿ ಬೇಯಿ ಸುವುದರಲ್ಲಿ ತೊಡಗಿದ್ದ ಲಚುಮಿ ಅವನನ್ನು ಕಂಡು, "ಏನೋ ಮಾದೇವಾ?" ಎಂದು ಕೇಳಿದಳು.

"ಅವ್ವಗ ಮತ್ತ ಭಯಂಕರ ಜ್ವರಾ ಬಂದೈತೆಲ್ಲ!"

"ಅದೇನು ಬಿಡಪ್ಪ. ಬರುತ್ತೈತಿ, ಹೋಗುತ್ತೈತಿ," ಎಂದಳು ಲಚುಮಿ.

"ನಮ್ಮ ಮಾಸ್ತರು ಔಷಧಾ ಕೊಡುತೀನಂತ ಹೇಳಿದಾರ. ಮೊನ್ನೆ ಅವ್ವನ್ನ ಕೇಳಿದಿ. ಅವರಿಗ್ಯಾಕ ತ್ರಾಸ ಕೊಡೂದು, ಬ್ಯಾಡಾ ಅಂದಳು."

"ಬರೋಬ್ಬರಿ. ಅವರಿಗಾದರೂ ಯಾಕ ತ್ರಾಸ ಪಾಪ!"

"ಅದರಾಗೇನ ತ್ರಾಸ ಐತ್ಯೇ ಚಿಗವ್ವಾ? ಈಗ ನಾ ಹೋಗಿ ಔಷಧಾ ತರಬೇಕಂತ ಮಾಡೀನಿ. ನಾಕೈದು ದಿನಾ ತಗೊಂಡರ ನೆಟ್ಟಗಾಗುತ್ತೈತಂತೆ."

"ಹಂಗಾದರ ತಾ ಹೋಗು," ಎಂದಿಷ್ಟೆ ನುಡಿದು ಲಚುಮಿ ರೊಟ್ಟಿಯ ಹಿಟ್ಟನ್ನು ನಾದತೊಡಗಿದಳು.

ಔಷಧವನ್ನು ತಂದು ತಾಯಿಗೆ ಕೊಟ್ಟದ್ದಾಯಿತು.

ಎರಡು ದಿನ ಕಳೆದುವು. ಜ್ವರವಿಳಿಯಲಿಲ್ಲ.

"ಇನ್ನೂ ಜ್ವರ ಬಿಟ್ಟಿಲ್ಲ ಮಾಸ್ತರೇ," ಎಂದು ಮಹಾದೇವ ಆಳುದನಿ ಯಲ್ಲಿ ಹೇಳಿದಾಗ ಅವರು ತಲೆ ಕೆರೆದುಕೊಂಡು ಒಂದು ನಿಮಿಷ ಸುಮ್ಮನಿದ್ದು ಅನಂತರ ಹೇಳಿದರು:

"ಅದು ಎಂಥಾ ಜ್ವರವೋ ಸರಿಯಾಗಿ ನೋಡಿ ಔಷಧ ಕೊಡ ಬೇಕಪ್ಪಾ. ಇವತ್ತು ನಿಮ್ಮ ಮನೆಗೆ ಬರ್ತೀನಿ."

ಮಹಾದೇವ ಓಡುತ್ತಾ ಮನೆಗೆ ಬಂದು ಆ ವಾರ್ತೆಯನ್ನು ಬೀರಿದ.

"ಛಿ. ಛಿ. ನಮ್ಮಂಥಾವರ ಮನಿಗೆ ಅವರನ್ಯಾಕ ಕರಕೊಂಡು ಬರುತೀ? ಬ್ಯಾಡ, ಬ್ಯಾಡ. ಇಲ್ಲಿ ಕುಂಡ್ರೂದಕ್ಕ ಜಾಗ ಇಲ್ಲ ನೆಟ್ಟಗs," ಎಂದು ಶಿವಗಂಗೆ ತನ್ನ ಅಸಮ್ಮತಿಯನ್ನು ವ್ಯಕ್ತಗೊಳಿಸಿದಳು.

ಮಾಸ್ತರು ಬರದಿರಲಿಲ್ಲ. ಬಂದವರೇ ಶಿವಗಂಗೆಯನ್ನು ಪರೀಕ್ಷಿಸಿ ನೋಡಿ ಮಹಾದೇವನನ್ನು ಕರೆದುಕೊಂಡು ಹೊರಟುಹೋದರು. ಅರ್ಧ ಗಂಟೆಯ ತರುವಾಯ ಔಷಧದೊಡನೆ ಹಿಂದಿರುಗಿದ ಮಹಾದೇವ.

ಚಿಮಣಿಯಲ್ಲಿನ ಎಣ್ಣೆಯೆಲ್ಲವೂ ತೀರಿಹೋಗಿತ್ತು. ಹನುಮನ ಮನೆ ಯಲ್ಲಿ ಸ್ವಲ್ಪ ಎಣ್ಣೆಯನ್ನು ಸಾಲ ತರುವುದೆಂದು ಅಲ್ಲಿಗೆ ಬಂದ ಮಹಾದೇವ. ಅಲ್ಲಿಯೂ ದೀಪವುರಿಯುತ್ತಿರಲಿಲ್ಲ. ಒಲೆಯೆದುರಿಗೆ ಚಂದ್ರಳೊಬ್ಬಳೇ ಬಿಕ್ಕುತ್ತ ಬಿಕ್ಕುತ್ತ ಕುಳಿತಿದ್ದಳು.

"ಯಾಕಳುತೀ ಚಂದ್ರೂ? ಮಾವ ಎಲ್ಲಿದಾನ?"

ಹನುಮನನ್ನು ಅವನು 'ಮಾವ' ಎಂದು ಕರೆಯುತ್ತಿದ್ದ.

"ಈಗ ಎಲ್ಲಿಗೋ ಹೋದವ ಇನ್ನೂ ಬಂದಿಲ್ಲ," ಎಂದಳು ಚಂದ್ರವ್ವ.

"ಕುಡಿದು ಬಿದ್ದಿದ್ದಾನು ಎಲ್ಲಾದರೂ," ಎಂದುಕೊಳ್ಳುತ್ತ ಮಹಾದೇವ ಪೂಜಾರಿಯ ಮನೆಗೋಡಿದ.

ಪೂಜಾರಿಯ ಮನೆಯಲ್ಲಿ ಎಣ್ಣೆ ಕೇಳಿ ತುಂಬಿಕೊಂಡು ಚಿಮಣಿಯನ್ನು ಹೊತ್ತಿಸಿಕೊಂಡು ಮತ್ತೆ ತಮ್ಮ ಗುಡಿಸಲಿಗೆ ಧಾವಿಸಿದ. ಒಲೆಯಲ್ಲಿ ಬೆಂಕಿ ಕಾಯಿಸಿ, ಗಡಿಗೆಯಲ್ಲಿ ನೀರು ತುಂಬಿ ಒಲೆಯ ಮೇಲಿಟ್ಟು ತಾಯ ಬಳಿ ಬಂದು ನಿಧಾನವಾಗಿ ಅವಳನ್ನೆಬ್ಬಿಸಿದ.

"ಅವ್ವಾ, ಅವ್ವಾ."

"ಏನಪಾ ಮಗನೇ ?"

"ಏಳವ್ವಾ. ಔಷಧಾ ತಂದೀನಿ. ಎದ್ದು ಕುಡಿ."

ಶಿವಗಂಗೆ ಮಗನನ್ನು ಹತ್ತಿರಕ್ಕೆಳೆದುಕೊಂಡು ಅವನ ಬೆನ್ನ ಮೇಲೆ ಕೈ ಆಡಿಸುತ್ತ ನುಡಿದಳು: "ಹರೀವತ್ತಿನಿಂದ ಏನೂ ಉಂಡಿಲ್ಲ ನೀ. ಮೊದಲು ಅನ್ನಾ ಮಾಡಿಕೊಂಡು ಉಣ್ಣಪಾ. ಹೊಟ್ಟೆ ಹಸಿದಿದ್ದೀತು."

"ನೀನೂ ಒಂದೀಟು ಉಣ್ಣಾಕಬೇಕವ್ವಾ. ಅನ್ನಾ ಉಣ್ಣಿಸಿದ ಮ್ಯಾಲs ಔಷಧಾ ಕುಡಿಸಬೇಕಂತ ಹೇಳಿದಾರ ಮಾಸ್ತರು," ಎಂದು ಹೇಳುತ್ತಾ ಮಹಾದೇವ ಮೇಲಕ್ಕೆದ್ದು ಪೆಟ್ಟಿಗೆಯನ್ನು ತೆರೆದು ಅದರಲ್ಲಿದ್ದ ಗಡಿಗೆಯೊಂದರಲ್ಲಿ ಕೈ ಹಾಕಿದ. ನವಣೆಯಕ್ಕಿಯನ್ನಿಡುವ ಆ ಗಡಿಗೆ ಪೂರ್ತಿಯಾಗಿ ಬರಿಯದಾಗಿತ್ತು.

"ಅಕ್ಕಿಯೆಲ್ಲಾ ತೀರಿಹೋಗ್ಯೆತಿ ಅವ್ವಾ."

"ಹೌದೌದು. ನಾ ಮರತೇಬಿಟ್ಟಿದ್ದಿನಿ. ನಿನ್ನೆ ರಾತ್ರಿಗೇ ತೀರಿಹೋಗಿತ್ತಲ್ಲ? ನಾ ಹೀಂಗ ಮಲಗಿಬಿಟ್ಟೆನಿ. ಕೆಲಸ ನಿಂತು ಹೋತು. ಮುಂದ ಹೆಂಗ ಮಾಡೂದು ಮಗನೇ ?"

ಆ ವೇಳೆಗೆ ಹನುಮನ ಮಗಳು ಚಂದ್ರಾ ಇವರ ಬಾಗಿಲಿನಲ್ಲಿ ಬಂದು ನಿಂತು ಕೇಳಿದಳು :

"ಹಸಿವಿ ಬಾಳ ಆಗ್ಯೆತಿ ಅತ್ತೀ. ಏನಾರ ಕೊಡು ಒಂದೀಟು."

ಮಹಾದೇವನ ಕಣ್ಣುಗಳಿಂದ ದಳದಳನೆ ನೀರು ಸುರಿಯತೊಡಗಿತು. ಚಂದ್ರಳಿಗೆ ಏನು ಹೇಳಬೇಕು ?

ಅಷ್ಟರಲ್ಲಿ ಲಚುಮಿ ಬಂದು ಅವಳನ್ನು ತನ್ನ ಗುಡಿಸಲಿಗೆ ಕರೆದೊಯ್ದಳು. ಮಹಾದೇವನನ್ನು ಮಾತ್ರ ಆಕೆ ಕರೆಯಲಿಲ್ಲ. ಶಿವಗಂಗೆಗೆ ಸಾಲ ಕೊಟ್ಟು ಕೊಟ್ಟು ಅವಳಿಗೂ ಬಲು ಬೇಸರವಾಗಿತ್ತು.

ಯಾರ ಮನೆಯಲ್ಲಾದರೂ ಸ್ವಲ್ಪ ಅಕ್ಕಿ ಸಾಲವಾಗಿ ದೊರೆಯಬಹುದೆಂಬ ಆಸೆಯಿಂದ ಮಹಾದೇವ ಗುಡಿಸಲನ್ನು ತ್ಯಜಿಸಿ ಹೊರಟ. ಮೊದಲು ಪೂಜಾರಿ ಮಾದನ ಮನೆಗೆ ಬಂದುದಾಯಿತು. ಚಿಲುಮೆ ಸೇದುತ್ತ ಅಂಗಳದಲ್ಲಿ ಕುಳಿತಿದ್ದ ಮಾದ ಇವನನ್ನು ಕಂಡೊಡನೆ ಹುಬ್ಬು ಗಂಟುಹಾಕಿ, "ಮತ್ಯಾಕ ಬಂದಿಯೋ?" ಎಂದು ಕೇಳಿದ.

"ಅವ್ವಾಗ ಬಾಳ ಜ್ವರಾ ಮಾದಣ್ಣಾ. ಮನ್ಯಾಗ ಏನೂ ಇಲ್ಲ ಉಣ್ಣಾಕ."

"ಇಲ್ಲದಿದ್ದರ ಇಲ್ಲ. ನಾಯೇನ ಮಾಡಲಿ? ನಾನರೆ ಏನ ಸಾವುಕಾರನೇನ?"

"ಏನಾದರೂ ಕೊಡಪಾ ಮಾದಣ್ಣಾ."

"ಕೊಟ್ಟರ ಜೀವಾನs ಕೊಡಬೇಕು ನೋಡು," ಎಂದು ಆಕ್ಕಸದಿಂದ ನುಡಿದ ಮಾದಣ್ಣ.

ಒಂದೆರಡು 'ದಂ' ಎಳೆದು ಜುರಜುರನೆ ಹೊಗೆ ಕಾರುತ್ತ ಮತ್ತೆ ಹೇಳಿದ ಮಾದಣ್ಣ:

"ಮಧ್ಯಾನದಾಗ ಒಂದು ಎಮ್ಮಿ ಕೊಯ್ಯಾಕ ಹತ್ತಿದರು ನೋಡಪಾ. ಭರಮಜ್ಜನ್ನ ಕೇಳು ಹೋಗು. ಏನಾದರೂ ಕೊಟ್ಟಾನು."

ಮಹಾದೇವ ಭರಮಜ್ಜನ ಗುಡಿಸಲಿಗೆ ಬಂದಾಗ ಅಜ್ಜನ ಮಕ್ಕಳು ಮೊಮ್ಮಕ್ಕಳು ಎಲ್ಲರೂ ಒಲೆಯ ಸುತ್ತಲೂ ಕುಳಿತು ಎಲುಬಿನ ಚೂರುಗಳನ್ನು ನೆಕ್ಕುತ್ತಿದ್ದರು. ಬಾಗಿಲಲ್ಲಿ ಬಂದು ನಿಂತ ಮಹಾದೇವನನ್ನು ಯಾರೂ ಗಮನಿಸಲಿಲ್ಲ.

"ಅಜ್ಜಾ," ಎಂದು ಕೂಗಿದ ಮಹಾದೇವ.

ಆಗಲೂ ಅವರ ದೃಷ್ಟಿ ಅವನತ್ತ ತಿರುಗಲಿಲ್ಲ.

"ಅಜ್ಜಾ, ಏ ಅಜ್ಜಾ."

ಎಲುಬಿನ ತುಣುಕಿಗೆ ಅಂಟಿಕೊಂಡಿದ್ದ ಮಾಂಸವನ್ನು ಹೀರುವುದರಲ್ಲಿ ಮೈಮರೆತಿದ್ದ ಮುದುಕ ತಲೆಯೆತ್ತಿ ನೋಡಿದ. ಬಾಗಿಲಲ್ಲಿ ಯಾರೋ ಬಂದು ನಿಂತುಕೊಂಡದ್ದು ಕಾಣಿಸುತ್ತಲೂ ಕೈಯಲ್ಲಿದ್ದ ಎಲುಬಿನ ತುಣುಕನ್ನು ಥಟ್ಟನೆ ಬೆನ್ನಹಿಂದೆ ಮರೆಯಾಗಿ ಹಿಡಿದು ಬೇಸರದ ದನಿಯಲ್ಲಿ ಕೇಳಿದ:

"ಯಾಕೋ, ಇಂಥಾ ವ್ಯಾಳ್ಯೇಕ್ಕ ಬಂದಿ?"

"ಮಧ್ಯಾನದಾಗ ದನಾ ಕಡಿದೀರಂತಲಾ, ಏನಾರ ಉಳಿದಿದ್ರ ಕೊಡಂತ ಹೇಳಿದಾನ ಮಾದಣ್ಣ."

"ಹೂಂ! ಕೇರಿಗೆಲ್ಲಾ ರಾಜಾ ಆದನೇನವ ಮಾದ್ಯಾ? ಕೊಡು ಅಂದರ ಎಲ್ಲಿಂದಾ ಕೊಡೂದದು? ಮಧ್ಯಾನದಾಗ ಕೊಯ್ದದ್ದು ಮಧ್ಯಾನದಾಗs ಮುಗದುಹೋತು."

"ಒಂದಿಷ್ಟಾದ್ರೂ ಕೊಡಪಾ ಅಜ್ಜಾ. ಒಂದೀಟು ನವಣೆಕ್ಕಿ ಇದ್ದರ ಅದನ್ನಾ ಕೊಡು. ಅವ್ವಗ ಔಷಧ ಕೊಡೂದೈತಿ. ಅನ್ನಾ ಉಣಿಸಿದ ವ್ಯಾಲs ಔಷಧ ಕೊಡೂದಂತ ಹೇಳಿದಾರ ಮಾಸ್ತರು."

ಭರಮಜ್ಜ ಎದ್ದು ಬಾಗಿಲ ಬಳಿ ಬಂದು, ತನ್ನ ಕೈಲಿದ್ದ ಎಲುಬಿನ ತುಣುಕನ್ನು ಮಹಾದೇವನಿಗೆ ಕೊಡುತ್ತ ಇಳಿದ ದನಿಯಲ್ಲಿ ಹೇಳಿದ:

"ಮೂರು ದಿನದಿಂದ ನಾವೂ ಯಾರೂ ಅನ್ನಾ ಕಂಡಿಲ್ಲಪಾ ಮಾದೇವಾ. ನಮ್ಮ ಮನಿಯಾಗಾದರೂ ಎಲ್ಲೈತಿ ಅಕ್ಕಿ?"

ಮಹಾದೇವ ಮತ್ತೊಂದು ಮಾತನಾಡದೆ ಮನೆಗೆ ಬಂದ.

"ಏನಾದರೂ ಸಿಕ್ಕಿತೇನೋ ಮಗನೇ?" ಎಂದು ತಾಯಿ ಕೇಳಿದಳು.

"ಒಂದು ಎಲುಬು ಸಿಕ್ಕಿತವ್ವ."

"ಎಲುಬು?"

"ಹೂಂ. ಎಲುಬು."

ಸ್ವಲ್ಪ ಹೊತ್ತು ಮೌನವಾಗಿದ್ದು ಮಹಾದೇವನೆಂದ:

"ಹೀಂಗs ಎಷ್ಟು ದಿನ ಅಂತ ನಡದೀತವ್ವಾ? ನಾನೂ ಏನಾರೆ ಕೆಲಸಕ್ಕ ಹೋಗುತೀನಿ."

"ಸಾಲಿ ?"

"ಸಾಲೀನೂ ಮಾಡಿಕೊಂಡು ಕೆಲಸಾನೂ ಮಾಡೂದು. ಸಾವುಕಾರರ ಸಂಗಣ್ಣ ಅದಾನಲ್ಲಾ, ಅವನೂ ನಾನೂ ಕೂಡೇ ಇದೀವಿ ಸಾಲಿಯೊಳಗ. ತಮ್ಮಪ್ಪನ್ನ ಕೇಳಿ ತೋಟದಾಗ ಏನಾರೆ ಕೆಲಸಾ ಕೊಡಿಸುತೀನಂತ ಅವ ಹೇಳಿದಾನ."

"ಕೆಲಸಕ್ಕ ಹೋದರ ಸಾಲಿಯ ಅಭ್ಯಾಸ ಯಾವಾಗ ಮಾಡುವವನಪ್ಪಾ ?"

"ರಾತ್ರಿ ಕುಂತು ಮಾಡಾಕ ಬಂದೀತು."

ಶಿವಗಂಗೆ ಮಾತನಾಡಲಿಲ್ಲ. ಬಾಗಿಲನ್ನು ಮುಚ್ಚಿ, ದೀಪವನ್ನಾರಿಸಿ ಮಹಾದೇವನೂ ಮಲಗಿಕೊಂಡ. ಬೆಳಗಿನಿಂದ ಅವನ ಹೊಟ್ಟೆಗೆ ಏನೂ ಬಿದ್ದಿರಲಿಲ್ಲವಾದುದರಿಂದ ಹಸಿವು ಹಾಹಾಕಾರಕ್ಕಾರಂಭಿಸಿತ್ತು. ಅಂಥ ಸ್ಥಿತಿಯಲ್ಲಿ ಅವನಿಗೆ ನಿದ್ದೆ ಬರುವುದು ಸಾಧ್ಯವಿರಲಿಲ್ಲ.

ಮಗನ ಕಡೆ ಹೊರಳಿ, ಅವನ ಎದೆಯ ಮೇಲೆ ಕೈಯಾಡಿಸುತ್ತ ಶಿವಗಂಗೆ ಕೇಳಿದಳು :

"ಬಾಳ ಸಂಕಟ ಆಗುತೈತೇನೋ ತಮ್ಮಾ ?"

"ಏನಿಲ್ಲವ್ವ. ನೀ ಮಲಕ್ಕೋ ಸುಮ್ಮನ."

"ಇದೊಂದು ರಾತ್ರಿ ಹೆಂಗಾದರೂ ತಡಕೋ ತಮ್ಮಾ. ನಾಳೆ ಎದ್ದವಳೇ ಎಲ್ಲಾದರೂ ಹಿಟ್ಟು ಇಸುಕೊಂಡು ಬಂದು ರೊಟ್ಟಿ ಮಾಡುತೀನಿ. ತಿಂದು ಸಾಲಿಗೆ ಹೋದೀಯಂತೆ."

"ನಮ್ಮ ಕೇರಿಯೊಳಗ ಹಿಟ್ಟು ಕೊಡುವಂಥವರಾದರೂ ಯಾರಿದಾರವ್ವ ? ಅವರದು ಅವರಿಗೆ ಸಾಕಾಗೈತಿ."

"ಹೂಂ. ಅದೂ ಖರೇನ"

"ಬ್ಯಾರೆ ಜಾತಿಯವರು ನಮ್ಮನ್ನ ಮುಟ್ಟಿಸಿಕೊಳ್ಳೂದಿಲ್ಲ. ಹೊಲೇರು ನಾವು ಏನು ಪಾಪಾ ಮಾಡಿದೇವ ಅವ್ವಾ ?"

"ಹಿಂದಿನ ಜಲ್ಮದಾಗ ಬಾಳ ಪಾಪಾ ಮಾಡಿದವರು ಈ ಜಲ್ಮದಾಗ ಹೊಲೇರಾಗಿ ಹುಟ್ಟಿದಾರ."

"ಹೂಂ. ನಮ್ಮ ಹೆಡ್ ಮಾಸ್ತರು ಯಂಕಟರಾಯರೂ ಮೊನ್ನೆ ಹಿಂಗs ಹೇಳುತಿದ್ದರು ಅವ್ವಾ. ನಾವೆಲ್ಲಾ ಭಯಂಕರ ಪಾಪಾ ಮಾಡಿದವರಂತ."

"ಅವರನ್ನೂದು ಖರೇ ಅಪ್ಪ."

"ಸಾಂಬಯ್ಯ ಮಾಸ್ತರು ಹಂಗ ಅನ್ನುವದಿಲ್ಲವ್ವ. ಪಾಪಾನೂ ಇಲ್ಲ, ಏನೂ ಇಲ್ಲ, ಇದನ್ನೆಲ್ಲಾ ಮ್ಯಾಲಿನ ಜಾತಿಯವರೇ ಮಾಡಿದಾರ ಅಂತ ಅನ್ನುತಾರ. ಮನು ಅಂತ ಒಬ್ಬ ಋಷಿ ಇದ್ದನಂತ. ಅವ ಮಾಡಿದ್ದಂತ ಈ ರಾಡೀನೆಲ್ಲಾ."

ಅಂಥ ಸಮಯದಲ್ಲೂ ಶಿವಗಂಗೆಯ ಎದೆಯುಬ್ಬಿ ಬಂತು, ಅಭಿಮಾನ ದಿಂದ. ಮಗನ ತಲೆಯನ್ನು ನೇವರಿಸುತ್ತಾ ಹೇಳಿದಳು: "ಎಷ್ಟೆಷ್ಟು ಕಲಿತೀಯೋ ಮಾದೇವಾ! ಎಷ್ಟು ಶ್ಯಾಣ್ಯಾ ಆಗೀಯಲ್ಲಾ!"

"ಸಾಂಬಯ್ಯ ಮಾಸ್ತರು ಹೇಳಿದರವ್ವಾ ಇದನ್ನೆಲ್ಲಾ. ಅವರು ಬಾಳ ವಿದ್ಯಾ ಕಲಿತಾರ. ದೊಡ್ಡ ದೊಡ್ಡ ಪುಸ್ತಕಾ ಓದುತಾರ. ನೀನೂ ಕಲಿತು ಓದಬೇಕಪ್ಪಾ ಅಂತ ಮ್ಯಾಲಿಂದ ಮ್ಯಾಲ ಹೇಳುತಿರುತಾರ ನನಗ."

೧೧

ಸಾಂಬಯ್ಯ ಮಾಸ್ತರರು ಮರಡಿಹಳ್ಳಿಗೆ ವರ್ಗವಾಗಿ ಬಂದುದಕ್ಕೆ ಕೆಲವೇ ತಿಂಗಳುಗಳು ಕಳೆದಿವೆಯಾದರೂ ಅಷ್ಟರಲ್ಲಿಯೆ ಊರಿನವರ ಗೌರವಾದರಗಳನ್ನು ಗಳಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗಂತೂ ಅವರ ಬಗೆಗೆ ತುಂಬ ಪ್ರೀತಿ. ಮುಖ್ಯಾಧ್ಯಾಪಕರಾದ ವೆಂಕಟರಾಯರನ್ನು ಕಂಡರೆ ಹುಡುಗರಿಗೆಲ್ಲ ದಿಗಿಲು. ಅವರ ಬೆತ್ತದ ಏಟಿಗೂ ತೀಕ್ಷ್ಣ ದೃಷ್ಟಿಗೂ ಹರಿತವಾದ ಮಾತಿಗೂ ಎಲ್ಲರೂ ಭಯಪಡುತ್ತಾರೆ. ಸಾಂಬಯ್ಯನವರು ಮಾತ್ರ ಯಾರಿಗೂ ಬಿರುಸು ಮಾತು ಆಡುವುದಿಲ್ಲ. ತಪ್ಪುಮಾಡಿದ ವಿದ್ಯಾರ್ಥಿಗಳನ್ನೂ ಸಹ ನಗೆಮಾತಿನಿಂದಲೇ ಸುಧಾರಿಸುವ ಕಲೆಯನ್ನವರು ಚೆನ್ನಾಗಿ ಬಲ್ಲರು. ಹಳ್ಳಿಗರ ಜತೆಗೂ ಅವರದು ಸದಾ ಸದ್ವರ್ತನೆಯೇ. ಸಣ್ಣವರು ದೊಡ್ಡವರೆಂದು ಭೇದಭಾವಮಾಡದೆ, ಶ್ರೀಮಂತರು ಬಡವರೆನ್ನದೆ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುತ್ತಾರೆ. ಯಾರನ್ನು ಕಂಡರೂ ನಮಸ್ಕಾರ ಮಾಡುತ್ತಾರೆ, ಕುಶಲ ಪ್ರಶ್ನೆಗಳನ್ನು ಕೇಳುತ್ತಾರೆ, ಸುಖದುಃಖಗಳ ವಿಚಾರಣೆ ಮಾಡುತ್ತಾರೆ, ತಮಗೆ ತಿಳಿದ ಅಲ್ಪಸ್ವಲ್ಪ ವೈದ್ಯವಿದ್ಯೆಯನ್ನು ಪಯೋಗಿಸಿ ರೋಗಿಗಳನ್ನು ಪಚರಿಸುತ್ತಾರೆ, ರೈತರಿಗೆ ಕಾಗದಪತ್ರಗಳನ್ನು ಬರೆದು ಕೊಡುತ್ತಾರೆ.

ಹಳ್ಳಿಯ ನಡುವೆ, ಬಸವಣ್ಣದೇವರ ಗುಡಿಯ ಪಕ್ಕದಲ್ಲಿರುವ ಚಿಕ್ಕ ಮನೆಯೊಂದರಲ್ಲಿ ಅವರು ನೆಲಸಿರುವುದು. ಮನೆಯಲ್ಲಿ ಅವರೊಬ್ಬರೇ ಒಬ್ಬರು. ಹತ್ತು ವರ್ಷಗಳ ಹಿಂದೆ ಅವರ ಪತ್ನಿಯೂ ಹನ್ನೆರಡು ವರ್ಷಗಳ ಹಿಂದೆ ಅವರ ಏಕಮಾತ್ರ ಪುತ್ರನೂ ತೀರಿಕೊಂಡರಂತೆ. ಅಂದಿನಿಂದಲೂ ಮಾಸ್ತರರು

ವಿರಕ್ತರಂತೆ ಜೀವನ ಸಾಗಿಸುತ್ತ ಬಂದಿದ್ದರು. ಅವರ ಪೆಟ್ಟಿಗೆಯು ತುಂಬಾ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಸ್ತಕಗಳು ತುಂಬಿಕೊಂಡಿದ್ದುವು. ರಾಮಾಯಣ, ಮಹಾಭಾರತ, ಭಗವದ್ಗೀತೆ, ಶರಣರ ವಚನಗಳು, ಚರಿತ್ರೆಗಳು, ಶಿವಲೀಲಾಮೃತ, ನಿಜಗುಣ ಶಿವಯೋಗಿಯ ಪದ್ಯಗಳು ಇತ್ಯಾದಿ ಇತ್ಯಾದಿ. ಬೆಳಗಿನ ಜಾವದಲ್ಲಿ ಮೂರು ಗಂಟೆಗೇ ಎದ್ದು ಓದುತ್ತ ಕುಳಿತುಕೊಳ್ಳುವುದು ಅವರಿಗೆ ಅಭ್ಯಾಸವಾಗಿದೆ. ಆರುಗಂಟೆಯಾಗುವುದರೊಳಗಾಗಿ ಸ್ನಾನ ಶಿವಪೂಜೆ ಮುಗಿಯುತ್ತವೆ. ಅನಂತರ ಒಲೆಗೆ ಉರಿಯಿಟ್ಟು ಅಡುಗೆ ಮಾಡುತ್ತಾರೆ. ಮಧ್ಯಾಹ್ನದ ಬಿಡುವಿನಲ್ಲಿ ಊಟ. ಸಾಯಂಕಾಲ ಸ್ವಲ್ಪ ಹಾಲು ಸೇವಿಸುವುದೆಷ್ಟೊ ಅಷ್ಟೆ. ಊಟವಿಲ್ಲ.

ಐವತ್ತರ ಗಡಿಯನ್ನು ದಾಟಿದ ವಯಸ್ಸು ಮಾಸ್ತರರದು. ಗಡ್ಡ ಮಿಾಸೆ ತಲೆಗೂದಲು ಎಲ್ಲ ಬೆಳ್ಳಗಾಗಿವೆ. ಅನೇಕ ವರ್ಷಗಳಿಂದ ಸಾತ್ವಿಕ ಜೀವನ ಸಾಗಿಸುತ್ತ ಬಂದುದರ ಫಲವಾಗಿ ಅವರ ಮುಖದ ಮೇಲೆ ಉದಾತ್ತವಾದ ಭಾವ ಮನೆಮಾಡಿದೆ. ತುಟಿಗಳ ಮೇಲೆ ಸದಾಕಾಲವೂ ನೆಲಸಿರುತ್ತದೆ ಮುಗ್ಧವಾದ ನಗೆ.

ಭಾನುವಾರದ ರಜೆಯ ದಿನವನ್ನು ಅವರು ನೂಲುವುದರಲ್ಲಿ ಕಳೆಯುತ್ತಾರೆ. ತಾವು ನೂತ ನೂಲಿನಿಂದಲೇ ನೇಯಲ್ಪಟ್ಟ ಬಟ್ಟೆಗಳನ್ನು ಧರಿಸುತ್ತಾರೆ. ವರ್ಷಕ್ಕೆರಡು ಧೋತರಗಳು, ಎರಡು ಅಂಗಿಗಳು, ಎರಡು ಅಂಗವಸ್ತ್ರಗಳು, ಎರಡು ಪಾವುಡಗಳು, ಎರಡು ಹೊದ್ದಿಕೆಗಳು. ಹೆಚ್ಚಾಗಿ ಮಿಕ್ಕಿದ ಬಟ್ಟೆಯನ್ನು ಬಡ ವಿದ್ಯಾರ್ಥಿಗಳಿಗೆ ಕೊಟ್ಟುಬಿಡುತ್ತಾರೆ. ಅವರ ಸಂಬಳದಲ್ಲಿನ ಬಹುಭಾಗವೂ ಹಾಗೆಯೆ ಬಡವರಿಗಾಗಿ ವಿನಿಯೋಗವಾಗುತ್ತದೆ. ಸಂಗ್ರಹ ಮಾಡುವುದು ಮಹಾಪಾಪ ಎಂದು ಮಾಸ್ತರರ ದೃಢ ನಂಬಿಕೆ. ನಾಳೆಯೇನೊ, ನಾಡಿದ್ದು ಏನೊ ಎಂಬ ಚಿಂತೆ ಅವರನ್ನೆಂದೂ ಪೀಡಿಸಿದುದಿಲ್ಲ. "ಹಿಂಗ್ಯಾಕ ಅವರಿವರಿಗೆ ರೊಕ್ಕ ಕೊಡ್ತೀರಿ ಮಾಸ್ತರೇ? ನಾಳೆ ನೀವು ಮುದುಕರಾದ ಮ್ಯಾಲಿ ಏನಾದರೂ ಆಧಾರವಾಗಿ ಇರಲಿ," ಎಂದು ಯಾರಾದರೂ ಹೇಳಿದಾಗ ಸಾಂಬಯ್ಯ ಮಾಸ್ತರು ನಗುತ್ತ ನುಡಿಯುತ್ತಾರೆ

"ಕೋಟ್ಯನುಕೋಟಿ ಜೀವಗಳನ್ನ ನೋಡಿಕೊಳ್ಳುವ ಶಿವ ನನ್ನೊಬ್ಬನನ್ನ ನೋಡಿಕೊಳ್ಳಲಾರನೇನು?"

ವರ್ಗದ ವಿದ್ಯಾರ್ಥಿಗಳಲ್ಲೆಲ್ಲ ಕುಶಾಗ್ರಮತಿಯಾದ ಮಹಾದೇವನ ಬಗೆಗೆ ಸಾಂಬಯ್ಯ ಮಾಸ್ತರರಿಗೆ ಸಹಜವಾಗಿಯೆ ಬಹಳ ಪ್ರೀತಿ. ಆತ ಹರಿಜನ ಬಾಲಕನೆಂಬ ಕಾರಣದಿಂದಾಗಿ ಅವನ ವಿಚಾರವಾಗಿ ಅವರಿಗೆ ವಿಶೇಷ ಆಸಕ್ತಿ. ಅವನನ್ನು ಆಗಾಗ ಮನೆಗೆ ಕರೆದೊಯ್ದು ಊಟಕ್ಕೆ ನೀಡಿ ಹಲವಾರು ವಿಷಯುಗಳನ್ನು ತಿಳಿಸಿ ಹೇಳಿದ್ದಾರೆ. "ಸಾಲೆ ಕಲಿತು ಜಾಣ ನಾಗಬೇಕು. ನಿಮ್ಮ ಜಾತಿಯ ಜನರ ಸೇವೆ ಮಾಡಬೇಕು," ಎಂದು ಉಪದೇಶ ಮಾಡಿದ್ದಾರೆ. ತನಗೆ ತಿಳಿಯದ ವಿಷಯುಗಳನ್ನೆಲ್ಲ ಮಾಸ್ತರ ರಿಂದ ತಿಳಿದುಕೊಳ್ಳುತ್ತಿದಾನೆ ಮಹಾದೇವ.

ಅಂದು ಬೆಳಿಗ್ಗೆ ಮಹಾದೇವ ಮಾಸ್ತರರ ಮನೆಗೆ ಬಂದಾಗ ಆಗತಾನೆ ಒಲೆ ಹೊತ್ತಿಸಿ ಅನ್ನಕ್ಕೆ ಎಸರಿಡುತ್ತಿದ್ದ ಅವರು, "ಏನಯ್ಯಾ, ಇಷ್ಟು ಬೇಗ ಬಂದೆ? ನಿನ್ನ ತಾಯಿಗೆ ಈಗ ಹ್ಯಾಗದೆ?" ಎಂದು ಕೇಳಿದರು.

"ಇನ್ನೂ ಜ್ವರ ಬಿಟ್ಟಿಲ್ಲರೀ."

"ಔಷಧ ಕೊಟ್ಟೆಯೋ ಇಲ್ಲವೋ?"

ಮಾಸ್ತರರೆದುರಿಗೆ ಸುಳ್ಳು ಹೇಳಲಾಗಲಿಲ್ಲ ಮಹಾದೇವನಿಗೆ. ತಮ್ಮ ಮನೆಯ ನೈಜ ಸ್ಥಿತಿಯನ್ನೆಲ್ಲ ವಿವರಿಸಿ,

"ನಾನೂ ಏನಾರೆ ಕೆಲಸ ಮಾಡಬೇಕಂತ ಮಾಡೀನ್ರಿ, ಮಾಸ್ತರರೆ," ಎಂದು ಆತ ಹೇಳಿದ.

"ಕೆಲಸ? ಏನು ಕೆಲಸ?"

"ಸಾವುಕಾರ ಶರಣಪ್ಪನವರ ತೋಟದಾಗ ಒಂದೆರಡು ತಾಸು ಕೆಲಸ ಮಾಡಿದರ ಮನಿಯ ಖರ್ಚು ನಡದೀತು."

"ಕೆಲಸ ಮಾಡುವದೇನೋ ಒಳ್ಳೆಯದೇ. ಆದರೆ ತೋಟದ ಕೆಲಸಕ್ಕೆ ಯಾಕ ಹೋಗಬೇಕು? ನಿಮ್ಮದೇ ಉದ್ಯೋಗ ಮಾಡಿದರೂ ನಡೆದೀತಲ್ಲ? ಮೊಚ್ಚೆ ಹೊಲಿಯುವದಕ್ಕೆ ಬರುವದಿಲ್ಲೇನು ನಿನಗೆ?"

"ನಾನಿನ್ನೂ ಅದನ್ನ ಕಲಿತಿಲ್ಲರಿ."

"ಮೊದಲು ಅದನ್ನ ಕಲಿಯಬೇಕಪ್ಪ. ವಾರಕ್ಕೆ ಒಂದು ಜತೆ ತಯಾರಿಸಿದರೂ ಸಾಕಲ್ಲ! ಮನೆಯೊಳಗೇ ಕುಳಿತು ಕೆಲಸ ಮಾಡಬಹುದು."

ಆ ವಿಚಾರವೇ ಉಚಿತವಾದುದೆಂದು ಮಹಾದೇವನಿಗೂ ಮನವರಿಕೆಯಾಯಿತು. ತೋಟದ ಕೆಲಸದ ಯೋಚನೆಯನ್ನು ತ್ಯಜಿಸಿ ಆತ ಮೊಚ್ಚೆ ಹೊಲಿಯುವುದನ್ನೆ ಅಭ್ಯಸಿಸತೊಡಗಿದ. ಚರ್ಮವನ್ನು ಕೊಳ್ಳುವುದಕ್ಕೆಂದು ಸಾಂಬಯ್ಯ ಮಾಸ್ತರರು ಅವನಿಗೆ ಹತ್ತು ರೂಪಾಯಿಗಳನ್ನೂ ಕೊಟ್ಟರಲ್ಲದೆ ಒಂದೆರಡು ವಾರಗಳ ಊಟಕ್ಕಾಗಿ ಜೋಳವನ್ನೂ ಕೊಟ್ಟು ಕಳಿಸಿದರು.

ಒಂದು ಸಾಯಂಕಾಲ ಶಾಲೆ ಬಿಡುತ್ತಲೂ ಮಹಾದೇವ ಅವಸರದಿಂದ ಮನೆಗೆ ಹೊರಟಿದ್ದ ಹಾಗೆ ಶರಣಪ್ಪನ ಮಗ ಸಂಗಣ್ಣ ಅವನನ್ನು ಕೂಗಿ, "ಯಾಕಲೇ, ಓಡಾಕ ಹತ್ತೀದೀ?" ಎಂದು ಕೇಳಿದ.

"ಮನಿಗೆ ಹೋಗಿ ಕೆಲಸಾ ಮಾಡಬೇಕಲ್ಲ ಸಂಗಣ್ಣಾ."

"ಮನ್ಯಾಗ ಕೆಲಸಾ ಮಾಡುತೀಯಾ? ಏನು?"

"ಮತ್ತೇನು ಮಾಡಲಿ? ಮೊಚ್ಚೆ ಹೊಲಿಯೂದು."

ಸಂಗಣ್ಣ ನಕ್ಕು, "ಆತು. ನೀನೂ ಒಬ್ಬ ಮೊಚ್ಚೆಗಾರನs ಆಗುವವಾ ಅನ್ನು. ನಮ್ಮ ತೋಟದ ಕೆಲಸಕ್ಕ ಬರೂದಿಲ್ಲಾ?" ಎಂದ.

"ಮನ್ಯಾಗs ಕೆಲಸ ಮಾಡುತೀನಪ್ಪಾ," ಎಂದು ತಡವರಿಸುತ್ತ ಹೇಳಿ ಅಲ್ಲಿ ನಿಲ್ಲದೆ ಮುಂದೆ ನಡೆದ ಮಹಾದೇವ.

ತಮ್ಮ ತೋಟದ ಕೆಲಸವನ್ನು ತಿರಸ್ಕರಿಸಿದುದರ ಮೂಲಕ ಮಹಾದೇವ ತನಗೆ ಅವಮಾನ ಮಾಡಿದನೆಂದೇ ಸಂಗಣ್ಣ ಭಾವಿಸಿದ. ಸಾಹುಕಾರರ ಮಗನಾದುದರಿಂದ ಆ ವಯಸ್ಸಿಗಾಗಲೆ ಅವನಲ್ಲಿ ಬಿಂಕ ಬಿಗುಮಾನಗಳು ತುಂಬಿಬಂದಿದ್ದುವು. ವರ್ಗದ ವಿದ್ಯಾರ್ಥಿಗಳೆಲ್ಲ ತನ್ನನ್ನು ಗೌರವಿಸಬೇಕು, ತನ್ನ ಆಜ್ಞೆ ಪಾಲಿಸಬೇಕು, ತಾನು ಕರೆದಾಗ ಬಂದು ತನ್ನೊಡನೆ ತಿರುಗಬೇಕು ಎಂದೆಲ್ಲ ಆತ ಬಯಸುತ್ತಿದ್ದ. ಮಹಾದೇವನಿಗೆ ಸಹಾಯ ಮಾಡಬೇಕೆಂಬ ಅಪೇಕ್ಷೆಯಿಂದಲೇ ಆತ ತೋಟದ ಕೆಲಸದ ವಿಚಾರ ತೆಗೆದಿದ್ದುದು. ತಂದೆಯ ಹತ್ತಿರ ಮಾತನಾಡಿ ಅವನ ಒಪ್ಪಿಗೆಯನ್ನೂ ಪಡೆದುದಾಗಿತ್ತು. ಸಾಯಂಕಾಲ ಶಾಲೆ ಬಿಟ್ಟ ಬಳಿಕ ಮಹಾದೇವ ಎರಡು ಗಂಟೆಗಳ ಕಾಲ

ತೋಟದಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಬಹುದೆಂದೂ ಪ್ರತಿಫಲವಾಗಿ ದಿನವೂ ಸ್ವಲ್ಪ ಕಾಳನ್ನು ಪಡೆಯಬಹುದೆಂದೂ ಶರಣಪ್ಪ ಹೇಳಿದ್ದ. ತಾನು ತುಂಬ ಆಸಕ್ತಿ ವಹಿಸಿ ನಿಶ್ಚಿತಗೊಳಿಸಿದ್ದ ಕೆಲಸವನ್ನು ಮಹಾದೇವ ನಿರಾಕರಿಸಬಹುದೆಂದು ನಿರೀಕ್ಷಿಸಿರಲಿಲ್ಲ ಸಂಗಣ್ಣ. ಸಹಜವಾಗಿಯೆ ಅವನಿಗೆ ಬಲು ಕೋಪ ಬಂತು. ಒಂದೆರಡು ವಾರ ಆತ ಮಹಾದೇವನನ್ನು ಮಾತನಾಡಿಸಲಿಲ್ಲ.

"ಯಾಕೋ ಸಂಗಣ್ಣಾ, ಆ ಹುಡುಗ ಯಾಕ ಬರಲಿಲ್ಲ ಕೆಲಸಕ್ಕ?" ಎಂದು ಒಂದು ದಿನ ಕೇಳಿದ ಶರಣಪ್ಪ.

"ಆ ಹೊಲೇರಿಗೆಲ್ಲಾ ಬಾಳ ಸೊಕ್ಕು ಬಂದೈತಿ ಬಿಡಪ್ಪಾ," ಎಂದ ಸಂಗಣ್ಣ.

ಶರಣಪ್ಪ ನಕ್ಕು ಆ ವಿಷಯವನ್ನು ಅಲ್ಲಿಗೇ ನಿಲ್ಲಿಸಿದ.

ಶಿವಗಂಗೆಗೆ ಹಿಡಿದ ಜ್ವರವಿಳಿಯಲಿಲ್ಲ. ಮಾಸ್ತರರ ಔಷಧದಿಂದಲೂ ಏನೂ ಉಪಯೋಗವಾಗಲಿಲ್ಲ. ಅವಳು ಬದುಕುವುದಿಲ್ಲವೆಂದೇ ಕೇರಿಯವರೆಲ್ಲ ಹೇಳತೊಡಗಿದರು.

ಮಾಸ್ತರರು ದಿನವೂ ಕೇಳುತ್ತಿದ್ದರು:

"ಈಗ ಹ್ಯಾಗದೆ ನಿಮ್ಮ ತಾಯಿಗೆ ಮಹಾದೇವಾ?"

"ಹಂಗೇ ಐತಿ ಮಾಸ್ತರರೇ," ಎಂದು ಆತ ಹೇಳುತ್ತಿದ್ದ.

ಆಕೆಯನ್ನು ಮತ್ತೊಂದು ಬಾರಿ ಚೆನ್ನಾಗಿ ಪರೀಕ್ಷಿಸಬೇಕೆಂದು ಯೋಚಿಸಿ ಮಾಸ್ತರರು ಒಂದು ಸಂಜೆ ಹರಿಜನ ಕೇರಿಗೆ ಬಂದರು. ಶಿವಗಂಗೆ ಏಳಲಾರದೆ ಮೇಲಕ್ಕೆದ್ದು ಕೈಜೋಡಿಸಿ ವಂದಿಸುತ್ತ ಹೇಳಿದಳು:

"ನನಗೇನೂ ನೆಟ್ಟಗಾಗುವ ಹಂಗ ಕಾಣುವದಿಲ್ಲ ದೇವ್ರೂ. ನೀವು ಇಲ್ಲೀತನಕ ಬಂದು ತ್ರಾಸ ಮಾಡಿಕೋಬ್ಯಾಡಿರಿ."

"ದೇವ್ರು!" ಎಂದು ಉದ್ಗಾರ ತೆಗೆದು ಮಾಸ್ತರರೆಂದರು: "ನನ್ನಂಥ ಹುಲು ಮನುಷ್ಯನ್ನ ದೇವ್ರು ಅಂತ ಯಾಕ ಕರೀತೀ ತಾಯಿಾ?"

ಉಚ್ಚ ಜಾತಿಗಳ ಜನರು ಹರಿಜನ ಕೇರಿಗೆ ಬರುವುದೂ ಒಂದು ಅಪರೂಪದ ವಿಷಯವೆ ಆಗಿತ್ತು ಆ ಕಾಲದಲ್ಲಿ. ಬರುವ ಕೆಲವರು ಕಳ್ಳರಂತೆ

ಕತ್ತಲಲ್ಲಿ ಬಂದು ಬೆಳಕು ಬರುವ ಮುನ್ನವೆ ಹೊರಟುಹೋಗುತ್ತಿದ್ದರು. ಕಾಹಿಲೆ ಬಿದ್ದವರನ್ನು ಕಂಡು ಉಪಚರಿಸುವ ಉದ್ದೇಶದಿಂದ ಈ ಮೊದಲು ಯಾರೂ ಅಲ್ಲಿಗೆ ಬಂದಿರಲಿಲ್ಲ. ಅಂತೆಯೆ, ಮಾಸ್ತರರು ಬಂದಾಗಲೆಲ್ಲ ಅವರ ಸುತ್ತಲೂ ಕೇರಿಯ ಜನ ಗುಂಪುಗೂಡುತ್ತಿತ್ತು.

ಅಂದೂ ಸಹ ಶಿವಗಂಗೆಯ ಗುಡಿಸಲಿನೆದುರಿಗೆ ಕೇರಿಯವರೆಲ್ಲ ಸೇರಿದರು.

ಕಳವಳದ ದೃಷ್ಟಿಯನ್ನು ಆ ಜನರ ಮೇಲೆಲ್ಲ ಓಡಿಯಾಡಿಸಿದರು ಮಾಸ್ತರರು. ಆಹಾರದ ಅಭಾವದಿಂದಲೂ ಮದ್ಯಪಾನದಿಂದಲೂ ಸೊರಗಿ ಕಡ್ಡಿಯಾದ ದೇಹಗಳು, ಕೊಳೆಯಿಂದ ನಾರುವ ಹರಕು ಬಟ್ಟೆಗಳು, ಎಣ್ಣೆ ಯಿಲ್ಲದೆ ಕೆದರಿದ ಕೂದಲುಗಳು, ಒಳಸೇರಿದ ಕಣ್ಣುಗಳು, ಕಳಾಹೀನ ಸತ್ವಹೀನ ಮುಖಗಳು. ಮಾಸ್ತರರ ದೃಷ್ಟಿ ಸಂಕೋಚದಿಂದ ನೆಲದ ಕಡೆ ಹೊರಳಿತು. ಮಾನವನು ಸೋದರ ಮಾನವಜೀವಿಗಳ ಮೇಲೆ ನಡಸುತ್ತ ಬಂದ ಅಮಾನುಷ ದಬ್ಬಾಳಿಕೆಯ ಜೀವಂತ ಕುರುಹುಗಳಂತೆ ಆ ಹರಿಜನರು ಅಲ್ಲಿ ನಿಂತಿದ್ದರು. ಅವರನ್ನು ಅದೇ ಸ್ಥಿತಿಯಲ್ಲಿ ಕೊಳೆಯಲು ಬಿಟ್ಟು, ತಾವು ಭಗವದ್ಗೀತೆಯನ್ನೂ ಶರಣರ ವಚನಗಳನ್ನೂ ಹಾಡಿಕೊಂಡು ಮನಶ್ಶಾಂತಿ ಪಡೆಯಲೆಳಸುವುದು ಕೇವಲ ಆತ್ಮವಂಚನೆಯೆಂದು ಮಾಸ್ತರರಿಗೆನ್ನಿಸಿತು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬೆ," ಎಂಬ ಬಸವವಾಣಿ ಅವರ ಕಿವಿಗಳಲ್ಲಿ ಘಂಟಾನಾದದಂತೆ ದುಮು ದುಮಿಸತೊಡಗಿತು. ಹರಳಯ್ಯ ಮಧುವಯ್ಯಗಳಲ್ಲಿ ಶರೀರಸಂಬಂಧ ಸಾಧಿಸಿ ಮಹಾಕ್ರಾಂತಿಯನ್ನೆಸಗಿದ ಬಸವಣ್ಣನವರ ದಿವ್ಯಮೂರ್ತಿ ಅವರ ಮನಸಿನ ಕಣ್ಣುಗಳೆದುರಿಗೆ ಬಂದು ನಿಂತಂತಾಯಿತು. "ಅಂಥ ಮಹಾನು ಭಾವನ ಮತದವನೆಂತ ಹೇಳಿಕೊಂಡು ದಿನಾಲು ಎರಡು ಸಲ ಲಿಂಗಪೂಜೆ ಮಾಡುವ ನಾನು ಈ ಶಿವಭಕ್ತರಿಗಾಗಿ ಏನನ್ನೂ ಮಾಡಲಿಲ್ಲವಲ್ಲ...." ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತಿದ್ದ ಹಾಗೆ ಮಾಸ್ತರರ ಕಣ್ಣುಗಳಲ್ಲಿ ಕಂಬನಿಗಳು ಕಾಣಿಸಿಕೊಂಡುವು. ಆ ದೀನ ದರಿದ್ರ ಹರಿಜನರ ನೆರವಿಯಲ್ಲಿ ಪ್ರತ್ಯಕ್ಷ ಪರಮಾತ್ಮನನ್ನೆ ಕಂಡಂತೆ ಭಾಸವಾಯಿತು ಅವರಿಗೆ.

ಅಂದು ಅವರಿಗೆ ಶಿವಪೂಜೆಯಲ್ಲೂ ಚಿತ್ತ ಕೇಂದ್ರಿತವಾಗಲಿಲ್ಲ. ಲಿಂಗ ಮೂರ್ತಿಯನ್ನು ಅಂಗೈಯಲ್ಲಿರಿಸಿಕೊಂಡು ಅದಕ್ಕೆ ಸ್ನಾನ ಮಾಡಿಸುತ್ತಿದ್ದ ಹಾಗೆ ಅವರ ದೃಷ್ಟಿಯೆದುರಿಗೆ ತಿಂಗಳುಗಳ ಕಾಲ ಸ್ನಾನವಿಲ್ಲದೆ ಮಲಿನಗೊಂಡ ಹರಿಜನರ ದೇಹಗಳೇ ಕಾಣಿಸುತ್ತಿದ್ದುವು. ಲಿಂಗವನ್ನೆತ್ತಿ ಮೂಗಿನ ಮುಂದೆ ಹಿಡಿದುದಾಯಿತು. ದೃಷ್ಟಿ ಲಿಂಗದೊಳಗಾಗಲಿಲ್ಲ. ಅಸ್ಥಿಪಂಜರಗಳಂಥ ಹರಿಜನ ಬಾಲಕರ ದೀನ ಮುಖಮುದ್ರೆಗಳೇ ಕಾಣಿಸಿದಂತಾಯಿತು. ಪೂಜಾ ಕಾಲದಲ್ಲಿ ಹೇಳುವ ಮಂತ್ರಗಳೂ ಅಂದು ಅವರ ನಾಲಗೆಯ ಮೇಲೆ ಮೂಡಲಿಲ್ಲ. ಹೇಗೋ ಪೂಜೆಯ ಶಾಸ್ತ್ರ ಮುಗಿಸಿ ಲಿಂಗಮೂರ್ತಿಯನ್ನು ಬಟ್ಟೆಯಲ್ಲಿ ಮುಚ್ಚುತ್ತಿದ್ದ ಹಾಗೆ ಲಂಗೋಟಿಗಳಿಗೂ ಗತಿಯಿಲ್ಲದೆ ಪೂರ್ಣ ನಗ್ನವಾಗಿ ನಿಂತುಕೊಂಡ ಹರಿಜನ ಶಿಶುಗಳು ಅವರ ಕಣ್ಣೆದುರಿಗೆ ಬಂದು ನಿಂತ ಹಾಗಾಯಿತು. "ಶಿವಶಿವಾ!" ಎಂದು ಗಟ್ಟಿಯಾಗಿ ಹೇಳುತ್ತಾ ಮಾಸ್ತರರು ಮಣೆಯನ್ನು ಬಿಟ್ಟು ಎದ್ದರು.

ಅಂದಿನಿಂದ ಪ್ರತಿನಿತ್ಯವೂ ಸಂಜೆ ಶಾಲೆ ಬಿಟ್ಟೊಡನೆ ಹರಿಜನ ಕೇರಿಗೆ ಹೋಗಿ ಬರುವುದು ಅವರ ದಿನಚರಿಯಲ್ಲಿನದೊಂದು ಮಹತ್ವದ ಅಂಶ ವಾಯಿತು. ದುರ್ಗವ್ವನ ಗುಡಿಯೆದುರಿಗಿದ್ದ ಬೇವಿನಗಿಡದ ಕಟ್ಟೆಯ ಮೇಲೆ ಕುಳಿತುಕೊಳ್ಳುವುದು, ಹತ್ತಿರವಿದ್ದವರನ್ನೆಲ್ಲ ಮಾತನಾಡಿಸಿ ಕುಶಲಪ್ರಶ್ನೆ ಕೇಳುವುದು, ಕಾಹಿಲೆ ಮಲಗಿದವರ ಮನೆಯವರೆಗೆ ಹೋಗಿ ರೋಗವೆಂಥ ದೆಂಬುದನ್ನು ತಿಳಿದುಕೊಂಡು ಅದಕ್ಕೆ ಮದ್ದು ಕೊಡುವುದು, ಹುಡುಗರಿಗೆ ಬಟ್ಟೆಬರೆ ತಂದುಕೊಡುವುದು, ಅನ್ನಾಭಾವದಿಂದ ನರಳುವವರಿಗೆ ಸಾಧ್ಯ ವಾದಷ್ಟು ಆಹಾರವನ್ನೊದಗಿಸುವುದು ಮಾಸ್ತರರ ಕರ್ತವ್ಯ ಕರ್ಮಗಳಾದುವು. ಅವರ ಈ ನೂತನ ಚಟುವಟಿಕೆಗಳನ್ನು ಹಳ್ಳಿಯ ಜನರು ಅಸಮಾಧಾನ ದಿಂದಲೇ ವೀಕ್ಷಿಸುತ್ತ ಬಂದರು. ಶತಮಾನಗಳಿಂದ ಜಾತಿ ಮತ ಆಚಾರಗಳ ಸಂಕುಚಿತ ವಿಚಾರಗಳಲ್ಲಿ ಕೊಳೆಯುತ್ತ ಬಂದಿದ್ದ ಆ ಅಜ್ಞ ಜನಕ್ಕೆ ಲಿಂಗಾ ಯತ ಮತಸ್ಥರಾದ ಮಾಸ್ತರರು ಹೊಲೆಯರ ಸೇವೆ ಮಾಡುವುದು ತಪ್ಪೆಂದು ತೋರಿದುದೂ ಸಹಜವಾಗಿತ್ತು. ಅದುವರೆಗೆ ಸಾಂಬಯ್ಯನವರನ್ನು ಕಂಡೊಡನೆ ಮರ್ಯಾದೆ ಸಲ್ಲಿಸುತ್ತಿದ್ದವರೆಲ್ಲ ನಿಧಾನವಾಗಿ ಮೂಗು ಮುರಿಯಲಾರಂಭಿಸಿದರು.

ದಿನಗಳುರುಳಿದಂತೆ ಅವರ ಬಗೆಗೆ ನಾನಾತರದ ವದಂತಿಗಳೂ ಹರಡ ತೊಡಗಿದುವು. ಅನ್ಯರನ್ನು ನಿಂದಿಸುವುದರಲ್ಲಿಯೆ ಕಾಲಹರಣ ಮಾಡುವ ನಿರುದ್ಯೋಗಿಗಳು ಕೆಲವರು, ಮಾಸ್ತರರು ಶಿವಗಂಗೆಗೆ ಮರುಳಾಗಿರುವರೆಂದೂ ಅವರು ದಿನವೂ ಹರಿಜನಕೇರಿಗೆ ಹೋಗಿ ಬರಲು ಅದೇ ಕಾರಣವೆಂದೂ ಆಡಿಕೊಳ್ಳತೊಡಗಿದರು. "ಇಷ್ಟು ದಿನಗಳ ತನಕ ಈ ಮಾಸ್ತರನ ಬಣ್ಣ ತಿಳಿದಿರಲಿಲ್ಲ ನಮಗ. ಒಳ್ಳೆ ಸಾಧುವಿನ ಸೋಗು ಹಾಕಿ ನಮ್ಮನ್ನೆಲ್ಲ ಮಳ್ಳು ಮಾಡಿದ್ದ. ಈಗ ಹೊರಬಿತ್ತು ಅವನ ಖರೇ ರೂಪ!" ಎಂದು ಹೇಳಿಕೊಂಡು ನಕ್ಕವರೂ ಅನೇಕರು.

ತಮ್ಮ ಬಗೆಗೆ ಹಳ್ಳಿಯಲ್ಲಿ ನಡೆದ ಮಾತುಕತೆಗಳು ಮಾಸ್ತರರ ಕಿವಿಯ ವರೆಗೆ ಬರುವುದಕ್ಕೂ ವಿಲಂಬವಾಗಲಿಲ್ಲ. ಅಪಪ್ರಚಾರ ಹೆಚ್ಚಿದ ಹಾಗೆ ಅವರ ಹಟವೂ ಹೆಚ್ಚುತ್ತ ಬಂತು. "ನಾನು ಸರಿಯಾದ ಹಾದಿಯಲ್ಲೇ ಹೊರಟಿದ್ದೇನೆ. ಆಡಿಕೊಳ್ಳುವವರ ಕಡೆ ಲಕ್ಷ್ಯ ಕೊಡಬೇಕಾಗಿಲ್ಲ. ಒಂದಿಲ್ಲೊಂದು ದಿನ ಅವರೂ ನನ್ನ ಹಾದಿಗೇ ಬಂದಾರು," ಎಂದು ಹೇಳಿಕೊಂಡು ಅವರು ತಮ್ಮ ಸೇವೆಯನ್ನು ಮುಂದುವರಿಸಿದರು.

ಎರಡನೆಯ ಭಾಗ

ಮಗ

೧೨

ಹಳ್ಳಿಯಲ್ಲಿ ಅಂದು ಹಬ್ಬದ ದಿನ. ವರ್ಷಕ್ಕೊಮ್ಮೆ ಬರುವ ದೊಡ್ಡ ಹಬ್ಬವಾದುದರಿಂದ ಹರಿಜನರಿಗೂ ಅಂದು ಉತ್ಸವದ ದಿನ.

ಮೂರು ನಾಲ್ಕು ತಿಂಗಳುಗಳ ಕಾಲ ಸ್ನಾನ ಮಾಡದಿದ್ದವರೆಲ್ಲಾ ಅಂದು ಹಳ್ಳಕ್ಕೆ ಹೋಗಿ ಮೈತೊಳೆದುಕೊಂಡು ಬಟ್ಟೆಗಳನ್ನು ಸ್ವಚ್ಛಗೊಳಿಸಿಕೊಂಡು ಬರುತ್ತಿದ್ದರು. ಪೂಜಾರಿ ಮಾದನಿಗಂತೂ ಒಂದು ಕ್ಷಣವೂ ಬಿಡುವಿರಲಿಲ್ಲ. ಆತ ಬೆಳಗಿನ ಜಾವದಲ್ಲೆದ್ದು ಮೈ ತೊಳೆದುಕೊಂಡು ಬಂದು ದುರ್ಗವ್ವನ ಮೂರ್ತಿಗೂ ಸ್ನಾನ ಮಾಡಿಸುವುದರಲ್ಲಿ ನಿರತನಾಗಿದ್ದ. ಒಂದು ಗಂಟೆಯವರೆಗೂ ಮೂರ್ತಿಯನ್ನು ತಿಕ್ಕಿ ತಿಕ್ಕಿ ತೊಳೆದುದಾಯಿತು. ಅನಂತರ ದೇವಿಗೆ ಮಡಿಸೀರೆಯುಡಿಸಿದ, ತಲೆಗೆ ದಂಡೆ ಕಟ್ಟಿದ, ಕೊರಳಲ್ಲಿ ಮಂಗಳಸೂತ್ರ ಹಾಕಿ ಅದರ ಮೇಲೆ ಕರಡಿಗೆಯನ್ನಿರಿಸಿದ, ಮಡಿಲಲ್ಲಿ ಕನ್ನಡಿಯನ್ನಿಟ್ಟ. ಮೂರ್ತಿಯ ತಲೆಯ ಮೇಲೂ ಭುಜಗಳ ಮೇಲೂ ಹೂವುಗಳನ್ನಿರಿಸಿದುದಾಯಿತು, ಹಣೆಯ ಮೇಲೆ ಕುಂಕುಮ ತಿಲಕವನ್ನಿಟ್ಟುದಾಯಿತು. ದೇವಿಯ ಎಡಗಡೆ ಮಂಡಿಸಿದ್ದ ಕಪ್ಪು ಬಣ್ಣದ "ಕರೆವ್ವ"ಗಳಿಗೂ ಅಲಂಕಾರವಾಯಿತು. ಧೂಪದ ಹೊಗೆ ಹಾಕಿ ದೀಪ ಹೊತ್ತಿಸುವುದರೊಳಗಾಗಿ ಬಿಸಿಲು ಚೆನ್ನಾಗಿ ಬಲಿಯಿತು. ಮಾದ ಗಂಟೆಯನ್ನು ರಭಸದಿಂದ ಬಾರಿಸುತ್ತ ದೇವಿಯ ಸ್ತೋತ್ರ ಪದಗಳನ್ನು ಉಚ್ಚಕಂಠದಲ್ಲಿ ಹಾಡತೊಡಗಿದ. ಗುಡಿಯ ಪಡಸಾಲೆಯಲ್ಲಿ ನೆರೆದಿದ್ದ ಜನರು ತಾಳ ಹಾಕತೊಡಗಿದರು. ಹುಡುಗರು ಡಪ್ಪ ಬಾರಿಸತೊಡಗಿದರು. ಅಂದು ಶಾಲೆಗೆ ರಜವಿದ್ದಿತಾದುದರಿಂದ ಕೇರಿಯಲ್ಲಿಯೆ ಇದ್ದ ಮಹಾದೇವನೂ ಸ್ನಾನ ತೀರಿಸಿಕೊಂಡು ಬಂದು ಗುಡಿಯೆದುರಿನ ಬೇವಿನ

ಗಿಡವ ಕಟ್ಟೆಯ ಮೇಲೆ ಕುಳಿತು ಪೂಜೆಯ ಕೋಲಾಹಲವನ್ನೆಲ್ಲ ಕುತೂಹಲದಿಂದ ನಿರೀಕ್ಷಿಸುತ್ತಿದ್ದ. ಅವನ ತಾಯಿಯ ಮೈಯಲ್ಲಿ ಅಂದು ಜ್ವರವಿರಲಿಲ್ಲವಾದುದರಿಂದ ಅವಳು ಮನೆಯಲ್ಲಿ ಅಡುಗೆ ಮಾಡುವುದರಲ್ಲಿ ತೊಡಗಿದ್ದಳು. ಹನುಮನೂ ರೊಟ್ಟಿ ಸುಡುತ್ತ ತನ್ನ ಗುಡಿಸಲಿನಲ್ಲಿ ಕುಳಿತಿದ್ದ. ಅವನ ಮಗಳು ಚಂದ್ರವ್ವ ಕೇರಿಯ ಇತರ ಹುಡುಗರೊಡನೆ ಗುಡಿಯಲ್ಲಿನ ಉತ್ಸವವನ್ನು ನೋಡುತ್ತ ಕುಳಿತಿದ್ದಳು.

ಸ್ನಾನಮಾಡಿ, ಹೊಸ ಸೀರೆಯನ್ನುಟ್ಟುಕೊಂಡು ಗುಡಿಗೆ ಹೊರಟ ಲಚುಮಿ ಹನುಮನ ಬಾಗಿಲಿಗೆ ಬಂದು ಕೇಳಿದಳು:

" ಈಗ ಬೆಳಗಾತೇನೋ ಹನುಮಾ ?"

" ಇನ್ನೂ ಎಲ್ಲೀದೇ! ಕಣ್ಣಾಗ ನಿದ್ದಿ ತುಂಬೈತಿ. ರೊಟ್ಟೀ ಅಂತೂ ಮಾಡಾಕs ಬೇಕಲ್ಲಾ. ಎದ್ದೀನಿ ಇದs ಈಗ."

" ವರಸಕ್ಕೊಮ್ಮೆ ಬರೂ ಹಬ್ಬ. ಇಂದಾದರೂ ಜಳಕಾಮಾಡಿ ಬಾ ಹೋಗಲಾ."

" ಏನ ಜಳಕಾನೋ, ಏನ ಮಣ್ಣೋ, ಏನ ಹಬ್ಬೋ," ಎಂದು ಬೇಸರದ ದನಿಯಲ್ಲಿ ನುಡಿದ ಹನುಮ.

ಲಚುಮಿ ಒಳಗಡೆ ಬಂದು ಅವನ ಹತ್ತಿರ ಕುಳಿತುಕೊಂಡು ಎಲೆ ಅಡಕೆ ಹಾಕಿಕೊಳ್ಳುತ್ತ ಮಾತನಾಡಿದಳು:

" ನಿನ್ನ ತ್ರಾಸ ನೋಡಾಕಾಗೂದಿಲ್ಲ ಹನುಮಾ. ಇನ್ನೊಬ್ಬಾಕೀನ್ನ ಮಾಡಿಕೊಂಡೆರೆ ಮಾಡಿಕೋ."

" ಅದೀಯಲ್ಲ ನೀ ಇಲ್ಲೇ. ನೀನs ಬಂದು ಇದ್ದುಬಿಡು," ಎಂದು ನಗುತ್ತ ನುಡಿದ ಹನುಮ.

" ಹೂಂ. ಮುದುಕಿಯಾಗುತಾ ಬಂದಿನಿ. ನನ್ನಂಥಾಕೀನ್ನ ಕಟ್ಟಿಕೊಂಡು ಬಾಯಿ ಬಾಯಿ ಬಡಕೋಬೇಕಂತೀಯೇನು? ನನಗೂ ನೀನs ಅಡಿಗೀಮಾಡಿ ಹಾಕಬೇಕಾದೀತು." ಲಚುಮಿಯೂ ನಗುತ್ತ ನುಡಿದಳು.

ಎಲೆಯಡಕೆಯ ರಸವನ್ನು ಗುಡಿಸಲಿನ ಮೂಲೆಯಲ್ಲಿ ಉಗುಳಿ ಲಚುಮಿ ಹೇಳಿದಳು:

"ಚಂದ್ರಿಯದು ಏನು ವಿಚಾರ ಮಾಡಿದಿಯೋ ಹನುಮಾ?"

"ಯಾವ ವಿಚಾರವೇ?"

"ಹುಡುಗಿಗೆ ಜಡ್ಡಾದಾಗ ಯಲ್ಲವ್ವದೇವರಿಗೆ ಬೇಡಿಕೊಂಡಿದ್ದಿಯಲ್ಲೋ, ನೆಟ್ಟಗಾದರ ಸೂಳೀ ಬಿಡ್ತೀನಿ ಅಂತ...."

"ಹೌದೌದು. ಬೇಡಿಕೊಂಡದ್ದೇನೋ ಖರೇನs."

"ಮತ್ತ ಸುಮ್ಮನ ಕುಂತುಬಿಟ್ಟರ ಹೆಂಗಾದೀತು? ಅವಳಿಗೂ ವಯಸ್ಸಾಗುತಾ ಬಂತು. ಪದ್ಧತೀಪ್ರಕಾರ ಸೂಳೀ ಬಿಟ್ಟೇವಿ ಅಂತ ಜಾಹೀರು ಮಾಡಿಬಿಡಬೇಕು ಲಗೂನs."

"ಮಾಡೂಣು, ಮಾಡೂಣು," ಎಂದ ಹನುಮ.

"ಕೇರಿಯೊಳಗ ನನ್ನ ಬಿಟ್ಟರ ದೇವರಿಗೆ ಸೂಳಿ ಯಾರೂ ಇಲ್ಲ. ನನ್ನದೇನು ಮುಗೀತಾ ಬಂತು. ನನ್ನ ಹಿಂದ ಯಾರಾದರೊಬ್ಬರು ಬೇಕೇ ಬೇಕಲ್ಲ?" ಎಂದಳು ಲಚುಮಿ.

"ಹೌದೌದು," ಎಂದ ಹನುಮ.

"ಕೇರಿಯೊಳಗ ಬ್ಯಾರೆ ಯಾರೂ ಸೂಳಿ ಬಿಡುವಂಗ ಕಾಣೂದಿಲ್ಲ. ಅಂಥ ಚಂದದ ಹೆಣ್ಣಾದರೂ ಎಲ್ಲಿದಾವ ಅನ್ನು. ಚೆಲುವಿ ಅಂದರ ನಮ್ಮ ಚಂದ್ರಿ ಒಬ್ಬಳೇ."

ಹನುಮನ ಪುಟ್ಟ ಎದೆ ಹೆಮ್ಮೆಯಿಂದ ಅರಳಿತು. "ನಮ್ಮ ಚಂದ್ರಿಯ ಮುಂದ ಕೇರಿಯ ಹೆಣ್ಣುಗಳ್ಯಾಕ, ಊರಾಗಿನ ಹೆಣ್ಣುಗಳೂ ನಿಲ್ಲಾಕಿಲ್ಲ. ಇವಳ ಮ್ಯಾಲ ನಿವಾಳಿಸಿ ಒಗೀಬೇಕು ಎಲ್ಲಾರನ್ನು."

"ಇಂಥಾ ಸುಂದರಾನ್ನ ಯಾವನಾದರೊಬ್ಬ ಕರೀಮಾರಿಯ ಹೊಲೆಯಗ ಕಟ್ಟಿದರ ಏನುಪಯೋಗ ಹನುಮಾ?"

"ಹೌದೇಳೇ. ನೀ ಅನ್ನೂದೂ ಬರಾಬ್ಬರಿ."

"ಚಂದ್ರಿಯನ್ನ ನೋಡಿದರ ಅವಳು ಯಲ್ಲವ್ವದೇವಿಯ ಮಗಳಾಗೇ ಹುಟ್ಟಿ ಬಂದಂಗ ಕಾಣಿಸುತಾಳ. ದೇವರ ಸೇವಾಕ್ಕs ಅವಳನ್ನ ಬಿಟ್ಟು ಬಿಡಬೇಕು. ಅತ್ತ ಯಲ್ಲವ್ವಗೂ ಆನಂದವಾಗುತೈತಿ. ಇತ್ತ ಚಂದ್ರಿಗೂ ಸುಕವಾಗುತೈತಿ. ನಾನೀ ಅಂತ ಮುಗಿಬಿದ್ದು ಬಂದಾರು ಸಾವುಕಾರರು ಅವಳ

ಹತ್ತರ. ಆಮ್ಯಾಲ ರೊಕ್ಕಕ್ಕೇನ ಕಡಮಿಯೋ ಹನುಮಾ? ನಿನಗ ಸೆರೆ ಎಷ್ಟು ಬೇಕೋ ಅಷ್ಟು ಸಿಕ್ಕೀತು. ಆ ಕಾಮಣ್ಣನ ಭಟ್ಟೀ ಕೆಲಸಾ ಬಿಟ್ಟು ಅರಾಮಾಗಿ ರಾಜಾನಂಗ ಇರಬಹುದು ನೋಡು ನೀನೂ."

"ಹೌದೌದು," ಎಂದ ಹನುಮ.

"ಇವತ್ತು ಹ್ಯಾಂಗೂ ಹಬ್ಬ. ರಾತ್ರಿ ದೈವದವರು ಕೂಡಿದಾಗ ಚೆಂದ್ರೀದು ಜಾಹೀರು ಮಾಡಿಬಿಡೂಣು. ಆ, ಏನಂತೀ?"

"ಹಂಗs ಮಾಡೂಣು," ಎಂದ ಹನುಮ.

ರಾತ್ರಿ, ದುರ್ಗವ್ವನ ಗುಡಿಯಲ್ಲಿ ಕೇರಿಯವರೆಲ್ಲ ಸೇರಿ ಭಜನೆ ಮಾಡಿದ ತರುವಾಯ ಪ್ರತಿವರ್ಷದ ಪದ್ಧತಿಯಂತೆ ಪೂಜಾರಿ ಮಾದನ ಮೈಯಲ್ಲಿ 'ದೇವಿಯ ಸಂಚಾರ'ವಾಯಿತು. ಆತ "ಹಲಲಲಲಾ" ಎಂದು ಕೂಗಿ ಕುಣಿಯುತ್ತ ಗುಡಿಯ ಅಂಗಳದಲ್ಲಿ ಅಡಿಯಿಡತೊಡಗಿದ. "ದೇವಿಯ ಮುಖದಿಂದ ಏನು ಹೊರಡುವುದೋ" ಎಂದು ಎಲ್ಲರೂ ಭಯಭಕ್ತಿಗಳಿಂದ ಕಾಯ್ದು ಕುಳಿತಿದ್ದರು.

"ನನ್ನ ಮರತುಬಿಟ್ಟೀರೋ ನೀವು, ಮರತುಬಿಟ್ಟೀರಿ...." ಎಂದು ಉದ್ಗಾರ ತೆಗೆದು, "ಹೋ" ಎಂದು ಅರಚಿದ ಪೂಜಾರಿ.

ಮುದುಕ ಭರಮಜ್ಜ ನೆಲಕ್ಕೆ ಅಡ್ಡಬಿದ್ದು ಗಲ್ಲ ಬಡಿದುಕೊಳ್ಳುತ್ತ ಹೇಳಿದ:

"ನಾವ್ಯಾಕ ಮರತೇವೇ ತಾಯಿ ನಿನ್ನ? ನಾವೇನು ತಪ್ಪು ಮಾಡೀವಿ ಅನ್ನೂದನ್ನ ಹೇಳಿದರ ಮುಂದಕ್ಕ ಹಂಗಾಗದಂಗ ನೋಡಿಕೋತೀವಿ."

ಹೋ ಹೋ ಹೋ ಹೋ ಎಂದು ಮತ್ತೆ ಕೂಗುತ್ತ ಪೂಜಾರಿ ಹೇಳಿದ:

"ಕುಲಾಚಾರದ ಪದ್ಧತಿ ಎಲ್ಲಾ ಮರತುಬಿಟ್ಟೀರಿ. ಮೊದಲಿನಾಂಗ ನನಗ ಮರ್ಯಾದಿ ಇಲ್ಲ."

"ಅಯ್ಯಯ್ಯೋ ತಾಯಿ. ನಮ್ಮ ತಪ್ಪು ಕ್ಷಮಾ ಮಾಡು," ಎಂದು ಜನರು ಬೇಡಿಕೊಂಡರು.

" ನನಗ ನೆಟ್ಟಗ ಮರ್ಯಾದಿ ಕೊಟ್ಟರೋ ನೆಟ್ಟಗಾತು. ಇಲ್ಲದಿದ್ದರ.... ಹೋ ಹೋ ಹೋ... ನಿಮ್ಮ ವಂಶ ವಂಶಾಸೆಲ್ಲಾ ಹುರಿದುಬಿಡ್ತೀನಿ. ಹೋ ಹೋ ಹೋ...."

ನೆರೆವವರೆಲ್ಲ ಗಲ್ಲ ಗಲ್ಲ ಬಡಿದುಕೊಳ್ಳುತ್ತಾ ಅಡ್ಡಬಿದ್ದು ನಮಸ್ಕಾರ ಮಾಡಿದರು.

" ನಾವೆಲ್ಲಾ ನಿನ್ನ ಕೂಸುಗಳು ದೇವೀ. ನಮ್ಮ ತಪ್ಪು ಏನಿದ್ದರೂ ಹೊಟ್ಟ್ಯಾಗ ಹಾಕ್ಕೋ ತಾಯಿ," ಎಂದು ಬೇಡಿಕೊಂಡ ಭರಮಜ್ಜ.

ಹೊ ಹೊ ಹೋ ಎಂದು ಭಯಂಕರವಾಗಿ ಕೂಗಿ ನೆಲಕ್ಕೆ ಬಿದ್ದುಬಿಟ್ಟ ಪೂಜಾರಿ. ದೇವಿಯ 'ಸಂಚಾರ' ನಿಂತುಹೋಯಿತು.

ನಾಲ್ಕೈದು ನಿಮಿಷಗಳ ತರುವಾಯ ಹನುಮ ಎದ್ದು ನಿಂತು ಹೇಳಿದ:

" ದೈವದವರೆಲ್ಲಾ ವಿಚಾರ ಮಾಡಬೇಕ್ರೆಪಾ."

" ಏನೋ ಅದು ಹನುಮಾ?" ಹಿರಿಯ ಭರಮಜ್ಜ ಅಧಿಕಾರವಾಣಿಯಲ್ಲಿ ಕೇಳಿದ.

" ನನ್ನ ಮಗಳು ಚಂದ್ರಿ ಕೂಸಾಗಿದ್ದಾಗ ಅವಳನ್ನ ದೇವರಿಗೆ ಸೂಳೀ ಬಿಡ್ತೀನಂತ ಹರಕೀ ಹೊತ್ತಿದ್ದಿನರಪೊ."

" ಇಷ್ಟು ದಿನಾ ಯಾಕ ಹೇಳಲಿಲ್ಲ ನಮಗ?"

" ಇಂದು ಹೇಳಿದರಾತು, ನಾಳೆ ಹೇಳಿದರಾತು ಅಂತ ಸುಮ್ಮನಿದ್ದಿನರಪೋ. ಈಗ ನಿಮ್ಮೆಲ್ಲಾರ ಸಮಕ್ಷದಾಗ ನನ್ನ ಮಗಳನ್ನ ಸೂಳೀ ಬಿಟ್ಟೇನಂತ ಜಾಹೀರು ಮಾಡಬೇಕಂತ ಮಾಡೀನಿ."

" ನೀ ಇಷ್ಟುದಿನ ಸುಮ್ಮನಿದ್ದದ್ದಕ್ಕs ದೇವಿ ನಮ್ಮವ್ಯಾಲ ಸಿಟ್ಟಾದಂಗ ಕಾಣುತೈತಿ."

" ಅರೀದೇ ಮಾಡಿದ ತಪ್ಪು ಹೊಟ್ಟ್ಯಾಗ ಹಾಕ್ಕೊಳ್ಳಿರಪೋ. ಇಂದಿನಿಂದ ನನ್ನ ಚಂದ್ರಿ ನನ್ನ ಮಗಳಲ್ಲ, ಯಲ್ಲವ್ವನ ಮಗಳು. ದೇವರ ಸೇವಾಕ್ಕಂತ ಅವಳನ್ನ ಸೂಳೀ ಬಿಟ್ಟೇನ್ರಪೋ ಸೂಳೀ ಬಿಟ್ಟೇನಿ," ಎಂದು ಘೋಷಿಸಿ ದೈವದವರಿಗೆ ಕೈಮುಗಿದು ಕುಳಿತುಕೊಂಡ ಹನುಮ.

ಬೇವಿನಗಿಡದ ಕಟ್ಟೆಯ ಮೇಲೆ ಕುಳಿತಿದ್ದ ಮಹಾದೇವನಿಗೆ ಚಂದ್ರ ಳನ್ನು ಸೂಳೆಯನ್ನಾಗಿಸುವ ಈ ಘೋಷಣೆ ಕರ್ಣಕಠೋರವಾಯಿತು. ಅವನ ಎದೆಯಲ್ಲೆಲ್ಲ ಸಂಕಟದ ಕಿಚ್ಚು ಧಗಧಗಿಸತೊಡಗಿತು. ಸೂಳೆ ಬಿಡುವುದೆಂದ ರೇನೆಂಬುದನ್ನು ಆತ ಬಲ್ಲ. ಸಾಂಬಯ್ಯ ಮಾಸ್ತರರ ನಿಕಟ ಸಹವಾಸದಲ್ಲಿದ್ದ ಆತ ತಮ್ಮ ಸಮಾಜದಲ್ಲಿನ ಹಲವಾರು ಕೀಳು ಪದ್ಧತಿಗಳನ್ನು ನಿಲ್ಲಿಸಿಬಿಡಲು ಯತ್ನಿಸಬೇಕೆಂದು ನಿರ್ಧರಿಸಿಕೊಂಡಿದ್ದ. ತಮ್ಮ ಜಾತಿಗೆ ಕಲಂಕಪ್ರಾಯವಾದ ದೇವದಾಸೀ ಪದ್ಧತಿ....ತನ್ನ ಚಂದ್ರಳೇ ಆ ರಾಕ್ಷಸ ಪದ್ಧತಿಗೆ ಬಲಿ ಯಾಗುವಳೇ ?

ಮಹಾದೇವ ಆವೇಶದಿಂದ ಮೇಲಕ್ಕೆದ್ದ, ಉದ್ವೇಗದಿಂದ ಕಂಪಿಸುವ ದನಿಯಲ್ಲಿ ಹೇಳಿದ:

"ದೈವದವರೆಲ್ಲಾ ನನ್ನ ಮಾತು ಸ್ವಲ್ಪ ಕೇಳಿರಪೋ. ದೇವರ ಹೆಸರಿ ನಾಗ ಸೂಳೀ ಬಿಡೂದಂದರ ಬಹಾಳ ಮೂರ್ಖತನದ ಕೆಲಸ. ಇನ್ನಾದರೂ ನಾವು ಈ ಹೊಲಸು ಪದ್ಧತಿ ಬಿಡಾಕಬೇಕು. ಚಂದ್ರಾನ್ನ ಸೂಳೀ ಬಿಡೂದನ್ನ ನಾನೆಂದೂ ಒಪ್ಪೂದಿಲ್ಲ...."

"ದೈವ"ದವರೆಲ್ಲ ಬೆಚ್ಚಿಬಿದ್ದು ಅವನ ಕಡೆ ತಿರುಗಿದರು. ತುಂಬಿದ "ಸಭೆ"ಯಲ್ಲಿ ಎದ್ದುನಿಂತು ಹಿರಿಯರ ಮಾತನ್ನು ಖಂಡಿಸುವ ಈ ಹುಡುಗನ ಉದ್ಧಟತನವೆ! ಎಂದುಕೊಂಡು ಭರಮಜ್ಜ ಕೋಪದಿಂದ ಕನಲಿ ಕೂಗಿ ಕೊಂಡ:

"ಯಾರಲೇ ನೀ ನಮಗ ಬುದ್ಧೀ ಹೇಳಾವಾ? ಇನ್ನs ಮಾರಿಯ ಮ್ಯಾಲ ಮಿಾಸಿ ಬಂದಿಲ್ಲಾ. ಇಷ್ಟ ಧೈರ್ಯೇ ಬಂತೇನ ನಿನಗ?"

"ಕುಂದ್ರಲೇ. ಬಾಯಿ ಮುಚ್ಚಿಕೊಂಡು ಕುಂದ್ರು ಸುಮ್ಮನ," ಎಂದ ಮಾದ.

"ನನ್ನ ಮಗಳನ್ನ ಸೂಳೀ ಬಿಡೂದಕ್ಕ ನೀನ್ಯಾವನಲೇ ಬ್ಯಾಡ ಅನ್ನಾವಾ ?" ಎಂದ ಹನುಮ.

ಆ ಬಿರುನುಡಿಗಳಿಂದಾಗಿ ಮಹಾದೇವನ ಆವೇಶ ಅರ್ಧಕ್ಕರ್ಧ ಇಳಿಯಿತಾದರೂ ಆತ ಅಷ್ಟಕ್ಕೇ ಸುಮ್ಮನಾಗದೆ ಮತ್ತೆ ದನಿಯೆತ್ತಿ ಹೇಳಿದ:

"ನನಗ ತಿಳಿದದ್ದು ನಾ ಹೇಳುವವನೇ. ಸೂಳೀ ಬಿಡೂದು ತಪ್ಪು. ಹಾದರಾ ಮಾಡೂದು ತಪ್ಪು. ಆ ಹುಡುಗೀ ಬಾಳೇವು ಹಾಳು ಮಾಡಬ್ಯಾಡ್ರಿ. ಚಂದ್ರಾ ಸೂಳಿಯಾಗೂದರಿಂದ ಯಲ್ಲವ್ವಗೇನೂ ಆನಂದ ಆಗೂದಿಲ್ಲ."

"ಏಯ್, ಎಷ್ಟುದ್ದ ಮಾತಾಡುತೀಯೋ? ಇದರಾಗೆಲ್ಲಾ ನಿನಗೇನು ತಿಳೀತೈತಿ? ಒಂದೀಟು ಸಾಲೀ ಕಲಿತೀದೀಯಂತ ದೊಡ್ಡ ಶಾಣ್ಯಾ ಆದೇನು? ನೀನನ್ನುವ ಮಾತು ಕೇಳಿ, ದೇವಿ ಮತ್ತ ನಮ್ಮೆಲ್ಲಾರ ಮ್ಯಾಲ ಸಿಟ್ಟಾದಾಳು. ತಣ್ಣಗ ಕುಂಡ್ರು," ಎಂದು ಗದ್ದರಿಸಿದ ಭರಮಜ್ಜ.

"ಸೂಳಿಗಾರಿಕೆ ಪಾಪ...ಪಾಪ...." ಎಂದು ಮಹಾದೇವ ಮತ್ತೆ ಹೇಳುತ್ತಿದ್ದ ಹಾಗೆ ಅವನ ಹತ್ತಿರವೆ ಕುಳಿತಿದ್ದ ಹರಿಜನನೊಬ್ಬ ಕೈಯೆತ್ತಿ ಮಹಾದೇವನ ಕೆನ್ನೆಗೆ ಒಂದೇಟು ಬಿಟ್ಟು, "ಸೂಳಿಗಾರಿಕೆ ಅಂತ ಸೂಳಿಗಾರಿಕೆ! ನಮ್ಮ ಕುಲಾಚಾರದ ಪದ್ಧತಿ ಐತಿ ಅದು. ಸೂಳಿಗಾರಿಕೆ ಯಾರು ಮಾಡಿಲ್ಲ? ನಿಮ್ಮವ್ವನೂ ಮಾಡಿದಾಳ. ಏಳ, ಎದ್ದು ನಡೀ ಅತ್ತ!" ಎಂದು ಹೇಳಿದ. "ಹೊಡೀರಿ ಅವನ್ನ, ಹಾಕಿರಿ ಅವನ್ನ," ಎಂದು ಮಿಕ್ಕವರೂ ಕೂಗ ತೊಡಗಿದರು. ದೂರ ಕುಳಿತಿದ್ದ ಶಿವಗಂಗೆ ಗಾಬರಿಗೊಂಡು ಧಾವಿಸಿ ಬಂದು ಮಗನನ್ನು ಮನೆಗೆ ಕರೆದೊಯ್ದಳು.

ಹಬ್ಬದ ನಿಮಿತ್ತವಾಗಿ ಅಂದು ಆಕೆ ಸಿಹಿಯಡುಗೆ ಮಾಡಿದ್ದಳು. ಸಿಹಿ ಎಂದರೆ ಅಂಥ ವಿಶೇಷವೇನೂ ಇರಲಿಲ್ಲ. ಗೋದಿಯ ಸಜ್ಜಿಗೆಗೆ ಬೆಲ್ಲ ಸೇರಿಸಿ ಮಾಡಿದ ಪಾಯಸ ಅಷ್ಟೆ. ವರ್ಷಕ್ಕೊಮ್ಮೆಯಷ್ಟೆ ಸಿಕ್ಕುವ ಅಪರೂಪದ ಸಿಹಿಯೂಟ. ಆದರೆ, ಅಂದು ರಾತ್ರೆ ಆ ಪಾಯಸ ಮಹಾದೇವನ ಗಂಟಲಲ್ಲಿ ಳಿಯಲಿಲ್ಲ. ತಾಯಿಯ ಬಲವಂತದಿಂದಾಗಿ ಸ್ವಲ್ಪ ಉಂಡ ಹಾಗೆ ಮಾಡಿ ಚಾಪೆಯ ಮೇಲೆ ಬಿದ್ದುಕೊಂಡ. ಕೆನ್ನೆಗೆ ಬಿದ್ದ ಏಟಿನ ನೋವಿಗಿಂತ ಹೆಚ್ಚಾಗಿ ಅವಮಾನದ ನೋವು ಅವನನ್ನು ಗಾಸಿಗೊಳಿಸುತ್ತಿತ್ತು. ತನ್ನ ಸಮಾಜ ದವರೆ ತನ್ನನ್ನು ತಿರಸ್ಕರಿಸಿದರಲ್ಲ....ತಾನು ಓದಿ ಕಲಿತು ತನ್ನ ಜಾತಿಯವರನ್ನು ಸುಧಾರಿಸಬೇಕೆಂದು ಯೋಚಿಸಿದ್ದೆಲ್ಲ ವ್ಯರ್ಥವಾಯಿತಲ್ಲ....ತನ್ನ ಮಾತನ್ನು ಯಾರೂ ಗಮನಿಸಲೆ ಇಲ್ಲವಲ್ಲ...ತನ್ನೆದುರಿಗೇ ಚಂದ್ರಳನ್ನು

ಸೂಳೆಯನ್ನಾಗಿಸಿದುದೂ ಅಲ್ಲದೆ ತನ್ನ ತಾಯಿಯೂ ಸೂಳೆಗಾರಿಕೆ ಮಾಡಿದ್ದ ವಿಷಯವನ್ನು ಎಲ್ಲರೆದುರಿಗೂ ಆಡಿದರಲ್ಲ....

"ಪೆಟ್ಟು ಬಾಳ ಬಿತ್ತೇನೋ ಮಾದೇವಾ?" ತಾಯಿ ಕಳವಳದಿಂದ ಕೇಳಿದಳು.

"ಎಂಥಾ ಬುದ್ಧಿಗೇಡಿ ಮಂದಿಯವ್ವಾ ನಮ್ಮದು!"

ಶಿವಗಂಗೆಯೇನೂ ಓದುಬರಹ ಬಲ್ಲವಳಲ್ಲ. ಅವಳೂ ಮೂಢನಂಬಿಕೆಗಳ ಬಲೆಯಲ್ಲಿ ಸಿಲುಕಿಕೊಂಡವಳೇ. ಗುಡ್ಡದ ಎಲ್ಲವ್ವನಲ್ಲಿ ಅವಳಿಗೂ ಪರಮಭಕ್ತಿ. ಎಲ್ಲವ್ವನ ಹೆಸರಿನಲ್ಲಿ ಸೂಳೆ ಬಿಡುವುದೆಂದರೆ ದೊಡ್ಡದೊಂದು ಧರ್ಮಕಾರ್ಯ ಮಾಡಿದಂತೆ ಎಂದು ಅವಳೂ ನಂಬಿಕೊಂಡಿದ್ದಳು. ಆ ಕಾರ್ಯದಲ್ಲಿ ಅಡ್ಡ ಬಂದವರನ್ನೆಲ್ಲ ಎಲ್ಲವ್ವ ನಾಶಗೊಳಿಸುವಳೆಂದೇ ಅವಳ ತಿಳಿವಳಿಕೆ. ಅಂತೆಯೆ, ಅಂದು ತನ್ನ ಮಗ ಆ ರೀತಿ ಮಾತನಾಡಿದುದು ಅವಳಿಗೂ ಒಪ್ಪಿಗೆಯಾಗಿರಲಿಲ್ಲ.

"ನಿನಗಾದ್ರೂ ಅದೆಲ್ಲಾ ಯಾಕ ಬೇಕೋ ಮಾದೇವಾ? ಇನ್ನೂ ಸಣ್ಣಾವ ನೀ. ಅದೆಲ್ಲಾ ತಿಳಿಯೂದಿಲ್ಲ ನಿನಗ."

"ಯಾಕ ತಿಳಿಯೂದಿಲ್ಲವ್ವ? ಎಲ್ಲಾ ತಿಳೀತೈತಿ."

ಮಾರನೆಯ ದಿನ ಸಾಂಬಯ್ಯನವರನ್ನು ಕಂಡು ಮುನ್ನಾದಿನ ನಡೆದುದನ್ನೆಲ್ಲ ವರದಿಯೊಪ್ಪಿಸಿ ಮಹಾದೇವನೆಂದ:

"ಏನಾರ ಮಾಡಿ ಚಂದ್ರೂನ್ನ ಇದರಿಂದ ಪಾರುಮಾಡಿರಿ ಮಾಸ್ತರೇ. ನಿಮಗ ಪುಣ್ಯ ಬರುತ್ತೈತಿ."

ನೊಂದ ದನಿಯಲ್ಲಿ ಅವರು ಹೇಳಿದರು:

"ನನ್ನ ಮಾತಾದರೂ ಕೇಳಬೇಕಲ್ಲಪ್ಪ ಅವರು?"

"ನಿಮ್ಮ ಮ್ಯಾಲ ಬಹಾಳ ಭಕ್ತಿಯಿಟ್ಟಾರ ಕೇರಿಯವರೆಲ್ಲ. ನೀವು ಹೇಳಿದರ ಕೇಳಬಹುದು."

"ಆಗಲಪ್ಪ. ಪ್ರಯತ್ನ ಮಾಡೂಣು," ಎಂದರು ಮಾಸ್ತರರು.

ಅವರ ಪ್ರಯತ್ನವೂ ಯಶಸ್ವಿಯಾಗಲಿಲ್ಲ.

ಅಂದು ಸಾಯಂಕಾಲ ಹರಿಜನಕೇರಿಗೆ ಹೋಗಿ ಮುಖ್ಯ ಮುಖ್ಯ ಜನರನ್ನೆಲ್ಲ ಕೂಡಿಸಿ, ದೇವದಾಸಿ ಪದ್ಧತಿಯನ್ನು ನಿಲ್ಲಿಸುವುದರ ಬಗೆಗೆ ಕೂಲಂಕಷವಾಗಿ ತಿಳಿಸಿ, ಚಂದ್ರಳನ್ನು ಸೂಳೆಯನ್ನಾಗಿ ಬಿಡದಿರಲು ಬಿನ್ನವಿಸಿಕೊಂಡರು ಮಾಸ್ತರರು. ಅದೆಲ್ಲವೂ ಮಹಾದೇವನ ಕಾರಸ್ಥಾನವೆಂದು ಒಡನೆಯೆ ಅರಿತ ಭರಮಜ್ಜ ನಿಶ್ಚಯದ ದನಿಯಲ್ಲಿ ಹೇಳಿದ:

“ಅದೊಂದು ಬಿಟ್ಟು ಏನು ಬೇಕಾದ್ದು ಹೇಳ್ರಿ ಮಾಸ್ತರೇ. ಕೇಳುತೀವಿ.”

“ನನ್ನ ಮಾತು ನೀವು ಕೇಳಲೇಬೇಕಂತ ನನ್ನದೇನೂ ಹಟ ಇಲ್ಲ ಭರಮಜ್ಜಾ. ಆದರಽ ನಿಮ್ಮ ಕಲ್ಯಾಣಕ್ಕೆಂತಲೇ ನಾ ಹೇಳುತೀನಿ. ಸೂಳಿ ಬಿಡೂದು ಚಲೋದಲ್ಲಪ್ಪ.”

“ಅದು ಚಲೋದೋ ಕೆಟ್ಟದೋ. ಹಿಂದಿನಿಂದ ಹಿರೇರ ಕಾಲದಿಂದ ನಡಕೊಂಡು ಬಂದೈತಿ. ನಮ್ಮ ಕುಲಾಚಾರ ಬಿಡೂದು ಹೆಂಗಾದೀತು ಮಾಸ್ತರೇ? ಇದೊಂದು ಮಾತ್ರ ನೀವು ತಲ್ಯಾಗ ಹಾಕ್ಕೊಳ್ಳಬ್ಯಾಡ್ರಿ,” ಎಂದು ಸ್ಪಷ್ಟವಾಗಿ ಹೇಳಿದ ಭರಮಜ್ಜ. ಮಾಸ್ತರರು ಖಿನ್ನಮನಸ್ಸಿನಿಂದ ಎದ್ದು ಹೋದರು.

ಮಾರನೆಯ ದಿನ ಆ ವಿಚಾರವಾಗಿ ಮಾತನಾಡುತ್ತ ಅವರೆಂದರು:

“ಬಹಳ ದಿನಗಳಿಂದ ಅವರಿಗಂಟಿಕೊಂಡ ಅಂಧಶ್ರದ್ಧೆಗಳು ಹೀಗೆ ಒಮ್ಮಿಂದೊಮ್ಮೆ ಹೋಗುವದಿಲ್ಲ ಮಹಾದೇವಾ. ಕಲ್ಲು ಕಡೆದು ಮೂರ್ತಿ ಮಾಡುವದಕ್ಕೂ ವೇಳೆ ಬೇಕಾಗುತದ. ಒಂದೇ ದಿನದಲ್ಲಿ ಆಗುವದಿಲ್ಲ ಯಾವದೂ.”

“ನಿಮ್ಮಂಥವರು ತಿಳಿದವರು ಹೇಳಿದರೂ ಕೇಳುವದಿಲ್ಲಲ್ಲರೀ ಅವರು?”

“ಅದೂ ಅವರ ತಪ್ಪಲ್ಲ. ಎಲ್ಲಾ ತಪ್ಪು ನಮ್ಮದೇ.”

“ಹಾ?”

“ಹೌದಪ್ಪ. ಎಲ್ಲಾ ನಮ್ಮ ತಪ್ಪು. ಸಾವಿರಾರು ವರ್ಷಗಳಿಂದ ನಿಮ್ಮ ಸಮಾಜವನ್ನ ಊರ ಹೊರಗೆ ಇಟ್ಟದ್ದರ ಫಲ ಇದು. ಹಿತ್ತಲದಲ್ಲಿ ತಿಪ್ಪೆ ಇಡುವ ಹಾಗೆ ಊರಾಚೆ ನಿಮ್ಮನ್ನಿಟ್ಟೆವು. ನೀವೂ ನಮ್ಮ ಹಾಗೆ ಮನುಷ್ಯ

ಪ್ರಾಣಿಗಳು ಅನ್ನುವದನ್ನ ಮರೆತು ನಿಮ್ಮನ್ನ ಪಶುಗಳಂತೆ ನಡಸಿಕೊಂಡೆವು. ಹಂದಿ ಹೆಗ್ಗಣಗಳನ್ನು ನೋಡಿದಾಗ ಅಸಹ್ಯದಿಂದ ದೂರ ಸರಿಯುವ ಹಾಗೆ ನಿಮ್ಮನ್ನ ನೋಡುತ್ತಲೂ ದೂರ ಸರಿಯುವ ಪದ್ಧತಿ ಬೆಳಸಿಕೊಂಡೆವು. ನಿಮ್ಮ ನೆರಳು ಸಹಾ ನಮ್ಮ ಮೇಲೆ ಬೀಳದಂತೆ ಎಚ್ಚರಿಕೆ ವಹಿಸುತ್ತ ಬಂದೆವು. ನೀವು ಯಾವ ಸ್ಥಿತಿಯಲ್ಲಿದ್ದೀರಿ, ನೀವು ಬದುಕಿದ್ದೀರೋ ಸತ್ತಿದ್ದೀರೋ ಅನ್ನುವದನ್ನ ಎಂದೂ ವಿಚಾರಮಾಡಲಿಲ್ಲ. ನಮ್ಮ ಕೀಳು ಕೆಲಸಗಳನ್ನಷ್ಟು ನಿಮ್ಮಿಂದ ಮಾಡಿಸಿಕೊಂಡು ಸ್ವಾರ್ಥ ಸಾಧಿಸಿಕೊಂಡೆವು. ನಿಮಗೂ ವಿದ್ಯೆ ಕಲಿಸಬೇಕು, ಜಾಣರನ್ನಾಗಿ ನಾಗರಿಕರನ್ನಾಗಿ ಮಾಡಬೇಕು ಎಂಬ ವಿಚಾರ ಸಹ ನಮ್ಮ ತಲೆಯಲ್ಲಿ ಬರಲಿಲ್ಲ. ಆದರಿಂದಲೇ ಅಲ್ಲೇನು ನಿಮ್ಮ ಜನ ಹೀಗೆ ಹಿಂದುಳಿದಿರೋದು? ಅಂಧಶ್ರದ್ಧೆ ಅಜ್ಞಾನ ಎಲ್ಲಾದಕ್ಕೂ ಇದೇ ಕಾರಣ. ನಾವು ಇಟ್ಟ ಹಾಗೆ ಅವರಿದ್ದಾರೆ. ಇದರಲ್ಲಿ ಅವರದೇನೂ ತಪ್ಪಿಲ್ಲ."

"ಇವರನ್ನ ಸುಧಾರಿಸೂದು ಹ್ಯಾಂಗ ಮಾಸ್ತರೇ?"

"ಸುಧಾರಿಸುವದೆಂದರೆ ಸಾಧಾರಣ ಮಾತಲ್ಲ ತಮ್ಮಾ. ಒಂದೆರಡು ದಿನದಲ್ಲಿ ಆಗುವ ಕೆಲಸವಲ್ಲ ಅದು. ಗಾಂಧಿಯವರಂಥವರೇ ಎಷ್ಟು ಕಷ್ಟ ಪಡಹತ್ತಿದಾರೆ. ಮೊದಲು ಈ ಮೇಲಿನ ಜಾತಿಯವರನ್ನೇ ಸುಧಾರಿಸಬೇಕಾಗ್ಯದ. ಎಂಟುನೂರು ವರ್ಷಗಳ ಹಿಂದೆ ಬಸವಣ್ಣನಂಥವರೆಷ್ಟು ಕಷ್ಟ ಪಟ್ಟರು. ನಿನಗೊಮ್ಮೆ ಅವರ ಕತೆಯೆಲ್ಲಾ ಹೇಳಿದ್ದೇನಲ್ಲ. ನಿಮ್ಮ ಜಾತಿಯವರಿಗೂ ಅವರು ಲಿಂಗ ಕಟ್ಟಿದರು. 'ನೆಲ ಒಂದೇ ಹೊಲಗೇರಿ ಶಿವಾಲಯಕ್ಕೆ' ಅಂತ ಬಡುಕೊಂಡರು. ಏನು ಮಾಡಿದರೂ ನಮ್ಮ ತಲೆ ಸುಧಾರಿಸಲಿಲ್ಲ. ನಮ್ಮ ನೀಚತನವನ್ನ ನಾವು ಬಿಡಲಿಲ್ಲ. ಮೊದಲು ನಾವೇ ನಮ್ಮನ್ನ ಸುಧಾರಿಸಿಕೊಳ್ಳುವದದ ತಮ್ಮಾ. ಆಮ್ಯಾಲ ಹರಿಜನರನ್ನ ಸುಧಾರಿಸುವ ಮಾತು."

ಆ ದಿನ ಸಾಯಂಕಾಲ ಶಾಲೆ ಬಿಟ್ಟೊಡನೆ ಎಂದಿನಂತೆ ನೇರವಾಗಿ ಮನೆಗೆ ಹೋಗಲಿಲ್ಲ ಮಹಾದೇವ. ಹಳ್ಳಿಯ ಹಿಂಭಾಗದಲ್ಲಿದ್ದ ಗುಡ್ಡಕ್ಕೆ ಹೋಗಿ ಕಲ್ಲು ಬಂಡೆಯೊಂದರ ಮೇಲೆ ಕುಳಿತುಕೊಂಡ. ಸುತ್ತುಮುತ್ತಲೂ ನೀರವತೆ ಕಡಲಿನಂತೆ ವ್ಯಾಪಿಸಿತ್ತು. ಮೊಳಕಾಲುಗಳ ನಡುವೆ ತಲೆಯನ್ನು

ಹುದುಗಿಸಿ, ಎದೆಯಲ್ಲಿನ ದುಃಖವನ್ನೆಲ್ಲ ತೋಡಿಕೊಳ್ಳತೊಡಗಿದ ಮಹಾದೇವ. ಕೊನೆಗೂ ಚಂದ್ರಳನ್ನು ಸೂಳಿಗಾರಿಕೆಯ ಸೆರೆಯಿಂದ ಬಿಡಿಸಿಕೊಳ್ಳಲಾಗಲಿಲ್ಲ. ದೇವರಂಥ ಮಾಸ್ತರರ ಮಾತನ್ನೂ ಕೇಳಲಿಲ್ಲವಲ್ಲ ಆ ಜನ. ಇನ್ನು ತನ್ನಂಥ ಹುಡುಗನ ಮಾತು! ಮುಲ್ಕೀ ಪರೀಕ್ಷೆ ಮುಗಿಸಿ ಈ ಸಮಾಜದ ಸೇವೆ ಮಾಡಬೇಕೆಂದು ತಾನು ಯೋಚಿಸಿಕೊಂಡಿದ್ದ. ಸಾಂಬಯ್ಯ ಮಾಸ್ತರರು ತನಗೆ ಸ್ಫೂರ್ತಿ ನೀಡಿದ್ದರು. ಇನ್ನೆರಡು ವರ್ಷಗಳಲ್ಲಿ ಆ ಪರೀಕ್ಷೆಯೂ ಮುಗಿಯುವುದು. ಮುಂದೇನು? ಸುಧಾರಣೆಯೆಂದರೆ ಸಾಧಾರಣವಾದುದಲ್ಲವೆಂದು ಮಾಸ್ತರರೇ ಹೇಳುತ್ತಾರೆ. ಹಾಗಾದರೆ.... ಹಾಗಾದರೆ....

ಹಾಗೆ ಯೋಚಿಸುತ್ತ ಎಷ್ಟೋ ಹೊತ್ತಿನವರೆಗೆ ಅಲ್ಲಿಯೆ ಕುಳಿತಿದ್ದ ಮಹಾದೇವ. ಎದ್ದು ಮನೆಯ ಕಡೆ ಹೊರಡುವಾಗ ಆತ ಯಾವುದೋ ನಿರ್ಧಾರಕ್ಕೆ ಬಂದ ಹಾಗಿತ್ತು.

ಮಾರನೆಯ ದಿನ ಚಂದ್ರಳೊಬ್ಬಳನ್ನೆ ಒಂದೆಡೆಗೆ ಕರೆದೊಯ್ದು ಆತ ಕೇಳಿದ:

"ನಿನ್ನ ಸೂಳಿ ಬಿಡುತಾರಂತಲ್ಲ ಚಂದ್ರೀ. ಸೂಳಿಯಾಗುವ ಮನಸೈತೇನ ನಿನಗ?"

ಆ ಅಜ್ಞ ಬಾಲೆ ಏನೆಂದು ಉತ್ತರವೀಯಬಲ್ಲಳು? ತನ್ನನ್ನು ಯಲ್ಲವ್ವನ ಸೂಳೆಯನ್ನಾಗಿ ಬಿಟ್ಟ ಸಂಗತಿಯೇನೋ ಅವಳಿಗೆ ತಿಳಿದಿದೆ. ಆದರೆ ಸೂಳೆಯೆಂದರೇನೆಂಬುದನ್ನು ಮಾತ್ರ ಅವಳಿನ್ನೂ ಅರಿಯಳು.

"ಲಚುಮಕ್ಕ ಹೇಳುತಿದ್ದಳಪಾ ನಿನ್ನೆ. ಸೂಳಿಯಾದರ ಯಲ್ಲವ್ವ ಬೇಡಿದ್ದು ಕೊಡುತಾಳಂತ ನನಗ. ಚಲೋ ಚಲೋ ಸೀರಿ ಕುಬುಸಾ, ಬಂಗಾರದ ವಸ್ತಾ ಒಡವೀ, ರೊಕ್ಕಾ ರುಪಾಯಿ ಎಲ್ಲಾ ಸಿಗುತೈತಂತೆ," ಎಂದಳು ಚಂದ್ರಾ.

"ಹಂಗಾದರ ಸೂಳಿಯಾಗುವಾಕಿ ಅನ್ನು ನೀ."

ತನ್ನ ಮುಗ್ಧನೇತ್ರಗಳನ್ನು ವಿಸ್ಫುರಿತಗೊಳಿಸುತ್ತ ಅವಳೆಂದಳು:

"ಹೂಂ, ಮಾದೇವಾ. ನಾ ಸೂಳಿಯಾಗುತೀನಿ."

"ಏನೂ ತಿಳಿಯೂದಿಲ್ಲ. ಈ ಹುಡುಗಿಗೇನೂ ತಿಳಿಯೂದಿಲ್ಲ," ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತ ಮಹಾದೇವ ನಿರಾಶನಾಗಿ ಮಾತು ನಿಲ್ಲಿಸಿದ.

ಹರಿಜನ ಕೇರಿಯಲ್ಲಿ ಹುಡುಗಿಯೊಬ್ಬಳನ್ನು ಸೂಳೆ ಬಿಟ್ಟರೆಂಬ ಸಮಾಚಾರ ಶಾಲೆಯ ವಿದ್ಯಾರ್ಥಿಗಳಲ್ಲೂ ಪಸರಿಸಿತ್ತು.

"ಆ ಹುಡುಗೀನ್ನ ನೀ ನs ಮದುವಿಯಾಗಬೇಕಂತ ಮಾಡಿದ್ದಿಯಲ್ಲೋ ಮಾದೇವಾ ?" ಎಂದು ಕೇಳಿದ ಢೋರರ ಕಾಳ.

ಚಂದ್ರಳೊಡನೆ ತನಗೆ ಮದುವೆ! ಆ ವಿಚಾರ ಮಹಾದೇವನ ಮನಸ್ಸಿನಲ್ಲಿ ಒಂದು ಸಲವೂ ಸುಳಿದಿರಲಿಲ್ಲ. ಅಂಥ ವಿಚಾರಗಳನ್ನು ಮೆಲುಕು ಹಾಕುವ ವಯಸ್ಸೂ ಅವನದಾಗಿರಲಿಲ್ಲ. ಚಂದ್ರಾ ಅವನ ನೆರಮನೆಯ ಹುಡುಗಿ. ಇಬ್ಬರೂ ಒಂದೇ ಕಡೆ ಕೂಡಿ ಬೆಳೆದವರು. ಅವಳ ಬಗೆಗೆ ಅವನಲ್ಲಿ ಗಾಢವಾದ ಆತ್ಮೀಯತೆ ಬೆಳೆದು ಬಂದಿದ್ದಿತಾದರೂ ಅದಕ್ಕೆ ಸ್ವಾರ್ಥದ ಸ್ಪರ್ಶವಾಗಿರಲಿಲ್ಲ. ಚಂದ್ರಳೊಡನೆ ಮದುವೆ! ಮಹಾದೇವ ನಕ್ಕು ಮೌನತಳೆದ.

ಢೋರರ ಕಾಳ ಮಹಾದೇವನಿಗಿಂತ ವಯಸ್ಸಿನಲ್ಲಿ ದೊಡ್ಡವನು. ಚರ್ಮ ಹದಗೊಳಿಸುವ ಉದ್ಯೋಗದಲ್ಲಿ ಅವನ ತಂದೆ ಸಾಕಷ್ಟು ಸಂಪಾದನೆ ಮಾಡುತ್ತಿದ್ದುದರಿಂದ ಮಹಾದೇವನಂಥ ದಾರಿದ್ರ್ಯವನ್ನಾತ ಅನುಭವಿಸಿರಲಿಲ್ಲ. ಚಿಕ್ಕತನದಿಂದಲೂ ತಕ್ಕಮಟ್ಟಿಗೆ ಸುಖದಲ್ಲಿಯೆ ಬೆಳೆದು ಬಂದ ಕಾಳ ಶಾಲೆಯಲ್ಲಿ ತುಂಟ ಹುಡುಗರ ಸಹವಾಸಮಾಡಿ ಅಸಭ್ಯ ಮಾತುಗಳನ್ನಾಡಲೂ ಕಲಿತುಕೊಂಡಿದ್ದ. ಶರಣಪ್ಪನ ಮಗ ಸಂಗಣ್ಣನಿಗೂ ಕಾಳನಿಗೂ ಬಹಳ ಸ್ನೇಹ. ಕಿಡಿಗೇಡಿತನದ ಕೃತ್ಯಗಳಲ್ಲಿ ಅವರಿಬ್ಬರೂ ನಿಪುಣರಾಗತೊಡಗಿದರು.

"ಅವಳು ಸೂಳಿಯಾದದ್ದೇ ಚಲೋ ಆತೇಳೋ," ಎಂದ ಸಂಗಣ್ಣ.

"ಯಾಕ ಸಂಗಣ್ಣಾ, ನಿನಗೇನರೆ ವಿಚಾರ ಐತೇನು? ಚಂದ್ರಿಯ ಮ್ಯಾಲ ಮನಸು ಹೋಗ್ಯೈತ್ಯೋ ಏನು ?" ಎಂದ ಕಾಳ.

"ಅವಳ್ಯಾವ ಚಂದ್ರಿಯೊ ಚಿಂದಿಯೋ ಮಾರೀನs ನೋಡಿಲ್ಲಂತೆ ನಾ.

ಇನ್ನು ವಿಚಾರ ಎಲ್ಲಿಂದ ಬರುತ್ತೈತಿ ನಿನ್ನ ತಲಿ?" ಎಂದ ಸಂಗಣ್ಣ. ಕಾಳ ಗಹಗಹಿಸಿ ನಗತೊಡಗಿದ. ಇತರ ವಿದ್ಯಾರ್ಥಿಗಳೂ ನಕ್ಕರು.

ವಾರ್ಷಿಕ ಪರೀಕ್ಷೆ ಬಂತು, ಮುಗಿದುಹೋಯಿತು. ಕೆಲದಿನಗಳ ತರುವಾಯ ಫಲಿತಾಂಶವೂ ಹೊರಬಿತ್ತು. ಸಂಗಣ್ಣ ಕಾಳ ಇಬ್ಬರೂ ಉತ್ತೀರ್ಣರಾಗಿರಲಿಲ್ಲ. ಮಹಾದೇವ ಮಾತ್ರ ವರ್ಗಕ್ಕೆಲ್ಲ ಮೊದಲನೆಯುವನಾಗಿ ತೇರ್ಗಡೆ ಹೊಂದಿದ್ದ.

ಸಂಗಣ್ಣನಿಗೆ ಬಹಳ ಅವಮಾನವಾದಂತಾಯಿತು. ಸಾಂಬಯ್ಯ ಮಾಸ್ತರರು ಬೇಕಂತಲೇ ತನ್ನನ್ನು ನಾಪಾಸು ಮಾಡಿರುವರೆಂದು ಆತ ಭಾವಿಸಿದ.

"ಆ ಮಾಸ್ತರಿಗೆ ಹೊಲೇರು ಅಂದರ ಬಾಳ ಪ್ರೀತಿ. ಆ ಮಾದೇವನ್ನ ಅವರೇ ಮೊದಲನೇ ನಂಬರು ತಂದವರು. ಈ ವರ್ಷ ಅಂತೂ ನಮ್ಮನ್ನ ನಾ ಪಾಸೇ ಮಾಡಿಬಿಟ್ಟರಲ್ಲ ಕಾಳೆ!" ಎಂದ ಸಂಗಣ್ಣ.

"ನಮ್ಮನ್ನ ನಾಪಾಸುಮೊಡಿ ಈ ಊರಾಗ ಅವರು ಹೆಂಗಿರುತಾರ ನೋಡೂಣು," ಎಂದ ಕಾಳ.

ತನ್ನ ಮಗ ಉತ್ತೀರ್ಣನಾಗಲಿಲ್ಲವೆಂದು ಶರಣಪ್ಪನಿಗೂ ತುಂಬ ವ್ಯಸನವಾಯಿತು. ಎಂದೂ ನಾಪಾಸಾಗದಿದ್ದ ತನ್ನ ಮಗ ಇದೇ ವರ್ಷ ನಾ ಪಾಸಾಗುವುದೆಂದರೇನರ್ಥ? ಎಂದು ಶರಣಪ್ಪ ಯೋಚನೆಗೊಳಗಾಗಿದ್ದ ಸಮಯದಲ್ಲಿ ಸಂಗಣ್ಣ ಮಾಸ್ತರರ ವಿರುದ್ಧವಾಗಿ ದೂರು ಹೇಳಿಕೊಂಡ.

"ಹೋಗು ಸಂಗಣ್ಣಾ, ಕರಕೊಂಡು ಬಾ ಮಾಸ್ತರನ್ನ," ಎಂದ ಶರಣಪ್ಪ.

ಸಾಂಬಯ್ಯನವರು ಬಂದೊಡನೆ ನೇರವಾಗಿ ವಿಷಯವನ್ನೆತ್ತಿದ ಶರಣಪ್ಪ.

"ನಮ್ಮ ಹುಡುಗ ಹೆಂಗ ನಾಪಾಸಾದ ಮಾಸ್ತರೇ?"

ಸಾಂಬಯ್ಯನವರು ಕೊಂಚವೂ ಅಪ್ರತಿಭರಾಗದೆ ಶಾಂತವಾಗಿಯೆ ಉತ್ತರವಿತ್ತರು:

"ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಬರೆಯದಿದ್ದವರೆಲ್ಲಾ ನಾಪಾಸಾಗುವದು ಸಹಜ ಅಲ್ಲವೇ ಸಾಹುಕಾರರೆ."

ಆ ಉತ್ತರದಿಂದಲೂ ಶರಣಪ್ಪನಿಗೆ ಸಮಾಧಾನವುಂಟಾಗಲಿಲ್ಲ.

"ನನ್ನ ಮಗ ಅಷ್ಟು ಧಡ್ಡ ಆಗಿದಾನು ಅಂತೀರಾ? ಇಷ್ಟು ವರ್ಷಗಳ ತನಕ ಪಾಸಾಗುತ್ತಾ ಬಂದವ ಇದೇ ವರ್ಷ ನಾಪಾಸಾಗೂದಂದರೇನು? ಇದರಾಗ ನಿಮ್ಮದೇ ಏನೋ ತಪ್ಪಿರಬೇಕು."

"ಶಿವಶಿವಾ, ಎಂಥಾ ಮಾತು ಕೇಳಬೇಕಾಯಿತು! ನಾನೇನು ತಪ್ಪು ಮಾಡಿರಬಹುದು ಸಾಹುಕಾರರೆ?"

"ನಿಮ್ಮದು ನಿಮಗs ಗೊತ್ತಾಗಬೇಕು. ಹೋಗಲಿ. ಈಗಲಾದರೂ ಏನಂತೆ. ಹುಡುಗನ್ನ ಪಾಸುಮಾಡಿ ಬಿಟ್ಟರಾಯಿತಲ್ಲ ಮಾಸ್ತರರೇ?"

ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತದೆ ಮಾಸ್ತರರು ಮನೆಗೆ ಬಂದರು. ಗೋಡೆಗೆ ನೇತಾಡುತಿದ್ದ ಗಾಂಧೀ ಚಿತ್ರದೆದುರಿಗೆ ನಿಂತುಕೊಂಡು ತಮ್ಮಷ್ಟಕ್ಕೆ ತಾವೇ ಕೇಳಿಕೊಂಡರು:

"ಹ್ಯಾಗೆ ಮಾಡೂದು? ಮುಂದೆ ಹ್ಯಾಗೆ ಮಾಡೂದು?"

"ಏನಾಗುವದೋ ಆಗಲಿ. ಸತ್ಯದ ಹಾದಿಯಲ್ಲೇ ಸಾಗಬೇಕು," ಎಂದು ಅವರ ಒಳದನಿ ಪಿಸುಗುಟ್ಟಿತು.

ಮಾಸ್ತರರು ಮನಸ್ಸನ್ನು ಹತೋಟಿಗೆ ತಂದುಕೊಂಡು ಚರಖವನ್ನು ಮುಂದಿಟ್ಟುಕೊಂಡು ನೂಲತೊಡಗಿದರು.

೧೩

ಏಳೆಂಟು ದಿನಗಳ ತರುವಾಯ ಒಂದು ಸಾಯಂಕಾಲ ಸಾಂಬಯ್ಯ ಮಾಸ್ತರರು ಹರಿಜನ ಕೇರಿಯಿಂದ ತಮ್ಮ ಮನೆಗೆ ಬರುತ್ತಿದ್ದಾಗ ಬೀದಿಯಲ್ಲಿ ಗೋಲಿಯಾಡುತ್ತಿದ್ದ ಹುಡುಗರು ಕೆಲವರು ಅವರನ್ನು ಕಂಡು ತಮ್ಮ ತಮ್ಮಲ್ಲಿಯೆ ಮಾತನಾಡಿಕೊಂಡರು.

" ಸೂಳಗೇರಿಗೆ ಹೋಗಿ ಬಂದರಪೋ," ಎಂದನೊಬ್ಬ.

" ಸಿಂದೀ ಕುಡಿದು ಬಂದರಪೋ," ಎಂದನಿನ್ನೊಬ್ಬ.

" ಮಾಂಸಾ ತಿಂದು ಬಂದರಪೋ," ಎಂದ ಮತ್ತೊಬ್ಬ.

" ಹೊ ಹೊ ಹೊ ಹ್ಹೊ " ಎಂದು ಕೂಗುತ್ತಾ ಹುಡುಗರೆಲ್ಲ ಎದ್ದು ಬೀದಿಯ ಮಣ್ಣು ಹಾರಿಸುತ್ತ ಅತ್ತಿತ್ತ ಚದರಿ ಹೋದರು.

ಎದುರಿನ ಕಿರಾಣಿ ಅಂಗಡಿಯಲ್ಲಿ ಕುಳಿತಿದ್ದ ಸಂಗಣ್ಣ ತಮ್ಮನ್ನು ಕಂಡು ತುಂಟತನದಿಂದ ನಗುತ್ತಿದ್ದುದನ್ನು ಮಾಸ್ತರರು ಕಂಡರು. " ಹುಡುಗರಿಗೆ ಇವನೇ ಕಲಿಸಿದ್ದನೊ ಏನೊ," ಎಂದುಕೊಳ್ಳುತ್ತ ತಲೆ ಬಾಗಿಸಿಕೊಂಡು ಮನೆಗೆ ಬಂದರು.

ಮಾರನೆಯ ದಿನ ಬೆಳಿಗ್ಗೆ ಅವರು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬರಲೆಂದು ಹಳ್ಳದ ಕಡೆ ಹೊರಟದ್ದಾಗ ತಿಪ್ಪೆಗಳ ಬಳಿ ಕುಳಿತಿದ್ದ ಇಬ್ಬರು ಹುಡುಗರು ಅವರನ್ನು ಕಂಡು ಸಿಳ್ಳು ಹಾಕಿದರು.

" ಮಾದ್ಯಾನ ಅವ್ವನ ಮಿಂಡ
ಹೊಂಟೌನಪೋ ಹೊಂಟೌನ,
ಹಳ್ಳದ ಕಡೆ ಹೊಂಟೌನ," ಎಂದು ಒಬ್ಬ ರಾಗ ತೆಗೆದ.

"ಹೊಂಟೌನವೋ ಹೊಂಟೌನ
ಹೊಲೇರ ಗುರು ಹೊಂಟೌನ
ಹಳ್ಳದ ಕಡೆ ಹೊಂಟೌನ," ಎಂದು ಇನ್ನೊಬ್ಬ ಹಾಡಿದ.

ಮತ್ತೊಂದು ದಿನ ಅವರು ಶಾಲೆಯಿಂದ ಮನೆಗೆ ಬರುತ್ತಿದ್ದಾಗ, ಒಂದು ಮನೆಯೆದುರಿಗೆ ಕುಳಿತು ಜೋಳದಲ್ಲಿನ ಹರಳುಗಳನ್ನು ಹೆಕ್ಕಿ ತೆಗೆಯುವುದರಲ್ಲಿ ತೊಡಗಿದ್ದ ಹೆಣ್ಣು ಮಕ್ಕಳಿಬ್ಬರು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿದರು:

"ಮಂದಿ ಮಾತಾಡೂದೂ ಖರೇವೋ ಏನೊ ನೋಡವ್ವ. ಈ ಮುದಿ ವಯಸ್ಸಿನಾಗ ಹೆಂಗಾದರೂ ಕೆಟ್ಟುಹೋದನೋ ಮಾಸ್ತರು," ಎಂದಳೊಬ್ಬಳು.

ಎರಡನೆಯವಳು ಎಲ್ಲ ಬಲ್ಲವಳಂತೆ ನಗುತ್ತಾ ಹೇಳಿದಳು:

"ಅಯ್ಯs! ನಿನಗೊತ್ತಿಲ್ಲೇನs? ಮುದುಕರಿಗೇ ಹೆಣ್ಣಿನ ಹುಚ್ಚು ಬಾಳ!"

ಮಾಸ್ತರರಿಗೆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದ ಅಡಿವೆಯ್ಯ ಒಂದು ದಿನ ಅವರನ್ನು ಕರೆದು ಹೇಳಿದ:

"ದನಾ ಕಟ್ಟೊದಕ್ಕ ಜಾಗಾ ಬೇಕಾಗೈತಿ ಮಾಸ್ತರೇ. ನಮ್ಮ ಮನಿಯನ್ನ ಲಗೂ ಖಾಲಿ ಮಾಡಿಕೊಡ್ರಿ."

"ಹಳ್ಳೀ ಊರಲ್ಲಿ ಬೇರೆ ಮನೆ ಎಲ್ಲಿ ಸಿಗುತಾವೆ ಅಯ್ಯನವರೇ?"

"ಸಿಗದಿದ್ದರ ನಾನೇನು ಮಾಡಲಿ? ನಿಮಗೇನು ಕಡಿಮಿ ಬಿಡ್ರಿ ಮನಿಗಳು!" ಎಂದು ಅಣಕದ ದನಿಯಲ್ಲಿ ನುಡಿದ ಅಡಿವೆಯ್ಯ.

ಸಂಗಣ್ಣ ಸುಮ್ಮನೆ ಕುಳಿತಿರಲಿಲ್ಲ. ಕಾಮಣ್ಣನನ್ನು ಹಿಡಿದು, ಮಾಸ್ತರರ ವಿರುದ್ಧವಾಗಿ ಸ್ಕೂಲ್ ಬೋರ್ಡಿಗೆ ಅರ್ಜಿ ಹಾಕಿಸಿದ್ದ.

"ಮಾಸ್ತರು ಹೋಗುತಾರವೋ ಹೋಗುತಾರ."

"ಹೊಲೇರ ಹೆಂಗಸರನ್ನ ಬಿಟ್ಟು ಹೆಂಗ ಹೋಗುತಾರವೋ ಹೋಗುತಾರ!"

"ಅವರನ್ನೂ ಕರಕೊಂಡೇ ಹೋಗುತಾರವೋ ಹೋಗುತಾರ!"

"ಮಾಸ್ತರಕೀ ಬಿಟ್ಟು ಹೊಲೇರ ಓಣ್ಯಾಗs ಇರುತಾರವ್ರೋ ಇರುತಾರ !"

—ಎಂದು ಮೊದಲಾಗಿ ಸಂಗಣ್ಣನ ಗೆಳೆಯರ ಬಳಗ ಘೋಷಿಸ ತೊಡಗಿತು.

ಮುಂದೇನನ್ನು ಮಾಡುವುದೆಂದು ಯೋಚಿಸಿ, ಯಾವುದೂ ಬಗೆ ಹರಿಯದೆ, ಒಂದು ದಿನ ಮುಖ್ಯಾಧ್ಯಾಪಕ ವೆಂಕಟರಾಯರವರಿಗೆ ತಮ್ಮ ಗೋಳನ್ನೆಲ್ಲ ತೋಡಿಕೊಂಡರು ಸಾಂಬಯ್ಯನವರು.

ಅದೇ ಹಳ್ಳಿಯಲ್ಲಿ ಹತ್ತು ವರ್ಷಗಳನ್ನು ಕಳೆದು, ಅಲ್ಲಿನ ಜನರ ಮನೋವೃತ್ತಿಯನ್ನು ಚೆನ್ನಾಗಿ ಅರಿತುಕೊಂಡು ಅದಕ್ಕೆ ತಕ್ಕ ಹಾಗೆ ವರ್ತಿಸುತ್ತ ಬಂದಿದ್ದ ವ್ಯವಹಾರ ಕುಶಲರು ವೆಂಕಟರಾಯರು. ಕರ್ಮಠ ಪ್ರಕೃತಿಯವರಾದ ಅವರಿಗೂ ಸಾಂಬಯ್ಯನವರ ಹರಿಜನ ಸೇವೆಯ ಚಟುವಟಿಕೆಯಿಂದಾಗಿ ತುಂಬ ಬೇಸರವುಂಟಾಗಿತ್ತು.

"ನಿಮಗಾದರೂ ಆ ಹೊಲೆಯರ ಉಸಾಬರಿ ಯಾಕೆ ಬೇಕೋ ತಿಳಿಯುವದಿಲ್ಲ. ನಮ್ಮ ಹಾಗೆ ಸುಮ್ಮನೆ ಶಾಲೆ ಮನೆ ಎರಡನ್ನೇ ನೆಚ್ಚಿಕೊಂಡಿದ್ದರೆ ಇಂಥಾ ಪ್ರಸಂಗ ಬರ್ತಿರಲಿಲ್ಲ," ಎಂದರವರು.

"ಅಂದರೆ ? ನಾನು ಹರಿಜನ ಕೇರಿಗೆ ಹೋಗುವದು ತಪ್ಪು ಅಂತೀರಾ ನೀವೂ ?"

"ಅಲ್ಲಿಗೆ ಹೋಗುವದೇ ತಪ್ಪು ಅಂತಲ್ಲ. ಎಲ್ಲರೂ ಹೋಗುತ್ತಾರೆ. ರಾತ್ರಿ ಹೋಗಿ ಬೆಳಿಗ್ಗೆ ಬರುತ್ತಾರೆ. ನೀವೂ ಅವರ ಹಾಗೆ ಹೋಗಿ ಬಂದರೂ ನಡೆದೀತು. ಆದರೆ ಆ ಜನರನ್ನು ತಲೆಯ ಮೇಲೆತ್ತಿಕೊಂಡು ಕುಣಿಯುವದು, ಹೊಲೆಯರ ಹುಡುಗರಿಗೆ ಮೊದಲನೆಯ ನಂಬರು ಕೊಡುವದು ಇದೆಲ್ಲಾ ಮಾಡಿದ್ದರಿಂದ ಊರವರು ಸಿಟ್ಟಾಗಿದಾರೆ."

"ನಾನೇನೂ ಅನ್ಯಾಯ ಮಾಡಿಲ್ಲವಲ್ಲಾ ?"

"ಮಾಡಿಲ್ಲ ಅಂತ ನಿಮಗನ್ನಿಸುತದ. ನೋಡುವವರಿಗೆ ಅನ್ನಿಸಬೇಕಲ್ಲ! ನಿಮ್ಮ ಆ ಬಸವಣ್ಣ ಒಬ್ಬ ಹೀಗೇ ಮಾಡಿ ಬಡಿಸಿಕೊಂಡು ಸತ್ತುಹೋದ."

"ಅಸ್ಪೃಶ್ಯತಾ ನಿವಾರಣೆ..."

"ಹೂಂ. ಅದೊಂದು ಹೊಸ ಚಳವಳಿ ಬಂತು. ಆ ಗಾಂಧಿಗೆ ಬುದ್ಧಿಯಿಲ್ಲ. ಹಾರುವರು ಹೊಲೆಯರು ಎಲ್ಲಾ ಒಂದೇ ಅಂತೆ. ಹೊಲೆಯರೆಂದರೆ ಹರಿಜನರಂತೆ. ಎಂಥಾ ಹುಚ್ಚು. ಸಾವಿರಾರು ವರ್ಷಗಳಿಂದ ಬಿಗಿಯಾಗಿ ನಡೆಯುತ್ತಾ ಬಂದ ಹಿಂದೂಧರ್ಮದ ಆಚಾರಗಳನ್ನ ಗಾಂಧಿಯಂಥ ಬಸವನಂಥ ಒಬ್ಬಿಬ್ಬರು ಮುರಿದುಬಿಡುವದೆಂದರೆ ಹುಡುಗಾಟವಷ್ಟೆ. ಜನರು ಒಪ್ಪಬೇಕೋ ಬೇಡೋ?"

ಮುಂದೆ ಮಾತು ಬೆಳಸದೆ ಸಾಂಬಯ್ಯನವರು ಎದ್ದು ಬಂದರು.

ಬೇಸಗೆಯ ರಜಕ್ಕಾರಂಭವಾಗುವಷ್ಟರಲ್ಲಿಯೆ ಅವರಿಗೆ ವರ್ಗವಾದ ಆಜ್ಞೆಯೂ ಬಂದಿತು. ಆ ವಾರ್ತೆ ಗೊತ್ತಾಗುತ್ತಲೂ ಮಹಾದೇವ ಬಿಕ್ಕಿ ಬಿಕ್ಕಿ ಅತ್ತ. ಹರಿಜನ ಕೇರಿಯವರಿಗೆಲ್ಲ ತುಂಬ ವ್ಯಸನವಾಯಿತು.

"ನನ್ನದೇನೂ ತಪ್ಪಿರದಿದ್ದರೂ ನನ್ನ ವರ್ಗ ಮಾಡಿದಾರ. ಈಗ ನಾನೇನು ಮಾಡಬೇಕಂತೀರಿ ನೀವು?" ಎಂದು ಮಾಸ್ತರರು ಕೇಳಿದರು.

"ನಮ್ಮ ಕೇರಿಗೆ ನೀವು ಬಂದು ಹೋಗುತಿದ್ದದ್ದೇ ಮೂಲ ಆತು ಮಾಸ್ತರರೇ," ಎಂದರು ಹರಿಜನರು.

"ನಿಮ್ಮ ಕೇರಿಗೆ ಬಂದು ನಾನೇನೂ ಪಾಪದ ಕೆಲಸ ಮಾಡಲಿಲ್ಲ."

"ನೀವು ಪಾಪ ಮಾಡೀರಿ ಅಂತ ಅನ್ನುವವರ ಬಾಯಾಗ ಹುಳಾ ಬಿದ್ದೀತು ಬಿಡಿರಿ." ಭರಮಜ್ಜ ಹೇಳಿದ. "ಆವರೇನು ಮಾಡೂದು ಮಾಸ್ತರೇ ನೀವು ನೋಕರದಾರರು. ಹುಕುಂ ಆದ ಹಾಂಗ ನಡೀಬೇಕಾಗುತ್ತೈತಲ್ಲ?"

"ನೌಕರಿಗೆ ರಾಜೀನಾಮೆ ಕೊಟ್ಟು ನಾನೂ ನಿಮ್ಮ ಕೇರಿಯೊಳಗೇ ಬಂದು ಇರಬೇಕಂತ ಮಾಡೀನಿ," ಎಂದು ನುಡಿದು ಮಾಸ್ತರರು ಅವರ ಮುಖಗಳನ್ನೇ ದಿಟ್ಟಿಸುತ್ತ ನಿಂತರು.

ಹರಿಜನರು ಒಂದೆರಡು ಕ್ಷಣ ದಂಗು ಬಡೆದವರ ಹಾಗೆ ಕುಳಿತಿದ್ದರು. ಮಹಾದೇವನಿಗೂ ವಿಸ್ಮಯವಾಗದಿರಲಿಲ್ಲ. ಮಾಸ್ತರರ ಒಳ್ಳೆಯತನ ಇಷ್ಟು ಮುಂದುವರಿಯಬಹುದೆಂದು ಅವನೂ ನಿರೀಕ್ಷಿಸಿಕೊಂಡಿರಲಿಲ್ಲ.

ಕೈಗಳನ್ನು ಜೋಡಿಸಿ ಮಾಸ್ತರರಿಗೆ ನಮಸ್ಕಾರ ಮಾಡುತ್ತ ಭರಮಜ್ಜ ಹೇಳಿದ:

" ನಮ್ಮ ಮ್ಯಾಲ ದಯಾಮಾಡ್ರಿ ಮಾಸ್ತರೇ. ಇಂಥಾ ಭಯಂಕರ ಕೆಲಸಾ ಮಾತ್ರ ಮಾಡಬ್ಯಾಡ್ರಿ."

" ಭಯಂಕರಾ ?"

" ಭಯಂಕರ ಅಲ್ಲದಿನ್ನೇನ್ರಿ ? ಲಿಂಗಾಯತರಾದ ನೀವು ಇಲ್ಲಿ ನಮ್ಮಲ್ಲಿ ಬಂದು ಇದ್ದರ ಊರವರು ಸುಮ್ಮನ ಬಿಟ್ಟಾರೇನ್ರೀ ನಮ್ಮನ್ನ? ಅವರು ಕೊಡುವ ಆಯದ ಮ್ಯಾಲ ನಾವು ಬದುಕುವವರು. ಅವರು ಆಯಾ ನಿಲ್ಲಿಸಿದ ರಂದರ ನಾವೆಲ್ಲಾ ಊರುಬಿಟ್ಟು ಗುಳೇ ಹೋಗುವ ಪರಸಂಗ ಬಂದೀತಲ್ಲ...."

" ಅಷ್ಟs ಅಲ್ಲರೀ. ನಮ್ಮ ಮನೀಮಾರು ಕೂಡಾ ಹಂಗs ಬಿಡಾಕಿಲ್ಲ ರೈತರು. ಕೇರಿಗೆ ಕೇರೀನೆಲ್ಲಾ ಬೆಂಕೀ ಹಚ್ಚಿ ಸುಟ್ಟುಬಿಟ್ಟಾರು," ಎಂದ ನಾದ.

" ನಮ್ಮ ಜಾತಿಯ ಮ್ಯಾಲ ನಿಮ್ಮದು ಬಾಳ ಉಪಕಾರ ಆಗಿದಾವು ಮಾಸ್ತರೆ. ನಮ್ಮಿಂದಲೇ ನಿಮಗ ಕೆಟ್ಟ ಹೆಸರು ಬಂದಂಗಾತು. ಇನ್ನು ಮಾತ್ರ ನೀವು ಇಲ್ಲಿ ಇರಬ್ಯಾಡ್ರಿ. ನಿಮಗ ವರ್ಗ ಆದದ್ದು ಚಲೋನs ಆತು," ಎಂದ ಭರಮುಜ್ಜ.

ಆ ಮಾತುಗಳನ್ನಾಲಿಸಿದ ಮಾಸ್ತರರಿಗೆ ಆಶ್ಚರ್ಯ, ದುಃಖ, ನಿರಾಸೆಗಳು ಏಕಕಾಲಕ್ಕೇ ಉಂಟಾದುವು. ತಮಗೆ ವರ್ಗವಾದ ಸುದ್ದಿ ತಿಳಿಯುತ್ತಲೂ ಕೇರಿಯವರೆಲ್ಲ ಕಂಬನಿಗರೆಯಬಹುದು, ಅವರನ್ನು ಅನಾಥ ರನ್ನಾಗಿಮಾಡಿ ಹೋಗಕೂಡದೆಂದು ಕೇಳಿಕೊಳ್ಳಬಹುದು, ಕೆಲಸಕ್ಕೆ ರಾಜೀನಾಮೆಯಿತ್ತು ಅವರ ಕೇರಿಯಲ್ಲಿಯೆ ನೆಲಸುವ ವಿಚಾರವನ್ನು ತಾವು ತಿಳಿಸಿದಾಗ ಅವರಿಗೆಲ್ಲ ತುಂಬ ಹರ್ಷವಾಗಬಹುದು - ಎಂದು ಭಾವಿಸಿದ್ದ ಮಾಸ್ತರರಿಗೆ ವಾಸ್ತವವಾಗಿ ನಡೆದುದನ್ನು ಕಂಡು ಕಳವಳವುಂಟಾಗದಿರಲಿಲ್ಲ.

ಅದೇ ಕಾಲಕ್ಕೆ ಗಾಂಧೀಜಿ ಹರಿಜನ ಯಾತ್ರೆಗಾರಂಭಿಸಿದ್ದವರು ಸಮೀಪದ ನಗರಕ್ಕೂ ಭೆಟ್ಟಿ ಕೊಡುವವರಿದ್ದರು. ಆ ವಾರ್ತೆ ತಿಳಿದೊಡನೆ ಮಾಸ್ತರರು ಮನಸ್ಸಿನಲ್ಲೇ ಒಂದು ನಿರ್ಧಾರಕ್ಕೆ ಬಂದು ಮಹಾದೇವನನ್ನು ಬರಮಾಡಿಕೊಂಡು ಹೇಳಿದರು :

“ನಾನಂತೂ ಹೊರಡಬೇಕಾಯಿತು ಮಹಾದೇವಾ. ನೀನು ಮಾತ್ರ ವಿದ್ಯಾಭ್ಯಾಸವನ್ನು ಇಲ್ಲಿಗೇ ನಿಲ್ಲಿಸಬಾರದು.”

“ನಿಲ್ಲಿಸುವದಿಲ್ಲ ಮಾಸ್ತರೇ. ಆದರಽ ನೀವು ಹೋದಮ್ಯಾಲ ಹೆಂಗೋ ಏನೊ. ಈಗಽ ಬಹಾಳ ತ್ರಾಸ ಐತಿ.”

“ತ್ರಾಸ....ಹೌದು....ತ್ರಾಸ....” ಎಂದು ನುಡಿದು ಮಾಸ್ತರರು ಒಂದು ಕ್ಷಣ ತಡೆದು ಮತ್ತೆ ಹೇಳಿದರು: “ತ್ರಾಸ ಎಲ್ಲರಿಗೂ ಆಗುತದ ತಮ್ಮಾ. ನಾನು ಸಣ್ಣವನಿದ್ದಾಗ ನನಗೂ ನಿನ್ನ ಹಾಗೇ ತ್ರಾಸವಿತ್ತು. ನಾನು ವಿದ್ಯಾ ಕಲಿತದ್ದು ಹ್ಯಾಗೆ ಅನ್ನೋದು ಗೊತ್ತದೇನು ನಿನಗ?”

“ಹ್ಯಾಂಗರೀ?”

“ನಾನಿನ್ನೂ ಮೂರು ವರ್ಷದವನಿದ್ದಾಗಲೇ ನನ್ನ ತಾಯಿ ತೀರಿಕೊಂಡಳು. ತಂದೆ ಅದಕ್ಕೂ ಮೊದಲೇ ಹೋಗಿಬಿಟ್ಟಿದ್ದ. ನಮ್ಮ ಚಿಕ್ಕಪ್ಪನ ಮನೆಯಲ್ಲಿ ನಾನು ಬೆಳೆದೆ. ಅವರೂ ಬಹಳ ಬಡವರು. ಮಕ್ಕಳೂ ಬಹಳ. ಎಲ್ಲರಿಗೂ ದುಡಿದು ಹಾಕುವದೆಂದರೆ ಬಹಾಳ ತ್ರಾಸ ಆಗುತಿತ್ತು ನಮ್ಮ ಚಿಕ್ಕಪ್ಪಗೆ. ಎಂಟು ವರ್ಷದವನಾಗುವತನಕ ಅವರಲ್ಲೇ ಇದ್ದೆ. ಮುಂದೆ ಒಬ್ಬರಲ್ಲಿ ದನಕಾಯುವ ಕೆಲಸಕ್ಕೆ ನನ್ನನ್ನಿಟ್ಟರು. ಅಲ್ಲಿ ಸಾಲಿ ಕಲಿಯುವ ಹುಡುಗ ಒಬ್ಬನಿದ್ದ. ರಾತ್ರಿ ಅವನಿಂದ ಹೇಳಿಸಿಕೊಳ್ಳುತ್ತ ನಾನೂ ಅಕ್ಷರ ಕಲಿತುಕೊಂಡೆ. ಖಾಸಗೀರೀತಿಯಿಂದ ಪರೀಕ್ಷೆಗೆ ಕುಳಿತು ಪಾಸಾಗುತ್ತಾ ಬಂದೆ. ಆಮೇಲೆ ಅಲ್ಲಿ ಇಲ್ಲಿ ಏನೇನೋ ಕೆಲಸಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತ ಸಾಲೆಗೆ ಸೇರಿ ಮುಲ್ಕೀ ಪರೀಕ್ಷೆ ಪಾಸಾದೆ-ಆಮೇಲೆ ನೌಕರಿ ಸಿಕ್ಕಿತು. ಇದನ್ನೆಲ್ಲಾ ನಿನಗ ಯಾಕೆ ಹೇಳಿದೆನಂದರೆ ಎಂಥ ತೊಂದರೆ ಬಂದರೂ ನೀನು ಓದುವದನ್ನ ಬಿಡಬಾರದು ಅಂತ.”

“ನೀವು ಎಲ್ಲಿಗೆ ಹೋಗುವವರು ಮಾಸ್ತರೇ?”

“ಎಲ್ಲಿಗೆ ಹೋಗುವೆನೋ ನೋಡಬೇಕಪ್ಪ. ನೌಕರಿಗೆ ರಾಜೀನಾಮೆ ಕೊಟ್ಟು ನಿಮ್ಮ ಕೇರಿಯಲ್ಲೇ ಇದ್ದು ಅಲ್ಲೇ ಒಂದು ಸಾಲೆಯನ್ನೂ ಸುರು ಮಾಡಬೇಕೆಂತ ವಿಚಾರವಿತ್ತು. ಆದರೆ ಅದರಿಂದ ನಿಮಗೇ ತೊಂದರೆಯಾಗುವ

ದೆಂತ ಗೊತ್ತಾದ್ದರಿಂದ ಈಗ ಬೇರೆ ವಿಚಾರ ಮಾಡಬೇಕಾಯಿತು. ನಾಳೆ ನಾ ಹೊರಡುತ್ತೇನೆ."

"ನೌಕರಿ ಬಿಟ್ಟೇ ಬಿಡುತೀರಾ ಮಾಸ್ತರೇ?"

"ಬಿಡಬೇಕು ಅಂತ ಅನಿಸುತದ. ಅಂತೂ ನಗರಕ್ಕೆ ಹೋದಮೇಲೆ ಯಾವದನ್ನೂ ಗಟ್ಟಿಮಾಡುತೇನೆ;" ಎಂದು ಹೇಳಿ ಹತ್ತು ರೂಪಾಯಿಗಳನ್ನು ಮಹಾದೇವನ ಕೈಗಿತ್ತು, "ಮುಂದೆ ಪತ್ರ ಬರೀತೇನೆ ಮಹಾದೇವಾ. ಅಂತೂ ಸಾಲೆ ಬಿಡಬೇಡ," ಎಂದು ಹೇಳಿದರು.

ಮಾರನೆಯ ದಿನ ಮಧ್ಯಾಹ್ನದ ರೈಲಿಗೆ ಮಾಸ್ತರರು ಹೊರಟುಬಿಟ್ಟರು. ಮಹಾದೇವ, ಮಾದ, ಭರಮಜ್ಜ ಮೂವರೂ ಅವರನ್ನು ಕಳಿಸಲು ರೈಲು ನಿಲ್ದಾಣಕ್ಕೆ ಹೋಗಿದ್ದರು. ಕೆಲವರು ವಿದ್ಯಾರ್ಥಿಗಳೂ ಬಂದಿದ್ದರು. ರೈಲು ಹೊರಡುವವರೆಗೂ ನಿಂತುಕೊಂಡಿದ್ದು ಅದು ಹೊರಟುನಿಂತಾಗ ಮಾಸ್ತರರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಕಂಬನಿ ಸುರಿಸುತ್ತ ಮನೆಗೆ ಬಂದ ಮಹಾದೇವ.

ನಗರದ ನಿಲ್ದಾಣದಲ್ಲಿಳಿದ ಮಾಸ್ತರರು ನೇರವಾಗಿ ನಿಜಗುಣಸ್ವಾಮಿಗಳ ಮಠಕ್ಕೆ ಬಂದರು. ಸ್ವಾಮಿಗಳೂ ಮಾಸ್ತರರ ವಯಸ್ಸಿನವರೆ. ಸಾತ್ವಿಕ ಸ್ವಭಾವದವರು. ಮಾಸ್ತರರಿಗೂ ಅವರಿಗೂ ಬಹಳ ವರ್ಷಗಳ ಪರಿಚಯ.

ಗಂಟುಮೂಟೆ ಕಟ್ಟಿಕೊಂಡೇ ಬಂದಿಳಿದ ಮಾಸ್ತರರನ್ನು ಕಂಡು ಸ್ವಾಮಿಗಳಿಗೆ ಕೊಂಚ ವಿಸ್ಮಯುವಾಗದಿರಲಿಲ್ಲ.

"ವರ್ಗವಾಯಿತೇ ಮಾಸ್ತರೇ?"

"ಹೌದು ಬುದ್ಧೀ."

"ಯಾವೂರಿಗೆ?"

"ಒಂದೂರಿಗೆ ಹಾಕಿದ್ದಾರೆ. ಆದರೆ ನಾನೇನೂ ಅಲ್ಲಿಗೆ ಹೋಗುವದಿಲ್ಲ."

"ಅಂದರೆ?"

"ನೌಕರಿ ಸಾಕಾಗಿ ಹೋಗ್ಯದ ಬುದ್ಧೀ. ಇಲ್ಲಿಗೇ ಶರಣೆನ್ನಬೇಕಂತ ಮಾಡಿದ್ದೇನೆ."

"ಇನ್ನೊಂದೆರಡು ವರ್ಷ ಕೆಲಸ ಮಾಡಿದರೆ ಪೆನ್ಶನ್ ಬರುತ್ತದಲ್ಲವೇ?"

"ಬರುತದ. ಆದರೆ..."

ಸ್ವಾಮಿಗಳಿಗೆ ಇನ್ನೂ ವಿಸ್ಮಯ. ಮಾಸ್ತರರ ಮುಖವನ್ನು ಕೌತುಕದಿಂದ ದಿಟ್ಟಿಸುತ್ತ ಅವರು ಕೇಳಿದರು:

"ನಿಮಗೇನೋ ಪೂರಾ ವಿರಕ್ತಿ ಬಂದ ಹಾಗೆ ಕಾಣುವದಲ್ಲ ಮಾಸ್ತರೇ?"

"ಇದೆಲ್ಲ ಎಂಥಾ ವಿರಕ್ತಿ ಬುದ್ಧೀ?" ಎಂದು ಮಾಸ್ತರರು ಆ ಮಾತನ್ನು ನಗೆಯಲ್ಲಿ ತೇಲಿಸಿಬಿಟ್ಟರು.

ಸಾಯಂಕಾಲ ಸ್ವಾಮಿಗಳೊಡನೆ ವಾಯುವಿಹಾರಕ್ಕೆ ಹೋಗಿದ್ದಾಗ ಮರಡಿಹಳ್ಳಿಯಲ್ಲಿ ನಡೆದುದೆಲ್ಲವನ್ನೂ ಸಾದ್ಯಂತವಾಗಿ ವಿವರಿಸಿ ಹೇಳಿದರು ಮಾಸ್ತರರು.

ಸ್ವಾಮಿಗಳು ಮಾಸ್ತರರನ್ನು ಸಂತೈಸುತ್ತ ನುಡಿದರು:

"ನಿಮ್ಮ ಕರ್ತವ್ಯ ನೀವು ಮಾಡಿದಿರಿ. ಇಂದಿಲ್ಲ ನಾಳೆ ಅದಕ್ಕೆ ಫಲ ಸಿಕ್ಕೀತು. ಹಳ್ಳಿಯ ಮಂದಿಯ ಮಾತು ಯಾಕೆ? ಮುಂದುವರಿದ ಇಂಥಾ ಪಟ್ಟಣಗಳಲ್ಲೂ ಅಂಥ ಜನರೇ ಇದ್ದಾರೆ. ಹಿಂದುಳಿದ ಜಾತಿಗಳು ಹಿಂದುಳಿದೇ ಇರಬೇಕೆಂದು ಇವರ ಬಯಕೆ. ಅವರೇನಾದರೂ ಸ್ವಲ್ಪ ಮುಂದೆ ಬರಹತ್ತಿದರೆಂದರೆ ಹೊಟ್ಟೆಕಿಚ್ಚಿಗಾರಂಭಿಸುತ್ತಾರೆ. ಏನೋ ಅವರೊಬ್ಬರು ಇದ್ದಾರೆ ಚೆನ್ನಪ್ಪನವರು. ಹರಿಜನರಿಗಾಗಿ ಅಲ್ಪಸ್ವಲ್ಪ ಕೆಲಸಮಾಡುತ್ತಿದ್ದಾರೆ. ಅವರನ್ನು ಕಂಡು ಮೂಗು ಮುರಿಯುವವರಿಗೂ ಕೊರತೆ ಇಲ್ಲ."

ಮಾಸ್ತರರು ಕುತೂಹಲದ ದನಿಯಲ್ಲಿ ಕೇಳಿದರು:

"ಈ ಪುಣ್ಯವಂತ ಯಾರು ಬುದ್ಧೀ? ಎಲ್ಲಿದ್ದಾರವರು?"

"ಹರಿಜನ ಹುಡುಗರಿಗಾಗಿ ಒಂದು ನಿಲಯವನ್ನೂ ಸ್ಥಾಪಿಸಿದ್ದಾರೆ. ಮನುಷ್ಯ ಒಳ್ಳೆಯವರು. ಸಾರ್ವಜನಿಕ ಕಾರ್ಯ ಅಂದರೆ ಮೊದಲಿನಿಂದಲೂ ಬಹಳ ಪ್ರೇಮ. ಸ್ವಾತಂತ್ರ್ಯದ ಹೋರಾಟದ ಬಗೆಗೂ ಅವರಿಗೆ ಬಹಳ ಕಳಕಳಿ. ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲವರ್ಷಗಳ ಹಿಂದೆ ಲಿಂಗಾಯತರಾರೂ ಇರಲಿಲ್ಲ. ಬ್ರಾಹ್ಮಣೇತರ ಪಕ್ಷ ಅಂತ ಒಂದು ಪಕ್ಷವಿತ್ತು. ಅದರಲ್ಲಿ ಸೇರಿಕೊಂಡು ಕೆಲವರು ಲಿಂಗಾಯತ ಪುಢಾರಿಗಳು ಸರಕಾರಕ್ಕೆ ಬೆಂಬಲವಾಗಿದ್ದು

ಕಾಂಗ್ರೆಸ್ ಚಳವಳಿಯನ್ನು ವಿರೋಧಿಸುತ್ತಿದ್ದರು. ಮೊದಲಿನಿಂದಲೂ ರಾಷ್ಟ್ರೀಯ ಮನೋವೃತ್ತಿಯವರಾದ ಚೆನ್ನಪ್ಪನವರು ಅದನ್ನು ಕಂಡು ಬೇಸರಗೊಂಡು ಲಿಂಗಾಯತರನ್ನೆಲ್ಲ ಕಾಂಗ್ರೆಸಿಗೆ ಸೇರಿಸಲು ನಿರ್ಧರಿಸಿ ಮೊದಲು ತಾವೇ ಕಾಂಗ್ರೆಸ್ ಸದಸ್ಯರಾಗಿ ತಮ್ಮ ಗೆಳೆಯರನ್ನೂ ಸೇರಿಸಿದರು. ಅಲ್ಲಿ ಇಲ್ಲಿ ಸಭೆ ಕರೆದು ಕಾಂಗ್ರೆಸ್ ಪ್ರಚಾರಕ್ಕಾರಂಭಿಸಿದರು. ಅವರ ಪ್ರಯತ್ನದಿಂದಲೇ ಈ ಜಿಲ್ಲೆಯಲ್ಲಿ ಲಿಂಗಾಯತರು ಹೆಚ್ಚಾಗಿ ಕಾಂಗ್ರೆಸ್ ಸೇರಿದ್ದು. ಅದರಿಂದಾಗಿ ಬ್ರಾಹ್ಮಣೇತರ ಪಕ್ಷದ ಪ್ರಭಾವ ತಾನಾಗೇ ತಗ್ಗ ತೊಡಗಿತು. ಮೊನ್ನೆಯ ಚಳವಳಿಯಲ್ಲಿ ಚೆನ್ನಪ್ಪನವರು ಜೇಲಿಗೂ ಹೋಗಿ ಬಂದರು. ಅವರಷ್ಟೇ ಅಲ್ಲ, ಅವರ ಹೆಂಡತಿಯೂ ಎಲ್ಲರೂ ಜೇಲು ಸೇರಿದ್ದರು."

"ಈಗ ಅವರು ಎಲ್ಲಿದ್ದಾರೆ ಬುದ್ಧೀ?"

"ಗೊಬ್ಬೂರಿನಲ್ಲಿ. ಗಾಂಧೀಜಿಯವರ ಹರಿಜನ ಫಂಡಿನಿಂದ ಪ್ರತಿ ತಿಂಗಳೂ ಸ್ವಲ್ಪ ಸಹಾಯ ಸಿಗುತ್ತದೆ. ವ್ಯಾಪಾರಿಗಳಿಂದ ವರ್ಗಣಿ ಬರುತ್ತದೆ. ಇಪ್ಪತ್ತು ಇಪ್ಪತ್ತೈದು ಬಾಲಬಾಲಕಿಯರಿದ್ದಾರೆ. ಚೆನ್ನಾಗಿ ನಡೆದಿದೆ ನಿಲಯ. ಗಾಂಧೀಜಿಯವರು ಇಲ್ಲಿಗೆ ಬರುತ್ತಾರಲ್ಲಾ ಅವರ ಸಭೆಯ ವ್ಯವಸ್ಥೆ ಮಾಡಲು ಚೆನ್ನಪ್ಪನವರೇ ಇಂದು ನಾಳೆ ಇಲ್ಲಿಗೆ ಬರಬಹುದು."

ಎರಡು ಮೂರು ದಿನಗಳ ತರುವಾಯ ಚೆನ್ನಪ್ಪನವರು ಮಠಕ್ಕೆ ಬಂದಾಗ ಮಾಸ್ತರರು ಅವರನ್ನು ಕಂಡರು. ಅವರು ಪ್ರೌಢವಯಸ್ಕರು. ಮೈಮೇಲೊಂದು ಖಾದಿಯ ಅಂಗಿ, ಮೊಳಕಾಲುಗಳವರೆಗೆ ಬರುವಂಥ ಖಾದಿಯ ಪಂಚೆ. ಭುಜದ ಮೇಲಿನಿಂದ ಖಾದಿಯ ಚೀಲವೊಂದು ನೇತಾಡುತಿತ್ತು. ತಲೆಗೊಂದು ಗಾಂಧಿಟೋಪಿ.

"ಬರ್ರಿ ಚೆನ್ನಪ್ಪ. ನಿಮಗೊಬ್ಬರು ಶಿಷ್ಯರು ಕಾದಿದ್ದಾರೆ," ಎನ್ನುತ್ತ ಸ್ವಾಮಿಗಳು ಅವರನ್ನು ಬರಮಾಡಿಕೊಂಡರು.

ಸಾಂಬಯ್ಯನವರ ವಯಸ್ಸು, ಅವರ ಮುಖದ ಮೇಲಿನ ಸಾತ್ವಿಕ ತೇಜಸ್ಸು ಕಂಡು ಚೆನ್ನಪ್ಪನವರು ಪ್ರಭಾವಿತರಾದರು. ಪರಿಚಯದ ಶಾಸ್ತ್ರ ಪೂರೈಸುತ್ತಲೂ ಅವರು ನಗುನಗುತ್ತ ನುಡಿದರು:

"ನನ್ನ ಶಿಷ್ಯರೆಂದು ಹೇಳಿದಿರಿ. ಇವರನ್ನು ನೋಡಿದರೆ ನನ್ನ ಗುರುಗಳ ಹಾಗೆ ಕಾಣುತ್ತಾರಲ್ಲ ಬುದ್ಧೀ?"

ಸ್ವಾಮಿಗಳೂ ನಕ್ಕರು. "ಯಾರು ಗುರುಗಳೋ ಯಾರು ಶಿಷ್ಯರೋ ನೀವೇ ಗೊತ್ತುಮಾಡಿಕೊಳ್ಳಿರಿ. ನಿಮ್ಮಿಬ್ಬರಿಗೂ ಪರಿಚಯ ಮಾಡಿಕೊಟ್ಟದ್ದಷ್ಟೆ ನಮ್ಮ ಜವಾಬ್ದಾರಿ."

ಮಾಸ್ತರರ ವೃತ್ತಾಂತವನ್ನೆಲ್ಲ ತಿಳಿದುಕೊಂಡ ಬಳಿಕ ಚೆನ್ನಪ್ಪನವರು ಸ್ವಾಮಿಗಳತ್ತ ತಿರುಗಿ,

"ನನಗೊಂದು ಯೋಚನೆಯದ ಬುದ್ಧೀ," ಎಂದರು.

"ಏನು?"

"ಎಂಟುನೂರು ವರ್ಷಗಳ ಹಿಂದೆಯೆ ನಮ್ಮ ಕರ್ನಾಟಕದಲ್ಲಿ ಶಿವಶರಣರು ಅಸ್ಪೃಶ್ಯತಾನಿವಾರಣೆಗಾಗಿ ಸಾಕಷ್ಟು ಪ್ರಯತ್ನಪಟ್ಟರು. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂಬ ಭೇದಭಾವಗಳನ್ನೆಲ್ಲ ತೊಡೆದು ಹಾಕಿ ಎಲ್ಲರೂ ಒಂದೇ ಎಂಬ ವಿಚಾರವನ್ನು ಹರಡಿದರು. ಅಂದು ಬಸವಣ್ಣನವರೂ ಅವರ ಜತೆಗಾರರೂ ಕಾರ್ಯ ಮಾಡಿದಂತೆ ಇಂದು ಗಾಂಧೀಜಿಯವರೂ ಅವರ ಜತೆಗಾರರೂ ಅಸ್ಪೃಶ್ಯತೆ ನಿರ್ಮೂಲಗೊಳಿಸಲು ಮುಂದೆ ಬಂದಿದ್ದಾರೆ. ಶಿವಭಕ್ತರೆಲ್ಲಾ ಒಂದೇ ಎಂದ ಬಸವಣ್ಣನವರ ಮತದವರಾದ ನಾವು ವೀರಶೈವರೆಲ್ಲ ಇಂದು ಅಸ್ಪೃಶ್ಯತಾನಿವಾರಣೆಗೆ ನಿಂತಲ್ಲಿ ಗಾಂಧೀಜಿ ಕೈಗೊಂಡ ಕಾರ್ಯ ಹಾ ಹಾ ಅನ್ನುವದರೊಳಗಾಗಿ ನೆರವೇರಬಹುದು."

"ನಿಮ್ಮ ವಿಚಾರ ಸರಿಯಾದದ್ದು."

"ಈ ವಿಚಾರವನ್ನು ಹರಡುವದಕ್ಕಾಗಿ ನಾಲ್ಕೈದು ವರ್ಷಗಳಿಂದ ಯತ್ನಿಸುತ್ತಿದೇನೆ. ಅಸ್ಪೃಶ್ಯತೆಯನ್ನ ನಿರ್ಮೂಲಗೊಳಿಸುವದು ವೀರಶೈವ ಧರ್ಮದ ಮುಖ್ಯ ಉದ್ದೇಶಗಳಲ್ಲೊಂದು ಎಂದು ತಿಳಿಸಿ ಹೇಳುತ್ತಿದೇನೆ. ಸಾಕಷ್ಟು ಪರಿಣಾಮವಾಗಲೊಲ್ಲದು."

"ಇಂಥ ಕಾರ್ಯಗಳಿಗೆಲ್ಲಾ ಹೆಚ್ಚು ಜನ ಬೇಕು, ಅಲ್ಲವೆ?"

"ನಾನೂ ಅದನ್ನೇ ಹೇಳುತ್ತಿರುವದು. ಜನರಿಲ್ಲ ಅಂತ ಸುಮ್ಮನಿದ್ದರೆ ಕಾರ್ಯ ನಡೆಯದು. ನಮ್ಮ ಮಠಗಳೇ ಈ ಕೆಲಸದಲ್ಲಿ ಮುಂದಾಳತ್ವ ವಹಿಸ

ಬೇಕೆಂದು ನನ್ನ ವಿಚಾರ. ಹಾಗಾದಲ್ಲಿ ಒಂದೆರಡು ವರ್ಷಗಳಲ್ಲೇ ಅದ್ಭುತ ಪರಿಣಾಮವಾದೀತೆಂದು ನನಗನಿಸುತ್ತದ."

"ಅಣ್ಣನವರು ಹೇಳುವದು ಸರಿ," ಎಂದು ಮಾಸ್ತರರೂ ದನಿಗೂಡಿಸಿದರು.

ಸ್ವಲ್ಪ ಹೊತ್ತು ಮೌನವಾಗಿದ್ದು ಸ್ವಾಮಿಗಳೆಂದರು:

"ನೀವಿಬ್ಬರೂ ಹೇಳುವದನ್ನು ಒಪ್ಪಲೇಬೇಕಾಗುತ್ತದೆ. ಆದರೆ ಇಂಥ ನಮ್ಮ ಸಮಾಜದಲ್ಲಿ ಮಠಗಳಿಗೂ ಸ್ವಾಮಿಗಳಿಗೂ ಎಂಥ ಸ್ಥಾನವಿದೆಯೆಂಬುದನ್ನು ನೀವು ಸರಿಯಾಗಿ ತಿಳಿದುಕೊಳ್ಳಬೇಕು. ಮಠಗಳೆಂದರೆ ಇಂದು ಗುಡಿಗುಂಡಾರಗಳಂತಾಗಿವೆ. ಮಠಾಧಿಕಾರಿಗಳೆಂದರೆ ಪೂಜಾರಿಗಳಂತಾಗಿದ್ದಾರೆ. ಕರ್ತೃ ಗದ್ದುಗೆಗಳಿಗೆ ಪೂಜೆ ಪುನಸ್ಕಾರ ನಡಸುವದು, ಮಠಕ್ಕೆ ಬಂದವರಿಗೆ ಊಟಕ್ಕೆ ಹಾಕುವದು, ಜಾತ್ರೆ ಉತ್ಸವ ಮಾಡಿಸುವದು, ಊರಿನ ಮುಖಂಡರು ಹೇಳಿದಂತೆ ಕೇಳಿಕೊಂಡು ಇರುವದು – ಇದಿಷ್ಟೇ ಸ್ವಾಮಿಗಳ ಕೆಲಸವಾಗಿದೆ. ನಾಲ್ಕು ಜನ ಹಣವಂತರಿಗೇ ಸಮಾಜ ಮರ್ಯಾದೆ ಕೊಡುತ್ತದೆಯೆ ಹೊರತು ಸ್ವಾಮಿಗಳಿಗಲ್ಲ. ದೇವರ ಮೂರ್ತಿಗಳ ಮುಂದೆ ತೋರಿಕೆಗೆ ನಮಸ್ಕಾರ ಹಾಕುವಂತೆ ನಮಗೂ ನಮಸ್ಕಾರ ಹಾಕುವರಷ್ಟೆ. ನಮ್ಮ ಮಾತು ಕೇಳುವವರಾರೂ ಇಲ್ಲ. ಅಂದು ಶರಣರು ಪ್ರಚಾರ ಮಾಡಿದಂತೆ ಇಂದು ನಾವು ಮಾಡಹೊರಟಲ್ಲಿ ನಮ್ಮನ್ನು ಹೊಡೆದು ಬಡಿದು ಮಠಗಳಿಂದಲೇ ಓಡಿಸಿಬಿಟ್ಟಾರು ಜನರು ..."

"ಎಲ್ಲದಕ್ಕೂ ತಯಾರಾಗಿಯೇ ಈ ಕೆಲಸಕ್ಕೆ ನಿಲ್ಲಬೇಕು ಸ್ವಾಮಿಜಿ."

"ಸರಿಯೆ. ಆದರೆ ಹಾಗೆ ತಯಾರಾಗುವ ಎದೆಗಾರಿಕೆ ಎಲ್ಲರಿಗೂ ಹೇಗೆ ಬಂದೀತು? ನೀವೇನೋ ಎಲ್ಲಾ ಬಿಟ್ಟು ಈ ಕೆಲಸಕ್ಕೆ ನಿಂತಿರಿ. ನಿಮ್ಮಂತೆ ಎಷ್ಟು ಜನ ಮುಂದೆ ಬರಬಹುದು, ನೀವೇ ಹೇಳಿರಿ."

ಚೆನ್ನಪ್ಪನವರು ಆ ವಿಷಯವನ್ನು ಅಷ್ಟಕ್ಕೇ ಬಿಟ್ಟುಬಿಡಬೇಕಾಯಿತು.

ಮಾರನೆಯ ದಿನ ಮಧ್ಯಾಹ್ನ ಆ ನಗರಕ್ಕೆ ಗಾಂಧೀಜಿ ಆಗಮಿಸಿದರು. ಸಭೆಗೆ ಲಕ್ಷಾಂತರ ಜನ ಸೇರಿದ್ದರು. "ಊರು ಹೊಲೆಗೇರಿ ಒಂದಾಗದೆ

ಸ್ವರಾಜ್ಯ ಲಭಿಸಲಾರದು. ಹರಿಜನರೊಡನೆ ಸೇರಿ ಕೆಲಸ ಮಾಡಿರಿ," ಎಂಬುದೇ ಮಹಾತ್ಮರ ಭಾಷಣದ ಸಾರವಾಗಿತ್ತು.

ಚೆನ್ನಪ್ಪನವರ ಜತೆಯಲ್ಲಿ ಸಾಂಬಯ್ಯನವರು ಮಹಾತ್ಮರನ್ನು ಭೆಟ್ಟಿಯಾಗಿ ಹರಿಜನರ ಸೇವೆಯಲ್ಲಿಯೆ ತಾವು ತಮ್ಮ ಶೇಷಾಯುಷ್ಯವನ್ನು ವಿನಿಯೋಗಿಸುವುದಾಗಿ ನಿವೇದಿಸಿಕೊಂಡು ಆ ಬಗ್ಗೆ ಮಾರ್ಗದರ್ಶನ ಮಾಡಲು ಬಿನ್ನವಿಸಿಕೊಂಡರು.

"ಚೆನ್ನಪ್ಪನವರ ನಿಲಯವಿದೆಯಲ್ಲ. ಅವರಿಗೂ ಸಹಾಯಕರು ಬೇಕು. ಅವರೊಡನೆ ಸೇರಿಕೊಂಡು ಸೇವೆ ಸಲ್ಲಿಸಿ," ಎಂದು ಮಹಾತ್ಮರು ಅಪ್ಪಣೆ ಕೊಡಿಸಿದರು.

ಅದೇ ದಿನವೆ ನೌಕರಿಗೆ ರಾಜೀನಾಮೆಯಿತ್ತು ಸಾಂಬಯ್ಯನವರು ಚೆನ್ನಪ್ಪನವರ ನಿಲಯವನ್ನು ಸೇರಿಕೊಂಡರು. ಅನೇಕ ದಿನಗಳಿಂದ ಅಶಾಂತಿಯಿಂದ ಬಳಲುತ್ತಿದ್ದ ಅವರ ಬಗೆ ಕೊನೆಗೊಮ್ಮೆ ಶಾಂತವಾಯಿತು.

೧೪

ತಮ್ಮ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತುಕೊಂಡು ಬೀಡಿ ಸೇದುತ್ತಲಿದ್ದ ಕಾಳ. ಅವನ ಸುತ್ತುಮುತ್ತಲು ನೊಣಗಳು ಸ್ವಚ್ಛಂದವಾಗಿ ವಿಹರಿಸುತ್ತಿದ್ದುವು. ಎದುರಿಗಿದ್ದ ಬಾನಿಯ ಮೇಲೆ ಹಲವು ಎಮ್ಮೆದೊಗಲುಗಳು ನೇತಾಡುತಿದ್ದುವು. ಚರ್ಮ ಹದಗೊಳ್ಳಲೆಂದು ಅವುಗಳಲ್ಲಿ ತುಂಬಿದ್ದ ಕಷಾಯ ಹನಿಹನಿಯಾಗಿ ಸುರಿದು ಕೆಳಗಿದ್ದ ಪುಟ್ಟ ಬಾವಿಗೆ ಸೇರುತ್ತಿತ್ತು. ಸಮೀಪದಲ್ಲಿದ್ದ ಸುಣ್ಣದ ನೀರಿನ ಹೊಂಡದ ಹತ್ತಿರ ಚಿಕ್ಕಮಗುವೊಂದು ಕುಳಿತುಕೊಂಡು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ನೀರನ್ನು ಕಲಕುತ್ತಿತ್ತು.

ಕೊಂಚ ದೂರದಲ್ಲಿ ಆಳು ಮನುಷ್ಯ ಯಲ್ಲ ಆಗತಾನೆ ಬಂದಿದ್ದ ಚರ್ಮವನ್ನು ಹೊಲಿದು ತೂಗಹಾಕಲು ಅಣಿಮಾಡುತ್ತಿದ್ದ. ಒಂದೆರಡು ಗಂಟೆಗಳ ಹಿಂದೆಯಷ್ಟೆ ಬಿಚ್ಚಿದ ಚರ್ಮವಾದುದರಿಂದ ಇನ್ನೂ ಅದಕ್ಕಂಟಿಕೊಂಡಿದ್ದ ನೆತ್ತರನ್ನು ಕುಡಿಯಲು ನೊಣಗಳ ದಂಡು ದಾಳಿಯಿಡುತ್ತಲಿತ್ತು. ಯಲ್ಲನ ಕೈ ಕಾಲು, ಅಂಗಿ ಚಲ್ಲಣಗಳೆಲ್ಲಾ ಚರ್ಮದ ಬಣ್ಣವನ್ನೆ ತಳೆದು ಕೊಳೆಯಿಂದ ನಾರುತ್ತಿದ್ದುವು. ರಕ್ತ ಮಾಂಸಗಳಿಂದ ಮಲಿನವಾಗಿದ್ದ ಕೈಯನ್ನೇ ಆಗಾಗ ಎತ್ತಿ ಮುಖದ ಮೇಲಿನ ಬೆವರನ್ನು ನೀವಿಕೊಳ್ಳುತ್ತಿದ್ದ ಯಲ್ಲ. ನೊಣಗಳು ಅವನ ಮುಖಕ್ಕೂ ಹಾರಿ ಕಚ್ಚಿ ಪೀಡಿಸುತ್ತಿದ್ದುವು. ಅದೆಲ್ಲವೂ ಅಭ್ಯಾಸವಾಗಿದ್ದುದರಿಂದ ನೊಣಗಳ ಕಡೆ ಗಮನವೀಯದೆ ಆತ ತನ್ನ ಕಾಯಕದಲ್ಲಿ ತನ್ಮಯನಾಗಿದ್ದ.

ತನ್ನ ಸುತ್ತಲಿನ ಹೊಲಸನ್ನೂ, ಅಂಥ ಹೊಲಸಿನಲ್ಲಿಯೆ ಕೆಲಸ ಮಾಡುತ್ತಿದ್ದ ಯಲ್ಲನನ್ನೂ ನಿರೀಕ್ಷಿಸುತ್ತಿದ್ದ ಹಾಗೆ ಕಾಳನಿಗೆ "ಇಶ್ಶೀ"-

ಎನ್ನಿಸುತ್ತಿತ್ತು. "ಎಂಥಾ ಹೊಲಸು ಕೆಲಸ. ಎಂಥಾ ಗಬ್ಬು ವಾಸ. ಥೂ ಥೂ. ಇಂಥಾ ಹೊಲಸಿನಾಗ ಕುಂತು ತೊಗಲು ತಯಾರಿಸುವವರು ನಾವು. ಮೊಚ್ಚಿ ತಯಾರಿಸುವವರು ಮಾದಿಗರು. ಅವುಗಳನ್ನು ಮೆಟ್ಟಿ ಕೊಂಡು ಸುಖವಾಗಿ ತಿರುಗುವವರು ಉಳಿದ ಜನರು. ನಾವೇ ಯಾಕ ಇಂಥಾ ಹೊಲಸು ಕೆಲಸ ಮಾಡಬೇಕೋ? ಲಿಂಗಾಯತರೂ ಹಾರುವರೂ ಯಾಕ ಮಾಡಬಾರದೋ?" ಎಂದು ಯೋಚಿಸುತ್ತ ಕಾಳ,

"ಬಾರೋ ಯಲ್ಲಾ. ಬೀಡೀ ಸೇದಿ ಹೋಗು ಬಾ," ಎಂದು ಕೂಗಿದ.

ಯಲ್ಲ ಮೆಲ್ಲನೆದ್ದು ಕೈಗಳನ್ನು ಚಲ್ಲಣಕ್ಕೊರೆಸುತ್ತ ಕಾಳನ ಬಳಿ ಬಂದು ಬೀಡಿ ತೆಗೆದುಕೊಂಡು ಸೇದತೊಡಗಿದ. ಅವನ ಮುಖದ ಮೇಲೆ ಯಾವುದೇ ವಿಚಾರವಾಗಲಿ ವಿಕಾರವಾಗಲಿ ಕಾಣಿಸುತ್ತಿರಲಿಲ್ಲ.

"ಈ ಹೇಸಿ ಕೆಲಸ ಮಾಡುವಾಗ ನಿನಗ ಏನೂ ಅನಿಸುವದಿಲ್ಲೇನೋ ಯಲ್ಲಾ?" ಎಂದು ಪ್ರಶ್ನಿಸಿದ ಕಾಳ.

ಮುಷ್ಟಿಯನ್ನು ಮುಚ್ಚಿ ಬೀಡಿಯ ಹೊಗೆಯೆಳೆಯುತ್ತಿದ್ದ ಯಲ್ಲ ದೃಷ್ಟಿ ಯನ್ನು ಮಾತ್ರ ಕಾಳನ ಕಡೆ ತಿರುಗಿಸಿದ, ಅನಂತರ ಮುಷ್ಟಿಯನ್ನು ಸಡಿಲಿಸಿ ಉಫ್ಫೆಂದು ಹೊಗೆಯನ್ನು ಕಾರಿಕೊಂಡು, ಬಣ್ಣಗೆಟ್ಟು ವಿದ್ರೂಪವಾಗಿದ್ದ ಹಲ್ಲುಗಳನ್ನು ತೆರೆದು ಅರ್ಥಹೀನ ನಗೆ ಬೀರುತ್ತ ನುಡಿದ:

"ಹೇಸಿ ಕೆಲಸಾ? ಹೆ ಹೆ ಹೆ ಹ್ಹೆ....ಹೇಸಿ ಕೆಲಸ ಅಂದಿಯಾ ಕಾಳಣ್ಣಾ?"

"ಹೇಸಿ ಅಂತ ನಿನಗೂ ಅನಿಸೂದಿಲ್ಲೇನ? ಈ ತೊಗಲು, ಈ ರಕ್ತ, ಈ ವಾಸ, ಈ ನೆಣ, ಈ ನೊಣ....ಇಂಥಾ ಕೆಲಸಾನ್ನ ನಮ್ಮ ಜಾತಿಯವರೇ ಯಾಕ ಮಾಡಬೇಕು ಅಂತ ಅನಿಸೂದಿಲ್ಲೇನು ನಿನಗೂ?"

"ಸಾಲೀ ಕಲಿತ ಹಾಂಗ ಹುಡುಗರಿಗೆ ಮನಿತನದ ಕಸುಬಿನ ಮ್ಯಾಲ ಹೇಸಿಕೆ ಹುಟ್ಟುತೈತಿ ಅಂತ ಮಂದಿ ಅನ್ನುದೇನೂ ಸುಳ್ಳಲ್ಲ ಹಂಗಾದರ! ನಮ್ಮ ಹಿರೇರು, ಅಜ್ಜ, ಮುತ್ತಜ್ಜ ಎಲ್ಲಾ ಇದೇ ಕೆಲಸಾ ಮಾಡುತಾ ಬಂದಾರ. ನಾವೂ ಮಾಡುತಾ ಬಂದೀವಿ. ಇದರಾಗ ಹೊಲಸೇನ ಬಂತಪಾ? ಹೊಟ್ಟೆಗಾಗಿ ಎಲ್ಲಾರೂ ಏನಾರ ಮಾಡಾಕಬೇಕಲ್ಲಾ? ನಮ್ಮ ಪಾಲಿಗೆ

ದೇವರು ಈ ಕೆಲಸಾ ಕೊಟ್ಟಿದಾನು," ಎಂದು ನುಡಿದು ಯಲ್ಲ ಮತ್ತೆ ತನ್ನ ಕೆಲಸಕ್ಕೆ ನಡೆದ.

"ಅಲ್ಲೋ ಯಲ್ಲಾ, ನಾವs ಯಾಕ ಮಾಡಬೇಕೋ ಈ ಕೆಲಸಾನ್ನ? ಬ್ಯಾರೆಯವರು ಯಾಕ ಮಾಡಬಾರದು?"

"ಮತ್ತೇನ ಮಾಡಬೇಕಂತೀ? ಬಣಜಿಗೇರ ಹಂಗ ಅಂಗಡಿ ತಗದು ಯಾಪಾರ ಮಾಡಬೇಕಂತೀಯೇನ? ಇಲ್ಲಾ ಹಾರೋರಂಗ ಪುರಾಣಾ ಹೇಳ ಬೇಕಂತೀಯೋ?" ಎಂದು ಹೇಳುತ್ತಾ ಯಲ್ಲ ಗಹಗಹಿಸಿ ನಕ್ಕ.

"ಥೂ. ನಿಮುಗ ಏನೇನೂ ತಿಳಿಯುವದಿಲ್ಲ," ಎಂದು ಗೊಣಗುತ್ತ ಕಾಳ ಮತ್ತೊಂದು ಬೀಡಿ ಹೊತ್ತಿಸಿದ. ಸಂಗಣ್ಣನ ಸಹವಾಸದಲ್ಲಿ ಕಾಳನಿಗೂ ಬೀಡಿಯ ದುರಭ್ಯಾಸ ಅಂಟಿಕೊಂಡಿದ್ದಿತು. ತಂದೆಗೆ ಗೊತ್ತಾಗದಂತೆ ಆತ ಕದ್ದು ಸೇದುತ್ತಾನೆ. ಇಂದು ಅವನ ತಂದೆ ಊರಿನಲ್ಲಿಲ್ಲ; ನಗರಕ್ಕೆ ಹೋಗಿದ್ದಾನೆ. ಅವನು ಮರಳಿ ಬರುವವರೆಗೆ ಕಾಳನೇ ಮನೆಯೊಡೆಯ. ತನ್ನ ತಾಯಿಗಂತೂ ಎಂದೂ ಹೆದರಿದವನಲ್ಲ ಆತ. ಶಾಲೆಗೆ ಹೋಗುವ ಹುಡುಗ ಎಂಬ ಅಭಿಮಾನದಿಂದಾಗಿ ಅವಳೂ ಅವನನ್ನು ಗದರಿಸುವುದಿಲ್ಲ.

ಕೆಲವು ದಿನಗಳಿಂದ ಕಾಳ ತಮ್ಮ ಕುಲ, ಕಸಬುಗಳ ವಿಚಾರವಾಗಿ ಯೋಚಿಸುವಂತಾಗಿದೆ. ಅವನ ವಿಚಾರಗಳಿಗೆ ಚಾಲನೆ ಕೊಟ್ಟವನು ಕ್ರೈಸ್ತ ಧರ್ಮದ ಪ್ರಚಾರಕ ಮರಿದಾಸ. ಸಮೀಪದ ಹಳ್ಳಿಯೊಂದರಲ್ಲಿ ನಡೆದ ಜಾತ್ರೆಯ ಕಾಲಕ್ಕೆ ಅಗ್ಗದ "ಸುವಾರ್ತೆ"ಗಳನ್ನು ವಿಕ್ರಯಿಸುತ್ತ ಮರಿದಾಸ ಅಲೆಯುತ್ತಿದ್ದಾಗ ಕಾಳ ಅವನನ್ನು ಕಂಡಿದ್ದ. "ಒಂದೇ ಬಿಲ್ಲಿಗೊಂದು ಪುಸ್ತಕ. ಒಂದೇ ಬಿಲ್ಲಿಗೊಂದು ಪುಸ್ತಕ. ಎಲ್ಲರೂ ಓದಬೇಕಾದ ಪುಸ್ತಕ. ಸ್ವರ್ಗದಲ್ಲಿಯ ದೇವರನ್ನು ತೋರಿಸುವ ಪುಸ್ತಕ," ಎಂಬ ಅವನ ಘೋಷಣೆಗಳು ಎಳೆಯನಾದ ಕಾಳನ ಗಮನ ಸೆಳೆದಿದ್ದುವು. ಆತ ಉತ್ಸುಕತೆಯಿಂದ ಒಂದು ಪುಸ್ತಕವನ್ನು ತೆಗೆದುಕೊಂಡು ನೋಡಿದ್ದ, ಪುಟಗಳನ್ನು ತಿರುವಿ ಹಾಕಿದ್ದ. ರಕ್ಷಾಪತ್ರದ ಮೇಲಿನ ಚಿತ್ರವೂ ಅವನನ್ನಾಕರ್ಷಿಸಿಕೊಂಡಿತ್ತು. ನೀರಿನ ಮೇಲೆ ತೇಲುತ್ತಿದ್ದ ದೋಣಿಯೊಂದರಲ್ಲಿ ನಿಂತು ಗಡ್ಡದ ಆಸಾಮಿ

ಯೊಬ್ಬ ಬಲಗೈ ಎತ್ತಿ ಹಿಡಿದು, ಎದುರಿನ ದಡದ ಮೇಲೆ ನೆರೆದಿದ್ದ ಜನರಿಗೆ ಏನನ್ನೋ ಹೇಳುತ್ತಿದ್ದುದರ ಚಿತ್ರ.

"ಈ ಚಿತ್ರದಾಗ ಕೈಯೆತ್ತಿ ನಿಂತಿದಾನಲ್ಲಾ ಇವನ್ಯಾರು?" ಎಂದು ಕೇಳಿದ್ದ ಕಾಳ.

"ಅವನೇ ಯೇಸುಕ್ರಿಸ್ತ. ದೇವರ ಮಗ. ಅವನ ಚರಿತ್ರೆಯೇ ಇರೋದು ಈ ಪುಸ್ತಕದಲ್ಲಿ," ಎಂದು ಹೇಳಿ ಕಾಳನನ್ನು ಸೂಕ್ಷ್ಮವಾಗಿ ದಿಟ್ಟಿಸುತ್ತ ಮರಿದಾಸ ಕೇಳಿದ್ದ: "ನೀನು ಯಾವ ಜಾತಿಯವ ತಮ್ಮಾ?"

"ಹೋರರವ."

"ಹೀಗೋ? ಹಾಗಾದರೆ ನೀನಿದನ್ನು ಅಗತ್ಯವಾಗಿ ಓದಬೇಕು. ಹೋರರು, ಮಾದಿಗರು, ಹೊಲೆಯರು ಎಲ್ಲರೂ ಓದಿಯೇ ತೀರಬೇಕಾದ ಪುಸ್ತಕ ಇದು. ಓದಲು ಬರದವರಿಗೂ ಓದಿ ಹೇಳುವಂಥಾ ಮಹತ್ವದ ಪುಸ್ತಕ. ನೀನೆಷ್ಟು ಕಲಿತಿದ್ದೀ ತಮ್ಮಾ?"

"ಆರನೇಯತ್ತೆ."

"ಹಾಗಾದರೆ ಅಡ್ಡಿಯಿಲ್ಲ. ಇದರಲ್ಲಿ ಬರೆದಿರೋದೆಲ್ಲಾ ನಿನಗೆ ತಿಳೀತದೆ. ಓದಿದ ಮೇಲೆ ನನ್ನ ಹತ್ತಿರ ಬಾ, ಏನಾದರೂ ಸಂಶಯ ಇದ್ದರೆ ಕೇಳು. ನಾನು ಸಮಾಧಾನ ಹೇಳುತ್ತೇನೆ," ಎಂದು ಹೇಳಿ ಮರಿದಾಸ ತನ್ನ ವಿಳಾಸವನ್ನೂ ತಿಳಿಸಿದ್ದ.

ಎಂಭತ್ತು ತೊಂಭತ್ತು ಪುಟಗಳ ಆ ದೊಡ್ಡ ಪುಸ್ತಕ ಒಂದೇ ಬಿಲ್ಲಿಗೆ ಸಿಕ್ಕಿದುದೊಂದು ದೊಡ್ಡ ಲಾಭವೆಂದುಕೊಳ್ಳುತ್ತ ಕಾಳ ಅದನ್ನು ಕೊಂಡುಕೊಂಡು ಹೊರಟುಬಂದಿದ್ದ. ಹದಿನೈದು ಇಪ್ಪತ್ತು ದಿನಗಳವರೆಗೆ ಅದನ್ನು ಓದುವುದೇ ಅವನ ಮುಖ್ಯ ಕಾರ್ಯವಾಗಿತ್ತು.

ಎರಡು ಮೂರು ಬಾರಿ ಪುಸ್ತಕವನ್ನೋದಿದರೂ ಅದರಲ್ಲಿನ ವಿಷಯ ಕಾಳನಿಗೆ ಸರಿಯಾಗಿ ಅರ್ಥವಾಗಿರಲಿಲ್ಲ. ಯೇಸುವೆಂದರೆ ಒಬ್ಬ ಮಂತ್ರವಾದಿಯಾಗಿದ್ದನೊ ಏನೊ; ರೋಗಗಳನ್ನು ಹೋಗಲಾಡಿಸುವುದು, ಕಣ್ಣಿಲ್ಲದವರಿಗೆ ಕಣ್ಣು, ಕಿವಿಯಿಲ್ಲದವರಿಗೆ ಕಿವಿ ಕೊಡುವುದು, ಸಮುದ್ರದ ಮೇಲೆ ನಡೆಯುವುದು, ಸತ್ತ ಬಳಿಕ ಮತ್ತೆ ಎದ್ದು ಬರುವುದು – ಇದೆಲ್ಲದರ ಅರ್ಥವೇನು?

ಖಂಡಿತವಾಗಿಯೂ ಯೇಸು ಮಂತ್ರವಾದಿಯಾಗಿದ್ದಿರಬೇಕು, ಎಂದು ಯೋಚಿಸುತ್ತಾ ಆತ ಮರಿದಾಸನನ್ನು ಹುಡುಕಿಕೊಂಡು ಹೋಗಿ ತನ್ನ ಅಭಿಪ್ರಾಯವನ್ನು ಮಂಡಿಸಿದ್ದ. ಮರಿದಾಸ ನಕ್ಕು, "ಆತ ಮಂತ್ರವಾದಿಯಲ್ಲ ತಮ್ಮಾ, ದೇವರ ಮಗ. ದೇವರೇ ಯೇಸುವಿಗೆ ಅಂಥ ಶಕ್ತಿಯನ್ನು ಕೊಟ್ಟಿದ್ದು. ಯೇಸುವನ್ನು ನಂಬಿದರೆ ನಿನಗೂ ಬಂದೀತು ಅಂಥಾ ಶಕ್ತಿ," ಎಂದು ಹೇಳಿದ್ದ.

"ನಾನೂ ನೀರಮ್ಯಾಲ ನಡೀಬಹುದು ಅಂತೀರಾ?"

"ನಂಬಿಕೆಯೊಂದಿದ್ದರೆ ನಡೆಯಬಹುದು," ಎಂದು ನುಡಿದು ಹಿಂದೂ ಧರ್ಮದಲ್ಲಿನ ಜಾತಿ ಭೇದ, ಉಚ್ಚ ಜಾತಿಯವರು ಕೀಳು ಜಾತಿಯವರನ್ನು ಪಶುಗಳಂತೆ ನಡಸಿಕೊಳ್ಳುವುದೇ ಮೊದಲಾದುದನ್ನು ಖಂಡಿಸಿ, ಕ್ರೈಸ್ತ ಧರ್ಮದಲ್ಲಿ ಮೇಲು ಕೀಳೆಂಬುದಿಲ್ಲವೆಂದೂ ಅಲ್ಲಿ ಎಲ್ಲರೂ ಸಮಾನಸ್ಕಂಧರೆಂದೂ ಬೋಧಿಸಿದ್ದ ಮರಿದಾಸ.

"ಅಂದರs? ನಮ್ಮನ್ನು ಮುಟ್ಟಿಸಿಕೊಳ್ಳುತಾರೇನು?"

"ಮುಟ್ಟಿಸಿಕೊಳ್ಳುವದಷ್ಟೇ ಅಲ್ಲ. ನಿಮ್ಮ ಸಂಗಡ ಊಟ ಮಾಡ್ತಾರೆ. ನಿಮಗೆ ಹೆಣ್ಣು ಕೊಡ್ತಾರೆ, ಬಿ.ಎ., ಎಂ.ಎ. ತನಕ ಓದಿಸಿ ದೊಡ್ಡ ದೊಡ್ಡ ನೌಕರಿ ಕೊಡಿಸುತ್ತಾರೆ. ಲಿಂಗಾಯತರಾಗಲಿ ಹಾರುವರಾಗಲಿ ಜೇಡರಾಗಲಿ ಹೆಣ್ಣು ಕೊಡಬಹುದೇನು ನಿಮಗೆ?"

ಮರಿದಾಸನೊಡನೆ ಪರಿಚಯವಾದಂದಿನಿಂದ ಕಾಳನ ವಿಚಾರಲೋಕದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳುಂಟಾಗಿದ್ದುವು. ಆ ಬಗೆಗೆ ಒಂದೆರಡು ಬಾರಿ ಸಂಗಣ್ಣನೊಡನೆ ಆತ ಪ್ರಸ್ತಾಪಿಸಿದಾಗ ನಗುನಗುತ್ತ ನುಡಿದಿದ್ದ ಸಂಗಣ್ಣ:

"ಏನಲೇ, ಕ್ರಿಶ್ಚನ್ ಹುಡುಗೀ ಗಿಡಿಗೀ ನೋಡಿದಿಯೋ ಏನು ಎಲ್ಲೆರೆ? ನಿನಗೇನೋ ಹುಚ್ಚು ಹಿಡಿದಾಂಗ ಕಾಣುತ್ತೈತಿ."

"ಎಲ್ಲಿಯ ಹುಡುಗಿಯಪಾ. ಈ ಹಳ್ಳಿಗಾಡಿನಾಗ ಎಂಥಾ ಹುಡುಗೀರು! ಅವರಿರೂದು ಪಟ್ಟಣದಾಗ."

"ಗಂಡು ಹೆಣ್ಣು ಎಲ್ಲಾ ಕೂಡೇ ಸಾಲೀ ಕಲೀತಾರಂತಲ್ಲೋ ಕಾಳಾ ಕ್ರಿಶ್ಚನ್ನರಾಗ ?"

"ಹೌದಂತಪಾ."

"ಹಂಗಾದರೇನು ನೀನೂ ಕ್ರಿಶ್ಚನ್ ಆಗುವವನೋ ಏನು !"

"ಆಗಬೇಕಂತ ಅನಿಸುತೈತಿ."

ಕಾಳ ಅಂಜುತ್ತ ಅಂಜುತ್ತ ಒಂದು ಸಲ ತಂದೆಯ ಎದುರಿಗೆ ಆ ವಿಷಯ ಪ್ರಸ್ತಾಪಿಸಿದಾಗ ಅವನ ತಂದೆ ರೇಗಿ, "ಇನ್ನೊಮ್ಮೆ ಆ ಮರ್‍ದಾನ ಹತ್ತರ ಹೋದಿಯಂದರ ಹಲ್ಲು ಮುರೀತೀನಿ ನಿಂದು. ನಮ್ಮನ್ನ ಕುಲಗೆಡಿಸ ಬೇಕಂತ ಇಪ್ಪತ್ತು ವರ್ಷದಿಂದ ಲಾಗಾ ಒಗೀತಿದ್ದಾರವರು. ನಾವ್ಯಾರೂ ಅವರ ಬಲಿಗೆ ಬಿದ್ದಿಲ್ಲ. ನಮ್ಮ ಜಾತಿ ನಾವು ಕಾದುಕೊಂಡಿರೂದು ಚಂದ. ನೀನೇನಾದರೂ ಅವನ ಮಾತು ಕೇಳಿ ಮರುಳಾದೀಯೋ," ಎಂದು ಗದರಿಸಿದ್ದ. ಆದರೂ, ಮರಿದಾಸನನ್ನು ಕಾಣುವುದನ್ನು ನಿಲ್ಲಿಸಿರಲಿಲ್ಲ ಕಾಳ. ತಂದೆಗೆ ತಿಳಿಯದಂತೆ ಹೋಗಿ ಅವನನ್ನು ಕಂಡುಬರುತ್ತಿದ್ದ.

"ನೀನು ಬಹಳ ಬುದ್ಧಿವಂತ ಹುಡುಗ. ನಿನ್ನನ್ನು ನಮ್ಮ ಮಿಶನ್ ಹೈಸ್ಕೂಲಿಗೆ ಕಳಿಸಿಕೊಟ್ಟು ಮ್ಯಾಟ್ರಿಕ್ ಪಾಸು ಮಾಡಿಸುತೀವಿ. ಆಮೇಲೆ ಪಿ. ಎಚ್. ಡಿ. ತನಕ ಕಲಿಸುತೀವಿ. ಇಂಗ್ಲೆಂಡಿಗೂ ಕಳಿಸುತೀವಿ. ಕಲೆಕ್ಟರ್ ಕೆಲಸಾ ಕೊಡಿಸುತೀವಿ. ಯೂರೋಪಿಯನ್ ಹುಡುಗೀನ್ನ ಕೊಡಿಸಿ ಮದುವೀ ಮಾಡುತೀವಿ," ಎಂದೆಲ್ಲ ಹೇಳಿ ಕಾಳನ ಚಿತ್ತವನ್ನು ಚಂಚಲಗೊಳಿಸುತ್ತ ಬಂದಿದ್ದ ಮರಿದಾಸ. ದಿನಗಳೆದ ಹಾಗೆಲ್ಲ ಸುತ್ತಲಿನ ವಾತಾವರಣವನ್ನು ಕಂಡು ಹೇಸಿಕೊಳ್ಳುತ್ತಿತ್ತು ಕಾಳನ ಮನಸ್ಸು. ತೊಗಲಿನ ವಾಸನೆ, ನೆತ್ತರು, ನೊಣ, ಹದ್ದು ಕಾಗೆಗಳ ಗದ್ದಲ, ಜಾಲಿಯ ತೊಗಟೆಗಳ ಸಹವಾಸದಿಂದ ಸಾಧ್ಯ ವಾದಷ್ಟು ಬೇಗ ತಪ್ಪಿಸಿಕೊಂಡು ಹೋಗಬೇಕೆಂದು ಆತ ಯೋಚಿಸತೊಡಗಿದ್ದ.

ಆ ದಿನವೂ ಆತ ಬೀಡಿ ಸೇದುತ್ತ ಕುಳಿತಿದ್ದ ಹಾಗೆ ಅದೇ ಯೋಚನೆ ಅವನ ಮೆದುಳಿನಲ್ಲಿ ಸುತ್ತುತಿತ್ತು.

"ಇದೆಲ್ಲಾ ನನಗ ಬಹಳ ಬ್ಯಾಸರಾತು ನೋಡೋ ಯಲ್ಲಾ. ಈ ವರ್ಷ ಇಲ್ಲಿಂದ ಹೋಗಿಬಿಡಬೇಕಂತ ಮಾಡೀನಿ," ಎಂದ ಕಾಳ.

"ಎಲ್ಲಿಗೆ ಹೋಗುವವನ ಕಾಳಣ್ಣಾ?"

"ಎಲ್ಲಿಗಂದರs ಪಟ್ಟಣಕ್ಕ. ಮುಲ್ಕೀ ಪರೀಕ್ಷೆ ಪಾಸಾಗಿ ಏನೂ ಉಪಯೋಗ ಇಲ್ಲಪಾ. ಹೈಸ್ಕೂಲು ಸೇರಿಕೊಂಡು ಬಿಡೂದs ಚಲೋದು."

"ಚಲೋದು. ನಿನಗೇನಪಾ ದೈವುಳ್ಳವ. ಅಪ್ಪ ಗಳಿಸಿಟ್ಟದಾನ. ಕಲಿ. ಯಾರು ಬ್ಯಾಡಾ ಅನ್ನುವವರು?" ಎಂದು ಯಲ್ಲ ಹೇಳುತ್ತಿದ್ದ ಹಾಗೆ ಯಾರೋ ಬಂದಂತೆ ಕಾಣಿಸಲು ಅತ್ತ ತಿರುಗಿದ. ಬಂದಿದ್ದವನು ಮಹಾದೇವ.

"ಬಾರಪಾ ಮಾದೇವಾ. ನಿನ್ನ ಹಾದೀನs ನೋಡುತಾ ಇದ್ದಿನಿ," ಎಂದ ಕಾಳ.

"ತೊಗಲು ಬೇಕಾಗಿತ್ತಪಾ. ಬಂದಿದ್ದಿ?"

"ಬಾರೋ. ಒಯ್ದೀಯಂತ. ಕೂಡ್ರು ಬಾ. ರೊಕ್ಕಾ ತಂದೀಯೇನು?"

"ಹೂಂ. ತಂದೀನಿ. ಐದು ರೂಪಾಯಿನ ತೊಗಲು ಬೇಕಾಗೈತಿ."

"ಅಷ್ಟು ತಗೊಂಡೇನ ಮಾಡುತೀಯೋ?"

"ಕೈಯಾಗ ರೊಕ್ಕ ಇದ್ದಾಗs ಒಯ್ದು ಇಟ್ಟುಕೊಳ್ಳೂದು ಚಲೋದಲ್ಲವೇನಪಾ?"

"ಅಂದರೇನು? ಇನ್ನುಮ್ಯಾಲ ಒಳೇ ಜೋರು ಕೆಲಸ ಸುರು ಮಾಡುವವನೇನು?"

"ಮಾಡದಿದ್ದರ ಹೊಟ್ಟೆ ಹೆಂಗ ತುಂಬಬೇಕೋ ಕಾಳಣ್ಣಾ? ನಾವೇನು ನಿಮ್ಮಂಗ ಸಾವುಕಾರರೇನು?"

"ಹೂಂ. ಹೂಂ. ಅದೂ ಖರೇನs. ಇಲ್ಲಿ ನೋಡೋ ಮಾದೇವಾ. ನಿನಗೊಂದು ಪುಸ್ತಕ ಕೊಡ್ತೀನಿ ಓದಾಕ. ಅದನ್ನ ಪೂರಾ ಓದಿ ನಿನಗೇನು ಅನಿಸುತ್ತೈತಿ ಅನ್ನೂದನ್ನ ಹೇಳಬೇಕು," ಎಂದು ಹೇಳಿ ಕಾಳ ಎದ್ದು ಹೋಗಿ, 'ಲೂಕನು ಬರೆದ ಸುವಾರ್ತೆ'ಯನ್ನು ತಂದುಕೊಟ್ಟ.

"ಯಾರು ಬರೆದಾರಪಾ ಇದನ್ನ?"

"ಅವನೇ ಆ ಲೂಕ ಅನ್ನುವವ."

"ಇದೆಂಥಾ ವಿಚಿತ್ರ ಹೆಸರಪಾ? ಯಾವ ದೇಶದಾವ ಇವ?"

"ಅವ ಕ್ರಿಸ್ತನ ಶಿಷ್ಯ. ಮನಿಗೆ ಹೋದಮ್ಯಾಲ ಓದಿ ನೋಡು. ಎಲ್ಲಾ ಗೊತ್ತಾಗುತೈತಿ."

ಯೇಸುಕ್ರಿಸ್ತ ಎಂಬ ಹೆಸರನ್ನೇನೋ ಕಾಳ ಒಂದೆರಡು ಬಾರಿ ಕೇಳಿದ್ದ. ಪಕ್ಕದ ಹಳ್ಳಿಯಲ್ಲಿಯ ಹೊಲೆಯರನೇಕರು ಕ್ರಿಸ್ತಧರ್ಮ ಸ್ವೀಕರಿಸಿದ್ದ ವಿಷಯವೂ ಅವನಿಗೆ ಗೊತ್ತಿದ್ದಿತು.

"ನೀನೂ ಕ್ರಿಸ್ತನಾಗುವವನೇನೋ ಕಾಳಣ್ಣಾ ?"

"ಮೊದಲು ನೀ ಈ ಪುಸ್ತಕ ಓದು. ಆಮ್ಯಾಲ ಮಾತಾಡೂಣು," ಎಂದ ಕಾಳ.

ಎರಡು ಮೂರು ದಿನಗಳ ಕಾಲ ಮಹಾದೇವ ಕುತೂಹಲದಿಂದ ಆ ಪುಸ್ತಕವನ್ನೋದುತ್ತಲಿದ್ದ. ಅದರಲ್ಲಿನ ಕಥೆಗಳೂ, ಸುಭಾಷಿತಗಳೂ, ಅವನ ಮನಸ್ಸನ್ನು ಮುಗ್ಧಗೊಳಿಸಿದುವು. ಅದು ರಜಾಕಾಲವಾದುದರಿಂದ ಶಾಲೆಯ ತಂಟೆಯಿರಲಿಲ್ಲ. ಮಧ್ಯಾಹ್ನದಲ್ಲಿ ಮಹಾದೇವನೊಬ್ಬನೆ ಆ ಪುಸ್ತಕವನ್ನು ತೆಗೆದುಕೊಂಡು ಗುಡ್ಡಕ್ಕೆ ಹೋಗಿ ಗಿಡದ ನೆರಳಲ್ಲಿ ಕುಳಿತು ಮತ್ತೆ ಮತ್ತೆ ಅದನ್ನೋದುತ್ತಾ ಮೈಮರೆತು ಬಿಡುತ್ತಿದ್ದ.

"ಎರಡು ಅಂಗಿಗಳುಳ್ಳವನು
ಇಲ್ಲದವನಿಗೊಂದನ್ನು ಕೊಡಲಿ.
ಆಹಾರವುಳ್ಳವನು
ಇಲ್ಲದವನಿಗೂ ಹಂಚಲಿ."

"ಆ ಸಭಾಮಂದಿರದಲ್ಲಿ
ದೆವ್ವ ಹಿಡಿದ ಒಬ್ಬ ಮನುಷ್ಯನಿದ್ದನು.
ಆ ದೆವ್ವವು–ಹಾ ನಜರೇತಿನ ಯೇಸುವೆ,
ನಮ್ಮ ಗೊಡವೆ ನಿನಗೇಕೆ ?
ನಮ್ಮನ್ನು ನಾಶಮಾಡುವದಕ್ಕೆ ಬಂದೆಯಾ ?
ನಿನ್ನನ್ನು ಬಲ್ಲೆನು. ನೀನು ದೇವರು ಪ್ರತಿಷ್ಠಿಸಿದವನೇ ?
ಎಂದು ಅಬ್ಬರಿಸಿ ಹೇಳಿತು.
ಯೇಸು ಅದನ್ನು ಗದರಿಸಿ

– ಸುಮ್ಮನಿರು, ಇವನನ್ನು ಬಿಟ್ಟು ಹೋಗು ಎನ್ನಲಾಗಿ
ಆ ದೆವ್ವವು ಬಿಟ್ಟು ಹೋಯಿತು."
" ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ.
ಕ್ಷೇಮವಿಲ್ಲದವರಿಗೆ ಬೇಕು.
ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು
ನೀತಿವಂತರನ್ನು ಕರೆಯುವುದಕ್ಕೆ ನಾನು ಬಂದವನಲ್ಲ,
ನಾನು ಪಾಪಿಗಳನ್ನು ಕರೆಯುವದಕ್ಕೆ ಬಂದವನು."

ಯೇಸು ಪರ್ವತದ ಮೇಲೆ ಮಾಡಿದ ಪ್ರಸಂಗವನ್ನೋದುತ್ತಿದ್ದ ಹಾಗೆ ಮಹಾದೇವನ ಕಣ್ಣುಗಳಲ್ಲಿ ಕಂಬನಿಗಳು ಕಾಣಿಸಿಕೊಳ್ಳುತ್ತಿದ್ದುವು.

" ಬಡವರಾದ ನೀವು ಧನ್ಯರು ;
ದೇವರ ರಾಜ್ಯವು ನಿಮ್ಮದೇ.
ಈಗ ಹಸಿದಿರುವವರಾದ ನೀವು ಧನ್ಯರು ;
ನಿಮಗೆ ತೃಪ್ತಿಯಾಗುವುದು.
" ನಿಮ್ಮ ವೈರಿಗಳನ್ನು ಪ್ರೀತಿಸಿರಿ.
ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ.
ನಿನ್ನನ್ನು ಕೆನ್ನೆಯ ಮೇಲೆ ಬಡಿದವನಿಗೆ
ಮತ್ತೊಂದು ಕೆನ್ನೆಯನ್ನು ತಿರುಗಿಸು.
ನಿನ್ನ ಮೇಲಂಗಿಯನ್ನು ಕಸುಕೊಳ್ಳುವವನಿಗೆ
ಒಳಂಗಿಯನ್ನೂ ಕೊಡು."

ಏಳೆಂಟು ದಿನಗಳ ತರುವಾಯ ಮಹಾದೇವ ಕಾಳನನ್ನು ಹುಡುಕಿಕೊಂಡು ಹೋದ.

"ಆ ಪುಸ್ತಕ ಓದಿ ಮುಗಿಸಿದೆನಪ್ಪ ಕಾಳಣ್ಣ. ಅಂಥಾ ಪುಸ್ತಕ ನಾನೆಂದೂ ಓದಿರಲಿಲ್ಲ."

"ಅದಕ್ಕೇ ನಾನದನ್ನ ಕೊಟ್ಟದ್ದು ನಿನಗ. ಹೇಳು. ಈಗ ನಿನ್ನ ವಿಚಾರ ಏನು ?"

"ಅದರಲ್ಲಿ ಹೇಳಿದ ಹಂಗ ಎಲ್ಲಾ ಕ್ರಿಶ್ಚಿಯನರೂ ನಡಕೊಳ್ಳ ತಾರೇನಪಾ?"

"ಯಾರಿಗೆ ಗೊತ್ತು. ಮರಿದಾಸನನ್ನ ಕೇಳೂಣು," ಎಂದ ಕಾಳ.

ಮಾರನೆಯ ದಿನ ಅವರಿಬ್ಬರೂ ಸೇರಿ ಮರಿದಾಸನನ್ನು ಕಂಡು ತಮ್ಮ ಸಂದೇಹಗಳನ್ನು ವ್ಯಕ್ತಗೊಳಿಸಿದರು. ಮರಿದಾಸ ಗೊಂದಲದಲ್ಲಿ ಸಿಲುಕಿಕೊಂಡ. ತಿಂಗಳಿಗೆ ದೊರೆಯುವ ಇಪ್ಪತ್ತು ರೂಪಾಯಿನ ಸಂಬಳಕ್ಕಾಗಿ ಕ್ರೈಸ್ತ ಧರ್ಮದ ಪ್ರಚಾರಕನಾಗಿ ಕೆಲಸಮಾಡುತ್ತಿದ್ದವನು ಮರಿದಾಸ. ಅವನೇನು ವಿಶೇಷವಾಗಿ ಓದಿದವನಲ್ಲ. ಕೊಂಚ ಇಂಗ್ಲಿಷು ಕಲಿತಿದ್ದನಷ್ಟೆ. ಪಾದ್ರಿಗಳು ಹೇಳಿಕೊಟ್ಟ ವಾಕ್ಯಗಳು ಕೆಲವನ್ನು ಕಂಠಪಾಠ ಮಾಡಿಕೊಂಡು ಹಳ್ಳಿಯ ಜನದ ಮುಂದೆ ಮತ್ತೆ ಮತ್ತೆ ಅವುಗಳನ್ನೆ ಉರುಹೊಡೆಯುತ್ತಿದ್ದ. ಮಹಾದೇವನ ಸಂದೇಹಗಳಿಗೆ ಸಮಾಧಾನಕರವಾದ ಉತ್ತರವೀಯುವ ಯೋಗ್ಯತೆ ಅವನಲ್ಲಿರಲಿಲ್ಲ.

"ಎರಡು ಅಂಗಿ ಇದ್ದ ಕ್ರಿಶ್ಚನರೆಲ್ಲಾ ಅಂಗಿ ಇಲ್ಲದವರಿಗೆ ಒಂದು ಅಂಗಿ ಕೊಟ್ಟುಬಿಡುತಾರೇನು?"

"ಉಣ್ಣುವದಕ್ಕ ಸಾಕಷ್ಟು ಇದ್ದ ಕ್ರಿಶ್ಚನರು ಇಲ್ಲದವರಿಗೆ ಅನ್ನ ಹಾಕುತಾರೇನು?"

"ಒಂದು ಕಪಾಳಿಗೆ ಹೊಡೆದರ ಇನ್ನೊಂದು ಕಪಾಳನ್ನೂ ಮುಂದ ಮಾಡುತಾರೇನು?"

"ವೈರಿಗಳನ್ನೂ ಪ್ರೀತಿ ಮಾಡುತಾರೇನು?"

"ಪಾಪಿಗಳನ್ನೆಲ್ಲಾ ಪ್ರೀತಿಯಿಂದ ನೋಡುತಾರೇನು?"

ಎಂಬ ಪ್ರಶ್ನೆಗಳಿಗೆ "ಹೊ ಹೊ. ಯಾಕಿಲ್ಲ? ಯಾಕಿಲ್ಲ?" ಎಂದು ಹಾರಿಕೆಯ ಉತ್ತರವಿತ್ತು ಆ ವಿಷಯವನ್ನೆ ಮರೆಯಿಸಿ ಬ್ರಾಹ್ಮಣರನ್ನು ದೂಷಿಸಲಾರಂಭಿಸಿದ ಮರಿದಾಸ:

"ತಾವು ಎಲ್ಲರಿಗಿಂತ ಹೆಚ್ಚಿನವರೆಂದು ಹೇಳಿಕೊಂಡು ಆ ಬ್ರಾಹ್ಮಣರು ನಿಮ್ಮನ್ನ ಶೂದ್ರರನ್ನಾಗಿ ಮಾಡಿ ಊರ ಹೊರಗೆ ಹೊಲೆಗೇರಿಯಲ್ಲಿಟ್ಟು ಹೊಲಸು ಕೆಲಸ ಮಾತ್ರ ನಿಮ್ಮಿಂದ ಮಾಡಿಸಿಕೊಳ್ಳುತಾರೆ. ನಿಮ್ಮನ್ನು

ಮುಟ್ಟಿಸಿಕೊಳ್ಳುವುದಿಲ್ಲ. ನಿಮ್ಮ ನೆರಳು ಬಿದ್ದರೂ ಮೈಲಿಗೆಯಾಯಿತೆಂದು ಸಿಡಿದುಬೀಳುತಾರೆ. ನಾಯಿ ಹಂದಿಗಳನ್ನು ನಡಸಿಕೊಂಡ ಹಾಗೆ ನಿಮ್ಮನ್ನು ನಡಸಿಕೊಳ್ಳುತಾರೆ. ಹಿಂದೂಧರ್ಮದಂಥಾ ನೀಚಧರ್ಮ ಜಗತ್ತಿನಲ್ಲಿ ಇನ್ನೊಂದಿಲ್ಲ. ನಮ್ಮ ಯೇಸುವಿನ ಧರ್ಮದಲ್ಲಿ ಎಲ್ಲ ಮನುಷ್ಯರೂ ದೇವರ ಮಕ್ಕಳು. ಎಲ್ಲಾ ಸಮಾನರು...''

ಮರಿದಾಸನ ಉಪನ್ಯಾಸದಿಂದಾಗಿ ಮಹಾದೇವನ ಸಂದೇಹಗಳೇನೂ ಪರಿಹಾರವಾಗಲಿಲ್ಲ. ಅವರು ಅಲ್ಲಿಂದ ಹೊರಡುವಾಗ ಮರಿದಾಸ,

"ನೀವಿಬ್ಬರೂ ಬಹಳ ಹುಷಾರ ಹುಡುಗರಿದ್ದೀರಿ. ನಿಮ್ಮೂರಿನಲ್ಲೂ ಯೇಸುವಿನ ಕಥೆ ಹೇಳಲು ಬರಬೇಕೆಂದು ಬಹಳ ಮನಸ್ಸಿದೆ. ಎಂದು ಬರಲಿ?'' ಎಂದು ಕೇಳಿದ.

ತನ್ನ ತಂದೆಯ ಉಗ್ರ ಮುಖವನ್ನು ಜ್ಞಾಪಿಸಿಕೊಂಡ ಕಾಳ ತುಟಿ ಬಿಚ್ಚಲಿಲ್ಲ. ಮಹಾದೇವ ಹೇಳಿದ:

"ಭರಮಜ್ಜನ್ನ ಕೇಳಿ ತಿಳಿಸುತೀನಿ.''

"ಭರಮಜ್ಜ? ಅವನು ಗೊತ್ತು ನನಗೆ. ಬಹಳ ದೊಡ್ಡ ಮೂರ್ಖ. ಹತ್ತು ವರ್ಷಗಳ ಹಿಂದೇ ಒಮ್ಮೆ ನಿಮ್ಮ ಕೇರಿಗೆ ಬಂದಿದ್ದೆ ಯೇಸುವಿನ ಕಥೆ ಹೇಳುವದಕ್ಕಾಗಿ. ನಾನು ಹೇಳುವದನ್ನ ಪೂರಾ ಕೇಳಲಿಕ್ಕೆ ಕೂಡ ಒಪ್ಪಲಿಲ್ಲ ಆ ಭರಮ. ನನಗೆ ಬಹಳ ಅವಮಾನ ಮಾಡಿದ. ಅಂದಿನಿಂದ ನಾನು ನಿಮ್ಮೂರಿಗೆ ಕಾಲು ಹಾಕಿಲ್ಲ.''

"ಹಿಂಗೇನು? ನನಗ ಗೊತ್ತಿರಲಿಲ್ಲ ಇದೆಲ್ಲಾ.''

"ನೋಡಿರಪ್ಪ. ಮುದುಕರ ಆಸೆ ಬಿಟ್ಟು ಬಿಟ್ಟೇವಿ ನಾವು. ನಿಮ್ಮಂಥ ಕಲಿತ ಹುಡುಗರೇ, ಜಾಣರೇ ಕ್ರಿಸ್ತ ಧರ್ಮದಲ್ಲಿ ಬಂದು ನಮ್ಮ ಸತ್ಯಧರ್ಮವನ್ನು ಹಬ್ಬಿಸಬೇಕು.''

ಮರಿದಾಸನನ್ನು ಬೀಳ್ಕೊಂಡು ತಮ್ಮ ಹಳ್ಳಿಯ ಕಡೆ ಬರುತ್ತಿದ್ದ ಹಾಗೆ ಮಹಾದೇವನೆಂದ:

"ಏನಪಾ ಕಾಳಣ್ಣ, ಈಗೇನಂತೀ?''

"ಮೊದಲು ಹೈಸ್ಕೂಲಿಗೆ ಹೋಗುತೀನಿ. ಆಮ್ಯಾಲ ಮುಂದಿನ ವಿಚಾರ. ನೀನೇನು ಮಾಡಬೇಕಂತ ಮಾಡೀ?"

"ನನಗೂ ಮೊಚ್ಚೆಯ ಕಾಯಕಕ್ಕೂ ಗಂಟು ಬಿದ್ದೈತೆಲ್ಲ. ಹೈಸ್ಕೂಲಿಗೆ ಹೋಗೂದಕ್ಕ ರೊಕ್ಕ ಎಲ್ಲಿಂದ ಬರಬೇಕು?"

"ಕ್ರಿಶ್ಚನ್ ಆದರ ಏನೂ ತ್ರಾಸ ಇಲ್ಲದಾಂಗ ಸಾಲೀ ಕಲೀಬಹುದು ನೋಡು."

"ಮೊದಲು ಮುಲ್ಕೀ ಪರೀಕ್ಷೆ ಆದರೂ ಮಾಡುತೀನಿ," ಎಂದ ಮಹಾದೇವ.

೧೫

ಕಾಳ ಹೈಸ್ಕೂಲಿಗೆ ಹೋಗುವನೆಂದು ತಿಳಿದು ಬಂದೊಡನೆ ಸಂಗಣ್ಣ ನಿಗೂ ನಗರದತ್ತ ಮನಸ್ಸು ಹರಿಯಲಾರಂಭಿಸಿತು. ಹಳ್ಳಿಯ ಜೀವನ ಅವನಿಗೂ ಬೇಸರಕ್ಕಿಟ್ಟುಕೊಂಡಿತ್ತು. ಇಂಗ್ಲೀಷು ಕಲಿಯುವ ನೆಪದಿಂದ ನಗರಕ್ಕೆ ಹೋಗಿ ಚಹದಂಗಡಿ, ಸಿನಿಮಾ, ನಾಟಕ, ಆಟ ನೋಟಗಳಲ್ಲಿ ಮೋಜಿನಿಂದ ದಿನಗಳೆಯಬಹುದು. ಮನೆಯಲ್ಲಿ ಹಣಕ್ಕಂತೂ ಏನೂ ಕೊರತೆಯಿಲ್ಲ. ತನ್ನನ್ನು ಬಿಟ್ಟರೆ ಬೇರೆ ಹುಡುಗರೂ ಇಲ್ಲ ಮನೆಯಲ್ಲಿ. ಆಸ್ತಿಗೆಲ್ಲ ತಾನೊಬ್ಬನೇ ಒಬ್ಬ ಹಕ್ಕುದಾರ. ಒಬ್ಬನೇ ಮಗನೆಂಬ ಮೋಹ ದಿಂದ ತಂದೆ ತಾಯಿಗಳಿಬ್ಬರೂ ತನ್ನನ್ನು ಬಹಳ ಅಕ್ಕರೆಯಿಂದ ಬೆಳಸಿಕೊಂಡು ಬಂದಿದ್ದಾರೆ. ಇಂಗ್ಲೀಷು ಶಾಲೆಗೆ ಹೋಗುವುದಾಗಿ ತಾನು ಹಟ ಹಿಡಿದು ಕುಳಿತಲ್ಲಿ ಅವರು ಒಪ್ಪದಿರಲಾರರು.

ಹಾಗೆ ಯೋಚಿಸಿ, ಸಂಗಣ್ಣ ತಾಯಿಯೊಡನೆ ಮಾತು ತೆಗೆದ.

"ಈ ವರ್ಷ ಘೋರರ ಕಾಳ ಇಂಗ್ಲೀಷ್ ಕಲಿಯುವದಕ್ಕ ಹೋಗುತಾ ನಂತವ್ವ."

"ಯಾರು? ಅವನೇ?" ಎಂದು ಆಶ್ಚರ್ಯದ ದನಿಯಲ್ಲಿ ಕೇಳಿದಳು ಮಲ್ಲವ್ವ.

"ಅವನೇ. ಘೋರರು ಹೊಲೆಯರು ಸುದ್ಧಾ ಇಂಗ್ಲೀಷು ಸಾಲೆಗೆ ಹೋಗ ಹತ್ತಿದ ಮ್ಯಾಲ ನನ್ನಂಥವ ಇಲ್ಲೇ ಇದ್ದರ ಹೆಂಗ?"

ಮಲ್ಲವ್ವ ಮುಗುಳ್ನಗೆ ನಕ್ಕು ನುಡಿದಳು:

"ಅಂದರs? ನೀನೂ ಹೋಗಬೇಕಂತ ಮಾಡಿದ್ದೀ ಹೌದಲ್ಲೋ?"

“ಹೌದವ್ವಾ. ಹೋಗಬೇಕು. ಈ ಮುಲ್ಕೀ ಪರೀಕ್ಷೆ ತಗೊಂಡೇನ ಮಾಡೂದು? ಸ್ವಲ್ಪ ಇಂಗ್ಲೀಷಾದರೂ ಕಲಿತರ ನಾಳೆ ಉಪಯೋಗ ಆದೀತು.”

“ಆ ಇಂಗ್ಲೀಷ ತಗೊಂಡು ನಾವೇನು ಮಾಡುವ ಹಾಂಗೈತಿ ಬಿಡೋ ತಮ್ಮಾ. ನೀನೇನು ಕಲಿತು ನೋಕರೀ ಮಾಡಬೇಕಾಗೈತೇನ? ದೇವ್ರು ಏನು ಕಡಮಿ ಮಾಡಿದಾನ ನಿನಗ? ಹೊಲಾಮನಿ ನೋಡಿಕೊಂಡು ರಾಜಾ ನಂಗ ಇರಬಹುದು.”

“ಇರಬಹುದು ಅನ್ನವ್ವಾ. ಆದರೂ ಈಗಿನ ಕಾಲದಾಗ ಸ್ವಲ್ಪಾದರೂ ಇಂಗ್ಲೀಷು ಬರುತಿದ್ದರ ನೆಟ್ಟಗ. ಸರಕಾರಿ ನೋಕರರು ಗೌಡ ಕುಲಕರಣೀರು ಯಾರೂ ಮೋಸಾ ಮಾಡಲಿಕ್ಕಿಲ್ಲ ಆವ್ಯಾಲ.”

“ನೋಡಪ್ಪಾ. ನೀನೊಬ್ಬನs ಒಬ್ಬ ಮಗ ನಮಗ. ಆ ಪ್ಯಾಟ್ಯಾಗ ಇರಾವ ಎಲ್ಲಿ? ಉಣ್ಣಾವ ಎಲ್ಲಿ? ನಿನ್ನ ನೋಡಿಕೊಳ್ಳುವವರು ಯಾರು? ನಾನಂತೂ ಹಾಸಿಗೀ ಹಿಡಿದು ಬಿದ್ದೀನಿ. ನನ್ನ ಕಣ್ಣ ಮುಂದs ಇರಬೇಕಪಾ ನೀ ಯಾವಾಗಲೂ. ಅವರೂ ನಿನ್ನ ಕಳಿಸಲಿಕ್ಕಿಲ್ಲ. ಬೇಕಾದರ ಕೇಳಿ ನೋಡು.”

ತಂದೆಯ ಹತ್ತಿರ ಮಾತನಾಡುವುದೆಂದರೆ ಸಂಗಣ್ಣನಿಗೆ ಮೊದಲಿನಿಂದಲೂ ಕೊಂಚ ಭೀತಿಯೆ. ಮಗನ ಬಗೆಗೆ ತುಂಬ ಪ್ರೀತಿಯಿದ್ದಿತಾದರೂ ಆ ಪ್ರೀತಿಯ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುತ್ತ ಬಂದಿದ್ದವನು ಶರಣಪ್ಪ; ಸಂಗಣ್ಣ ಎಂದೂ ತನ್ನ ಮಾತನ್ನು ಮೀರಿ ಹೋಗದಂತೆ ಅವನ ಮೇಲೆ ಪ್ರಭಾವ ಬೀರಿದ್ದವನು.

ಅಂತೆಯೆ, ತಂದೆಯೆದುರಿಗೆ ಹೈಸ್ಕೂಲಿನ ವಿಚಾರವನ್ನೆತ್ತುವ ಮುನ್ನ ಸಂಗಣ್ಣ ತುಂಬ ಯೋಚಿಸಬೇಕಾಯಿತು. ತಾಯಿಯಂತೂ ಒಪ್ಪಲಿಲ್ಲ. ತಂದೆಯೂ ಆಕೆಯಂತೆಯೆ ಮಾತಾಡಿದರೆ ಮುಗಿದೇ ಹೋಯಿತು. ಬಹಳ ಎಚ್ಚರಿಕೆಯಿಂದ ಅವನ ಹತ್ತಿರ ಈ ಮಾತು ತೆಗೆಯಬೇಕು. ಯಾವ ರೀತಿಯಿಂದ ಹೇಳಿದರೆ ಅವನ ಮನಸ್ಸಿನ ಮೇಲೆ ಅನುಕೂಲ ಪರಿಣಾಮವಾಗಬಹುದು? ಎಂಟು ಹತ್ತು ದಿನಗಳವರೆಗೆ ಬುದ್ಧಿಯನ್ನು ಓಡಿಸಿದ್ದಾಯಿತು.

ನಿಸ್ಸಂದೇಹವಾಗಿ ಒಪ್ಪಿಗೆ ಪಡೆಯಬಲ್ಲ ಉಪಾಯವೊಂದೂ ಹೊಳೆಯಲಿಲ್ಲ. "ಥೂ! ನನ್ನ ಬುದ್ಧೀನs ಇಷ್ಟ್ಯೋ ಏನೋ!" ಎಂದು ತನ್ನನ್ನು ತಾನೆ ಹಳಿದುಕೊಂಡ ಸಂಗಣ್ಣ.

ಬೇಸಗೆಯ ರಜ ಮುಗಿಯುತ್ತ ಬಂದಿತ್ತು. ಹೈಸ್ಕೂಲಿಗೆ ಹೆಸರು ಹಚ್ಚಿಸುವ ದಿನಗಳೂ ಸಮೀಪಿಸುತ್ತಿದ್ದುವು. ಒಂದೇಕಡೆ ಕಟ್ಟಿಹಾಕಿದ ಹೋರಿಯಂತೆ ತಳಮಳಿಸತೊಡಗಿದ ಸಂಗಣ್ಣ. ಒಂದು ದಿನ ಕಾಳ ಸಿಕ್ಕಿದಾಗ,

"ಏನೋ, ನೀ ಹೋಗೂದು ಗೊತ್ತಾತೇನ?" ಎಂದು ಕೇಳಿದ.

"ಗೊತ್ತಾಗದಿರುತ್ತೈತೇನ? ಎಲ್ಲಾ ತಯಾರಿ ಆಗ್ಯೈತಿ. ತಿಂಗಳಿಗೆ ಇಪ್ಪತ್ತು ರೂಪಾಯಿ ಖರ್ಚಿಗೆ ಕಳಿಸೂದಕ್ಕ್ಯಾ ಒಪ್ಪಿದಾನ ನಮ್ಮಪ್ಪ. ಮುಂದಿನ ಸೋಮವಾರ ನಾ ಹೊರಡುತೀನಿ."

ಸಂಗಣ್ಣ ತನ್ನ ಪೀಕಲಾಟವನ್ನು ತೋಡಿಕೊಂಡ.

"ಅಪ್ಪನಿಗೆ ಯಾವ ಪ್ರಕಾರ ಕೇಳೂದು ಅಂತ ವಿಚಾರ ಮಾಡುತಿ ದೀನಿ ಕಾಳ. ನೀನಾದರೂ ಒಂದು ಯುಕ್ತಿ ಹೇಳಿಕೊಡಬಾರದೇ ಮಾರಾಯಾ?"

"ಇದರಾಗೇನೈತ್ಯೋ ಅಂಥಾದ್ದು ಮಳ್ಳs! ಮ್ಯಾಟ್ರಿಕ್ ಒಂದು ಪಾಸಾದರ ನೀನು ಜಿಲ್ಹಾಕ್ಕೆಲ್ಲಾ ಪುಢಾರಿಯಾಗಬಹುದು, ಇಲೆಕ್ಶನ್ನಿಗೂ ನಿಂತು ಆರಿಸಿಬರಬಹುದು ಅಂತ ಹೇಳು. ನಿಮ್ಮಪ್ಪ ಹಿಗ್ಗಿ ಹಿಗ್ಗಿ ಕಳಿಸು ತಾನ ನಿನ್ನ ಹೈಸ್ಕೂಲಿಗೆ."

ಅಂದು ಸಾಯಂಕಾಲ ಸಂಗಣ್ಣ ತುಂಬ ಧೈರ್ಯದಿಂದ ತಂದೆಯ ಹತ್ತಿರ ಆ ವಿಚಾರ ಪ್ರಸ್ತಾಪಿಸಿದ. ಮಗನ ಮಾತು ಮುಗಿಯುವತನಕ ಮೌನವಾಗಿ ಕುಳಿತಿದ್ದ ಶರಣಪ್ಪ.

"ನೀನಿನ್ನೂ ಸಣ್ಣವನಿದ್ದೀಯಪಾ ಸಂಗಣ್ಣಾ. ಅರಿಯದ ಊರಿಗೆ ಈಗs ಹೋಗೂದು ಬ್ಯಾಡ. ಮೊದಲು ಮುಲ್ಕೀ ಮುಗೀಲಿ. ಆಮ್ಯಾಲ ನೋಡಿದರಾತು," ಎಂದು ಹೇಳಿದ.

"ಆದರs ಅಪ್ಪಾ,"

"ಆದರ್ಸ ಇಲ್ಲಾ, ಗೀದರ್ಸ ಇಲ್ಲಾ. ಇಂಗ್ಲೀಸು ಕಲಿತು ನೀ ಪುಢಾರಿಯಾಗುತೀ, ನಾ ನೋಡುತೀನಿ! ಯಾರಾದರೂ ನಕ್ಕಾರು ಕೇಳಿದವರು. ಕನ್ನಡ ಕಲಿಯೂದಕ್ಕೇ ಆಗುತಾ ಇಲ್ಲ. ನಾಪಾಸಾಗಿ ಮಾನಾ ಕಳಕೊಳ್ಳುತಾ ಇದ್ದೀ. ಹೆಂಗೂ ಆ ಸಾಂಬಯ್ಯ ಮಾಸ್ತರು ಹೋಗಿಬಿಟ್ರ. ಹೊಸದಾಗಿ ಬಂದವರು ಚಲೋ ಅದಾರಂತೆ. ಅವರಿಗೆ ಹೇಳಿ ನೀ ಪಾಸಾಗುವ ಹಂಗ ಮಾಡುತೀನಿ. ಇನ್ನುಮ್ಯಾಲಾದರೂ ಮನಸುಗೊಟ್ಟು ಸಾಲೀ ಕಲಿ," ಎಂದು ಹೇಳಿ ಮಾತು ಮುಗಿಸಿದ ಶರಣಪ್ಪ.

ಸಂಗಣ್ಣ ಕೈಗಳನ್ನು ಹಿಸುಕಿಕೊಳ್ಳುತ್ತ, ತನ್ನ ದೈವವನ್ನು ಶಪಿಸಿಕೊಳ್ಳುತ್ತ ಅಲ್ಲಿಂದೆದ್ದು ಅಡುಗೆ ಮನೆಗೆ ಹೋದ.

"ನಮ್ಮನ್ನೆಲ್ಲಾ ಬಿಟ್ಟು ಶಹರಕ್ಕ ಹೋಗಾಕ ನಿನಗೇನ ಹುರುಪೋ ಮಗನೇ! ಈ ವರ್ಷ ನಿನ್ನ ತಲೀಮ್ಯಾಲ ಅಕ್ಕೀ ಕಾಳೂ ಹಾಕಬೇಕಂತ ಮಾಡೀವಿ. ಇವ ಶಹರಕ್ಕ ಹೊಂಟದಾನ ಹುಚ್ಚ ನನ್ನ ಮಗ!" ಎಂದಳು ಅವನ ಅಜ್ಜಿ.

"ಹೌದೋ ಸಂಗಣ್ಣಾ, ನಿನಗೊಂದು ಹೆಣ್ಣೂ ನೋಡಿದಾರಪ್ಪಾ ಅವರು!" ಎಂದು ನಗುತ್ತ ನುಡಿದಳು ಮಲ್ಲವ್ವ.

ಸಂಗಣ್ಣನಿಗೆ ನಗೆ ಬರಲಿಲ್ಲ. "ನಾ ಹೈಸ್ಕೂಲಿಗೆ ಹೋಗೇ ಹೋಗುವವಾ," ಎಂದು ಹೇಳುತ್ತಾ ಆತ ದನಿತೆಗೆದು ಅಳತೊಡಗಿದ.

ಒಂದೆರಡು ವಾರಗಳವರೆಗೆ ಆತ ಸರಿಯಾಗಿ ಊಟವನ್ನೂ ಮಾಡಲಿಲ್ಲ. ತನ್ನ ಕೊಟಡಿಯಲ್ಲಿ ಮುಸುಕು ಬಿಗಿದು ಮಲಗಿಕೊಂಡು ಅಸಮಾಧಾನವನ್ನು ಪ್ರದರ್ಶಿಸತೊಡಗಿದ. ಶರಣಪ್ಪ ಅದಾವುದನ್ನೂ ಗಮನಿಸಲಿಲ್ಲ. ಕೊನೆಗೂ ಸಂಗಣ್ಣನ ಬಯಕೆ ಫಲಿಸಲಿಲ್ಲ. ಸಾಂಬಯ್ಯ ಮಾಸ್ತರರ ಸ್ಥಳಕ್ಕೆ ಬಂದ ಪಾಟೀಲ ಮಾಸ್ತರರನ್ನು ಮನೆಗೆ ಬರಮಾಡಿಕೊಂಡು ಸತ್ಕರಿಸಿ, ಅವರ ಮೇಲೆ ಸಾಕಷ್ಟು ಪ್ರಭಾವ ಬೀರಿ ತನ್ನ ಮಗನನ್ನು ಮೇಲಿನ ವರ್ಗಕ್ಕೆ ದಾಟಿಸುವಂತೆ ಯತ್ನಿಸಿ ಯಶಸ್ವಿಯಾದ ಶರಣಪ್ಪ. ಸರಿ. ರಜ ಮುಗಿಯುತ್ತಲೂ ಸಂಗಣ್ಣ ಮೊದಲಿನಂತೆ ಕನ್ನಡಶಾಲೆಗೇ ಹೋಗಬೇಕಾಯಿತು.

ಆ ವರ್ಷದ ಕಾರ್ತಿಕ ಮಾಸದಲ್ಲಿ ಅವನ ವಿವಾಹವೂ ಜರಗಿತು.

ರಾಮಾಪುರದ ಗೌಡರ ಮಗಳನ್ನು ವಧುವಾಗಿ ತಂದುಕೊಳ್ಳಲಾಯಿತು. ಒಂದು ವಾರದವರೆಗೂ ಹಳ್ಳಿಯಲ್ಲಿ ಉತ್ಸವದ ವಾತಾವರಣ ನೆಲಸಿತ್ತು. ಹಳೆಯ ವೈರವನ್ನು ಮರೆತು ಸಿದ್ಧಗೌಡನೂ ಮದುವೆಗೆ ಬಂದು ಎಲ್ಲ ಸಮಾರಂಭಗಳಲ್ಲೂ ಭಾಗವಹಿಸಿದ. ಹರಿಜನರೂ ಹೋಳಿಗೆ ಉಂಡು ತಣಿದರು.

ಮುಲ್ಕೀ ಪರೀಕ್ಷೆಯೂ ನಡೆದುಹೋಯಿತು.

ಕೇಂದ್ರಕ್ಕೆ ನಾಲ್ಕನೆಯವನಾಗಿ ಪಾಸಾಗಿದ್ದ ಮಹಾದೇವ. ಪಾಟೀಲ ಮಾಸ್ತರರು ತಮ್ಮ ಬುದ್ಧಿಯನ್ನೆಲ್ಲ ವಿನಿಯೋಗಿಸಿ ಸಂಗಣ್ಣನನ್ನು ತರಬೇತು ಗೊಳಿಸಿದ್ದರಾದರೂ ಆತ ಉತ್ತೀರ್ಣನಾಗಲಿಲ್ಲ.

"ಈ ಹೊಲಸು ಮುಲ್ಕೀ ಪರೀಕ್ಷೆ ಬ್ಯಾಡಂತ ನಾ ಹೇಳಿದರ ಕೇಳಲಿಲ್ಲ ನೀವು. ನನಗ ಇದರ ಕಡೆ ಮನಸ್ಸೇ ಇರಲಿಲ್ಲ. ಹೆಂಗ ಪಾಸಾಗಬೇಕು ?" ಎಂದು ತಾಯಿಯೊಡನೆ ದೂರಿಕೊಂಡ ಸಂಗಣ್ಣ.

"ಹೋಗಲಿ ಬಿಡೋ ತಮ್ಮಯ್ಯಾ. ಮುಂದಿನ ವರ್ಷ ಪಾಸಾದೀ ಯಂತೆ."

"ಥೂ. ಸುಡುಗಾಡು ಪರೀಕ್ಷೆ. ಇನ್ನು ಇದರ ಸಾವಾಸನೇ ಬ್ಯಾಡ," ಎಂದ ಸಂಗಣ್ಣ.

ಪರೀಕ್ಷೆಯ ಫಲಿತಾಂಶದ ವಿಚಾರವಾಗಿ ಶರಣಪ್ಪ ಮಗನೊಡನೆ ಮಾತನ್ನೇ ಎತ್ತಲಿಲ್ಲ. "ಅವನ ಹಣ್ಯಾಗ ಇಷ್ಟೇ ಬರದಿರಬೇಕು. ಯಾರೇನು ಮಾಡೂದೈತಿ. ಹುಡುಗ ಹೊಲಾಮನಿ ನೋಡಿಕೊಂಡಿದ್ದರ ಸಾಕು," ಎಂದು ಹೇಳಿಕೊಂಡು ಆತ ಸುಮ್ಮನಿದ್ದುಬಿಟ್ಟ.

ಸಂಗಣ್ಣ 'ಹೊಲ ಮನೆ ನೋಡಿಕೊಳ್ಳುವುದರಲ್ಲೂ' ಆಸಕ್ತಿ ವಹಿಸ ಲಿಲ್ಲ. ಸಾಹುಕಾರರ ಮಗನಾದುದರಿಂದ ಅವನ ಸುತ್ತಲೂ ನಿರುದ್ಯೋಗಿ ಹುಡುಗರದೊಂದು ಬಳಗವೇ ಸೇರಿಕೊಂಡಿತ್ತು. ಕಾಮಣ್ಣನ ಹಿರಿಯಮಗ ಗಂಗಣ್ಣ, ಸಿದ್ಧಗೌಡನ ಮಗ ಶಿವನಗೌಡ, ಹಳಬರ ಶಿವರಾಯಿಯ ಮಗ ಭೀಮರಾಯ ಮೊದಲಾದವರೆಲ್ಲ ಇಸ್ಪೀಟು ಆಟದಲ್ಲಿ ಪಳಗಿದ ಹುಲಿಗಳು. ಒಂದೆರಡು ವರ್ಷಗಳಲ್ಲಿಯೆ ಸಂಗಣ್ಣನೂ ಆ ವಿದ್ಯೆಯಲ್ಲಿ ಪ್ರವೀಣನಾದ.

ಶರಣಪ್ಪನಿಗೆ ಗೊತ್ತಾಗದ ಹಾಗೆ ಮನೆಯಿಂದ ಹಣ ಮಾಯವಾಗ ತೊಡಗಿತು.

ಇಸ್ಪೀಟಿನಿಂದ ಆರಂಭವಾದ 'ಮೋಜು' ರೈತರ ಹುಡುಗಿಯರ ಮೇಲೆ ಕಣ್ಣು ಹಾಕುವವರೆಗೂ ಬಂದು ಮುಟ್ಟಿತು. ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯರನ್ನು ಸಂಗಣ್ಣ ಹಿಡಿಸಿದನೆಂದು ಶರಣಪ್ಪನಲ್ಲಿಗೆ ದೂರುಗಳೂ ಬರಲು ವಿಲಂಬವಾಗಲಿಲ್ಲ. ಇನ್ನು ಸುಮ್ಮನಿದ್ದರೆ ಸಂಗಣ್ಣ ತನ್ನ ಮರ್ಯಾದೆಯನ್ನೆಲ್ಲ ಕಳೆದುಬಿಡುವನೆಂದೆನ್ನಿಸುತ್ತಲೂ ಶರಣಪ್ಪ ಒಂದು ದಿನ ಮಗನನ್ನು ಎದುರಿಗೆ ಕೂಡಿಸಿಕೊಂಡು ಅವನ ಮನಸ್ಸಿಗೆ ಪೆಟ್ಟು ಬೀಳುವ ಹಾಗೆ ಬಯ್ದು ಬುದ್ಧಿವಾದ ಮಾಡಿದ.

"ನಾನಾಗಲಿ ನಮ್ಮ ಹಿರಿಯರಾಗಲಿ ಯಾರೂ ಊರಾಗಿನ ರೈತರ ಹೆಂಗಸರನ್ನ ಕಣ್ಣೆತ್ತಿ ನೋಡಿದವರಲ್ಲ. ನಮ್ಮ ಮನೆತನದ ಮಾನಕ್ಕ ಕಲ್ಲು ಹಾಕಬ್ಯಾಡ. ಇನ್ನುಮ್ಯಾಲಾದರೂ ಮರ್ಯಾದೆಯಿಂದ ಇದ್ದಿಯೋ ಚಲೋದು. ಇಲ್ಲದಿದ್ದರ ನೋಡು."

ಕ್ರೋಧದಿಂದ ಮುಖ ಕೆಂಪಗೆ ಮಾಡಿಕೊಂಡು ಸಂಗಣ್ಣ ತನ್ನ ಕೊಟಡಿಗೆ ಹೋಗಿ ಬಿದ್ದುಕೊಂಡ. ತಾಯಿ, ಅಜ್ಜಿ, ಅತ್ತೆ ಮೂವರೂ ಬಂದು ಎಬ್ಬಿಸಿದರೂ ಅಂದು ರಾತ್ರೆ ಆತ ಊಟಕ್ಕೇಳಲಿಲ್ಲ. "ಉಣ್ಣದಿದ್ದರೆ ಬಿಡಲಿ. ಎಷ್ಟು ದಿನ ಅಂತ ಉಪವಾಸ ಇರುತಾನ? ಹಸಿದಾಗ ತಾನೇ ಎದ್ದು ಉಣ್ಣುತಾನ," ಎಂದು ಹೇಳಿಕೊಂಡು ಶರಣಪ್ಪ ಮೌನದಿಂದಿದ್ದು ಬಿಟ್ಟ.

ಬೆಳಗಾಗುತ್ತಲೂ ಅಜ್ಜಿ ಸಂಗಣ್ಣನ ಕೊಟಡಿಗೆ ಬಂದು ನೋಡಿದರೆ ಆತ ಅಲ್ಲಿ ಕಾಣಿಸಲಿಲ್ಲ. ಗೂಟದ ಮೇಲೆ ಅವನ ಕೋಟು ಟೊಪ್ಪಿಗೆಗಳೂ ಇರಲಿಲ್ಲ. ಕೋಪಿಸಿಕೊಂಡಿದ್ದ ಸಂಗಣ್ಣ ಮನೆ ಬಿಟ್ಟು ಹೋದನೇನೋ ಎಂದು ಗಾಬರಿಗೊಂಡು ಅಜ್ಜಿ ಸೊಸೆಯ ಕೊಟಡಿಗೆ ಬಂದು ಅವಳನ್ನೆಬ್ಬಿಸಿದಳು. ಮಲ್ಲವ್ವನೂ ಗಾಬರಿಯಿಂದ ಏಳುತ್ತಿದ್ದ ಹಾಗೆ ಕೊಟಡಿಯ ಮೂಲೆಯಲ್ಲಿದ್ದ ಪೆಟ್ಟಿಗೆಯ ಕಡೆ ಅವಳ ದೃಷ್ಟಿ ತಿರುಗಿತು. ಪೆಟ್ಟಿಗೆಯ ಬೀಗ ತೆಗೆ

ಯಲ್ಪಟ್ಟಿತ್ತು; ಅದರಲ್ಲಿದ್ದ ಅವಳ ಚಿನ್ನದ ಆಭರಣಗಳು ಮಾಯ ವಾಗಿದ್ದುವು.

ತಾಯಿಯ ಒಡವೆಗಳನ್ನೆತ್ತಿಕೊಂಡು ಮಗ ಓಡಿಹೋದ ಸಮಾಚಾರ ತಿಳಿಯುತ್ತಲೂ ಶರಣಪ್ಪ "ಹಾ, ಶಿವನೆ," ಎಂದು ಉದ್ಗಾರ ತೆಗೆದು ಹಣೆಗೆ ಕೈಯಿಟ್ಟು ಕುಳಿತುಕೊಂಡ.

ಮಲ್ಲವ್ವ ಎದೆ ಬಡಿದುಕೊಳ್ಳುತ್ತ ರೋದಿಸತೊಡಗಿದಳು. ಇದ್ದವನು ಒಬ್ಬನೇ ಒಬ್ಬ ಮಗ. ಆತ ಹೀಗಾಗಬಹುದೆಂದು ಯಾರು ತಿಳಿದಿದ್ದರು?

"ಅವ ಇಂಗ್ಲೀಷ ಕಲಿಯೂದಕ್ಕ ಹೋಗುತೇನಿ ಅಂದಾಗ ನಾವು ಬ್ಯಾಡ ಅಂದದ್ದs ಅವನ ಮನಸಿಗೆ ಹತ್ತಿತ್ತು. ಹುಡುಗಗ ಶಹರದ ಮ್ಯಾಲ ಬಹಳ ಮನಸಿತ್ತು. ಕಳಿಸಿಬಿಟ್ಟಿದ್ದರ ಅವ ಹೀಂಗ ಮಾಡುತಿರಲಿಲ್ಲ ಬಹಳಮಾಡಿ," ಎಂದು ಯೋಚಿಸಿದಳು ಮಲ್ಲವ್ವ.

ಶರಣಪ್ಪ ಮೂರು ದಿನಗಳ ಕಾಲ ಮೌನವಾಗಿದ್ದ. ಅವನ ಬಿಗಿದ ಮುಖವನ್ನು ಕಂಡು ಎಲ್ಲರೂ ಹೆದರಿ ಸುಮ್ಮನಿದ್ದುಬಿಟ್ಟರು. ಅವನನ್ನು ಮಾತನಾಡಿಸಲು ಯಾರಿಗೂ ಧೈರ್ಯವಿರಲಿಲ್ಲ. ವಾಡಿಕೆಯಂತೆ ನಿತ್ಯದ ಕರ್ಮ ಗಳನ್ನೆಲ್ಲ ಆತ ಯಾಂತ್ರಿಕವಾಗಿ ನೆರವೇರಿಸುತ್ತಿದ್ದ. ಸ್ನಾನ, ಪೂಜೆ ಯಾವುದನ್ನೂ ತಪ್ಪಿಸುತ್ತಿರಲಿಲ್ಲ. ಸ್ನಾನ ತೀರಿಸಿಕೊಂಡು ಬಸವಣ್ಣನ ಗುಡಿಗೆ ಹೋದವನು ಗಂಟೆಗಳ ಕಾಲ ಅಲ್ಲಿಯೆ ಕಂಬಕ್ಕೊರಗಿ ಕುಳಿತು ಬಿಡುವನು. ಮಗ ಓಡಿಹೋದುದರಿಂದ ಶರಣಪ್ಪನಿಗೆ ತಲೆ ಕೆಟ್ಟ ಹಾಗಾಗಿದೆ ಯೆಂದು ಹಳ್ಳಿಯ ಜನ ಆಡಿಕೊಳ್ಳತೊಡಗಿದರು.

ಪೂಜಾರಿ ರಾಚಯ್ಯ ಹೆದರುತ್ತ ಹೆದರುತ್ತ ಶರಣಪ್ಪನನ್ನು ಸಂತೈಸಲು ಯತ್ನಿಸುತ್ತಿದ್ದ:

"ಎಲ್ಲಿ ಹೋಗುತಾನೇಳ್ರಿ ಹುಡುಗ ಸಾವುಕಾರರೆ. ನಾಕು ದಿನ ಅಲ್ಲಿ ಇಲ್ಲಿ ತಿರುಗಾಡಿಕೊಂಡು ಬಂದುಬಿಡುತಾನ."

ಸುಮ್ಮನೆ ತಲೆ ಕೊಡಹುತ್ತಿದ್ದ ಶರಣಪ್ಪ.

"ಸಂಗಣ್ಣ ಏನೋ ಚಲೋ ಉತ್ತಮ ಹುಡುಗನೇ. ಆದರs ಕೆಟ್ಟ

ಹುಡುಗರ ಸಂಗತಿಯಿಂದ ಸ್ವಲ್ಪ ಅಡ್ಡಹಾದಿ ಹಿಡಿದ. ಏನ ಮಾಡೂದು, ಆಗೂದೆಲ್ಲ ಆಗಾಕs ಬೇಕಲ್ಲರಿ. ಶಿವನ ಮಾಯಾ...." ಎನ್ನುತ್ತಿದ್ದ ರಾಚಯ್ಯ.

ಮತ್ತೆ ಕತ್ತು ಅಲುಗಾಡಿಸುತ್ತಿದ್ದ ಶರಣಪ್ಪ.

ಸುಮ್ಮನೆ ಕುಳಿತುಕೊಂಡಿರದೆ ಹುಡುಗನನ್ನು ಶೋಧಿಸಲು ಯತ್ನಿಸ ಬೇಕೆಂದು ಕಾಮಣ್ಣ ಒತ್ತಾಯಪಡಿಸುತ್ತಲೇ ಇದ್ದ.

"ಎಲ್ಲಿಗೆ ಹೋಗೂದು ಕಾಮಣ್ಣಾ ಅವನ್ನ ಹುಡುಕೂದಕ್ಕ ?"

"ಆವ ಏನು ಬಹಳ ದೂರ ಹೋಗಿರಾಕಿಲ್ಲಂತ ನನಗನಿಸುತ್ತೈತಿ. ಇಲ್ಲೇ ಶಹರದಾಗ ಇದ್ದಾನು. ಹೋಗಿ ನೋಡಿಕೊಂಡು ಬರೂಣೇಳ್ರಿ."

"ನನಗ ಯಾತಕ್ಕೂ ಮನಸ್ಸಿಲ್ಲ ಕಾಮಣ್ಣಾ. ಮತ್ತೊಮ್ಮೆ ಅವನ ಮಾರೀ ಕೂಡಾ ನೋಡಬಾರದಂತ ಅನಿಸುತ್ತೈತಿ."

"ಛೆ. ಬಿಡಿರಿ. ಎಂಥಾ ಮಾತು. ಹುಡುಗರಂದರ ಪ್ರಾಯದಾಗ ಸಣ್ಣ ಸಣ್ಣ ತಪ್ಪು ಮಾಡುವವರs. ಅಷ್ಟಕ್ಕs ಸಿಟ್ಟು ಮಾಡಿಕೊಂಡರ ಹೆಂಗರಿ ?"

"ಸಿಟ್ಟಲ್ಲ ಕಾಮಣ್ಣಾ. ಆದರs ಹೀಂಗ ವಸ್ತಾ ಒಡವೀ ಎತ್ತಿಕೊಂಡು ಓಡಿಹೋಗಿ ನಮ್ಮ ಮನೆತನಕ್ಕs ಕೆಟ್ಟ ಹೆಸರು ತಂದ ಹುಡುಗ. ನಮ್ಮ ವಂಶದಾಗ ಇಂಥವರು ಯಾರೂ ಹುಟ್ಟಿರಲಿಲ್ಲ ಇಲ್ಲಿಯತನಕ," ಎಂದು ತನ್ನ ಅಳಲನ್ನು ತೋಡಿಕೊಂಡ ಶರಣಪ್ಪ.

"ಇರಲೇಳ್ರಿ. ಏನು ಅಂಥಾ ಭಯಂಕರ ಮಾಡಿಲ್ಲವಲ್ಲ ಸಂಗಣ್ಣ. ನಾ ಹೋಗಿ ಅವನ್ನ ಹುಡುಕಿ ಕರಕೊಂಡು ಬರ್ತೀನಿ," ಎಂದ ಕಾಮಣ್ಣ. ಸಮ್ಮತಿ, ಅಸಮ್ಮತಿ ಯಾವುದನ್ನೂ ವ್ಯಕ್ತಗೊಳಿಸಲಿಲ್ಲ ಶರಣಪ್ಪ.

ದಿನಗಳು ಕಳೆದ ಹಾಗೆ ಆತ ಹೆಚ್ಚು ಹೆಚ್ಚು ಗಂಭೀರವಾಗುತ್ತ ಬಂದ. ಮಾತು ಬಹಳ ಕಡಿಮೆಯಾಯಿತು. ಹೊಲಗಳ ಕೆಲಸದ ಬಗೆಗೂ ಉದಾಸೀನತೆ. ಮನೆಯ ಬಗೆಗೆ ಬೇಸರು. ದಿನದ ಬಹುಭಾಗವನ್ನು ಬಸವಣ್ಣನ ಗುಡಿಯಲ್ಲಿಯೆ ಕಳೆಯತೊಡಗಿದ.

"ಶರಣಪ್ಪ ಸಾಧೂ ಆಗುತಾನ," ಎಂದು ಜನರು ಆಡಿಕೊಳ್ಳ ತೊಡಗಿದರು.

ಒಂದು ದಿನ ಸ್ನಾನ ಮುಗಿಸಿಕೊಂಡು ದೇವಸ್ಥಾನಕ್ಕೆ ಬಂದ ಶರಣಪ್ಪ ಊಟದ ವೇಳೆಯಾದರೂ ಮನೆಗೆ ಬರಲಿಲ್ಲ. ಮಲ್ಲವ್ವ ವಿವಂಚನೆಗೊಳಗಾಗಿ ಆಳು ಕಲ್ಲನನ್ನು ಕಳಿಸಿಕೊಟ್ಟಳು. ಕಲ್ಲ ಗುಡಿಗೆ ಬಂದು ನೋಡಿದರೆ ಶರಣಪ್ಪ ಕಂಬಕ್ಕೊರಗಿಕೊಂಡಿದ್ದ ಹಾಗೆಯೆ ದೀರ್ಘಶ್ವಾಸ ಬಿಡುತ್ತಲಿದ್ದುದು ಕಾಣಿಸಿತು. ಕಲ್ಲ ಗಾಬರಿಗೊಂಡು ಧಾವಿಸಿಹೋಗಿ ಶರಣಪ್ಪನ ಹಣೆ ಮುಟ್ಟಿ ನೋಡಿದ. ಬಿಸಿಲಿನಲ್ಲಿ ಕಾಯ್ದ ಮರಳಿನಂತೆ ಹಣೆ ಸುಡುತ್ತಿತ್ತು.

ಎರಡು ಹಗಲು ಎರಡು ಇರುಳು.

ಜ್ವರ ನಿಷ್ಠುರವಾಗಿ ಕಾಯುತಿತ್ತು.

ನಗರದಿಂದ ಡಾಕ್ಟರು ಬಂದರು, ಔಷಧ ಕೊಟ್ಟರು, ಹೊರಟು ಹೋದರು.

ಜ್ವರ ಇಳಿಯಲಿಲ್ಲ.

ಸಂಗಣ್ಣನನ್ನು ಶೋಧಿಸಲೆಂದು ನಗರಕ್ಕೆ ಹೋಗಿದ್ದ ಕಾಮಣ್ಣ ಮರಳಿ ಬಂದುದೂ ಆಯಿತು. ಅವನ ಯತ್ನಕ್ಕೆ ಯಶ ಲಭಿಸಿರಲಿಲ್ಲ.

ಶರಣಪ್ಪನಿಗೆ ಭಯಂಕರ ಜ್ವರ ಬರುತ್ತಿರುವುದನ್ನು ತಿಳಿದೊಡನೆ ಅವನನ್ನು ಕಾಣಲು ಬಂದ ಕಾಮಣ್ಣ. ಕಣ್ಣು ತೆರೆದು ಒಂದುಸಲ ಕಾಮಣ್ಣನ ಮುಖವನ್ನು ದಿಟ್ಟಿಸಿದ ಶರಣಪ್ಪ. ಆತ ಕೇಳಬಯಸುತ್ತಿದ್ದ ಪ್ರಶ್ನೆಯೇನೆಂಬುದನ್ನು ಗುರುತಿಸಿಕೊಂಡ ಕಾಮಣ್ಣ ತಲೆತಗ್ಗಿಸಿ ನೆಲವನ್ನು ದಿಟ್ಟಿಸ ತೊಡಗಿದ.

ಶರಣಪ್ಪನ ತುಟಿಗಳು ಕೊಂಚ ಚಲನವಲನ ಮಾಡಿದ ಹಾಗೆ ಕಂಡು ಬಂದಿತು. ದನಿ ಮಾತ್ರ ಹೊರಡಲಿಲ್ಲ. ಶರಣಪ್ಪನನ್ನು ಸಂತೈಸುವುದು ಹೇಗೆಂಬುದೇ ಒಂದು ಸಮಸ್ಯೆಯಾಯಿತು ಕಾಮಣ್ಣನಿಗೆ. ಹತ್ತು ಹದಿನೈದು ನಿಮಿಷಗಳವರೆಗೆ ಆತ ಮೌನವಾಗಿ ಕುಳಿತಿದ್ದು ಅನಂತರ ಮೆಲ್ಲನೆದ್ದು ಅಲ್ಲಿಂದ ಹೊರಟುಹೋದ.

ಹದಿನೈದು ದಿನಗಳ ಕಾಲ ಬಿಟ್ಟೂಬಿಡದೆ ಜ್ವರ ಕುದಿಯುತಿತ್ತು ಶರಣಪ್ಪನ ದೇಹದಲ್ಲಿ. ಮೂರು ದಿನಗಳಿಗೊಮ್ಮೆ ಡಾಕ್ಟರರು ಬಂದು ನೋಡಿಕೊಂಡು ಹೋಗುತ್ತಿದ್ದರು. ಶರಣಪ್ಪನಿಗೆ ಪ್ರಜ್ಞೆ ತಪ್ಪಿಹೋಗಿತ್ತು. ಜ್ವರದ

ಅಮಲಿನಲ್ಲಿ ಏನೇನನ್ನೋ ಬಡಬಡಿಸುವನು. ಕೆಲವು ಮಾತು ಅರ್ಥ ವಾಗುತಿತ್ತು, ಕೆಲವು ಆಗುತ್ತಿರಲಿಲ್ಲ.

"ಬಸವಣ್ಣಾ, ನನ್ನ ತಪ್ಪು ಹೊಟ್ಟೆಯೊಳಗ ಹಾಕ್ಕೊಳ್ಳಪಾ. ನಾ ಬಹಳ ಪಾಪ ಮಾಡಿದಿನಿ... ಶಿವಗಂಗಿ.... ಶಿವಗಂಗಿ.... ಲಚುಮಿ.... ಪಾಪ... ಪಾಪ.... ಬಸವಣ್ಣಾ.... ಬಸವಣ್ಣಾ...."

ಒಂದು ರಾತ್ರಿ ಅವನ ಬಡಬಡಿಕೆ ವಿಪರೀತವಾಯಿತು. "ಶಿವಗಂಗಿ.... ಶಿವಗಂಗಿ" ಎಂದು ಒಂದೇಸಮನೆ ಕೂಗಿಕೊಳ್ಳತೊಡಗಿದ. ಜ್ವರದಿಂದ ರಕ್ತಹೀನವಾಗಿದ್ದ ಕೈಗಳನ್ನೆತ್ತಿ ಯಾರನ್ನೋ ಕರೆಯುವಂತೆ ಬೀಸತೊಡಗಿದ.

"ಶಿವಗಂಗಿಯನ್ನ ನೋಡಬೇಕಂತಾನೋ ಏನೊ," ಎಂದಳು ಅವನ ತಾಯಿ.

"ಶಿವಗಂಗಿ.... ಶಿವಗಂಗಿ...." ಎಂದು ಮತ್ತೆ ಕೂಗಿದ ಶರಣಪ್ಪ.

"ಬೆಳಗಾದ ಮ್ಯಾಲ ಕರಸುತೀವಿ. ಈಗ ಸುಮ್ಮನs ಮಲ ಕೊಳ್ಳಪ್ಪಾ..." ಎಂದಳು ಮುದುಕಿ.

ಶರಣಪ್ಪ ರಭಸದಿಂದ ಕೈ ಬೀಸುತ್ತ ಮತ್ತೆ ಮತ್ತೆ ಕೂಗಿಕೊಂಡ: "ಶಿವಗಂಗೀ.... ಶಿವಗಂಗೀ...." ಎಂದು.

ಅಜ್ಜಿ ಗೊಂದಲಕ್ಕೆ ಸಿಲುಕಿಬಿದ್ದು ಏನು ಮಾಡುವುದೆಂದು ತಿಳಿಯದೆ ಚಿಂತಿಸತೊಡಗಿದಳು. ಶಿವಗಂಗೆಯನ್ನೇನೊ ಕರೆಸಬಹುದಾದರೂ ಇಲ್ಲಿ ಈ ಕೋಣೆಗೆ ಅವಳು ಬರುವಂತಿಲ್ಲ, ಇವನು ಅವಳನ್ನು ನೋಡುವಂತಿಲ್ಲ. ಹೊಲೆಯರ ಆ ಹೆಣ್ಣು ಪಡಸಾಲೆಯ ಹೊರಗೇ ಕುಳಿತಿರಬೇಕಾಗುವುದು. ಇಂಥ ಜ್ವರದಲ್ಲಿ ಇವನನ್ನು ಎತ್ತಿಕೊಂಡು ಪಡಸಾಲೆಗೆ ಸಾಗಿಸಲೂ ಸಾಧ್ಯವಿಲ್ಲ.... ಇವನೋ ತನ್ನ ಹಟ ಬಿಡುವಂತೆ ತೋರುವುದಿಲ್ಲ. ಸರಿ. ಅವಳು ಬಂದಾದರೂ ಬರಲಿ, ಎಂದುಕೊಂಡು ಅವಳನ್ನು ಕರೆದು ತರಲು ಕಲ್ಲನನ್ನು ಕಳಿಸಿಕೊಟ್ಟಳು.

ಕಲ್ಲ ಹರಿಜನಕೇರಿಗೆ ಹೋಗಿ ಹಿಂದಿರುಗಿ ಬಂದು ಮುದುಕಿಯನ್ನು ಹೊರಗಡೆ ಕರೆದು ಹೇಳಿದ:

"ಶಿವಗಂಗಿ ಮನಿಯಾಗಿಲ್ಲ. ಅವರೆಲ್ಲಾ ಯಲ್ಲವ್ವನ ಜಾತ್ರಿಗೆ ಹೋಗಿದ್ದಾರಂತ."

ರಾತ್ರಿ ಮುಗಿಯುವತನಕ ಶಿವಗಂಗೆಯ ಹೆಸರನ್ನು ಕೂಗುತ್ತಲೇ ಇದ್ದ ಶರಣಪ್ಪ. ಅವನ ಮುಖದ ಮೇಲೆ ವಿಚಿತ್ರ ಕಳೆ ಮೂಡಿಬಂದಿದ್ದಿತು.

ಬೆಳಗಾಗುತ್ತಲೂ ಆತ ತಾಯಿಯನ್ನು ಕರೆದು ಹೇಳಿದ:

"ನನ್ನ ಗುಡಿಗೆ ತಗೊಂಡು ನಡೀರಿ. ಬಸವಣ್ಣನನ್ನ ನೋಡಿ ಬಹಾಳ ದಿವಸಾತು."

ಹೊರಸಿನ ಮೇಲೆ ಅವನನ್ನು ಮಲಗಿಸಿ ದೇವಸ್ಥಾನಕ್ಕೆ ಸಾಗಿಸಲಾಯಿತು.

ಏಳಲು ಯತ್ನಿಸಿದ ಶರಣಪ್ಪ. ಏಳಲಾಗಲಿಲ್ಲ. ಮಲಗಿದ್ದ ಹಾಗೆಯೆ ದೇವರಿಗೆ ಕೈ ಜೋಡಿಸಿದ. "ನನ್ನ ತಪ್ಪು ಕ್ಷಮಾ ಮಾಡಪಾ ಬಸವಣ್ಣಾ," ಎಂದು ಎಂಟು ಹತ್ತು ಬಾರಿ ಬೇಡಿಕೊಂಡ. ಹಾಳು ಬಾವಿಯಂತೆ ರೂಕ್ಷವಾಗಿದ್ದ ಅವನ ಕಣ್ಣುಗಳಲ್ಲಿ ನೀರು ಚಿಮ್ಮಿ ಬಂದಿತು.

"ಸಿದಗೌಡನ್ನ ಕರಸರಿ. ಬಹಳ ದಿವಸಾತು ಅವನ್ನ ಭೆಟ್ಟಿಯಾಗಿ," ಎಂದ ಶರಣಪ್ಪ. ಗೌಡ ಬರುತ್ತಲೂ ಅವನನ್ನು ಹೊರಸಿನ ಹತ್ತಿರ ಕರೆದು ಅವನ ಕೈಯಲ್ಲಿ ಕೈಯಿಟ್ಟು,

"ನಾ ಹೊಂಟೆನಿ ಸಿದಗೌಡಾ. ಹೋಗಿ ಬರ್ತೇನಿ," ಎಂದ.

"ನಿನಗೇನೂ ಆಗುವದಿಲ್ಲ ಬಿಡು ಶರಣಪ್ಪ. ದೇವರ ದಯದಿಂದ ನೆಟ್ಟಗಾಗುತ್ತೈತಿ."

"ಆಗುವ ಹಾಂಗಿದ್ದರ ಎಂದೋ ಆಗುತಿತ್ತು. ದೇವರ ಮರ್ಜಿ ಸಿದಗೌಡಾ. ಅವ ಮಾಡಿದಂಗ ಎಲ್ಲಾ ನಡೀಬೇಕಲ್ಲ? ಎಲ್ಲಾ ನಡೀಬೇಕಲ್ಲ..." ಎಂದು ಹೇಳುತ್ತಿದ್ದ ಹಾಗೆ ಶರಣಪ್ಪನಿಗೆ ತುಂಬ ಆಯಾಸವಾಗಿ ಮಾತು ನಿಂತು ಹೋಯಿತು.

ಐದಾರು ನಿಮಿಷಗಳವರೆಗೆ ಕಣ್ಣು ಮುಚ್ಚಿ ಬಿದ್ದುಕೊಂಡಿದ್ದ ಶರಣಪ್ಪ. ಅನಂತರ ನಿಧಾನವಾಗಿ ಕಣ್ಣು ತೆರೆದು ಸಿದ್ದಗೌಡನ ಕಡೆ ದೃಷ್ಟಿ ತಿರುಗಿಸಿ, ನುಡಿದ:

“ ಹಿಂದಿನದೆಲ್ಲಾ ಮರೆತು ಬಿಡಪ್ಪಾ ಸಿದಗೌಡಾ. ನನ್ನ ಸಂಗಣ್ಣ.... ಸಂಗಣ್ಣ...ಅವನೂ ಒಬ್ಬ ನಿನ್ನ ಮಗನೇ ಅಂತ ತಿಳಕೋ...ಅವನ್ನ...”

“ ಅವನ್ನ ಹುಡುಕಿಸುತೀನಿ ಶರಣಪ್ಪ. ಕಾಳಜೀ ಮಾಡಬ್ಯಾಡ. ಪೋಲೀಸರಿಗೆ ರಿಪೋರ್ಟು ಕೊಡಲೇನು? ಸಂಗಣ್ಣ ಎಲ್ಲಿದ್ದರೂ ಪತ್ತೆ ಆಗುತ್ತೈತಿ.”

“ ಸಂಗಣ್ಣಾ....ಸಂಗಣ್ಣಾ....” ಎನ್ನುತ್ತ ಮತ್ತೆ ಕಣ್ಣು ಮುಚ್ಚಿದ ಶರಣಪ್ಪ.

ಸಂಜೆಯಾಗುವವರೆಗೆ ಅವನ ಜೀವ ಬದುಕು - ಸಾವುಗಳ ಗಡಿನಾಡಿನಲ್ಲಿ ತೂಗಾಡುತಿತ್ತು. ಕತ್ತಲೆ ಪಸರಿಸುವ ವೇಳೆಗೆ ಸಾವಿನ ಸೂಚನೆ ಕಾಣಿಸತೊಡಗಿದುವು. ಮರಡಿಹಳ್ಳಿಯ ಜನರೆಲ್ಲಾ ಶರಣಪ್ಪನ ಮನೆಯಲ್ಲಿ ನೆರೆದರು. ನೆರೆಯ ಹಳ್ಳಿಗಳಿಂದ ಆಪ್ತೇಷ್ಟರೂ ಬಂದು ಸೇರಿದರು. ರಾತ್ರಿಯಿಡೀ ಹೋರಾಡಿ ಬೆಳಗಿನ ಜಾವದಲ್ಲಿ ಸೋತುಹೋಗಿ ಸಾವಿಗೆ ಬಲಿಯಾಯಿತು ಶರಣಪ್ಪನ ಜೀವ. ಕೊನೆಯವರೆಗೂ ಅವನ ದೃಷ್ಟಿ ಬಾಗಿಲನ್ನು ಬಿಟ್ಟು ಕದಲಲಿಲ್ಲ.

“ ಪಾಪ....ಪಾಪ....ಮಗನ ಜಲ್ಲು ಹತ್ತಿ ಇಷ್ಟು ಲಗೂ ತೀರಿಕೊಂಡ ಸಾವುಕಾರ. ಇಲ್ಲದಿದ್ದರ ಇದೇನು ಸಾಯುವ ವಯಸ್ಸೇ?'' ಎಂದ ಕಾಮಣ್ಣ.

“ ಮುದಿ ಹೆಣಾ ಆಗೀನಿ. ದೇವರು ನನ್ನ ಒಯ್ಯಲಿಲ್ಲ. ನನ್ನ ಮಗನ್ನ ಒಯ್ದನಲ್ಲಾ....” ಎನ್ನುತ್ತಾ ಮುದುಕಿ ಆಕ್ರೋಶ ಮಾಡತೊಡಗಿದಳು.

೧೬

" ಸ್ವಲ್ಪ ತಿರುಗಾಡಿ ಬರೂಣು ಬರ್ತೀಯಾ ಚಂದ್ರೂ ?"

" ಯಾಕ ?"

" ಯಾಕೂ ಇಲ್ಲ. ಸುಮ್ಮನ. ಇವರ ಅಡಿಗಿ ಮುಗಿಯೂತನಕ ಇಲ್ಲಿ ಕುಂತೇನ ಮಾಡೂದು ? ಬಾ, ಹೋಗಿ ಬರೂಣು," ಎಂದ ಮಹಾದೇವ.

ಸುತ್ತಲೂ ಹರಡಿಕೊಂಡಿದ್ದ ಜಾತ್ರೆಯ ಬಿಡಾರಗಳಲ್ಲಿ ಹಾದಿ ಹುಡುಕಿಕೊಂಡು ಅವರಿಬ್ಬರೂ ದೇವಸ್ಥಾನದಿಂದ ತುಸುದೂರ ನಡೆದು ಹೋಗಿ ಒಂದು ಗಿಡದ ಬುಡದಲ್ಲಿ ಕುಳಿತುಕೊಂಡರು. ಕೊಳ್ಳದಾಚೆ ಸೂರ್ಯ ಮರೆಯಾಗಿದ್ದ. ಬೆಳಕು ನಿಧಾನವಾಗಿ ಕತ್ತಲೆಯಲ್ಲಿ ಕರಗಿಹೋಗತೊಡಗಿತ್ತು. ಆಕಾಶದಲ್ಲಿ ಅಲ್ಲಲ್ಲಿ ಒಂದೊಂದು ಕಿರುತಾರೆ ಮಿನುಗತೊಡಗಿತ್ತು. ಶುಕ್ಲಪಕ್ಷದ ಅರ್ಧ ಚಂದ್ರ ಇರುಳಯಾತ್ರೆಗೆ ಅಣಿಯಾಗತೊಡಗಿದ್ದ. ಸುತ್ತಲೂ ತಲೆಯೆತ್ತಿ ನಿಂತ ಗುಡ್ಡದ ನಡುವೆ ಅದರೊಡನೆ ಸ್ಪರ್ಧಿಸಲೆತ್ನಿಸುವಂತೆ ಎತ್ತರವಾಗಿ ಬೆಳೆದು ನಿಂತ ಎಲ್ಲಮ್ಮನ ಗುಡಿಯ ಗೋಪುರವನ್ನು ದಿಟ್ಟಿಸುತ್ತ ಒಂದೆರಡು ನಿಮಿಷ ಮೌನವಾಗಿ ಕುಳಿತುಕೊಂಡಿದ್ದ ಮಹಾದೇವ.

" ಯಾಕೋ, ಗಪ್ಪಾಗಿ ಕುಂತಿಯಲ್ಲ ?" ಎಂದಳು ಚಂದ್ರಾ.

" ಅಹಂ..." ಎಂದು ಬೆಚ್ಚಿಬಿದ್ದು ಅವಳತ್ತ ದೃಷ್ಟಿ ತಿರುಗಿಸಿ,

" ನೀನೀಗ ದೊಡ್ಡಾಕೆಯಾದೆ ಚಂದ್ರೂ. ಬಹಳ ಬುದ್ಧಿವಂತಿಯೂ ಆದೆ," ಎಂದ ಮಹಾದೇವ.

" ನನ್ನ ಅಣಕಿಸುತೀಯೇನು ?"

"ಇಲ್ಲ. ಅಣಕಿಸುವದ್ಯಾಕ?" ಎಂದು ನುಡಿದು ಸ್ವಲ್ಪ ತಡೆದು ಉಗುಳು ನುಂಗಿ ಮಹಾದೇವ ಹೇಳಿದ: "ನಿನ್ನ ಸಂಗಡ ಕಡೇ ಬಾರಿಗೆ ಸ್ವಚ್ಛ ಮಾತಾಡಿ ಬಿಡೂಣಂತ ಇಲ್ಲಿಯ ತನಕ ಕರಕೊಂಡು ಬಂದೀನಿ ಚಂದ್ರೂ. ನಾ ಕೇಳಿದ್ದಕ್ಕೆಲ್ಲಾ ನೆಟ್ಟಗ ಉತ್ತರ ಕೊಡು."

"ಕೇಳುವಂಥವನಾಗು ಸಾರಥೀ," ಎಂದು ಬಯಲಾಟದ ಭಾಷೆಯಲ್ಲಿ ನಗುತ್ತ ನುಡಿದಳು ಚಂದ್ರಾ.

"ನನಗ ಗೊತ್ತೈತಿ. ನಿನಗ ಹಾಡೂದು ಬಾರಿಸೂದು ಆಟ ಆಡೂದು ಕುಣಿಯೂದಂದರ ಬಹಳ ಪ್ರೀತಿ ಅನ್ನೂದು. ನಿಮ್ಮಪ್ಪ ನಿನ್ನ ತಯಾರು ಮಾಡಿಟ್ಟಾನ. ಅದರಾಗ ನಿನ್ನದೇನು ತಪ್ಪಿಲ್ಲ. ಆದರs ನಿನಗ ನಾ ಹೇಳೂದು ಇಷ್ಟs. ನಾಟಕ ಬಯಲಾಟದಾಗ ನೀ ಪಾರ್ಟು ಮಾಡಿದರೂ ಚಿಂತಿಲ್ಲ. ಸೂಳಿ ಮಾತ್ರ ಆಗಬ್ಯಾಡ."

"ಬ್ಯಾಡಂದರ ಹೆಂಗ ಬಿಡಾಕ ಬರುತೈತಿ ಮಾದೇವಾ? ದೇವರಿಗೆ ನನ್ನ ಮುಡಿಪು ಬಿಟ್ಟಾರ. ಈಗ ನಾ ಆಗೂದಿಲ್ಲ ಅಂದರ ದೇವಿ ಸಿಟ್ಟಾಗಿ ನಮ್ಮನ್ನೆಲ್ಲಾ ನಾಶಮಾಡಿಬಿಟ್ಟಾಳು."

ನಸುದೂರದಲ್ಲಿ ಜೋಗಿತಿಯರ ಮೇಳವೊಂದು ಚವಡಿಕೆ ಬಾರಿಸುತ್ತ ಎಲ್ಲಮ್ಮನ ಮೇಲಣ ಪದ್ಯಗಳನ್ನು ಹಾಡುತಿತ್ತು:

"ಎಲ್ಲಿ ಕಾಣೆ, ಎಲ್ಲಿ ಕಾಣೆ
ಎಲ್ಲಮ್ಮನಂಥವರನೆಲ್ಲಿ ಕಾಣೆ.
ಬಹಳ ಮಂದೀನ್ನ ಬತ್ತಲೆ ಮಾಡಿದೆ ಎಲ್ಲಮ್ಮ ನೀನು,
ಬೇವು ಉಡಿಸಿ ಮೋಜಾ ನೋಡಿದೆ...."

ಚಂದ್ರಾ ನಗುನಗುತ್ತ ನುಡಿದಳು:

"ಕೇಳಿದಿಯೋ ಇಲ್ಲೋ ಮಾದೇವಾ! ಎಲ್ಲವ್ವ ಅಂದರ ಅಂಥಿಂಥಾ ದೇವರಲ್ಲ. ಬಾಳ ಕೆಟ್ಟ ದೇವರು."

ತಾನು ಯಾವುದೇ ರೀತಿಯಿಂದ ಬೋಧಿಸಿದರೂ ಆ ಅಶಿಕ್ಷಿತ ಅಜ್ಞ ಹುಡುಗಿಯ ಅಂಧವಿಶ್ವಾಸ ತೊಲಗಲಾರದೆಂದು ಮಹಾದೇವನಿಗೂ ತಿಳಿದಿತ್ತು. ನಾಳೆ ಬೆಳಗಿನಲ್ಲಿ ಅವಳಿಗೆ ಬೇವು ತೊಡಿಸಲಾಗುತ್ತದೆ, ಎಲ್ಲಮ್ಮನ

ಗುಡಿಯ ಸುತ್ತಲೂ ಪ್ರದಕ್ಷಿಣೆ ಹಾಕಿಸಲಾಗುತ್ತದೆ. ಅಲ್ಲಿಗೆ ಅವಳು ಅಧಿಕೃತ ರೀತಿಯಿಂದ ದೇವದಾಸಿಯಾಗುವಳು, ಸೂಳೆಯಾಗುವಳು. ಮುಂದೆ ತಾನೇನನ್ನು ಮಾಡಿದರೂ ಅದನ್ನು ತಪ್ಪಿಸಲು ಸಾಧ್ಯವಾಗದು...

ಅಂತೆಯೆ, ಕೊನೆಯ ಬಾರಿ ಪ್ರಯತ್ನಮಾಡಿ ನೋಡಿದರಾಯಿತೆಂದು ಆತ ಅವಳನ್ನು ಜನರಿಲ್ಲದ ಜಾಗಕ್ಕೆ ಕರೆದುಕೊಂಡು ಬಂದಿದ್ದ.

"ಕೇಳು ಚಂದ್ರಾ. ನನ್ನ ಮಾತು ಕೇಳು. ಸೂಳೆಗಾರಿಕೆ ಅಂದರ ಬಹಳ ಹೊಲಸು ಕೆಲಸ. ಎಷ್ಟು ಮಂದೀನ್ನ ಕರಕೋಬೇಕು... ಛೀ. ಛೀ...." ಎಂದ ಮಹಾದೇವ.

"ಅದರಿಂದ ದೇವಿಗೆ ಸಂತೋಸ ಆಗುತೈತಿ."

"ಸುಳ್ಳು. ಅದೆಲ್ಲಾ ಸುಳ್ಳು ಚಂದ್ರಾ. ಸಾವುಕಾರ ಮಂದಿ ತಮ್ಮ ಸ್ವಾರ್ಥಕ್ಕಂತ ಇಂಥಾ ಸುಳ್ಳುಗಳನ್ನೆಲ್ಲಾ ನಮ್ಮ ಮಂದಿಯ ತಲಿಯೊಳಗ ತುಂಬಿದಾರ...."

"ಸಾವುಕಾರರನ್ನ ಬಿಟ್ಟರ ನಮಗೇನು ಗತಿ?" ಎಂದು ಚಂದ್ರಾ, ಲಚುಮಿಯಿಂದ ಕಲಿತ ಮಾತನ್ನು ಒಪ್ಪಿಸಿದಳು. ಬಂಗಾರದ ಒಡವೆಗಳು, ಜರತಾರಿ ಸೀರೆಗಳು, ನೂರಾರು ಜನರ ಮೆಚ್ಚಿಗೆ, ಗೆಜ್ಜೆ ಕುಣಿತ, ಬಯಲಾಟ, ಹಾಡುಗಾರಿಕೆ, ಸಾವಿರಾರು ಜನರ ಪ್ರಶಂಸೆ, ತನಗಾಗಿ ಅವರೆಲ್ಲರೂ ನಾ ನೀ ಎಂದು ಬಡಿದಾಡುವುದು, ಹೆಚ್ಚು ಹಣ ಕೊಟ್ಟವನನ್ನು ತಾನು ಕರೆದು ಕೊಳ್ಳುವುದು, ತಿನ್ನಲು ಸವಿಸವಿಯಾದ ತಿಂಡಿಗಳು. ಕುಡಿಯಲು ವಿಲಾಯತಿಯ ಸೆರೆ...ಸೂಳೆಯ ಬಾಳಿನ ಒಂದು ಭಾಗದ ದೃಶ್ಯ ಅವಳ ಕಣ್ಣುಗಳೆದುರಿಗೆ ನರ್ತಿಸತೊಡಗಿತು.

ಮತ್ತೆ ಜೋಗಿತಿಯರ ಹಾಡು ಕೇಳಬರುತಿತ್ತು :

"ಚಪ್ಪನ್ನ ದೇಶಕ ಒಪ್ಪಿತು ಏಳುಕೊಳ್ಳ
ಚುಪ್ಪಾನಿ ಮುತ್ತ ಹೌದೇನs?"

ಜೋಗಿತಿಯರ ಬಾಳು: ತಾರುಣ್ಯ ಕಳೆದು ವೃದ್ಧಾಪ್ಯ. ಇವರಂತೆ ತಾನೂ ಆಗ ಜೋಗಿತಿಯಾಗುವಳು - ತಾಳ - ಚವಡಿಕೆ. ಎಲ್ಲವ್ವನ ಝುಗ. ಪದಗಳನ್ನು ಹೇಳುತ್ತಾ ಊರೂರು ಮನೆಮನೆ ಅಲೆಯುವುದು. ಬಂಡಾರ

ಹೆಚ್ಚುತ್ತ ಜಾತ್ರೆಗಳಲ್ಲಿ ಸುತ್ತುವುದು. ಜೋಳಕ್ಕಂತೂ ಎಂದೂ ಕೊರತೆ ಯಾಗದು ಜೋಗಿತಿಯರಿಗೆ. ಎಲ್ಲವ್ವನ ಭಕ್ತೆಯರನ್ನು ಹಾಗೆಯೆ ಎಂದೂ ಕಳಿಸುವುದಿಲ್ಲ ರೈತರು. ಸಾಯುವವರೆಗೂ ಎಲ್ಲವ್ವನ ಹೆಸರಿನಲ್ಲಿ ಹಾಯಾಗಿ ಬದುಕಬಹುದು.

"ಸಾವುಕಾರರು ...ಸಾವುಕಾರರು....ಅವರ ಸೂಳಿಯಾಗಿ ಹೇಸಿ ಬಾಳೇವು ಮಾಡೂದಕ್ಕಿಂತ ಒಬ್ಬ ಬಡವನ್ನ ಮದುವಿ ಮಾಡಿಕೊಂಡು ಮರ್‍ಯಾದಿಯಿಂದ ಇರೂದು ಚಲೋದು," ಎಂದ ಮಹಾದೇವ.

"ಮದುವಿಯಾದರೂ ನಮ್ಮ ಮಂದಿಗೆ ಈ ಬಾಳೇವು ತಪ್ಪೂದಿಲ್ಲ ಮಾದೇವಾ. ಬ್ಯಾರೆಯವರ ಮಾತ್ಯಾಕ, ನಿಮ್ಮವ್ವಂದೇ ಏನೇನ ಗತಿ ಆಗೈತಿ ಗೊತ್ತಿಲ್ಲೇನು ನಿನಗ? ಲಚುಮಕ್ಕ ನನಗ ಎಲ್ಲಾ ಹೇಳಿದಾಳ."

ಹೌದು. ಲಚುಮಕ್ಕ ಎಲ್ಲರಿಗೂ ಆ ವಿಷಯ ಹೇಳಿದ್ದಾಳೆ. ಮಹಾದೇವ ನಿಗೂ ಹೇಳಿದ್ದಾಳೆ. ತನ್ನ ತಾಯಿಯಿನ್ನೂ ಹುಡುಗಿಯಾಗಿದ್ದಾಗ ಶರಣಪ್ಪ ನಿಗೂ ಅವಳಿಗೂ ಉಂಟಾಗಿದ್ದ ಸಂಬಂಧ, ತನ್ನ ತಂದೆ ಸತ್ತುಹೋದ ಬಳಿಕ ಮರಡಿಹಳ್ಳಿಗೆ ತಾವು ಬಂದ ಮೇಲೆ ತನ್ನ ತಾಯಿಗಾಗಿ ಶರಣಪ್ಪನ ಗುಂಪಿಗೂ ಸಿದ್ದಗೌಡನ ಗುಂಪಿಗೂ ನಡೆದ ಕಲಹ, ಅನಂತರ ಹಲವು ವರ್ಷ ಅವಳು ಗೌಡನ ಸೂಳೆಯಾಗಿದ್ದುದು - ಎಲ್ಲವನ್ನೂ ಬಲ್ಲ ಮಹಾದೇವ. ಅದರ ನೆನಪು ಬಂದಾಗಲೆಲ್ಲ ಅವನ ಎದೆಯನ್ನು ಅವಮಾನ ಅಸಹನೆಗಳ ಚೂರಿ ತಿವಿದಂತಾ ಗುತ್ತದೆ. ಹೊಲೆಯರಾದ ತಮಗೆ ಈ ಅವಮಾನಕರ ಬಾಳು ತಪ್ಪದೇ? ಎಂದು ಯೋಚಿಸಿ ಕ್ರುದ್ಧನಾಗಿ ಉಚ್ಚ ಜಾತಿಯವರನ್ನೆಲ್ಲ ಕಡಿದು ನಿರ್ಮೂಲ ಮಾಡಬೇಕೆಂಬ ರೊಚ್ಚಿನಿಂದ ತಳಮಳಿಸುತ್ತಾನೆ.

ಹೌದು. ತನ್ನ ತಾಯಿಯೂ ಸೂಳೆಯಾಗಿದ್ದವಳು. ತಾನು ಸೂಳೆಯ ಮಗ. ಸೂಳೆ....

ರೋಷದಿಂದ ಅವನ ದೇಹವೆಲ್ಲ ಕಂಪಿಸತೊಡಗಿತು. ಚಂದ್ರಳ ಎರಡೂ ಭುಜಗಳನ್ನು ಗಟ್ಟಿಯಾಗಿ ಹಿಡಿದು ಅಲುಗಿಸುತ್ತ ಕೇಳಿದ:

"ನೀ ಸೂಳಿಯಾಗಬಾರದು ಅಂತೀನಿ ನಾ. ನನ್ನ ಮಾತು ಕೇಳು ತೀಯೋ ಇಲ್ಲೋ, ಹೇಳಿಬಿಡು."

ಚಂದ್ರಳಿಗೆ ಗಾಬರಿಯಾಗದಿರಲಿಲ್ಲ. ಅವನ ಹಿಡಿತದಿಂದ ದೂರವಾಗಲು ಯತ್ನಿಸುತ್ತ ಅವಳೆಂದಳು:

"ಬಿಡು, ನನ್ನ ಬಿಟ್ಟುಬಿಡು ಮಾದೇವಾ. ಅಯ್ಯೋ, ನೋವಾತು. ನೋವಾತು ..."

"ಹೇಳು ಚಂದ್ರೂ. ಸ್ಪಷ್ಟ ಹೇಳಿಬಿಡು. ನಾ ನಿನಗ ಕೇಳೂದು ಇದs ಕಡೇ ಸಲ. ಸೂಳಿಯಾಗುವದನ್ನ ಬಿಟ್ಟುಬಿಡುತೀಯೋ ಇಲ್ಲೋ?"

"ಮೊದಲು ನನ್ನ ಬಿಡು. ನೋಯಿಸಬ್ಯಾಡ,"

"ಇಲ್ಲ. ಬಿಡೂದಿಲ್ಲ ನಿನ್ನ. ನನ್ನ ಮಾತು ಕೇಳುವತನಕ ಬಿಡೂದಿಲ್ಲ," ಎನ್ನುತ್ತಾ ಅವಳನ್ನು ಇನ್ನೂ ಹತ್ತಿರಕ್ಕೆಳೆದುಕೊಂಡು ತನ್ನ ತೋಳುಗಳಲ್ಲಿ ಬಿಗಿಯುತ್ತ ಆತನೆಂದ: "ಇಲ್ಲ ಚಂದ್ರಾ. ನಿನ್ನ ಬಿಡೂದಿಲ್ಲ ನಾ. ಎಂದೆಂದೂ ಬಿಡೂದಿಲ್ಲ. ನೀ ಸಣ್ಣಾಕೆ ಇದ್ದಾಗಿನಿಂದ ನಿನ್ನ ಬಿಟ್ಟಿಲ್ಲ. ನನ್ನ ಕೈತುತ್ತು ಉಂಡು ಬೆಳದಾಕೆ ನೀ. ನನ್ನ ಮಗ್ಗಲಾಗ ಮಲಗಿ ನಿದ್ದೆ ಮಾಡಿದಾಕೆ. ನನ್ನ ಬಿಟ್ಟು ಎಂದೂ ಉಣ್ಣುತಿರಲಿಲ್ಲ ನೀ. ನಿನ್ನ ಬಿಟ್ಟು ನಾ ಉಣ್ಣುತಿರಲಿಲ್ಲ." ಅವನ ದನಿಯಲ್ಲಿ ಮಾರ್ದವತೆ ಮೂಡಿತು. "ಇಲ್ಲಿಯತನಕ ನನ್ನ ಸಂಗಡ ಬೆಳೆದ ನೀ ಈಗ ಸೂಳಿಯಾಗಿ ಬ್ಯಾರೆಯವರ ಸಂಗಡ ಹೋಗುವಾಕಿಯೇನು? ಸಿಕ್ಕ ಸಿಕ್ಕ ಉಡಾಳರ ಸಂಗಡ ಮಲಗುವಾಕಿಯೇನು? ನಾನಂತೂ ಹೀಂಗs ಬಿಡೂದಿಲ್ಲ ನಿನ್ನ," ಎನ್ನುತ್ತಾ ಆತ ಅವಳನ್ನು ಮತ್ತೆ ಮತ್ತೆ ಎಳೆದು ಎದೆಗೊತ್ತಿಕೊಳ್ಳತೊಡಗಿದ.

ಅವಳು ಕಷ್ಟದಿಂದ ಉಸಿರಾಡಿಸುತ್ತಲಿದ್ದ ಹಾಗೆ ಕೇಳಿದಳು:

"ನನಗ ಏನು ಮಾಡಂತೀಯೋ ಮಾದೇವಾ?"

"ಸೂಳಿಯಾಗುವದಿಲ್ಲಂತ ಸ್ಪಷ್ಟ ಹೇಳಿಬಿಡು ನಿಮ್ಮಪ್ಪಗ."

"ಹೇಳಿದರ ಕೇಳಿಯಾನೇನು ಅವ? ಕೇರಿಯ ಮಂದಿ ಸುಮ್ಮ ನಾದಾರೇನು?"

"ಆಗದಿದ್ದರ ಇಲ್ಲ. ನಾವು ಅಲ್ಲಿರೂದs ಬ್ಯಾಡ. ಶಹರಕ್ಕ ಹೋಗಿ ಬಿಡೂಣು."

"ಅಂದರs?"

"ಅಂದರs? ನಿನಗ ಗೊತ್ತಾಗಲಿಲ್ಲ?" ಎಂದು ಹೇಳುತ್ತಿದ್ದ ಹಾಗೆ ಅವನ ತೋಳುಗಳಲ್ಲಿನ ಶಕ್ತಿಯೆ ಉಡುಗಿ ಹೋದಂತಾಯಿತು. "ಗೊತ್ತಾಗಲಿಲ್ಲ?"

"ಇಲ್ಲ."

"ನಾ ನಿನ್ನ ಮದುವಿಯಾಗುತೀನಿ ಚಂದ್ರಾ. ಶಹರದಾಗ ಬೂಟಿನ ಅಂಗಡಿಯೊಳಗ ನೌಕರಿ ಹಿಡೀತೀನಿ. ಅಲ್ಲೇ ಮನಿ ಮಾಡೂಣು. ಅವ್ವನ್ನ ನಿನ್ನ ಇಬ್ಬರನ್ನೂ ಕರಕೊಂಡು ಹೋಗುತೀನಿ."

ಅವನ ಅಪ್ಪುಗೆಯಿಂದ ಮುಕ್ತಳಾಗಿ ಚಂದ್ರಾ ಕೊಂಚ ದೂರ ಸರಿದು ನಿಂತು ಗಟ್ಟಿಯಾಗಿ ನಗತೊಡಗಿದಳು. "ಮದುವಿ! ನಿನ್ನ ಸಂಗಡ ಮದುವಿ! ಹ ಹ ಹ ಹ್ಹ ಹಾ...."

ಮಹಾದೇವ ಮೂಢನಂತೆ ಅವಳು ನಗುವುದನ್ನೆ ಮಿಕಿಮಿಕಿ ನೋಡುತ್ತಾ ನಿಂತುಕೊಂಡಿದ್ದ. ಅವಳ ನಗುವಿಗೆ ಏನು ಕಾರಣವೆಂಬುದು ಅವನಿಗೆ ಅರ್ಥವಾಗಲಿಲ್ಲ.

"ನಿನ್ನ ಸಂಗಡ ಮದುವಿ! ನನ್ನ ಮದುವಿ! ಹ ಹ ಹ ಹ್ಹ ಹ್ಹಾ...."

ಮಹಾದೇವ ರಭಸದಿಂದ ಮುಂದೆ ಹೋಗಿ ಅವಳನ್ನು ಮತ್ತೆ ತೋಳುಗಳಲ್ಲಿ ಬಿಗಿಯುತ್ತಾ ಹೆದರಿಸುವ ದನಿಯಲ್ಲಿ,

"ಹೀಂಗ ನಕ್ಕು ನನಗ ಅವಮಾನ ಮಾಡೂವಷ್ಟು ಧೈರ್ಯೇ ಬಂತೇನ ನಿನಗ? ನನ್ನ ಕಣ್ಮುಂದ ಬೆಳದು ದೊಡ್ಡಾಕಿಯಾದ ನಿನಗ ಇಷ್ಟು ಸೊಕ್ಕು ಬಂತೇನ? ಸಾವುಕಾರರ ರೊಕ್ಕ ರುಪಾಯಿ ಬಂಗಾರದ ವ್ಯಾಲ ಆಸೆಯಾಗೈತಿ ಹೌದಲ್ಲೋ ನಿನಗ? ನಿನ್ನ ಹಿಂಗs ಬಿಡುವದಿಲ್ಲ ನಾ. ಈಗs ನಿನ್ನ ತೀರಿಸಿ ಬಿಡುತೀನಿ," ಎನ್ನುತ್ತಾ ತನ್ನ ಸರ್ವಸಾಮರ್ಥ್ಯವನ್ನೂ ಪ್ರಯೋಗಿಸಿ ಅವಳ ದೇಹವನ್ನು ಬಿಗಿಯತೊಡಗಿದ.

"ನನ್ನ ಮುಟ್ಟಬ್ಯಾಡ ಮಾದೇವಾ. ಬಿಡೂ ನನ್ನ, ಬಿಟ್ಟು ಬಿಡು," ಎಂದು ಕೂಗಿಕೊಂಡು ಚಂದ್ರಾ ಅವನ ಕೈ, ಕೆನ್ನೆ, ಗಲ್ಲಗಳನ್ನು ಪರಚಿಕೊಂಡಳು. ಆತನಾದರೋ ಅವಳನ್ನು ತನ್ನ ಶರೀರದಲ್ಲೇ ಸೇರಿಸಿಕೊಳ್ಳುವವನಂತೆ ಬಲವಾಗಿ ಬಿಗಿಯತೊಡಗಿದ್ದ. ಚಂದ್ರಳೂ ತನ್ನ ಶಕ್ತಿಯನ್ನೆಲ್ಲ

ಉಪಯೋಗಿಸಿ ಆವನನ್ನು ಅತ್ತಿತ್ತ ನೂಕಿದಳು. ಇಬ್ಬರೂ ನೆಲದ ಮೇಲೆ ಬಿದ್ದುಬಿಟ್ಟರು.

ಆ ವೇಳೆಗಾಗಲೆ ನೆತ್ತಿಯ ಮೇಲೇರಿ ಬಂದಿದ್ದ ಚಂದ್ರನ ಹಾಲು ಬಣ್ಣದ ಬೆಳಕು ಗಿರಿಯ ಮೇಲೆಲ್ಲ ಸೂರೆಯಾಗಿತ್ತು. ಗಿಡದ ಎಲೆಗಳೊಳಗಿ ನಿಂದಿಳಿದು ಒಂದೆರಡು ಚಂದ್ರ ಕಿರಣಗಳು ಚಂದ್ರಳ ಮುಖದ ಮೇಲೂ ಚಿನ್ನಾಟವಾಡತೊಡಗಿದುವು.

ಅವಳು ಮರಳಿನ ಮೇಲುರುಳಿದೊಡನೆಯೆ ಅದುವರೆಗಿನ ಗಾಬರಿ ತೊಲಗಿ ಅದರ ಸ್ಥಾನವನ್ನು ಸಂತೋಷದಾಯಕವಾದ ವಾಸನೆಯಾಕ್ರಮಿ ಸಿತು. ಮಹಾದೇವನ ಬಾಹುಬಂಧನವೂ ಈಗ ಅವಳಿಗೆ ಅಪ್ರಿಯವೆನ್ನಿಸ ಲಿಲ್ಲ. ಅವನ ವಶಕ್ಕೆ ತನ್ನ ದೇಹವನ್ನೊಪ್ಪಿಸಿ ಕಣ್ಣುಗಳನ್ನು ಮುಚ್ಚಿ ಹಾಯಾಗಿ ಮಲಗಿಕೊಂಡಳು ಚಂದ್ರಾ.

ಹಠಾತ್ತಾಗಿ ಪ್ರತಿಭಟನೆಯನ್ನು ನಿಲ್ಲಿಸಿ ಅವಳು ಹಾಗೆ ಬಿದ್ದುಕೊಂಡು ದನ್ನು ಕಂಡು ಮಹಾದೇವನಿಗೇನೆನ್ನಿಸಿತೊ ಏನೊ. ಅವಳ ಗಲ್ಲವನ್ನು ಹಿಡಿದು ಕೊಂಚ ಮೇಲಕ್ಕೆತ್ತಿ ಆತನೆಂದ:

"ಚಂದ್ರಾ,"

ಪ್ರಿಯಕರನೊಡನೆ ಸರಸಕೇಳಿಯಲ್ಲಿ ನಿರತವಾದ ಹೆಣ್ಣು ಪಾರಿವಾಳ ದಂತೆ ಅವಳು ದನಿ ತೆಗೆದಳು.

"ಒಪ್ಪಿದಿಯಾ ಚಂದ್ರಾ?"

ನಸುಲಜ್ಜೆ, ನಸುಭಯ, ಬಯಕೆಗಳಿಂದೊಡಗೂಡಿದ ದನಿಯಲ್ಲಿ ಅವ ಳೆಂದಳು:

"ಯಾರಾದರೂ ನೋಡಿಯಾರೋ ಮಾದೇವಾ."

ಅವಳ ಇಚ್ಛೆಯೇನೆಂಬುದನ್ನು ಆಗ ಪೂರ್ತಿಯಾಗಿ ಅರಿತುಕೊಂಡ ಮಹಾದೇವ. ತಿರಸ್ಕಾರದಿಂದ ಆವನ ಸರ್ವಾಂಗವೂ ಕಂಪಿಸಿತು. ತಾನು ಕೇಳುತ್ತಿರುವುದೇನು, ಇವಳು ಹೇಳುತ್ತಿರುವುದೇನು? ತನ್ನನ್ನು ಮದುವೆ ಯಾಗಿ ಗರತಿಯಾಗೆಂದು ತಾನು ಕೇಳುತ್ತಿದ್ದರೆ ಜನರಿಗೆ ಗೊತ್ತಾಗದಂತೆ ತನಗೆ ದೇಹವನ್ನೊಪ್ಪಿಸಲು ಬಯಸುತ್ತಿರುವ ಈ ಹೆಣ್ಣು! ಋತುಮತಿ

ಯಾದುದಕ್ಕೆ ಒಂದು ತಿಂಗಳಾಗಿರಬಹುದು, ಅಷ್ಟೆ. ಈಗಲೇ ಆರಂಭ ಇವಳ ಸೂಳೆಗಾರಿಕೆಗೆ. ಇಂಥವರು ಸೂಳೆಯರಾಗಿಯೆ ಜೀವಿಸುವುದೂ ಒಳ್ಳೆಯ ದೇನೊ. ಗರತಿಯರಾಗಿ ಬಾಳುವ ಹೆಣ್ಣುಗಳೇ ಇವು!

ಹಾಗೆ ಯೋಚಿಸುತ್ತ ಅವಳನ್ನು ಬಿಟ್ಟು ಎದ್ದು ನಿಂತ ಮಹಾದೇವ. ಅವನ ಆಚರಣೆ ಅರ್ಥವಾಗದೆ ಅವಳೂ ಅಚ್ಚರಿಪಟ್ಟುಕೊಳ್ಳುತ್ತ ಮೇಲಕ್ಕೆದ್ದು ಸೀರೆ ಕುಬುಸಗಳನ್ನು ಸರಿಪಡಿಸಿಕೊಳ್ಳತೊಡಗಿದಳು.

ಮಾತನೇನೂ ಆಡದೆ ಅವಳೊಡನೆ ಗುಡಿಯ ಕಡೆ ನಡೆದ ಮಹಾದೇವ.

"ನನ್ನ ಮ್ಯಾಲ ಸಿಟ್ಟೇನೋ ಮಾದೇವಾ?"

ಆತ ಉತ್ತರವೀಯದೆ ಹಾಗೆಯೆ ನಡೆಯುತ್ತಿದ್ದ.

"ಬೇಕಾದರ ಎಲ್ಲಾರ ಹಾಂಗ ನಿನ್ನ ಸಂಗಡನೂ ಒಂದೆರಡು ತಿಂಗಳು ಇರುತೀನಿ. ಆದರs ಮದುವಿ ಮಾತು ಮಾತ್ರ ಎತ್ತಬ್ಯಾಡ."

ನಡೆಯುವುದನ್ನು ನಿಲ್ಲಿಸಿ ಮಹಾದೇವ ಸರ್ರನೆ ತಿರುಗಿ, ಅವಳ ಕೆನ್ನೆಗೆ ಫಳೀರೆಂದು ಏಟು ಬಿಟ್ಟು ಹೇಳಿದ:

"ಎಲ್ಲಾರ ಹಾಂಗ ಅಂತೆ! ನಿನ್ನ ಸಾವಿರ ಮಂದಿ ಮಿಂಡರಾಗ ನನ್ನೂ ಒಬ್ಬನ್ನ ಸೇರಿಸಬೇಕಂತ ಮಾಡೀಯೇನು? ಹೊಲಸು ರಂಡೆ! ನಿನ್ನ ಈ ವೈಯಸ್ನ ಒಂದೆರಡು ತಿಂಗಳು ಉಪಭೋಗಿಸುವ ವಿಚಾರ ನನ್ನ ತಲಿ ಯಾಗಿರಲಿಲ್ಲ, ನಿನ್ನ...ನಿನ್ನ..." ಅವನ ಕತ್ತು ಬಿಗಿದು ಬಂದಿತು. ಏಟ್ಟ ತಿಂದು ನರಳುತ್ತಿದ್ದ ಚಂದ್ರಳನ್ನು ಅಲ್ಲಿಯೆ ಬಿಟ್ಟು ಆತ ಗುಡಿಯ ಕಡೆ ಹೆಜ್ಜೆ ಹಾಕಿದ.

೧೭

ಬಿಡಾರದ ಬಳಿ ಉರಿಯುತ್ತಿದ್ದ ಬೆಂಕಿಯ ಮುಂದೆ ಡಪ್ಪವನ್ನು ಕಾಯಿಸುತ್ತ ಕುಳಿತಿದ್ದ ಹನುಮ. ಅವನ ಹತ್ತಿರ ಕುಳಿತು ಸಿಗರೇಟು ಎಳೆಯುತ್ತಿದ್ದ ಇಬ್ಬರು ಯುವಕರನ್ನು ಕಂಡು ಆಶ್ಚರ್ಯವಾಗದಿರಲಿಲ್ಲ ಮಹಾದೇವನಿಗೆ. ಸಂಗಣ್ಣ ಮತ್ತು ಕಾಳ: ಅವರಿಬ್ಬರೂ ಯಾವಾಗ ಬಂದರೊ, ಎಲ್ಲಿಂದ ಬಂದರೊ! ಸಂಗಣ್ಣ ಮನೆ ಬಿಟ್ಟು ಓಡಿಹೋದುದೂ, ಅವನ ತಂದೆ ಜ್ವರದಿಂದ ಹಾಸಿಗೆ ಹಿಡಿದುದೂ ಮಹಾದೇವನಿಗೆ ಗೊತ್ತಿತ್ತು. ಕಾಳನನ್ನು ಜತೆಗೂಡಿ ಮೋಜು ಮಾಡುತ್ತ ತಿರುಗುತ್ತಿರಬೇಕು ಸಂಗಣ್ಣ, ಎಂದುಕೊಂಡು,

"ಏನ್ರಪಾ, ಯಾವಾಗ ಬಂದಿರಿ?" ಎಂದು ಕೇಳಿದ.

"ಈಗ ಬಂದಿವಿ. ಬಾರೋ. ಎತ್ತಲಾಗ ಹೋಗಿದ್ದಿ?" ಎಂದ ಕಾಳ.

"ನಿಮ್ಮ ಅಪ್ಪಗ ಬಹಳ ಜಡ್ಡಾಗೈತಿ, ನಿನಗ ಗೊತ್ತಿಲ್ಲೇನು ಸಂಗಣ್ಣಾ?" ಎಂದ ಮಹಾದೇವ.

"ಈಗ ಗೊತ್ತಾತು, ಹನುಮನಿಂದ. ನಾಳೆ ಮುಂಜಾನೆ ಊರಿಗೆ ಹೊರಟುಬಿಡುತೀನಿ."

"ಎಲ್ಲೆಲ್ಲಿ ಹೋಗಿಬಂದಿ ಸಂಗಣ್ಣಾ?"

ಸಂಗಣ್ಣ ಜಂಬದ ದನಿಯಲ್ಲಿ ಹೇಳಿದ:

"ಬೆಳಗಾವಿ, ಪುಣೆ, ಮುಂಬಯಿ ಎಲ್ಲಾ ನೋಡಿ ಬಂದಿನಿ."

ಅಂದು ರಾತ್ರೆ ಮನೆಯಿಂದ ಹೊರಟ ಸಂಗಣ್ಣ ನೇರವಾಗಿ ನಗರಕ್ಕೆ ಹೋಗಿ ಕಾಳನನ್ನು ಭೇಟಿ ಮಾಡಿದ್ದ. ಇಬ್ಬರೂ ಸೇರಿ ಸರಾಫರ ಅಂಗಡಿಗೆ

ಹೋಗಿ ಒಡವೆಗಳನ್ನೆಲ್ಲ ವಿಕ್ರಯಿಸಿದ್ದರು. ಅನಂತರ ಪುಣೆ ಮುಂಬಯಿ ವಿಹಾರವಾಗಿತ್ತು. ಮರಳಿ ಬಂದ ಬಳಿಕ ಎಲ್ಲಮ್ಮನ ಜಾತ್ರೆಗೆ ಹೋಗಿ ಇನ್ನೂ ಕೊಂಚ ಮೋಜು ಮಾಡುವುದೆಂದು ಇತ್ತ ಬಂದಿದ್ದರು.

ಎಲ್ಲಮ್ಮನ ಜಾತ್ರೆಯೆಂದರೆ "ಮೋಜು ಮಾಡುವವರ" ಸ್ವರ್ಗವಿದ್ದ ಹಾಗೆ. ಉತ್ತರ ಕರ್ನಾಟಕದ ಮೂರು ಜಿಲ್ಲೆಗಳಲ್ಲೂ ಎಲ್ಲಮ್ಮನ ಭಕ್ತರು ಲಕ್ಷಾಂತರ ಮಂದಿ. ಈ ಜನರು ವಿಶೇಷವಾಗಿ ಹಿಂದುಳಿದ ವರ್ಗಗಳಿಗೆ ಸೇರಿದವರು. ಹರಿಜನರಿಗಂತೂ ಎಲ್ಲಮ್ಮನೇ ಕುಲದೇವತೆ. ದೇವದಾಸಿಯರು, ಜೋಗಿತಿಯರು, ಜೋಗಿಗಳು ಮೊದಲಾದವರಿಗಂತೂ ಎಲ್ಲಮ್ಮನೇ ಯಜಮಾನಿಯಿದ್ದ ಹಾಗೆ. ಅಂತೆಯೆ, ಜಾತ್ರೆಯ ಕಾಲಕ್ಕೆ ಮೂರು ಜಿಲ್ಲೆಗಳ ದೇವದಾಸಿಯರ ಸಮ್ಮೇಳನವೆ ಅಲ್ಲಿ ಸೇರಿದಂತಾಗುತ್ತದೆ. ಈ ದಾಸಿಯರನ್ನು ಹಿಂಬಾಲಿಸಿಕೊಂಡು ಬರುವ 'ದಾಸ'ರಿಗೂ ಕೊರತೆಯಿರುವುದಿಲ್ಲ. ಬೇರೆ ಬೇರೆ ಊರುಗಳ ಬೇರೆ ಬೇರೆ ತರದ ಈ ದೇವದಾಸಿಯರನ್ನು ನೋಡಿ, ಕೂಡಿ "ಮೋಜು ಮಾಡುವುದಕ್ಕೆಂದೇ" ಸಾವಿರಾರು ಜನ 'ರಸಿಕಶಿರೋಮಣಿ'ಗಳು ಜಾತ್ರೆಗೆ ಆಗಮಿಸುತ್ತಾರೆ. ಕಾಳ, ಸಂಗಣ್ಣ ಬಂದುದೂ ಅದಕ್ಕಾಗಿಯೆ.

ಎಲ್ಲಮ್ಮನ ಜಾತ್ರೆಯ ಇನ್ನೊಂದು ವಿಶೇಷವೆಂದರೆ ಅದರ ದೀರ್ಘ ಅವಧಿ. ಎಂಟು ಹತ್ತು ದಿನಗಳವರೆಗೆ ಒಂದೆಸಮನೆ ನಡೆಯುವ ಜಾತ್ರೆ ಅದೊಂದೇ ಒಂದು ಆ ಭಾಗದಲ್ಲಿ. ಎಲ್ಲಮ್ಮನ ದೇವಾಲಯವಿರುವುದು ಗುಡ್ಡಗಳ ನಡುವಿನ ಒಂದು ಕೊಳ್ಳದಲ್ಲಿ. ಸುತ್ತಲೂ ಹಬ್ಬಿರುವ ಗುಡ್ಡಗಾಡು ಜಾಗದಲ್ಲಿ ಜಾತ್ರೆಯ ಜನ ಬಿಡಾರ ಹೂಡುತ್ತದೆ. ಅಲ್ಲಿ ದೇವದಾಸಿಯರ ತಂಡ ಬಹಿರಂಗವಾಗಿಯೆ ವ್ಯವಹಾರ ನಡಸುತ್ತದೆ. ನಾಗರಿಕತೆಯ ನಿಯಮ ನಿರ್ಬಂಧಗಳಾಗಲಿ ಲಜ್ಜೆ ಸಂಕೋಚಗಳಾಗಲಿ ಅಲ್ಲಿ ಕಾಣಿಸುವುದಿಲ್ಲ. ಅಲ್ಲಿಯ ದೇವತೆಯೇ ಸೂಳೆಯರ ರಾಣಿಯೆಂದ ಬಳಿಕ ಅಲ್ಲಿ ಸೂಳೆಗಾರಿಕೆಗೆ ಸಂಕೋಚವೆಲ್ಲಿಂದ ಬರಬೇಕು?

ಆ ಜಾತ್ರೆಯ ಕೀರ್ತಿಯನ್ನು ಅನೇಕರ ಮುಖದಿಂದ ಕೇಳಿ ತಿಳಿದಿದ್ದ ಮಹಾದೇವನಿಗೆ ಅದೇ ಮೊದಲನೆಯ ಸಲ ಅದನ್ನು ಪ್ರತ್ಯಕ್ಷ ನೋಡುವ ಸಂಧಿ ಲಭಿಸಿತ್ತು. ಅಲ್ಲಿ ನಡೆಯುತ್ತಿದ್ದುದನ್ನೆಲ್ಲ ನಿರೀಕ್ಷಿಸಿದ ಹಾಗೆ ಅವನ

ಮನಸ್ಸು ನಾಚಿಕೆ, ಹೇಸಿಕೆ, ತಿರಸ್ಕಾರ, ರೋಷ ಮೊದಲಾದ ಭಾವಗಳಿಂದ ಭಾರವಾಗತೊಡಗಿತ್ತು. ಅಲ್ಲಿ ಸೂಳೆಗಾರಿಕೆ ನಡಸುತ್ತಿದ್ದವರೆಲ್ಲ ಹೆಚ್ಚಾಗಿ ಹೊಲೆಯರ ಹೆಂಗುಸರೇ. ದೇವರ ಹೆಸರಿನಲ್ಲಿ ವ್ಯಭಿಚಾರ ಧಾರಾಳವಾಗಿ ನಡೆಯುತಿತ್ತು. ಅಂಧಶ್ರದ್ಧೆಯಿಂದ ಅಲ್ಲಿಗೆ ಬರುವ ಯಾತ್ರಿಕರನ್ನು ಸುಲಿಯುವ ಪೂಜಾರಿಗಳು ಶ್ರೀಮಂತರಾಗಿ ಮೆರೆಯುತ್ತಿದ್ದರು; ಅವರ ಮಹಿಳೆಯರ ಮೈಮೇಲೆ ಚಿನ್ನ ರನ್ನದ ಒಡವೆಗಳು ಹೊರೆಹೊರೆಯಾಗಿ ಬಿದ್ದಿದ್ದುವು. ದೇವರಿಗೆ ಸಲ್ಲಬೇಕಾದ ಕಾಣಿಕೆಯ ಹಣವೆಲ್ಲ ಪೂಜಾರಿಗಳ ಮಡಿಲಿಗೇ ಬೀಳುತಿತ್ತು. ಎಷ್ಟೋ ಜನರಿಗೆ ದೇವಿಯ ದರ್ಶನವೂ ಲಭಿಸುತ್ತಿರಲಿಲ್ಲ. ಅಂಥವರು ಪೂಜಾರಿಗಳಿಗೇ ನಮಸ್ಕಾರ ಹಾಕಿ ಧನ್ಯರಾದೆವೆಂದುಕೊಂಡು ಹೊರಟುಹೋಗುತ್ತಿದ್ದರು. ಆ ಪೂಜಾರಿಗಳೋ ಹಗಲಿರುಳೂ ವ್ಯಭಿಚಾರದಲ್ಲಿಯೆ ಮುಳುಗೇಳುತ್ತಿದ್ದರು. ಒಬ್ಬೊಬ್ಬನಿಗೆ ನಾಲ್ಕೈದು ಜನ ಸೂಳೆಯರಿದ್ದರು. ಅವರಿಗೆಲ್ಲ ಬೇರೆ ಬೇರೆ ಮನೆಗಳು. ರಾಣಿಯರ ಹಾಗೆ ಅವರ ಬದುಕು. ಪೀತಾಂಬರಗಳನ್ನೂ ಚಿನ್ನದ ಒಡವೆಗಳನ್ನೂ ಪ್ರದರ್ಶಿಸುತ್ತ ಅವರು ಜಾತ್ರೆಯಲ್ಲಿ ಹೊರಟರೆಂದರೆ ಬಡ ಯಾತ್ರಿಕರ ಬಳಗವೆಲ್ಲ ಅವರನ್ನು ಮಿಕಿಮಿಕಿ ದಿಟ್ಟಿಸುತ್ತಿತ್ತು.

"ಈ ಸುಲಿಗೆಯನ್ನ ಹೆಂಗ ನಿಲ್ಲಿಸೂದು?" ಎಂದು ತನಗೆ ತಾನೆ ಕೇಳಿಕೊಂಡು ಅಸಹಾಯಕತೆಯ ರೋಷಾಗ್ನಿಯಲ್ಲಿ ಬೇಯುತ್ತಿದ್ದ ಮಹಾದೇವ. ಅಂಥ ಸಂದರ್ಭಗಳಲ್ಲೆಲ್ಲ ಅವನಿಗೆ ಮರಿದಾಸನ ಮಾತುಗಳ ಜ್ಞಾಪಕ ಬರುತ್ತಿತ್ತು. "ಹಿಂದೂಧರ್ಮದಂಥ ನೀಚ ಧರ್ಮ ಜಗತ್ತಿನಲ್ಲಿ ಇನ್ನೊಂದಿಲ್ಲ." ಆ ಮಾತು ನಿಜವೆನ್ನಿಸುತಿತ್ತು ಮಹಾದೇವನಿಗೆ. ಅದಕ್ಕೆ ಸಾಕ್ಷಿಯಾಗಿ ಎಲ್ಲಮ್ಮನ ಜಾತ್ರೆ ತನ್ನ ಭೀಭತ್ಸ ಸ್ವರೂಪವನ್ನು ಪ್ರದರ್ಶಿಸುತ್ತ ವಿಕಟಹಾಸ್ಯ ಬೀರುತಿತ್ತು.

"ನಮ್ಮ ಜಾತಿಯನ್ನೆಲ್ಲ ಸೂಳೆಗಾರಿಕೆಯ ಪಾಪಕುಂಡದಲ್ಲಿ ಅದ್ದಿರುವ ಈ ಧರ್ಮವನ್ನ ನಾಶಮಾಡಬೇಕು. ಇಲ್ಲಾ-ಇದನ್ನ ಬಿಟ್ಟು ಬ್ಯಾರೆ ಧರ್ಮಕ್ಕ ಹೋಗಬೇಕು," ಎಂದು ಯೋಚಿಸುತ್ತಿದ್ದ ಮಹಾದೇವ. ಚಂದ್ರ

ಳಿಗೆ ಏಟುಕೊಟ್ಟು ಆತ ಬಿಡಾರಕ್ಕೆ ಬರುವಾಗಲೂ ಅವನ ತಲೆಯಲ್ಲಿ ಅದೇ ಯೋಚನೆ ಸುತ್ತುತಿತ್ತು.

ಐದು ನಿಮಿಷ ಕಳೆದ ಬಳಿಕ ಕೆಂಪೇರಿದ ಮೊಗದ ಚಂದ್ರಾ ಅಲ್ಲಿಗೆ ಬಂದಳು. ತುಟಿಗಳ ಮೂಲೆಯಲ್ಲಿ ಸಿಗರೇಟು ಕಚ್ಚಿ ಹಿಡಿದುಕೊಂಡು ಸಂಗಣ್ಣ ಅವಳ ಕಡೆ ಕಣ್ಣು ತಿರುಗಿಸಿದ. ಬೆಂಕಿಯ ಬೆಳಕಿನಲ್ಲಿ ಅವಳ ಕೆಂಪು ಮುಖ ಇನ್ನೂ ಕೆಂಪಾಗಿ ಕಾಣಿಸುತಿತ್ತು.

"ಎಲ್ಲಿ ಹೋಗಿದ್ದೆ ಚಂದ್ರಾ?" ಎಂದ ಹನುಮ.

"ಅಲ್ಲಿ ಒಂದು ಜೀ ಜೀ ಪದಾ ನಡದಿತ್ತು. ಕೇಳುತಾ ಕುಂತಿದ್ದನಿ," ಎನ್ನುತ್ತ ಚಂದ್ರಾ ಸಂಗಣ್ಣ ಕಾಳ ಇಬ್ಬರನ್ನೂ ಓರೆನೋಟದಿಂದ ದಿಟ್ಟಿಸ ತೊಡಗಿದಳು.

"ನಮ್ಮ ಗುರುತಾಗುತೈತೇನs ಚಂದ್ರಾ?" ಎಂದ ಕಾಳ.

ಅವಳು ಲಜ್ಜಿತಳಾದಂತೆ ನಟಿಸುತ್ತಾ ಸೀರೆಯ ಸೆರಗನ್ನು ಮುಖದ ಮೇಲೆಳೆದುಕೊಂಡು ಸಂಗಣ್ಣನ ಕಡೆ ದೃಷ್ಟಿ ಬಾಣಗಳನ್ನೆಸೆಯತೊಡಗಿದಳು.

ರಸಿಕತನದಲ್ಲಿ ಸಾಕಷ್ಟು ಪಳಗಿದ್ದ ಸಂಗಣ್ಣ ಮೆಲುನಗೆ ಬೀರುತ್ತ ಹೇಳಿದ:

"ಹೆಸರು ಬಹಾಳ ಚಂದ ಇಟ್ಟೀಯಪಾ ಹನುಮಣ್ಣಾ ಮಗಳಿಗೆ!"

ಡಪ್ಪದ ಮೇಲೆ ಬೆರಳುಗಳನ್ನಾಡಿಸುತ್ತಿದ್ದ ಹನುಮ ಹೆ ಹೆ ಹ್ಹೆ ಎಂದು ನಗತೊಡಗಿದ.

"ಥೇಟ ಚಂದ್ರನ ಹಂಗs ಇದಾಳಪಾ ನಿನ್ನ ಮಗಳು," ಎಂದ ಸಂಗಣ್ಣ.

ಮುಖವನ್ನೆತ್ತಿ ಮಧುರವಾಗಿ ನಗುತ್ತಾ ಅವನ ಕಡೆ ನೋಡಿದಳು ಚಂದ್ರಾ. "ನನ್ನ ಚೆಲುವಿಕೆಯಿರುವುದು ನಿನಗಾಗಿ," ಎಂದು ಹೇಳುತ್ತಿತ್ತು, ಆ ನೋಟ.

ಅವಳ ಕಣ್ಣುಗಳಲ್ಲಿ ಕುಣಿಯುತ್ತಿದ್ದ ಬಯಕೆಯನ್ನು ಕಂಡು ಜುಗುಪ್ಸೆಗೊಂಡು ಮಹಾದೇವ ಮೌನವಾಗಿ ಅಲ್ಲಿಂದೆದ್ದು ತುಸುದೂರದಲ್ಲಿದ್ದ ತಮ್ಮ

ಬಿಡಾರದ ಕಡೆ ಹೊರಟುಹೋದ. ಅವನ ನಿರ್ಗಮನವನ್ನು ಯಾರೂ ಲಕ್ಷಿಸಲಿಲ್ಲ.

"ಮಗಳಿಗೆ ಹಾಡು ಕಲಿಸಿದ್ದೀಯೇನೋ ಹನುಮಣ್ಣಾ ?"

"ಕಲಿಸೂದು ಯಾತಕ್ಕಪಾ ? ಹಾಡೂದು ಕುಣಿಯೂದು ಅಂದರ ಬಾಳ ಹುರುಪು ಚಂದ್ರಾಗ. ಲಚುಮಿ ಎಲ್ಲಾ ಕಲಿಸಿದ್ದಾಳ."

"ಹಂಗಾದರ ಈಗೊಂದು ಹಾಡು ಆಗಲಿ," ಎಂದು ಅಪ್ಪಣೆಮಾಡಿದ ಸಂಗಣ್ಣ.

ಬೆಂಕಿಯ ಕಾವಿನಿಂದ ಕಾಯ್ದು ಹದಗೊಂಡಿದ್ದ ಡಪ್ಪವನ್ನು ಎಡ ಗೈಯಲ್ಲಿ ಹಿಡಿದುಕೊಂಡು ಮೃದುವಾಗಿ ಮಿಡಿದ ಹನುಮ. ಅವನ ಬೆರಳುಗಳ ಸ್ಪರ್ಶವಾಗುತ್ತಲೂ ಡಪ್ಪ, ಪ್ರಿಯನ ಆಲಿಂಗನದಿಂದ ಕಂಪಿಸುವ ಪ್ರೇಯಸಿ ಯಂತೆ ಸ್ಪಂದಿಸತೊಡಗಿತು ...ಒಂದು ನಿಮಿಷ ಡಪ್ಪವನ್ನು ಕುಣಿಸುತ್ತಿದ್ದು ಅನಂತರ ಚಂದ್ರಳ ಕಡೆ ತಿರುಗಿ ಹನುಮನೆಂದ:

"ಸಾವುಕಾರ ಕೇಳಬೇಕಂತಾನ. ಸುರುಮಾಡಲಾ ಒಂದು ಪದಾ."

ಸಂಗಣ್ಣನನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವ ಬಯಕೆ ಎದೆಯಲ್ಲಿ ತುಡಿಯುತ್ತಿದ್ದಿತಾದರೂ ಅದನ್ನು ಹೊರಗೆ ವ್ಯಕ್ತಗೊಳಿಸದೆ ಚಂದ್ರಾ ನವವಧುವಿನಂತೆ ನಾಚುತ್ತ, "ನಾ ಒಲ್ಲೆ ಹೋಗಪ್ಪಾ," ಎಂದಳು.

"ಎಷ್ಟು ನಾಚಿಕೆಯಪಾ ಅದು ! ಒಂದು ಪದಾ ಹೇಳಿದರ ನಿನ್ನ ಗಂಟ ಲೇನು ಕೆಟ್ಟು ಹೋಗುತೈತೇನು ?" ಎಂದ ಕಾಳ.

"ಕುಂತು ಕೇಳುವ ನಿನಗೇನು ಗೊತ್ತೋ ಹಾಡುವವರ ತ್ರಾಸ ?" ಎಂದಳು ಚಂದ್ರಾ.

ಸಂಗಣ್ಣ ಕಾಳನನ್ನು ಗದರಿಸುವ ಹಾಗೆ ನಟಿಸುತ್ತ, "ಹೌದೇಳೋ ಕಾಳಾ. ಬಹಳ ತ್ರಾಸ ಆಗುತೈತಿ. ನೀನೇನೂ ಫುಕಟ ತ್ರಾಸ ಮಾಡಿಕೋ ಬ್ಯಾಡ ಚಂದ್ರಾ. ಇಕೋ," ಎಂದು ನುಡಿದು ಜೇಬಿನಿಂದ ಹತ್ತು ರೂಪಾಯಿನ ದೊಂದು ನೋಟನ್ನು ತೆಗೆದು ಅವಳ ಕಡೆ ನೀಡಿದ.

ಹಸಿದ ನಾಯಿ ರೊಟ್ಟಿಯ ತುಣುಕಿನ ಮೇಲೆ ಹಾರಿ ಬೀಳುವಂತೆ ಹನುಮ ಆ ನೋಟನ್ನು ಕಿತ್ತುಕೊಂಡು ಕಿಸಕಿಸೆಂದು ನಗುತ್ತಾ ಅದನ್ನು

ತನ್ನ ಪಾವುಡಕ್ಕೆ ಸೇರಿಸಿದ. ಸೆರಗನ್ನು ಸೊಂಟಕ್ಕೆ ಬಿಗಿದುಕೊಂಡು ಹಾಡು ಹೇಳಲು ಸಿದ್ಧಳಾದಳು ಚಂದ್ರಾ. ಚಂದ್ರ ಕಿರಣಗಳಲ್ಲಿ ಅವಳ ತಲೆಗೂದಲು ತಕತಕನೆ ಮಿಂಚುತ್ತಿತ್ತು. ಬೆಂಕಿಯ ಬೆಳಕಿನಲ್ಲಿ ಅವಳ ಕಣ್ಣಗೊಂಬೆಗಳು ಮಿಂಚಿನ ಗೋಲಗಳಂತೆ ಮಿನುಗುತ್ತಿದ್ದುವು.

ತಂದೆಯ ಕೈಯಿಂದ ಡಪ್ಪವನ್ನು ತೆಗೆದುಕೊಂಡು ಸೊಗಸಾಗಿ ಬಳುಕಿ ನಿಂತು, ಸಂಗಣ್ಣನನ್ನೆ ದಿಟ್ಟಿಸುತ್ತಾ ತುಟಿಗಳನ್ನು ತೆರೆದಳು ಚಂದ್ರಾ. ಗುಲಾಬಿ ಹೂವಿನ ಪಕಳೆಗಳಂತೆ ಕೋಮಲವಾಗಿದ್ದ ಆ ತುಟಿಗಳನ್ನೆ ಮುಗ್ಧನಾಗಿ ದಿಟ್ಟಿಸುತ್ತ ಹುಚ್ಚನಂತೆ ಕುಳಿತಿದ್ದ ಸಂಗಣ್ಣ.

ಇನಿದನಿಯಲ್ಲಿ ಸಿಧಾನವಾಗಿ ಹಾಡತೊಡಗಿದಳು ಚಂದ್ರಾ:

"ಮುತ್ತು ಬಾರೆ, ರತ್ನ ಬಾರೆ,
ನನ್ನ ಬೆಳ್ಳಿ ಕಟ್ಟಾಣಿ ಬಾರೆ,
ನಿನ್ನ ಚೆಲ್ವಿಕೆ ಲಿಂಬಿಹಣ್ಣಿನ ಬಣ್ಣದಂತೆ ಬಲು ಸೊಗಸಾ
ಸಂಗ ಮಾಡಿ ಸುಖ ತೋರಿಸು
ಹಂಗದೊರೆದು ಹಲುಬುವೆನು
ತಿಂಗಳಾಯಿತು ತಿರುಗಹತ್ತಿ ಉಪವಾಸಾ," ಎನ್ನುತ್ತಾ ಡಪ್ಪದ ಮೇಲೆ ಕೈ ಬೀಸಿದಳು.

"ಅಹಾ!" ಎಂದ ಸಂಗಣ್ಣ.

"ವಹವ್ವಾ!" ಎಂದ ಕಾಳ.

ಹಾಡಿನ ದನಿಯನ್ನಾಲಿಸಿ, ಹಾಡುವ ಹುಡುಗಿಯನ್ನು ಕಂಡು ಜಾತ್ರೆಯಲ್ಲಿ ತಿರುಗುತ್ತಿದ್ದ ಮೋಜುಗಾರರನೇಕರು ಬಂದು ಸೇರಿದರು. ಹದಿನೈದು ನಿಮಿಷಗಳಲ್ಲಿ ನೂರಾರು ಜನರ ಗುಂಪು ನೆರೆಯಿತು. ಚಂದ್ರಳಿಗೂ ಉತ್ಸಾಹವೇರಿತು. ಬಲಗೈಯನ್ನು ಬಳ್ಳಿಯಂತೆ ಆಡಿಸುತ್ತ ಅವಳು ಹಾಡತೊಡಗಿದಳು:

"ನೀರಿಗೆ ಹೋಗುವಾಗ
ದಾರಿಯೊಳಗ ನೀನು
ಮಾರೀ ನೋಡಿ ನಕ್ಕಿ ಕುಲು ಕುಲೂ

ನನಗ ಕಾಮಾತುರ ಏರಿತೂ
ಹೇಳಲಾರಿಗೇ ? ಕೇಳಲಾರಿಗೇ ? ನಾರಿ,
ನೀನು ಕೈಸನ್ನಿ ಮಾಡಿ ಕರೆದರ
ಬೆನ್ನತ್ತಿ ಬರುವೆನು ಹೇಳದಲ್ಲಿಗೇ...."

"ಹಾ ಜೀ ಜೀ," ಎಂದ ಹನುಮ.

ಗುಂಪಿನಲ್ಲಿನ ರಸಿಕನೊಬ್ಬ ತನ್ನ ಜರಿರುಮಾಲನ್ನು ತೆಗೆದು ಹಾರಿಸುತ್ತ ಹೇಳಿದ :

"ನಾನೂ ನಿನ್ನ ಬೆನ್ನತ್ತಿ ಬರುತೇನs ಹುಡುಗೀ ?"

ಸಂಗಣ್ಣ ಅವನ ಕಡೆ ತಿರುಗಿ ಕೋಪದಿಂದ ಕೂಗಿ ಹೇಳಿದ :

"ಸುಮ್ಮಗ ಕುಂತು ಕೇಳೂಹಾಂಗಿದ್ದರ ಕೇಳೋ ಬಿಕನೇಸಿ ! ಹೆಚ್ಚು ಕಮ್ಮಿ ಮಾತಾಡಿದಿ ಅಂದರ ನೆಟ್ಟಗಾಗಾಕಿಲ್ಲ."

"ಯಾವಲೇ ಅವಾ ನೀ ಹೇಳಾವಾ ? ಅವಳನ್ನೇನು ಕೊಂಡುಕೊಂಡೀಯೇನು ನೀ ?" ಎಂದು ಆ ರಸಿಕನೂ ಏರಿಸಿದ ದನಿಯಲ್ಲಿ ಕೇಳಿದ.

"ಕೊಂಡುಕೊಂಡೀನಂತs ತಿಳುಕೋ," ಎಂದ ಸಂಗಣ್ಣ.

"ಹಾಂಗಿದ್ದರ ನಿನ್ನ ಮನಿಯಾಗ ಹಾಡಿಸಿಕೋ. ಇಲ್ಲ್ಯಾಕ ಜಾತ್ರ್ಯಾಗ ದಿಮಾಕು ನಿಮ್ಮದು ?"

"ಜಾತ್ರಿ ಏನು ನಿಮ್ಮಪ್ಪಂದಲ್ಲ. ಸುಮ್ಮನs ಕುಂಡ್ರೋ," ಎಂದ ಸಂಗಣ್ಣ.

ಅಷ್ಟರಲ್ಲಿ ಗುಂಪಿನಲ್ಲಿನ ಇತರ ರಸಿಕರು ದನಿಯೆತ್ತಿ, "ಯಾಕ ಬಡದಾಡತೀರ್ರ್ಯೋ ಸುಮ್ಮನs. ಒಂದು ಗಳಿಗಿ ಹಾಡು ಕೇಳಿ ಹೋಗೂಣು. ಸುಮ್ಮನಿರ್ರಿ," ಎಂದು ಅವರಿಬ್ಬರನ್ನೂ ಶಾಂತಗೊಳಿಸಿದರು.

ಕೂಗಾಟದಿಂದ ಮುನಿಸುಗೊಂಡವಳಂತೆ ನಟಿಸುತ್ತ ಹಾಡನ್ನು ಮುಂದುವರಿಸಿದಳು ಚಂದ್ರಾ :

"ಹಾಲು ಕಾಣದ ಬೆಕ್ಕಿನಂತೆ
ಅಲ್ಪರಿವೆನೇ ನಾರಿ ನಾನು

ಬರುವೆನೆಂದು ಹೇಳು ನಾಳೆಗೆ,
ನಾನು ಇದ್ದಲ್ಲಿಗೆ,
ಹೊತ್ತು ಮುಳುಗಿ ನಮ್ಮ ಹಿತ್ತಲದಾಗ
ಹಾಯ್ದು ಬಾರೇ ಅಗಳಿ ಹಾಕುವದಿಲ್ಲ ಬಾಗಿಲಿಗೆ
ನೀ ಬಾರಲ್ಲಿಗೆ ಮಲ್ಲಿಗೆ..."

ತುಸುದೂರದಲ್ಲಿ ಕಂಬಳಿಯ ಮೇಲೊರಗಿಕೊಂಡು ಆಕಾಶದಲ್ಲಿ ತೇಲುತ್ತಿದ್ದ ಚಂದ್ರಬಿಂಬವನ್ನು ದಿಟ್ಟಿಸುತ್ತಲಿದ್ದ ಮಹಾದೇವ. ಚಂದ್ರಳ ಗಾನ ಅಲೆಅಲೆಯಾಗಿ ಹರಿದು ಬಂದು ಕಿವಿಯ ಮೇಲೆ ಅಪ್ಪಳಿಸುತಿತ್ತು. "ಹೊಲಸು ಜಾತ್ರಿ....ಹೊಲಸು ಜನರು....ಹೊಲಸು ಹೆಣ್ಣು....ಹೊಲಸು ಹಾಡು.... ಕಾಮಾತುರ ಏರಿತಂತೆ....ಬೆನ್ನುಹತ್ತಿ ಹೊರಟನಂತೆ...ಹಿತ್ತಿಲ ಬಾಗಿಲಿಗೆ ಬರಬೇಕಂತೆ...ಥೂ! ಥೂ!" ಎಂದುಕೊಂಡ ಮಹಾದೇವ.

"ನಿನ್ನ ವ್ಯಾಲ ನನ್ನ ಮನಸು
ಬಹಳ ಹಾತೊರೆಯುತೈತಿ ನೀರೆ
ತಡಾ ಮಾಡದೆ ಬರಬೇಕು ಲಗುಮಾಡಿ
ಸರಿರಾತ್ರಿ ವಿಾರೂದೆರೊಳಗ ನೀನೋಡೀ...."

"ಹಾ, ಜೀ ಜೀ," ಎಂದ ಹನುಮ.

ಅಲ್ಲಿ ಮಲಗಿಕೊಳ್ಳಲಾಗಲಿಲ್ಲ ಮಹಾದೇವನಿಗೆ. ಅವನು ಎದ್ದು ಹೊರಟದ್ದನ್ನು ಕಂಡು ಶಿವಗಂಗೆ ಕೇಳಿದಳು:

"ಎತ್ತಲಾಗ ಹೊಂಟಿಯೋ ತಮ್ಮಾ?"

"ನಿದ್ದಿ ಬರವೊಲ್ಲದವ್ವಾ. ಸ್ವಲ್ಪ ತಿರುಗಾಡಿಕೊಂಡು ಬರ್ತೀನಿ."

ಎಲ್ಲಿ ಹೋದರೂ ಅವನ ಮನಸ್ಸಿಗೆ ಶಾಂತಿ ಲಭಿಸುವಂತಿರಲಿಲ್ಲ. ಜಾತ್ರೆಯ ಆ ಜನಸಾಗರದಲ್ಲಿ ಎಲ್ಲೆಡೆಗಳಲ್ಲೂ ಮೋಜಿನ ದೋಣಿಗಳೇ ವಿಹಾರ ಮಾಡುತ್ತಿದ್ದವು. ಒಂದೆಡೆ ಜೀ ಜೀ ಪದ, ಇನ್ನೊಂದೆಡೆ ಬಯಲಾಟ, ಮತ್ತೊಂದೆಡೆ ನಾಟಕ, ಮಗುದೊಂದೆಡೆ ತಮಾಷೆ. ಕೊಂಚ ಕತ್ತಲೆಯಿದ್ದ ಕಡೆಗಳಲ್ಲಾದರೋ ಪ್ರತ್ಯಕ್ಷ ಕಾಮಕೇಳಿ; ರತಿಸುಖದ ಉತ್ಕಟತೆಯಲ್ಲಿ

ಕೇಳಬರುತ್ತಿದ್ದ ಚೀತ್ಕಾರ. ಎತ್ತ ದೃಷ್ಟಿ ತಿರುಗಿಸಿದರೂ ಮದನನ ವಿಜಯ ಪತಾಕೆ ಮೆರೆಯುವುದು ಕಾಣತ್ತಿತ್ತು. ಬಾಲ್ಯದ ಗಡಿಯನ್ನು ದಾಟ ಯೌವನದ ಸೀಮೆಗೆ ಆಗತಾನೆ ಅಡಿಯಿರಿಸುತ್ತಿದ್ದ ಮಹಾದೇವ ತನಗೆ ತಾನೆ ಕೇಳಿಕೊಂಡ: ಇದೆಲ್ಲದರ ಅರ್ಥವೇನು? ನಮ್ಮ ಜೀವನಕ್ಕೆ ಬೇರೊಂದು ಉದ್ದೇಶವೆ ಇಲ್ಲವೆ? ಗಂಡು ಹೆಣ್ಣಿನ ಕೂಟವೇ ಬಾಳಿನ ಪರಮಗುರಿಯೆ?

ಎದುರಿಗಿದ್ದ ಅಟ್ಟಣೆಯ ಮೇಲೆ "ಸಂಗ್ಯಾ ಬಾಳ್ಯಾ" ಆಟ ನಡೆದಿತ್ತು. ಬಿಳಿಯ ಬಣ್ಣದ ತೆಳುವಾದ ಬಟ್ಟೆಯ ಅಂಗಿ ತೊಟ್ಟು, ಕಚ್ಚೆ ಬಿಗಿದು ಧೋತರ ಉಟ್ಟು, ಜರಿಯ ರುಮಾಲು ಸುತ್ತಿ, ಕೊರಳಲ್ಲಿ ಮಣಿಗಳ ಹಾರ ಧರಿಸಿದ್ದ ನಾಯಕಮಣಿ ಸಂಗ ತುಟಿಗಳ ಮೇಲೆ ರಸಿಕತನದ ನಗೆ ತುಳುಕಿಸುತ್ತ ಅಟ್ಟಣೆಯ ಮೇಲೆ ಕುಣಿಯುತ್ತಿದ್ದ. ಕಚ್ಚೆ ತಿರುವಿದ ಸೀರೆಯುನ್ನುಟ್ಟು ತಲೆ ಗೂದಲನ್ನು ವಕ್ರವಕ್ರವಾಗಿ ಬಾಚಿಕೊಂಡಿದ್ದ ನಾಯಿಕೆ ಗಂಗೆ, ಹಾವುಗಳ ಹಾಗೆ ತೋಳುಗಳನ್ನು ತಿರುಹುತ್ತ, ಒಯ್ಯಾರದಿಂದ ಕಾಲುಗಳನ್ನು ಎತ್ತಿ ಎತ್ತಿ ಇಡುತ್ತ ಹಾಡುತ್ತಿದ್ದಳು. ಬೂದಿಬಣ್ಣದ ಪಾವುಡವನ್ನು ಬಿಗಿದು ಕಟ್ಟಿ ಅಂಗಿಯ ತೋಳನ್ನು ಮೇಲಕ್ಕೇರಿಸಿದ ರಸಿಕ ಶಿಖಾಮಣಿಯೊಬ್ಬ ಅವಳ ಹಿಂದೆ ನಿಂತುಕೊಂಡು ದಪ್ಪ ನುಡಿಸುತ್ತಿದ್ದ.

"ರಂಗಮಂಚಕ ಹೋಗೂಣು ನಡಿ
ಭೋಗವಿಲಾಸ ಮಾಡೂಣು ಕೂಡಿ."

ಎಂದು ಅವಳು ಹಾಡುತ್ತಿದ್ದ ಹಾಗೆ ಸಂಗ ಲಜ್ಜೆಯೆಲ್ಲವನ್ನೂ ತೊರೆದ ಮದೋನ್ಮತ್ತನಂತೆ ಅವಳ ಮೈಮೇಲೆ ಬೀಳಲು ಬರುತ್ತಿದ್ದ. ಆಟ ನೋಡಲು ನೆರೆದಿದ್ದ ರಸಿಕರ ಮೈಯಲ್ಲೂ ಮಿಂಚಿನ ಸಂಚಾರವಾದಂತಾಯಿತು. "ತಗೊಳ್ಳಲೇ ಅವಳನ್ನ," ಎಂದು ಯಾರೋ ಕೂಗಿಕೊಂಡರು.

ಗಂಗೆ ಸರ್ರನೆ ರಂಗದ ಮೇಲೆ ಸರಿದು ನಿಂತು ಸಂಗನನ್ನು ತೇಲುಗಣ್ಣಿನಿಂದ ದಿಟ್ಟಿಸುತ್ತ ಹಾಡತೊಡಗಿದಳು:

"ಹಿಡಿ ಚಂದ್ರ ಹಾರಾ
ತೊಡು ಕಂಠೀಸರಾ
ಜೋಡ ಮುತ್ತಿನ ಬಾವಲಿ, ಕೊಂಡು ಕೊಡುವೆನು ಶಾಲಾ

ಗಂಧ ಸಂಪಿಗೆಯೆಣ್ಣಿ
ತಂದು ಇಟ್ಟನಿ ಜಾಣಿ
ಗುಲಾಲ ಬುಕ್ಕಿಟ್ಟ ಮೇಲ್ಡಾರಿಸ್ಯಾಡಿ
ತಾಜಾ ಗೋಕಾಂವಿ ಊದಿನ ಕಡಿ
ಬಿಜಲಿಬತ್ತಿಯ ಬೆಳಕಾ
ಸಹಜ ಪಲ್ಲಂಗ ಠೀಕಾ
ಜಾಜಿ ಮಲ್ಲಿಗೆ ಸಂಪಿಗೆ ಮಾಡಿ
ಗದ್ದಾಂಗ ಆಗಲಿ ಹೆಪ್ಪಾ
ಬರಲಿ ಕಣ್ಣಿಗೆ ಜೊಂಪಾ
ಚೈನ ಮಾಡುನು ಹೊಂದಿಗೂಡಿ...."

"ಹೊಡಿಯಲೇ!" ಎಂದು ಯಾರೋ ಕೂಗಿದರು.

ಮಹಾದೇವ ತಲೆ ಬಾಗಿಸಿಕೊಂಡು ಅಲ್ಲಿಂದ ಹೊರಟ. ಗಂಡನ ಬೆನ್ನ ಹಿಂದೆ ಮಿಂಡನನ್ನು ಕರೆಯುವ ಹೆಣ್ಣು; ಲಜ್ಜೆಯಿಲ್ಲದೆ ಅವಳನ್ನು ಕೆಡಿಸುವ ಗಂಡು. ಅವರ ಕೇಳಿಯ ಪ್ರದರ್ಶನವನ್ನು ಕಂಡು ಹರ್ಷದಿಂದ ಕೇಕೆ ಹಾಕುವ ಜನಜಂಗುಳಿ...ಮಹಾದೇವ ತನಗೆ ತಾನೆ ಕೇಳಿಕೊಂಡ: ಏನು ಪ್ರಪಂಚದ ಅರ್ಥ? ಏನು ಬದುಕಿನ ಅರ್ಥ?

"ಏನೂ ಇಲ್ಲ, ಬೇರೆಯೇನೂ ಇಲ್ಲ. ಹೆಣ್ಣು ಗಂಡಿನ ಸಂಯೋಗ, ಅಷ್ಟೆ," ಎನ್ನುವಂತೆ 'ಸಂಗ್ಯಾಬಾಳ್ಯಾ' ಆಟ ಅಲ್ಲಿ ವಿಜೃಂಭಿಸುತಿತ್ತು.

ಕಾಲೆಳೆದುಕೊಂಡು ಮತ್ತೆ ಬಿಡಾರದ ತಾಣಕ್ಕೆ ಬಂದ ಮಹಾದೇವ. ಹನುಮನ ಬಿಡಾರದೆದುರಿಗೆ ಬೆಂಕಿ ಹಾಗೆಯೆ ಉರಿಯುತ್ತಿತ್ತು. ಅದರ ಹತ್ತಿರದಲ್ಲಿಯೆ ಹನುಮನೂ ಮಲಗಿಕೊಂಡಿದ್ದ. ಅವನ ಸನಿಯದಲ್ಲಿ ಕುಳಿತು ಕೊಂಡು ಕಾಳ ಸಿಗರೇಟು ಸೇದುತ್ತಿದ್ದ. ಸಂಗಣ್ಣನಾಗಲಿ ಚಂದ್ರಳಾಗಲಿ ಅಲ್ಲಿ ಕಾಣಿಸಲಿಲ್ಲ. ಯಾವ ಬಯಕೆಯನ್ನು ತೀರಿಸಿಕೊಳ್ಳಲೆಂದು ಅವಳು ಕೆಲವು ಗಂಟೆಗಳ ಮುನ್ನ ತನ್ನನ್ನು ಆಸೆಯಿಂದ ನಿರೀಕ್ಷಿಸುತ್ತಲಿದ್ದಳೋ, ಅದನ್ನು ಸಂಗಣ್ಣನಿಂದ ತೀರಿಸಿಕೊಳ್ಳಲು ಜನರಿಲ್ಲದ ಜಾಗಕ್ಕೆ ಅವನನ್ನು

ಕರೆದೊಯ್ದಿರಲು ಸಾಕು – ಎಂದು ವಿಷಾದದಿಂದ ಹೇಳಿಕೊಳ್ಳುತ್ತಾ ಕಾಳನ ಬಳಿ ಕುಳಿತುಕೊಂಡ ಮಹಾದೇವ.

“ಸಿಗರೇಟು ಬೇಕೇನೋ?” ಎಂದು ಕೇಳಿದ ಕಾಳ.

“ಬ್ಯಾಡಪ್ಪ.”

“ಅರೆ! ನೀನೇನೋ ಸಾಧೂ ಆಗುವ ಹಾಂಗ ಕಾಣುತ್ತೈತಿ. ಈ ವಯಸ್ಸಿನಾಗ ಮಜಾ ಮಾಡದೆ ಇನ್ಯಾವಾಗ ಮಾಡೂದೋ? ನಮ್ಮ ಸಂಗಣ್ಣ ನೋಡು ರಾಜಾ ಇದ್ದಾಂಗ ಇದಾನು ರಾಜಾ. ರಾಣೀನ್ನ ಕೂಡಿಕೊಂಡು ಜೈನೀ ಹೊಡೀಲಿಕ್ಕೆ ಹೋದ...”

ಮಾರನೆಯ ಬೆಳಿಗ್ಗೆ ಊರಿಗೆ ಹೊರಡುವುದೆಂದು ನಿಶ್ಚಯಿಸಿದ್ದನಾದರೂ ಸಂಗಣ್ಣ ಅದನ್ನು ಕೃತಿಗಿಳಿಸಲಿಲ್ಲ. ಚಂದ್ರಳ ಮಾದಕ ಸಹವಾಸದಲ್ಲಿ ಆತ ತಂದೆಯ ಕಾಹಿಲೆಯನ್ನು ಪೂರ್ತಿಯಾಗಿ ಮರೆತುಬಿಟ್ಟ. ಎರಡು ದಿನಗಳ ತರುವಾಯ ಮರಡಿಹಳ್ಳಿಯ ಹರಿಜನರ ಗುಂಪು ಎಲ್ಲಮ್ಮನ ಗುಡ್ಡದಿಂದ ಹೊರಟು ನಿಂತಾಗ ಸಂಗಣ್ಣನೂ ಅವರನ್ನು ಹಿಂಬಾಲಿಸಿದ. ಊರಿಗೆ ಬಂದು ತಲಪಿದೊಡನೆ ತಂದೆಯ ಮರಣವಾರ್ತೆಯನ್ನು ತಿಳಿದು ಅವನಿಗೆ ವ್ಯಸನವೇನೊ ಆಯಿತಾದರೂ ಅವನ ಕಣ್ಣಿನಲ್ಲಿ ಅಶ್ರುಗಳೇನೂ ಕಾಣಿಸಿಕೊಳ್ಳಲಿಲ್ಲ. ಎಂಥ ಶೋಕವನ್ನೂ ಮರೆಸಿಬಿಡುವಂಥ ಆನಂದವನ್ನು ಅವನ ಹೃದಯದಲ್ಲಿ ತುಂಬಿದ್ದಳು ಚಂದ್ರಾ.

೧೮

ಎಲ್ಲವ್ವನ ಜಾತ್ರೆಯಿಂದ ಬಂದ ಬಳಿಕ ಎಂಟು ದಿನಗಳವರೆಗೆ ಸಂಗಣ್ಣ ತುಂಬ ಕಷ್ಟದಿಂದ ಮನೆ ಹಿಡಿದು ಕುಳಿತಿದ್ದ. ತಂದೆಯ ಸಾವಿಗಾಗಿ ಅಷ್ಟು ಶೋಕ ಪ್ರದರ್ಶನ ಮಾಡದೆ ವಿಧಿಯಿರಲಿಲ್ಲ.

ಎಂಟು ದಿನಗಳು ಕಳೆದ ಬಳಿಕ ಮಾತ್ರ ಅವನ ತಾಳ್ಮೆ ತೀರಿ ಹೋಯಿತು. ರಾತ್ರಿ ಊಟ ಮುಗಿಸಿಕೊಂಡು ನೇರವಾಗಿ ಹರಿಜನಕೇರಿಗೆ ಹೋಗಿ ಹನುಮನ ಮನೆಯ ಬಾಗಿಲು ತಟ್ಟಿದ. ಕಾಮಣ್ಣನ ಕಳ್ಳಭಟ್ಟಿಯ ಕೆಲಸ ಕೆಲದಿನಗಳಿಂದ ನಿಂತು ಹೋಗಿದ್ದಿತಾದುದರಿಂದ ರಾತ್ರಿ ಮನೆಯಲ್ಲಿಯೆ ಇರುತ್ತಿದ್ದ ಹನುಮ ಎದ್ದು ಬಂದು ಬಾಗಿಲು ತೆಗೆದ. ಒಳಗಡೆ ಚಿಮಣಿ ದೀಪವೊಂದು ಮಿಣಮಿಣನೆ ಉರಿಯುತಿತ್ತು. ಹರಕು ಕಂಬಳಿಯೊಂದನ್ನು ಹೊದೆದುಕೊಂಡು ಚಾಪೆಯ ಮೇಲೆ ಮಲಗಿಕೊಂಡಿದ್ದಳು ಚಂದ್ರಾ. ಸಂಗಣ್ಣ ಒಳಗೆ ಬಂದರೂ ಆಕೆ ಮೇಲಕ್ಕೇಳಲಿಲ್ಲ.

ಸಂಗಣ್ಣನಿಗೆ ಏನನ್ನು ಹೇಳಬೇಕೆಂಬುದು ತಿಳಿಯದೆ ಗೊಂದಲಕ್ಕೆ ಸಿಲುಕಿಕೊಂಡ ಹನುಮ. ಚಂದ್ರಳನ್ನು ಬಯಸಿ ಬಂದ ಸಂಗಣ್ಣನನ್ನು ಆತ ಹಾಗೆಯೆ ಸಾಗಹಾಕುವಂತಿಲ್ಲ. ಊರಿಗೇ ದೊಡ್ಡ ಸಾಹುಕಾರ ಸಂಗಣ್ಣ. ಈಗ ಮನೆಗೆ ಅವನೇ ಯಜಮಾನ. ಸಾವಿರಾರು ರೂಪಾಯಿಗಳ ಆಸ್ತಿ. ಇಂಥದೊಂದು ಕುಳವನ್ನೇ ಬಯಸುತ್ತಿದ್ದವನು ಹನುಮ. ಸಂಗಣ್ಣನಂತೂ ಚಂದ್ರಳ ದಾಸಾನುದಾಸನಂತಾಗಿದ್ದಾನೆ. ಆದರೆ, ಈಗಲೇ ಅವಳನ್ನು ಅವನಿಗೊಪ್ಪಿಸುವಂತಿಲ್ಲ. ವಾಡಿಕೆಯಂತೆ ಸಮಾರಂಭ ನಡೆಯಬೇಕು, ಊರಿನಲ್ಲಿ ಡಂಗುರ ಸಾರಿಸಬೇಕು, ಕೇರಿಗೆಲ್ಲ ಊಟ ಹಾಕಬೇಕು, ಸೀರೆ

ಶುಬುಸವಾಗಬೇಕು. ಇದಾವುದೂ ಆಗದೆ ಹಾಗೆಯೆ ಇವರ ಕೂಟ ನಡೆಯುವಂತಿಲ್ಲ. ಜಾತ್ರೆಯಲ್ಲೇನೋ ಯಾರಿಗೂ ಗೊತ್ತಾಗದಂತೆ ಆಗಿ ಹೋಯಿತು. ಅಲ್ಲಿನಂತೆ ಇಲ್ಲಿಯೂ ನಡೆಯುವಂತಿಲ್ಲ. ಕೇರಿಯವರಿಗೆ ಗೊತ್ತಾದರೆ ತನಗೆ ಫಜೀತಿಯಾಗದಿರದು.

"ಕುಂಡ್ರು ಸಂಗಣ್ಣಾ. ಸ್ವಲ್ಪ ಮಾತಾಡೂದು ಐತಿ," ಎಂದ ಹನುಮ.

ಚಂದ್ರಳ ಬಳಿಯಲ್ಲಿಯೆ ಕುಳಿತುಕೊಳ್ಳುತ್ತ ಸಂಗಣ್ಣ ಕೇಳಿದ:

"ಏನು ಹನುಮಣ್ಣಾ ?"

"ನಾ ಹೇಳುತೀನಂತ ತಪ್ಪು ತಿಳೀಬ್ಯಾಡಪಾ ಸಾವುಕಾರಾ. ಪದ್ಧತಿಯ ಪ್ರಕಾರ ಮೊದಲು ಕಾರ್‍ಯ ಆಗಾಕ ಬೇಕಲ್ಲಾ ?''

ಪದ್ಧತಿಯ ಪ್ರಕಾರ ನಡೆಯುವ ಆ "ಕಾರ್‍ಯ" ಎಂಥದೆಂಬುದು ಸಂಗಣ್ಣನಿಗೂ ಚೆನ್ನಾಗಿ ಗೊತ್ತಿದ್ದಿತು.

"ಆಗಲೆಲ್ಲ? ಯಾರು ಬ್ಯಾಡಂತಾರು ? ನಾಳೀ ಮಾಡಿಬಿಡು."

"ಹೂಂ. ಆದರs ಅದಕ್ಕ ಮೊದಲು..."

"ಆದರs ಇಲ್ಲಾ, ಗೀದರs ಇಲ್ಲಾ. ನಾಳಿಂದು ನಾಳೆ ನೋಡಿಕೊಂಡ ರಾತು. ನೀ ಈಗ ಬ್ಯಾರೆ ಜಾಗಾ ನೋಡಿಕೋ," ಎಂದು ನುಡಿದು ಚಂದ್ರಳ ಕಡೆ ತಿರುಗಿ ನಕ್ಕ ಸಂಗಣ್ಣ.

ಮತ್ತೊಂದು ಮಾತಾಡದೆ ಹನುಮ ಎದ್ದು ನಿಂತ, ತನ್ನ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಹೊರಡುತ್ತಾ "ಒಂದ್ಯಾಡ್ಡ ರೂಪಾಯಿನಾದ್ರೂ ಕೊಡಪಾ. ಬಹಳ ನೀರಡಿಕೆಯಾಗೈತಿ," ಎಂದು ಹೇಳಿದ.

"ನೀರಡಿಕೆಯಾದರ ನೀರು ಕುಡಿ. ರುಪಾಯಿ ತಿಂದರ ನೀರಡಿಕೆ ಹೋಗುತೈತೇನು ?'' ಎಂದ ಸಂಗಣ್ಣ.

ಹನುಮ ಹಿ ಹಿ ಹಿ ಹಿ ಎಂದು ನಕ್ಕ. ಚಂದ್ರಳೂ ನಗತೊಡಗಿದಳು. ಸಂಗಣ್ಣ ತೆಗೆದಿತ್ತ ರೂಪಾಯಿಗಳನ್ನು ಪಾವುಡಕ್ಕೆ ಸೇರಿಸುತ್ತ ಹನುಮ ಬಾಗಿಲನ್ನೆಳೆದುಕೊಂಡು ಹೊರಟುಹೋದ.

ಮರುದಿನ ಬೆಳಿಗ್ಗೆ ಪೂಜಾರಿ ಮಾದ ಹಳ್ಳಿಯ ಓಣಿಗಳಲ್ಲೆಲ್ಲ ತಿರುಗಿ ಡುಂಗುರ ಸಾರಿ ಬಂದ:

"ಹನುಮನ ಮಗಳು ಚಂದ್ರಾ ದೇವದಾಸಿ ಮೈನೆರೆದಾಳ್ರಪೋ. ಗಂಡಸರು ಯಾರಿದ್ದೀರಿ ನೋಡಿರಪೋ. ಐನೂರು ರೂಪಾಯಿ ಅವಳ ಉಡಿಯಾಗ ಹಾಕಬೇಕು. ಎರಡುನೂರು ರೂಪಾಯಿಯ ಸೀರೀ ಕೊಡ ಬೇಕು. ಕೇರಿಯ ಮಂದಿಗೆಲ್ಲಾ ಊಟಾ ಹಾಕಬೇಕು. ಅಂಥಾ ಗಂಡಸಿದ್ದಾಂವ ಬರ್ರಿಪೋ. ಅವನ ಸಂಗಾತ ನಮ್ಮ ಚಂದ್ರಾ ಒಂದು ವರ್ಷ ಇರು ತಾಳ್ರಪೋ ?"

ಸಿದ್ದಗೌಡನ ಮಗ ಶಿವನಗೌಡ, ಕಾಮಣ್ಣನ ಮಗ ಗಂಗಣ್ಣ ಇಬ್ಬರೂ ಬೆಂಕಿಯಲ್ಲಿ ಬಿದ್ದ ಹುಳುಗಳಂತೆ ಕಳವಳಪಟ್ಟುಕೊಂಡರು. ಸಂಗಣ್ಣನಿಗೂ ಚಂದ್ರಳಿಗೂ ಆಗಲೆ ಗಂಟು ಬಿದ್ದಿದೆಯೆಂಬುದನ್ನರಿತ ಅವರು ಅವಳಿಗಾಗಿ ತಾವೂ ಯತ್ನಿಸುವಂತಿರಲಿಲ್ಲ. ಸಂಗಣ್ಣನೊಡನೆ ಸ್ಪರ್ಧೆಗೆ ನಿಲ್ಲುವ ಮನಸ್ಸೂ ಅವರಿಗಿರಲಿಲ್ಲ, ಅದು ಅವರ ಶಕ್ತಿಗೆ ನಿಲುಕುವ ವಿಷಯವೂ ಆಗಿರಲಿಲ್ಲ.

ಮಧ್ಯಾಹ್ನದ ವೇಳೆಗೆ ಮನೆಗೆ ಬಂದ ಸಂಗಣ್ಣ ಹೊಸಬಟ್ಟೆ ಧರಿಸಿ ಮದುವಣಿಗನಂತೆ ಅಲಂಕಾರ ಮಾಡಿಕೊಂಡು ಹಣಕ್ಕಾಗಿ ತಾಯಿಯ ಕೊಟಡಿಗೆ ಬಂದ. ದೀರ್ಘಕಾಲದ ಕಾಹಿಲೆಯಿಂದಲೂ ಪತಿಯ ಮರಣ ದಿಂದಲೂ ಕುಗ್ಗಿ ಕಡ್ಡಿಯಂತಾಗಿದ್ದ ತಾಯಿಯನ್ನು ಕಂಡೊಡನೆ ಅವನ ಮನಸ್ಸು ವಿಹ್ವಲಗೊಳ್ಳದಿರಲಿಲ್ಲ. ತಂದೆ ಕಾಲವಾದುದಕ್ಕೆ ಇನ್ನೂ ಹದಿನೈದು ದಿನಗಳೂ ಆಗಲಿಲ್ಲ. ಇಷ್ಟರಲ್ಲಿಯೆ ತಾನು ಈ ರೀತಿ ಆಚರಿಸುವುದು ಉಚಿತವಲ್ಲವೇನೊ ಎಂದೂ ಅವನಿಗೆನ್ನಿಸದಿರಲಿಲ್ಲ.

ಅವನ ತಾಯಿಗೂ ವಿಷಯವೆಲ್ಲ ತಿಳಿದಿತ್ತು. ಮಗನನ್ನು ಹತ್ತಿರ ಕರೆದು ಮಮತೆಯಿಂದ ಅವನನ್ನು ನೇವರಿಸುತ್ತ ಆಕೆಯೆಂದಳು:

"ಇನ್ನು ಮ್ಯಾಲಾದರೂ ನೀ ಚಲೋ ತಾಂಗ ನಡಕೋಬೇಕು ಸಂಗಣ್ಣಾ."

ಬುದ್ಧಿವಾದವನ್ನು ಕೇಳುವುದೆಂದರೆ ಸಂಗಣ್ಣನಿಗೆ ಮೊದಲಿನಿಂದಲೂ ಬೇಸರು. ಈಗ ಅವನು ದೊಡ್ಡವನಾಗಿಲ್ಲವೆ? ಮನೆಗೆಲ್ಲ ಅವನೇ ಹಿರಿಯ ನಲ್ಲವೆ? ಅಂಥವನು ಉಪದೇಶ ಕೇಳುವುದುಂಟೇ!

"ಮುಂದಿನವಾರ ನಿನ್ನ ಹೇಣತೀನ್ನ ಕರಸಬೇಕಂತ ಮಾಡೀನಿ," ಎಂದು ಉಪಾಯವಾಗಿ ಮಾತು ತೆಗೆದಳು ತಾಯಿ.

ಚಂದ್ರಳಿಂದ ತನ್ನನ್ನು ದೂರವಿಡಲು ತಾಯಿಯ ಯುಕ್ತಿಯಿದೆಂದು ಸಂಗಣ್ಣ ಒಡನೆಯೆ ಅರಿತುಕೊಂಡ. ಹೆಂಡತಿಯನ್ನು ಕರೆಯಿಸುವಳಂತೆ. ಆದಿನ್ನೂ ಚಿಕ್ಕ ಹುಡುಗಿ. ದೊಡ್ಡದಾಗಬೇಕಾದರೆ ಇನ್ನೂ ನಾಲ್ಕು ವರ್ಷವಾದರೂ ಬೇಕು. ಅವ್ವನಿಗೆ ಬುದ್ಧಿಯಿಲ್ಲ....

"ಪೆಟ್ಟಿಗೀ ಕೀಲೀಕೈ ಕೊಡವ್ವಾ," ಎಂದ ಸಂಗಣ್ಣ.

"ಯಾತಕ್ಕಪ್ಪಾ?"

"ಯಾತಕ್ಕಂತ ಒಡದೇ ಹೇಳಬೇಕೇನು? ನಿನಗೆಲ್ಲಾ ಗೊತ್ತೈತಿ, ಕೊಡು ಸುಮ್ಮನs," ಎಂದು ಗದರಿಸಿದ ಸಂಗಣ್ಣ.

ತಾಯಿ ಕಣ್ಣಲ್ಲಿ ನೀರು ತಂದು ನುಡಿದಳು:

"ಅವರು ಹೋಗಿ ಇನ್ನೂ ಹದಿನೈದು ದಿನ ಆಗಿಲ್ಲ ತಮ್ಮಾ. ಈಗs ಇಂಥಾ ಕೆಲಸಕ್ಕ ಬೀಳಬ್ಯಾಡ. ಊರವರೆಲ್ಲಾ ನಕ್ಕಾರು..."

"ನಕ್ಕವರ ಹಲ್ಲು ಕಾಣುತಾವ. ಕೊಡುತೀಯೋ ಇಲ್ಲೋ ಕೀಲೀಕೈ?"

"ಕೊಟ್ಟು ಬಿಡವ್ವಾ. ಹೋಗಲಿ. ಏನಾರ ಮಾಡಿಕೊಳ್ಳಲಿ," ಎಂದು ಅಜ್ಜಿ ಹೇಳಿದಳು.

ಸಂಗಣ್ಣ ರೂಪಾಯಿಗಳನ್ನು ತೆಗೆದು ಕೋಟಿನ ಕಿಸೆಗೆ ತುಂಬಿಕೊಂಡು ಬೀಗದ ಕೈಯನ್ನು ತಾಯಿಯ ಕಡೆ ಎಸೆದು ಹೊರಟುಹೋದ.

ರಾತ್ರಿ ಹರಿಜನ ಕೇರಿಯಲ್ಲಿ ವಿಜೃಂಭಣೆಯ ಸಮಾರಂಭ ನಡೆಯಿತು. ಕೇರಿಗೆಲ್ಲ ಹೋಳಿಗೆ, ಬಿಳಿಯಕ್ಕಿ ಅನ್ನದ ಸಂತರ್ಪಣೆಯ ವ್ಯವಸ್ಥೆ ಮಾಡಿಸಿದ್ದ ಸಂಗಣ್ಣ. ಹನುಮನ ಮನೆಯಲ್ಲಿ ಜನರೆಲ್ಲ ನೆರೆದರು. ಚಂದ್ರಳನ್ನೂ ಸಂಗಣ್ಣನನ್ನೂ ಮಣೆಯ ಮೇಲೆ ಕೂಡಿಸಲಾಯಿತು. ಐದು ಮುಷ್ಟಿ ಜೋಳವನ್ನು ಅವಳ ಉಡಿಗೆ ಹಾಕಲಾಯಿತು. ಅವರಿಬ್ಬರೂ ಪರಸ್ಪರರ ಕೆನ್ನೆಗಳಿಗೆ ಅರಿಸಿಣ ಹಚ್ಚುವ ಶಾಸ್ತ್ರ ನಡೆಯಿತು. ಜೋಗಿತಿಯರು ಹಾಡು ಹೇಳಿದರು. ಹನುಮ ಡಪ್ಪ ಬಾರಿಸಿದ. ಹುಡುಗರು ಕೋಲು ಬಾರಿಸುತ್ತ ನರ್ತಿಸಿದರು.

ಗಂಡ - ಗೆಳತಿ ಇಬ್ಬರನ್ನೂ ಹನುಮನ ಮನೆಯಲ್ಲಿ ಬಿಟ್ಟು ಬಾಗಿಲು ಮುಚ್ಚಿ ಕೊಂಡು ಕೇರಿಯವರೆಲ್ಲ ಊಟಕ್ಕೆ ಹೊರಟರು. ದುರ್ಗವ್ವನ ಗುಡಿಯಲ್ಲಿ ಊಟದ ವ್ಯವಸ್ಥೆಯಾಗಿತ್ತು. ಗಂಡಸರೂ ಹುಡುಗರೂ ಗುಡಿಯೊಳಗಡೆ ಕುಳಿತರು. ಹೆಂಗಸರೂ ಹುಡುಗಿಯರೂ ಹೊರಗಡೆ ಕುಳಿತರು.

ಪಂಕ್ತಿಯ ಮೇಲೆಲ್ಲ ದೃಷ್ಟಿಯೋಡಿಸುತ್ತ ಹಿರಿಯ ಭರಮಜ್ಜನೆಂದ:

"ಎಲ್ಲಾರೂ ಬಂದಾರಿಲ್ಲರೆಪೋ?"

"ಮಾದೇವ ಒಬ್ಬs ಕಾಣೂದಿಲ್ಲ," ಎಂದ ಪೂಜಾರಿ.

"ಅವ ಎಲ್ಲಿ ಹೋಗುತಾನ? ಇಲ್ಲೇ ಎಲ್ಲಾ್ಯದರೂ ಇದ್ದಾನು. ಕರೀರ್‍ಯೋ," ಎಂದ ಭರಮಜ್ಜ.

ಪೂಜಾರಿ ಹೊರಗೆ ಹೋಗಿ ಮಹಾದೇವನ ಹೆಸರೆತ್ತಿ ಮೂರು ನಾಲ್ಕು ಬಾರಿ ಕೂಗಿದ. ಐದು ನಿಮಿಷ ಕಳೆದರೂ ಮಹಾದೇವ ಬರಲಿಲ್ಲ. ಹೆಂಗಸರ ಸಾಲಿನಲ್ಲಿ ಊಟಕ್ಕೆ ಕುಳಿತಿದ್ದ ಶಿವಗಂಗೆ ಗಾಬರಿಗೊಂಡು ಎದ್ದು ಗುಡಿಸಲಿಗೆ ಹೋಗಿ ನೋಡಿದಳು.

ಮಹಾದೇವ ಅಲ್ಲಿಯೂ ಇರಲಿಲ್ಲ.

"ಮಾದೇವಾ, ಮಾದೇವಾ, ಮಗನೇ, ಎಲ್ಲಿಗೆ ಹೋದೆಪೋ?" ಎಂದು ಕೂಗುತ್ತಾ ಶಿವಗಂಗೆ ಕೇರಿಯನ್ನೆಲ್ಲ ಸುತ್ತಿದಳು.

ಸಂಗಣ್ಣನ ತೋಳುಗಳಲ್ಲಿ ಪವಡಿಸಿದ್ದ ಚಂದ್ರಾ ಆ ಕೂಗನ್ನು ಕೇಳಿ ಕೊಂಚ ಕಳವಳಗೊಂಡು ಪ್ರಿಯನನ್ನು ಕುರಿತು ಹೇಳಿದಳು:

"ಒಂದು ಸ್ವಲ್ಪ ತಡೀರಿ. ಶಿವಗಂಗತ್ತೆ ಒದರುತಾ ಇದಾಳ. ಮಾದೇವ ಎಲ್ಲಿ ಹೋದನೋ ಈ ರಾತ್ರಿಯೊಳಗ?"

"ಎಲ್ಲಿಗಾದರೂ ಹೋಗಲೊಲ್ಲನ್ಯಾಕೆ ಸುಡುಗಾಡಿಗೆ. ನನಗೇನಂತೆ, ನಿನಗೇನಂತೆ. ಸುಮ್ಮನೆ ಮಲಗs ಮಳ್ಳೀ," ಎಂದ ಸಂಗಣ್ಣ.

ಚಂದ್ರಾ ಸುಮ್ಮನೆ ಬಿದ್ದುಕೊಂಡಳು. ಆದರೂ ಅವಳ ಅಂತರಂಗದ ಮೂಲೆಯೊಂದರಲ್ಲಿ ವಿಷಾದದ ಅಲೆಯೊಂದು ಎದ್ದೆದ್ದು ಬೀಳುತ್ತಿತ್ತು.

೧೯

ಕತ್ತಲೆಯನ್ನು ಕೊರೆಯುತ್ತ ರೈಲು ಧಾವಿಸುತ್ತಿತ್ತು.

ಕಂಬಳಿಯಲ್ಲಿ ದೇಹವನ್ನು ಹುದುಗಿಸಿಕೊಂಡು ಡಬ್ಬಿಯ ಮೂಲೆಯೊಂದರಲ್ಲಿ ಒರಗಿಕೊಂಡಿದ್ದ ಮಹಾದೇವ. ಇನ್ನು ಎರಡು ಗಂಟೆಗಳಲ್ಲಿ ರೈಲು ಗೊಬ್ಬೂರನ್ನು ತಲುಪುವುದು. ಹಳ್ಳಿಯನ್ನಂತೂ ತ್ಯಜಿಸಿ ಬಂದುದಾಗಿತ್ತು. ಕಾಹಿಲೆಯಿಂದ ನಿತ್ರಾಣಳಾದ ತಾಯಿಯೊಬ್ಬಳನ್ನೇ ಅಲ್ಲಿ ಬಿಟ್ಟು ಬರಲು ಅವನಿಗೆ ಕೊಂಚವೂ ಇಷ್ಟವಿರಲಿಲ್ಲ. ಆದರೆ, ಅಲ್ಲಿ ಇರುವುದಕ್ಕೂ ಮನಸ್ಸಿರಲಿಲ್ಲ. ಚಂದ್ರೂ ಸೂಳೆಯಾಗುವುದನ್ನು ತಪ್ಪಿಸಲು ಯತ್ನಿಸಿ ನಿರಾಶನಾದುದಾಗಿತ್ತು. ತನ್ನ ಕಣ್ಣೆದುರಿನಲ್ಲೇ ಸಂಗಣ್ಣ ಅವಳೊಡನೆ ವ್ಯಭಿಚಾರ ಜೀವನ ಸಾಗಿಸುವುದನ್ನು ನೋಡುವುದು ದುಸ್ಸಹನೀಯವಾಗಿತ್ತು. ಆ ಕೇರಿ, ಆ ಹಳ್ಳಿ ಎಲ್ಲವೂ ಬೇಸರಕ್ಕಿಟ್ಟುಕೊಂಡಿತ್ತು.

ತಾಯಿಯನ್ನು ಬಿಟ್ಟು ಹೊರಡುವುದು ಸರಿಯೆ?

ತಾನು ಹೊರಟು ಬಂದ ಬಳಿಕ ಅವಳೇನನ್ನು ಮಾಡಬೇಕು? ದುಡಿದು ಹೊಟ್ಟೆ ತುಂಬಿಸಿಕೊಳ್ಳಬಹುದು. ಆದರೆ, ಅವಳಲ್ಲೀಗ ದುಡಿಯಲು ತ್ರಾಣವಿಲ್ಲ. ಮೊಚ್ಚೆಗಳನ್ನೂ ಅವಳು ಹೊಲಿಯಲಾರಳು. ಎರಡು ವರ್ಷಗಳ ಸತತ ಕಾಹಿಲೆ ಅವಳ ರಕ್ತವನ್ನೆಲ್ಲ ಸುಟ್ಟುಬಿಟ್ಟಿದೆ. ಅವಳ ದೇಹದಲ್ಲಿ ಏನೂ ಉಳಿದಿಲ್ಲ- ಮೂಳೆಗಳನ್ನು ಬಿಟ್ಟು. ಇಂಥವಳು ಏನೆಂದು ಕೆಲಸ ಮಾಡಿಯಾಳು?

ಆದರೂ—

ಅಂಥವಳನ್ನೂ ಬಿಟ್ಟು ಹೊರಡದೆ ಬೇರೆ ಮಾರ್ಗವಿರಲಿಲ್ಲ. ತಾನಿನ್ನು

ಅಲ್ಲಿ ಉಸಿರಾಡಿಸುವುದೇ ಅಸಾಧ್ಯವೆನ್ನಿಸಿತ್ತು. ಕೇರಿಯ ವಿಕಟ ಜೀವನ ತನ್ನನ್ನು ಕಬಳಿಸುವ ಹಾಗೆ ಭಾಸವಾಗಿತ್ತು. ಒಂದು, ಅಲ್ಲಿಂದ ಹೊರಡುವುದು; ಎರಡು, ಆತ್ಮಹತ್ಯೆ ಮಾಡಿಕೊಳ್ಳುವುದು. ಮೂರನೆಯ ಉಪಾಯ ವಿರಲಿಲ್ಲ.

ಅಂತೆಯೆ, ಮೊದಲನೆಯ ಉಪಾಯವನ್ನೆ ಅವಲಂಬಿಸಬೇಕಾಗಿ ಬಂದಿತ್ತು.

ಮುಲ್ಕೀ ಪರೀಕ್ಷೆಯ ಪರಿಣಾಮ ತಿಳಿಯುತ್ತಲೂ ಹಳ್ಳಿಯಿಂದ ಹೊರಟು ಬಿಡುವ ಯೋಚನೆಯಿತ್ತು. ಸಾಂಬಯ್ಯ ಮಾಸ್ತರರಿಂದ ಎರಡು ಮೂರು ಪತ್ರ ಬಂದಿದ್ದುವು. ಒಡನೆಯೆ ನಗರಕ್ಕೆ ಬಂದರೆ ಸರಕಾರದ ವಿದ್ಯಾರ್ಥಿ ನಿಲಯದಲ್ಲಿ ಸ್ಥಳ ಕೊಡಿಸಿ ಹೈಸ್ಕೂಲಿಗೆ ಸೇರಿಸುವುದಾಗಿ ಅವರು ಬರೆದಿದ್ದರು. ಇಷ್ಟಕ್ಕೇ ವಿದ್ಯಾಭ್ಯಾಸ ನಿಲ್ಲಿಸದೆ ಮುಂದೆ ಓದಬೇಕೆಂದೂ ಪದವೀಧರನಾಗಿ ಸಮಾಜಕ್ಕೂ ದೇಶಕ್ಕೂ ಸೇವೆ ಸಲ್ಲಿಸಬೇಕೆಂದೂ ಅವರು ಒತ್ತಾಯಪಡಿಸಿದ್ದರು. ಇಂಗ್ಲೀಷು ಕಲಿಯುವ ಅಪೇಕ್ಷೆ ತನಗೂ ಇದ್ದಿತಾದರೂ ಆಗ ತಾಯಿಗೆ ವಿಪರೀತ ಕಾಹಿಲೆಯಿದ್ದುದರಿಂದ ಅವಳನ್ನು ಆ ಸ್ಥಿತಿಯಲ್ಲಿ ಬಿಟ್ಟು ನಗರಕ್ಕೆ ಹೊರಡುವುದು ಸಾಧ್ಯವೇ ಇರಲಿಲ್ಲ. ಆ ವಿಚಾರವನ್ನು ಮಾಸ್ತರರಿಗೆ ತಿಳಿಸಿದಾಗ, ಇಂಗ್ಲಿಷಿಗಿಂತ ತಾಯಿ ಹೆಚ್ಚಿನವಳು, ಅವಳಿಗೆ ಪೂರ್ಣ ಗುಣವಾದ ತರುವಾಯವೇ ಬರಬೇಕೆಂದು ಅವರು ಉತ್ತರ ಬರೆದಿದ್ದರು. ಆ ವರ್ಷ ನಗರಕ್ಕೆ ಹೋಗುವುದಾಗಿರಲಿಲ್ಲ. ಮರುವರ್ಷ ಮತ್ತೆ ತಾನು ಸಾಂಬಯ್ಯ ಮಾಸ್ತರರಿಗೆ ಬರೆದಿದ್ದ. ಅವರಿಂದ ಉತ್ತರ ಬರಲು ಬಹಳ ವಿಲಂಬವಾಗಿತ್ತು. ಹಿಂದಿನ ವರ್ಷದ ಪತ್ರದಲ್ಲಿ ಕಂಡು ಬರುತ್ತಿದ್ದ ಉತ್ಸಾಹ ಈ ವರ್ಷದ ಅವರ ಪತ್ರದಲ್ಲಿ ಕಾಣಿಸಿಕೊಂಡಿರಲಿಲ್ಲ.

"ಬಾ. ನೋಡೋಣ. ಏನಾದರೂ ಪ್ರಯತ್ನಪಟ್ಟರಾಯಿತು. ಇಲ್ಲಿ ನನಗೂ ಮೈಯಲ್ಲಿ ಸರಿಯಿಲ್ಲ. ಮನಸ್ಸಿಗೂ ಸರಿಯಿಲ್ಲ," ಎಂದು ಬರೆದಿದ್ದರವರು.

ಅದೇ ವೇಳೆಗೆ ತಾಯಿಗೆ ಮತ್ತೆ ಜ್ವರ ಮರುಕಳಿಸಿದ್ದಿತಾದುದರಿಂದ ಗೊಬ್ಬೂರಿಗೆ ಹೋಗುವುದು ತಪ್ಪಿಹೋಗಿತ್ತು. ಪೊಚ್ಚೆಯ ಕಾಯಕದಿಂದ

ಅಲ್ಪಸ್ವಲ್ಪ ಸಂಪಾದನೆ ಮಾಡುತ್ತ ತಾಯಿಯ ಶುಶ್ರೂಷೆ ಮಾಡುವುದು ತನ್ನ ಕರ್ತವ್ಯ ಕರ್ಮವಾಗಿತ್ತು.

ಈಚೆಗೆ ಮೂರು ನಾಲ್ಕು ತಿಂಗಳುಗಳಿಂದ ತಾಯಿಗೆ ಜ್ವರ ನಿಂತು ಹೋಗಿತ್ತು. ಮೈಯಲ್ಲಿ ಶಕ್ತಿಯಿರಲಿಲ್ಲ, ನಿಜ. ಆದರೂ, ಜ್ವರವಿರಲಿಲ್ಲವಲ್ಲ. ಅದೊಂದು ಸಮಾಧಾನದ ವಿಷಯ.

ಅವಳಿಗೆ ಏನನ್ನೂ ತಿಳಿಸದೆ ತಾನು ಮನೆಬಿಟ್ಟು ಬಂದುದರಿಂದ ಅವಳು ಎದೆಯೊಡೆದುಕೊಂಡು ಮತ್ತೆ ಹಾಸಿಗೆ ಹಿಡಿದರೆ?

ಹಾಗೇನಾದರೂ ಆಗಬಹುದೇ?

ಅಸ್ವಸ್ಥ ಮನಸ್ಸಿನಿಂದ ಮಹಾದೇವ ಅತ್ತ ಇತ್ತ ಹೊರಳಿದ. ಡಬ್ಬಿಯಲ್ಲಿ ಹೆಚ್ಚು ಜನ ಪ್ರಯಾಣಿಕರಿರಲಿಲ್ಲ. ಇದ್ದ ಕೆಲವರು ಬೆಂಚುಗಳ ಮೇಲೆ ಮಲಗಿ ಗೊರಕೆ ಹೊಡೆಯುತ್ತಿದ್ದರು. ಎದುರಿನ ಮೂಲೆಯಲ್ಲಿ ಭಿಕ್ಷುಕಿಯೊಬ್ಬಳು ಮುದುಡಿ ಕುಳಿತುಕೊಂಡು ತನ್ನ ಎಳೆ ಮಗುವಿಗೆ ಮೊಲೆ ಯುಣ್ಣಿಸುತ್ತಿದ್ದಳು. ಅವಳು ದೃಷ್ಟಿಗೆ ಬೀಳುತ್ತಲೂ ಮಹಾದೇವನ ಬಗೆ ಗಣ್ಣುಗಳ ಮುಂದೆ ತನ್ನ ತಾಯಿಯ ಮುಖ ಮೂಡಿದಂತಾಯಿತು. ತನ್ನ ತಾಯಿ! ಅವಳ ಮೊಲೆ ಹಾಲು ಕುಡಿದು ತಾನು ದೊಡ್ಡವನಾದುದು.... ತಂದೆಯ ಮೃತ್ಯುವಿನ ತರುವಾಯ ಎಷ್ಟು ಕಷ್ಟಗಳು ಬಂದರೂ ಲೆಕ್ಕಿಸದೆ ತನ್ನನ್ನವಳು ಶಾಲೆಗೆ ಕಳುಹಿಸಿದುದು....ರಾತ್ರಿಯೆಲ್ಲ ಚಿಮಣಿ ದೀಪವನ್ನುರಿ ಸುತ್ತ ಕುಳಿತು ಮೊಚ್ಚೆ ಹೊಲಿದು ತನ್ನನ್ನು ಸಲಹಿದುದು....

ಮುಖವನ್ನು ಕಂಬಳಿಯಲ್ಲಿ ಮುಚ್ಚಿಕೊಂಡ ಮಹಾದೇವ. ಎಷ್ಟು ತಡೆದರೂ ಬಿಡದೆ ಆವನ ಕಂಠದಿಂದ ಅಳುವುಕ್ಕಿ ಬಂದಿತು. ತನಗಾಗಿ ಸಾವಿರ ಸಂಕಷ್ಟಗಳನ್ನೆದುರಿಸಿ ತನ್ನನ್ನಿಷ್ಟು ದೊಡ್ಡವನನ್ನಾಗಿ ಮಾಡಿದ ತಾಯಿ ಯಿಂದು ದುರ್ಬಲ ಸ್ಥಿತಿಯಲ್ಲಿರುವಾಗ ತಾನು ಅವಳನ್ನು ಬಿಟ್ಟು ಹೊರಟಿ ದ್ದಾನೆ. ತನ್ನನ್ನು ಬಿಟ್ಟರೆ ಬೇರಾರಿದ್ದಾರೆ ಅವಳಿಗೆ? ಅವಳು ಬದುಕಬೇಕಾದು ದಾದರೂ ಯಾರಿಗಾಗಿ?

ಗೊಬ್ಬೂರಿಗೆ ಹೋಗುವ ವಿಚಾರವನ್ನು ತ್ಯಜಿಸಿ ಊರಿಗೆ ಹಿಂದಿರುಗಿ ಬಿಡಲೇ?

ಛೆ. ಹೊರಟುಬಂದುದಂತೂ ಆಗಿದೆ. ಈಗ ಮತ್ತೆ ಮನಸ್ಸನ್ನು ದುರ್ಬಲಗೊಳಿಸಬಾರದು. ಒಂದು ಗುರಿಯನ್ನರಸಿಕೊಂಡು ಗೊಬ್ಬೂರಿಗೆ ನಡೆದುದಾಗಿದೆ. ಅದನ್ನು ಸಾಧಿಸುವವರೆಗೂ ಹಿಂದಿರುಗಕೂಡದು.

ಗೊಬ್ಬೂರು ನಿಲ್ದಾಣದಲ್ಲಿ ರೈಲು ನಿಂತಾಗ ಬೆಳಗಿನ ಐದು ಗಂಟೆಯ ಸಮಯ. ಆ ನಗರ ಅವನಿಗೆ ಅಪರಿಚಿತವಾದುದು. ಆತ ಅಲ್ಲಿಗೆ ಬರುತ್ತಿದ್ದುದು ಅದೇ ಮೊದಲ ಬಾರಿ. ಟಿಕೆಟ್ಟು ಕೊಟ್ಟು ನಿಲ್ದಾಣದ ಹೊರಗಡೆ ಬಂದ. ಬೆಳಗಿನ ತಂಪು ಗಾಳಿಯಿಂದ ದೇಹವೆಲ್ಲ ಕಂಪಿಸತೊಡಗಿತು. ಕಂಬಳಿಯನ್ನು ಬಿಗಿಯಾಗಿ ಹೊದೆದುಕೊಂಡು ವಿರಾಮತಾಣಕ್ಕೆ ಬಂದ. ಅಲ್ಲಿದ್ದ ಬೆಂಚುಗಳ ಮೇಲೆಲ್ಲ ಪ್ರಯಾಣಿಕರು ವಿರಮಿಸುತ್ತಿದ್ದರಲ್ಲದೆ ನೆಲದ ಮೇಲೂ ಜನ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದಿತು. ಹರಕು ಅಂಗಿ ಹಾಕಿಕೊಂಡ ಹುಡುಗರಿಬ್ಬರು ಒಂದು ಮೂಲೆಯಲ್ಲಿ ಮುದುಡಿ ಕುಳಿತು ಕೈಗಳನ್ನು ಎದೆಯ ಸುತ್ತ ಬಿಗಿದುಕೊಂಡು ಚಳಿಯಿಂದ ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದರು. ಗೋಡೆಗೊರಗಿ ಕುಳಿತುಕೊಂಡಿದ್ದ ಮುದುಕನೊಬ್ಬ ಬೀಡಿಯ ಹೊಗೆ ಕಾರುತ್ತ ಭಯಂಕರವಾಗಿ ಕೆಮ್ಮುತ್ತಿದ್ದ. ಬಲಗಡೆಯ ಚಹದಂಗಡಿಯ ಮುಂದೆ ನಿಂತು ಭಿಕ್ಷುಕನೊಬ್ಬ "ಸ್ವಲ್ಪ ಚಾ ಕೊಡ್ರೀ ರಾಯರs," ಎಂದು ದೀನಸ್ವರದಲ್ಲಿ ಬೇಡುತ್ತಲಿದ್ದ.

ಒಂದು ಕಡೆ ಕುಳಿತುಕೊಂಡು ಮಹಾದೇವ ತನಗೆ ತಾನೆ ಕೇಳಿಕೊಂಡ:

"ಎಂಥಾ ಬಡತನ....ಎಂಥಾ ಗೋಳು. ನಮ್ಮ ಹರಿಜನ ಕೇರಿಯಲ್ಲಷ್ಟೇ ಯಾಕೆ, ಎಲ್ಲಾ ಕಡೆಗೂ ಅದೇ ಸಂಕಟ....ಇದೆಂದು ಹೋದೀತು? ಅದಕ್ಕಾಗಿ ನನ್ನಿಂದೇನಾದೀತು?"

"ನಡಿಯಲೇ ಬದಮಾಷ್. ಇನ್ನೂ ಬೆಳಗಾಗಿಲ್ಲ. ಆಗಲೇ ನಿನ್ನ ಕಾಟ ಸುರುವಾತು," ಚಹ ಬೇಡುತ್ತಲಿದ್ದ ಭಿಕ್ಷುಕನನ್ನು ಗದರಿಸುತ್ತಿದ್ದ ಚಹದಂಗಡಿಯವ.

ನಿದ್ದೆಯ ಅಭಾವದಿಂದ ಜಡವಾಗಿದ್ದ ಕಣ್ಣುಗಳನ್ನು ಆ ಭಿಕ್ಷುಕನ ಕಡೆ ತಿರುಗಿಸುತ್ತ ಮಹಾದೇವ ಹೇಳಿಕೊಂಡ:

"ಈ ಭಿಕಾರಿತನ ತಪ್ಪಿಸೂದು ಹೆಂಗ?"

ಬೆಳಗಾಗುತ್ತಲೂ ನಿಲ್ದಾಣವನ್ನು ತ್ಯಜಿಸಿ ಹರಿಜನ ನಿಲಯವನ್ನು ಹುಡುಕಿಕೊಂಡು ಹೊರಟ. "ಹರಿಜನ ನಿಲಯ ಎಲ್ಲೈತಿರೀ?" ಎಂದು ಅವನು ಕೇಳುತ್ತಲೂ ಜನರು ಅವನ ಮುಖವನ್ನೆ ಮಿಕಿಮಿಕಿ ನೋಡಿ, "ನೀನೂ ಹರಿಜನನೇನು?" ಎಂದು ಪ್ರಶ್ನಿಸುತ್ತಿದ್ದರು. ಆತ "ಹೌದ್ರೀ," ಎನ್ನುತ್ತಲೂ ಥಟ್ಟನೆ ದೂರ ಸರಿದು ಹಾದಿಯನ್ನು ತೋರಿಸಿ ಹೊರಟು ಬಿಡುತ್ತಿದ್ದರು.

ನಗರದ ಹೊರಭಾಗದಲ್ಲಿ ಮರಡಿಯೊಂದರ ಕೆಳಗಡೆ ಹಳೆಯ ಕಾಲದ ಕಟ್ಟಡವೊಂದರಲ್ಲಿ ಹರಿಜನ ನಿಲಯ ನೆಲೆಯೂರಿತ್ತು. ಸುತ್ತಲೂ ಗಿಡಗಳ ಗುಂಪು. ಪಕ್ಕದಲ್ಲೊಂದು ಬಾವಿ.

ಮಹಾದೇವ ನಿಲಯದ ಬಳಿ ಬಂದಾಗ ಆ ಬಾವಿಯ ಮೇಲೆ ನೀರು ಸೇದುತ್ತ ನಿಂತಿದ್ದ ಹದಿನೈದು ವರ್ಷದ ಹುಡುಗಿಯೊಬ್ಬಳು ಅವನನ್ನು ಕಂಡು ಕೇಳಿದಳು:

"ಏನಪಾ, ಯಾರು ಬೇಕು ನಿನಗ?"

ಕಪ್ಪು ಅಂಚಿನ, ಕಂದು ಬಣ್ಣದ ಅಗ್ಗದ ಸೀರೆಯೊಂದನ್ನುಟ್ಟು ಮೊಳಕೈವರೆಗೆ ಬರುವ ಕುಬುಸ ಧರಿಸಿದ್ದ ಎಣ್ಣೆಗೆಂಪು ಬಣ್ಣದ ಆ ಹುಡುಗಿಯೂ ತನ್ನ ಹಾಗೆ ಹೊಲೆಯರವಳೇ ಆಗಿರಬಹುದೆಂದುಕೊಳ್ಳುತ್ತ ಮಹಾದೇವನೆಂದ:

"ಇಲ್ಲಿ ಸಾಂಬಯ್ಯ ಮಾಸ್ತರು ಅಂತ ಅದಾರಲ್ಲಾ...."

ಕೊಡವನ್ನು ಜಗ್ಗಿ ಬಾವಿಯ ಕಟ್ಟೆಯ ಮೇಲಿಡುತ್ತ ಆ ಹುಡುಗಿ ಅವನನ್ನು ತಲೆಯಿಂದ ಕಾಲುಗಳವರೆಗೆ ದಿಟ್ಟಿಸಿ ನೋಡಿ ಕೇಳಿದಳು:

"ಅವರೇನಾದರೂ ಆಗಬೇಕೇನು ನಿನಗ?"

"ಇಲ್ಲವ್ವ. ನಾ ಹೊಲೆಯರವ."

ಅವಳ ಮುಗ್ಧನೇತ್ರಗಳಲ್ಲಿ ಹರುಷದ ಮಿಂಚು ಹರಿದಾಡಿದಂತಾಯಿತು. ಕೊಡವನ್ನೆತ್ತಿ ಸೊಂಟದ ಮೇಲಿಟ್ಟುಕೊಳ್ಳುತ್ತ ಅವಳೆಂದಳು:

"ಹಿಂಗೇನು? ಹೆಂಗಾದರ ನೀನೂ ನಮ್ಮ ಪೈಕಿಯವನೇ ಆದಂಗಾತು. ಸಾಂಬಯ್ಯ ಮಾಸ್ತರದು ಬಹಾಳ ಗುರುತೇನು?"

"ಹೌದವ್ವ. ಅವರು ನನ್ನ ಗುರುಗಳು. ನಮ್ಮೂರಾಗ...." ಎಂದು ಅವನು ಹೇಳುತ್ತಿದ್ದಂತೆಯೆ ನಿಲಯದ ಕಿಟಕಿಯೊಂದರಿಂದ ದನಿ ಕೇಳ ಬಂದಿತು. "ನೀರು ತರೂದು ಬಿಟ್ಟು ಯಾರ ಸಂಗಡ ಹರಟೆ ಬಡೀತಾ ನಿಂತೀಯೇ ಕಸ್ತೂರೀ?"

ಹದ್ದು ಕಂಡ ಹಾವಿನಂತೆ ಬೆದರಿ ಮಹಾದೇವನನ್ನು ಅಂಗಳದಲ್ಲಿಯೆ ಬಿಟ್ಟು ಆವಸರದಿಂದ ನಡೆದುಹೋದಳು ಕಸ್ತೂರಿ. ಆ ದನಿಯನ್ನು ಕೇಳಿ ಅವನಿಗೂ ಹೆದರಿಕೆಯಾಗದಿರಲಿಲ್ಲ.

ಖಾದಿಯ ಬಿಳಿ ಸೀರೆಯುಟ್ಟಿದ್ದ, ಗೌರಕಾಯದ ನಡುವಯದ, ಉಗ್ರ ಮುಖದ ಮಹಿಳೆಯೊಬ್ಬಳು ಬಾಗಿಲಿಗೆ ಬಂದು ಮಹಾದೇವನನ್ನು ತೀಕ್ಷ್ಣ ದಿಟ್ಟಿಯಿಂದ ನಿಟ್ಟಿಸುತ್ತ ಕರ್ಕಶ ಸ್ವರದಲ್ಲಿ ಕೇಳಿದಳು:

"ಯಾರೋ ನೀ? ಯಾತಕ್ಕ ಬಂದಿದ್ದಿ ಇಲ್ಲಿ?"

ಆತ ಹೆದರಿ, ಎರಡು ಹೆಜ್ಜೆ ಹಿಂದೆ ಸರಿದು ನಿಂತು ಅಂಜುತ್ತ ಅಂಜುತ್ತ ಹೇಳಿದ:

"ನಾ...ನಾ....ನನ್ನ ಹೆಸರು ಮಹಾದೇವ. ಸಾಂಬಯ್ಯ ಮಾಸ್ತರನ್ನ ಭೆಟ್ಟಿಯಾಗಬೇಕಂತ ಬಂದಿದ್ದಿನಿ."

ಅವಳು ಹುಬ್ಬುಗಳನ್ನು ಗಂಟುಹಾಕಿ ಕೇಳಿದಳು:

"ಅವರನ್ನ ಯಾಕ ಭೆಟ್ಟಿಯಾಗಬೇಕು?"

"ಅವರು....ಅವರು ನನ್ನ ಗುರುಗಳು. ಭೆಟ್ಟಿಯಾಗಬೇಕಂತ...."

"ಅವರು ಊರೊಳಗಿಲ್ಲ. ಆಮೇಲೆ ಬಾ ಹೋಗು," ಎಂದು ಆಕೆ ಒಳಗಡೆ ಹೋಗುತ್ತಿದ್ದ ಹಾಗೆ ಆಗತಾನೆ ಎದ್ದು ಹಲ್ಲುಜ್ಜಿಕೊಳ್ಳುತ್ತಿದ್ದ ಚೆನ್ನಪ್ಪ "ಏನೇ, ಯಾರವರು?" ಎನ್ನುತ್ತಾ ಬಾಗಿಲಿಗೆ ಬಂದು ಮಹಾದೇವನನ್ನು ಕಂಡು, "ಯಾರಪಾ ನೀನು?" ಎಂದು ಕೇಳಿದ. ಮಹಾದೇವ ಹೇಳಿದುದನ್ನು ಕೇಳಿಕೊಂಡ ಬಳಿಕ, "ಹಿಂಗೇನು? ಬಾ ಒಳಗಡೆ. ಮಾಸ್ತರರು ನಾಳೆ ನಾಡದು ಬರುತಾರ," ಎಂದು ಹೇಳಿದ.

ಮತ್ತೆ ಆ ಉಗ್ರಮುಖದ ದೇವಿಯ ದರ್ಶನವೆಲ್ಲಿ ಆಗುತ್ತದೆಯೊ ಎಂದು ಹೆದರುತ್ತಲೇ ಮಹಾದೇವ ನಿಲಯದಲ್ಲಿ ಅಡಿಯಿರಿಸಿದ. ಕಟ್ಟಡ ಸಾಕಷ್ಟು ದೊಡ್ಡದಾದುದು. ಎಡಬಲಗಳಲ್ಲಿ ಉದ್ದಕ್ಕೂ ಎರಡು ಕೈಸಾಲೆಗಳಿದ್ದುವು. ಅಲ್ಲಿ ಅನಾಥ ಬಾಲಿಕೆಯರು ಚಾಪೆ ಹಾಸಿಕೊಂಡು ಓದುತ್ತಲಿದ್ದರು. ಐದು ವರ್ಷಗಳ ಮಕ್ಕಳಿಂದ ಮೊದಲುಮಾಡಿಕೊಂಡು ಹದಿನೈದು ವರ್ಷಗಳ ಹುಡುಗಿಯರವರೆಗೆ ಸುಮಾರು ನಲವತ್ತು ಜನ ಅನಾಥೆಯರು ಅಲ್ಲಿ ಆಶ್ರಯ ಪಡೆದಿದ್ದರು. ಅವರಲ್ಲಿ ಪ್ರತಿಯೊಬ್ಬರ ಮುಖದ ಮೇಲೂ ಭಯ ಸ್ಪಷ್ಟವಾಗಿ ಎದ್ದು ಕಾಣುತಿತ್ತು. ಆ ಉಗ್ರಮುಖದ ಮಹಾತಾಯಿ ಅವರನ್ನೆಲ್ಲ ಉಕ್ಕಿನ ಶಿಸ್ತಿನಿಂದ ಆಳುತ್ತಿದ್ದುದು ಒಡೆದು ಕಾಣುತ್ತಿತ್ತು.

ಎರಡು ಕೈಸಾಲೆಗಳ ಮಧ್ಯೆಯಿದ್ದ ಕೊಟಡಿಗಳಲ್ಲಿ ನಿಲಯದ ಸಂಚಾಲಕ ರಾದ ಚೆನ್ನಪ್ಪನವರು ತಮ್ಮ ಸಂಸಾರದೊಡನೆ ನೆಲಸಿದ್ದರು. ಮುಂದಿನ ಕೊಟಡಿಯೊಂದರಲ್ಲಿ ನಿಲಯದ ಕಚೇರಿಯಿತ್ತು. ಎಲ್ಲಕ್ಕೂ ಹಿಂದೆ ಅಡುಗೆ ಮನೆ, ಉಗ್ರಾಣ, ಸ್ನಾನದ ಮನೆಗಳಿದ್ದುವು.

ಮುಖ ತೊಳೆದುಕೊಂಡು ಬಂದವರೆ ಚೆನ್ನಪ್ಪ ಮಹಾದೇವನೊಡನೆ ಮಾತಿಗಾರಂಭಿಸಿದರು :

" ಸಾಂಬಯ್ಯ ಮಾಸ್ತರರಂತೂ ಊರಿಗೆ ಹೋಗಿದ್ದಾರ. ಇನ್ನೇನು ಮಾಡುವವ ನೀನು ?"

ಆ ಪ್ರಶ್ನೆಗೆ ಮಹಾದೇವ ಏನೆಂದು ಉತ್ತರವೀಯಬಲ್ಲ ? ತಾನೇನನ್ನು ಮಾಡುವವನೆಂಬುದು ಅವನಿಗೇ ತಿಳಿಯದು. ಸಾಂಬಯ್ಯ ಮಾಸ್ತರರನ್ನು ಭೆಟ್ಟಿಯಾದರೆ ಮುಂದಿನ ದಾರಿ ಕಾಣಿಸಬಹುದೆಂದು ಎಣಿಸಿಕೊಂಡು ಆತ ಗೊಬ್ಬೂರಿಗೆ ಬಂದಿದ್ದುದು. ಈಗ ಅವರೇ ಇಲ್ಲ....

" ಯಾತಕ್ಕಾಗಿ ಬಂದಿದ್ದಿಯಪಾ ಈ ಊರಿಗೆ ?"

" ಇಂಗ್ಲಿಷ್ ಸಾಲಿಗೆ ಹೋಗಬೇಕಂತ ಮಾಡಿದ್ದೀನ್ರಿ. ಸಾಂಬಯ್ಯ ಮಾಸ್ತರು ಪತ್ರ ಬರೆದಿದ್ದರು."

" ಹೀಗೆ ಅಡ್ಡ ವೇಳೆಯಲ್ಲಿ ಬಂದರ ಸಾಲಿಗೆ ಹೋಗೂದಾದರೂ ಹೆಂಗ ? ಜೂನ್ ತಿಂಗಳಲ್ಲಾದರೂ ಬಂದಿದ್ದರ ಆಗುತಿತ್ತು."

"ಹೌದ್ರೀ. ಆಗs ಬರಬೇಕಾಗಿತ್ತು. ಆಗಲಿಲ್ಲ. ಇನ್ನು ಮುಂದಿನ ಜೂನ್ ತಿಂಗಳ ತನಕ ಇಲ್ಲೇ ಏನಾದರೂ ಕೆಲಸಾ ಮಾಡಿಕೊಂಡು ಇರ ಬೇಕಂತ ಬಂದಿದ್ದಿನಿ."

ಚೆನ್ನಪ್ಪ ಗಟ್ಟಿಯಾಗಿ ನಗುತ್ತಾ-"ಕೆಲಸ! ಬಿ. ಎ. ಎಂ. ಎ. ಗಳಿಗೆ ಕೆಲಸ ಸಿಗೂದು ಕಷ್ಟ. ಇನ್ನು ನಿನ್ನಂಥ ಹುಡುಗಗ ಕೆಲಸ ಯಾರು ಕೊಡಬೇಕೋ? ಹೂಂ. ನೀನು ಮಾಡುವ ಕೆಲಸ ಆದರೂ ಏನು, ಹೇಳು ನೋಡೋಣ," ಎಂದರು.

"ನಮ್ಮ ಕುಲದ ಕಸಬು ನಾ ಚನ್ನಾಗಿ ಮಾಡುತೀನಿ ಅಣ್ಣಾವರೆ."

"ಕುಲದ ಕಸಬು!" ಎಂದು ನುಡಿದು ಮತ್ತೆ ಗಹಗಹಿಸಿ ನಕ್ಕರು ಚೆನ್ನಪ್ಪ. "ಕುಲದ ಕಸಬು ಅಂದಿಯಾ? ಹಾಂಗ ಇನ್ನೊಮ್ಮೆ ಯಾರ ಮುಂದೂ ಅನ್ನಬ್ಯಾಡಪಾ. ಕಸಬು ಅಂದ ಕೂಡಲೆ ತಪ್ಪು ತಿಳಕೊಂತಾರ ಎಲ್ಲರೂ. ಹ ಹ ಹ ಹ ಹ್ಹ..."

"ಕಸಬು ಅಂದರ ಮೊಚ್ಚೆ ಹೊಲಿಯೂದು...."

"ಹಿಂಗ ಹೇಳಪಾ ಸರಳವಾಗಿ. ಅಂತೂ ಒಂದು ಕೆಲಸ ಆದರೂ ಕಲಿತಿದ್ದೀ ಅನ್ನು. ಪ್ರಯತ್ನಮಾಡಿ ನೋಡು ಹಂಗಾದರ. ಊರಾಗ ಹತ್ತಿಪ್ಪತ್ತು ಮೊಚ್ಚೆ ಅಂಗಡಿ ಅದಾವು. ಹೋಗಿ ಕೇಳಿನೋಡು," ಎಂದು ಹೇಳಿ ಅವರು ಎದ್ದುಬಿಟ್ಟರು.

೨೦

" ಜಯಭಾರತ ಚಪ್ಪಲ್ ಕಂಪನಿ
ಮಾಲಕರು :
ಬಿ. ಎಸ್. ಇಂಚಲ "

ಅಂಗಡಿಯೆದುರಿಗೆ ನೇತಾಡುತ್ತಿದ್ದ ಆ ದೊಡ್ಡ ಬೋರ್ಡು, ಅಂಗಡಿಯೊಳಗಡೆ ಗೋಡೆಗೆ ನೇತುಹಾಕಿದ್ದ ಬಣ್ಣ ಬಣ್ಣಗಳ ಬೇರೆ ಬೇರೆ ಮಾದರಿಗಳ ಬೇರೆ ಬೇರೆ ಆಕಾರಗಳ ಚಪ್ಪಲಿಗಳು, ಪಾಲಿಷ್‌ನಿಂದ ಮಿರುಗುವ ಬೂಟುಗಳು, ಕೆಳಗೆಡೆ ಸಾಲಾಗಿ ಕುಳಿತುಕೊಂಡು ಯಂತ್ರಗಳ ಹಾಗೆ ಚರ್ಮದ ಕೆಲಸದಲ್ಲಿ ತೊಡಗಿದ್ದ ಆಳುಗಳು, ಅವರ ಪಕ್ಕದಲ್ಲಿದ್ದ ಹೊಲಿಗೆಯ ಯಂತ್ರ, ಅಂಗಡಿಯ ನಡುವೆ ಇರಿಸಿದ್ದ ಮೇಜಿನ ಬಳಿ ಕುರ್ಚಿಯ ಮೇಲೆ ಕುಳಿತು ಆಳುಗಳ ಕೆಲಸದ ಮೇಲೆ ದೃಷ್ಟಿಯಿರಿಸಿದ್ದ ಮಾಲೀಕ, ಅವನು ತೊಟ್ಟಿದ್ದ ಅಚ್ಚ ಬಿಳಿಯ ಬಣ್ಣದ ಅಂಗಿ, ಉಟ್ಟಿದ್ದ ತೆಳ್ಳನೆಯ ಧೋತರ, ಎಣ್ಣೆ ಹಚ್ಚಿ ಬಾಚಿದ್ದ ಕ್ರಾಪು ಕೂದಲು, ರಕ್ತವೇರಿ ಕೆಂಪಗಾಗಿದ್ದ ಅವನ ಕಣ್ಣು - ಎಲ್ಲವೂ ಮಹಾದೇವನನ್ನು ಗಾಬರಿಗೀಡುಮಾಡಿದುವು. ಆದರೂ ಧೈರ್ಯ ತಂದುಕೊಂಡು ಅಂಗಡಿಯ ಕಟ್ಟೆಯನ್ನೇರಿ ಬಂದು ಮಾಲೀಕನಿಗೆ ನಮಸ್ಕಾರಮಾಡಿ ನುಡಿದ:

" ನನಗೊಂದು ಕೆಲಸ ಕೊಡ್ತೀರಾ ಸಾವುಕಾರರೆ ?"

ತಲೆ ತಗ್ಗಿಸಿಕೊಂಡು ಚರ್ಮ ಹೊಲಿಯುತಿದ್ದ ಮೂವರು ಆಳುಗಳೂ ದೃಷ್ಟಿಯೆತ್ತಿ ಹೊಸಬನನ್ನು ನಿಟ್ಟಿಸಿ ನೋಡಿದರು. ಅವರ ತುಟಿಗಳ ಮೇಲೆ ಮುಗಳ್ನಗೆ ಮೂಡಿ ಮಾಯವಾಯಿತು.

ಮಾಲೀಕ ಕೇಳಿದ: "ಏನು ಕೆಲಸ ಬರುತ್ತೈತಿ ನಿನಗ?"

"ಮೊಚ್ಚೆ ಹೊಲೀತೀನಿ ಅಣ್ಣಾವರೆ."

"ಮೊಚ್ಚೆ ಅಂದರ ಹಳ್ಳಿಯ ಮೊಚ್ಚೆ ಹೌದಲ್ಲೋ?"

"ಹೌದ್ರೀ."

"ಅವನ್ನ ತಗೊಂಡು ನಾವೇನ ಮಾಡೂಣು? ಇದು ಪಟ್ಟಣ. ಇಲ್ಲಿಯವರಿಗೆ ಫ್ಯಾಶನೆಬಲ್ ಚಪ್ಪಲು ಬೇಕು, ಬೂಟು ಬೇಕು."

"ತಿಂಗಳೊಪ್ಪತ್ತಿನಾಗ ಅವನ್ನು ತಯಾರಿಸುವುದಕ್ಕೂ ಕಲಿತು ಕೋತೀನಿರಿ."

"ಕಲಿತುಕೊಳ್ಳೂವದಕ್ಕ ನಾವೇನು ಇಲ್ಲಿ ಸಾಲೀ ಇಟ್ಟಿಲ್ಲ. ಏನೂ ಬ್ಯಾಡ, ನಡೀ," ಎಂದ ಮಾಲೀಕ.

ಮೊದಲನೆಯ ಅಂಗಡಿಯಲ್ಲಿಯೆ ನಿರಾಶನಾದ ಮಹಾದೇವ ಮುಂದಿನ ಅಂಗಡಿಗಳಲ್ಲೂ 'ಕೆಲಸವಿಲ್ಲ'ವೆಂಬ ಮಾತನ್ನೇ ಕೇಳಬೇಕಾಗಿ ಬಂದಿತು. "ಈಗ ಇರುವ ಆಳುಗಳಿಗೇ ಕೆಲಸವಿಲ್ಲ ಸಾಕಷ್ಟು" ಎಂದು ಕೆಲವರು, "ಜನರು ಕಾನಪುರ ಆಗ್ರಾ ದಿಲ್ಲಿಗಳ ನಾಜೂಕು ಚಪ್ಪಲು ಬೇಡುತಾರ. ನಾವು ಅಲ್ಲಿಂವಲೇ ತರಿಸಿ ಮಾರುತೀವಿ. ಅಂಗಡಿಯೊಳಗ ತಯಾರಿ ಮಾಡೂದಿಲ್ಲ," ಎಂದು ಕೆಲವರು, "ಈಗ ಚಪ್ಪಲಿ ವ್ಯಾಪಾರವೇ ಇಲ್ಲಪ್ಪ," ಎಂದು ಹಲವರು ಹೇಳಿದರು.

ಒಂದು ಅಂಗಡಿಯವ ಕೊಂಚ ದಯಾರ್ದ್ರ ಹೃದಯದವನಾಗಿದ್ದಂತೆ ಕಾಣಿಸಿತು. ಮಹಾದೇವನ ಎಳೆಯ ವಯಸ್ಸನ್ನು ಗುರುತಿಸಿ, ಅವನ ಇತಿಹಾಸ ವನ್ನೆಲ್ಲ ಕೇಳಿ ತಿಳಿದುಕೊಂಡು ಆತ ಹೇಳಿದ:

"ಸಾಲೀ ಕಲಿಯೂವದಕ್ಕ ಬಂದವ ನೀ ಕೆಲಸಾ ಹುಡುಕುತಾ ಹೋಗ ಬಾರದಪ್ಪ. ನಮ್ಮ ಜಾತಿಯವರೂ ಸಾಲಿ ಕಲಿತು ಮುಂದ ಬರೂದು ಅವಶ್ಯ ಐತಿ. ಇಲ್ಲೇ ಒಂದು ಅನಾಥಾಶ್ರಮ ಐತಲ್ಲ. ಅಲ್ಲಿಗ್ಯಾಕ ಹೋಗ ಬಾರದು ನೀ?"

"ಈ ಊರಿಗೆ ನಾ ಬಂದದ್ದು ಇದs ಮೊದಲನೇ ಸಾರಿ. ನನಗೇನೂ ಗೊತ್ತಿಲ್ಲರಿ."

"ಹೀಂಗs ನೆಟ್ಟಗ ಹೋಗಿ ಎಡಗಡೆ ಸಂದಿಯೊಳಗ ತಿರುಗಿ ಸ್ವಲ್ಪ ದೂರ ಹೋದರ ಬಲಗಡೆ ಬೋರ್ಡ್ ಕಾಣಿಸುತ್ತೈತಿ. ಅನಾಥಾಶ್ರಮ ಅಂತ. ಹೋಗಿ ಚೌಡೇಶ್ವರರನ್ನ ಭೆಟ್ಟಿಯಾಗಿ ಎಲ್ಲಾ ಹೇಳಿಕೋ. ನಿನ್ನ ಅವರು ಕರಕೋಬಹುದು."

"ಸಾಲಿ ಸುರುವಾಗೂದಕ್ಕ ಇನ್ನೂ ಆರು ತಿಂಗಳೈತಲ್ಲರಿ? ವರ್ಷದ ನಡುವೆ ಕರಕೊಳ್ಳುವದಿಲ್ಲಂತೆ. ಅವಕ್ಕೇ ಏನಾರ ಕೆಲಸ ಮಾಡಬೇಕಂತ ನಾ ಬಂದಿದ್ದಿನಿ."

"ಕೆಲಸ ಸಿಗೂದು ಬಹಳ ಕಠಿಣಪಾ-ಅನಾಥಾಶ್ರಮವನ್ನs ಸೇರಿ ಕೊಂಡು ಬಿಡೂದು ನೆಟ್ಟಗ."

ಕೆಲಸ ದೊರಕಿಸುವುದೆಂದರೆ ಎಷ್ಟು ಕಷ್ಟವೆಂಬುದರ ಅನುಭವ ವಾಯಿತು ಮಹಾದೇವನಿಗೆ. ಹಳ್ಳಿಯಲ್ಲಿರುವಷ್ಟು ಕಾಲ ಅವನಿಗೆ ಅದರ ಅರಿವಿರಲಿಲ್ಲ. ನಗರದಲ್ಲಿನ ಚಪ್ಪಲಿ ಅಂಗಡಿಗಳಲ್ಲಿ ನೌಕರಿ ದೊರಕಿಸುವುದು ತೀರ ಸುಲಭವೆಂದೇ ಆತ ಭಾವಿಸಿದ್ದ. ಅಂತೆಯೆ ಎಲ್ಲವ್ವನ ಗುಡ್ಡದಲ್ಲಿ ಚಂದ್ರಳೊಡನೆ ಮಾತನಾಡುತ್ತಾ ತಾನು ಅವಳನ್ನು ಮದುವೆಯಾಗಿ ನಗರ ದಲ್ಲಿ ಕೆಲಸ ಹಿಡಿದು ಅವಳನ್ನೂ ತಾಯಿಯನ್ನೂ ಕರೆದೊಯ್ದು ಮನೆ ಹೂಡುವುದಾಗಿ ಹೇಳಿದ್ದ. ಈಗ ಆ ಮಾತನ್ನು ಜ್ಞಾಪಿಸಿಕೊಂಡು, "ಎಂಥ ಹುಚ್ಚ ನಾನು! ಅವಳು ನನ್ನ ಮದುವೆಯಾಗಲು ಒಪ್ಪದಿದ್ದದ್ದೇ ಚಲೋ ದಾತು. ಒಪ್ಪಿದ್ದರೆ ಫಜೀತಿ ಆಗದೆ ಬಿಡುತಿತ್ತೇ?" ಎಂದು ತನಗೆ ತಾನೆ ಹೇಳಿಕೊಳ್ಳುತ್ತ ಅನಾಥಾಶ್ರಮವನ್ನು ಹುಡುಕುತ್ತ ಹೊರಟ.

ಬಟ್ಟೆಯಂಗಡಿಗಳ ಸಾಲಿನಲ್ಲಿ ಒಂದು ಮುರುಕು ಮನೆಯಲ್ಲಿ ಆ ಆಶ್ರಮವಿತ್ತು. ಹೆಬ್ಬಾಗಿಲಿನಿಂದ ನಡೆದು ಹೋದರೆ ವಿಶಾಲವಾದುದೊಂದು ಅಂಗಳ. ಅದರೆದುರಿನ ಕೊಟಡಿಯಲ್ಲಿ ಮೆತ್ತೆಯ ಗಾದಿ ದಿಂಬುಗಳ ಆಸನದಲ್ಲಿ ಮಂಡಿಸಿದ್ದ, ಆಶ್ರಯದ ವ್ಯವಸ್ಥಾಪಕ ಹಿರೇಮಠದ ಚೌಡೇಶ್ವರ. ಅವನಿಗೆ ಮೂವತ್ತು ವರ್ಷ ವಯಸ್ಸಿರಬಹುದು. ಕುಳ್ಳನೆಯ ದಪ್ಪನೆಯ ಆಳು. ರಕ್ತದಿಂದ ತುಂಬಿ, ಚಪ್ಪರಬದನೆಯಂತೆ ಕಾಣುವ ಕೆನ್ನೆಗಳು. ನುಣ್ಣಗೆ ಕಲಾಯಿ ಮಾಡಿಸಿದ ತಲೆ. ಹಣೆಯ ಮೇಲೆ ಎದ್ದು ಕಾಣಿಸುವ

ವಿಭೂತಿ. ಚೌಡೇಶ್ವರನ ಮೈಮೇಲೆ ಅಂಗಿಯಿರಲಿಲ್ಲ. ಲಂಡ ಧೋತರ ವನ್ನುಟ್ಟು ಖಾದಿಯ ಅಂಗವಸ್ತ್ರವೊಂದನ್ನು ಹೊದೆಸುಕೊಂಡಿದ್ದ. ಅರೆಬತ್ತಲೆ ಯಾಗಿದ್ದ ಅವನ ಗೌರಕಾಯ ಆರೋಗ್ಯದ ಕಾಂತಿಯಿಂದ ಶೋಭಿಸುತ್ತಿತ್ತು. "ಇವರೇನೊ ಸನ್ಯಾಸಿಯ ಹಂಗ ಕಾಣುತಾರ," ಎಂದು ಕೊಳ್ಳುತ್ತ ಮಹಾದೇವ ಸಂಶಯಗಳಿಂದ ನಿಧಾನವಾಗಿ ನಡೆದು ಬಂದು,

"ಶರಣ್ರೀ ಸ್ವಾಮೇರ," ಎಂದ.

"ಶಿವಾಯನಮಃ, ಶಿವಾಯನಮಃ," ಎಂದು ಪುಟಪುಟಿಸುತ್ತ ಚೌಡೇಶ್ವರ ತಲೆಯೆತ್ತಿ ನೋಡಿದ. ಅವನ ದುಂಡು ಮುಖದ ಮೇಲೆಲ್ಲ ಮೃದುಹಾಸ್ಯ ಪಸರಿಸಿತು. ಅತ್ಯಂತ ಪ್ರೀತಿಯ ಗೆಳೆಯರನ್ನು ಸ್ವಾಗತಿಸು ವಂತೆ ಮಹಾದೇವನನ್ನು ಬರಮಾಡಿಕೊಳ್ಳುತ್ತಾ ಆತನೆಂದ:

"ಬಾರಯ್ಯಾ, ಇತ್ತ ಬಾ, ಮೇಲೆ ಬಾ, ಇಲ್ಲಿ ಬಾ, ಇಲ್ಲಿ ಗಾದಿಯ ಮೇಲೆ ಕೂಡು."

ಮಹಾದೇವ ತಬ್ಬಿಬ್ಬಾಗಿ ಮೇಲೆ ಬಂದು ಜಮುಖಾನದ ಮೇಲೆ ಕುಳಿತು ಕೊಂಡ. ತನಗೆ ಈ ಬಗೆಯ ಸ್ವಾಗತ ಲಭಿಸಬಹುದೆಂದು ಆತ ನಿರೀಕ್ಷಿಸಿ ಕೊಂಡಿರಲಿಲ್ಲ.

ಚೌಡೇಶ್ವರ ಅವನನ್ನು ಅತ್ಯಂತ ಮಮತೆಯಿಂದ ಹತ್ತಿರಕ್ಕೆಳೆದು ಪಕ್ಕ ದಲ್ಲಿ ಕೂಡಿಸಿಕೊಂಡು ಅವನ ಮೈಮೇಲೆ ಕೈಯಾಡಿಸುತ್ತ,

"ಹಸಿದು ಬಂದಿದ್ದೀ. ಮೊದಲು ಊಟ ಮಾಡೇಳು ಮಗೂ," ಎಂದು ನುಡಿದು ಒಳಗಿನ ಬಾಗಿಲಿನ ಕಡೆ ಹೊರಳಿ, "ಶಂಕರಯ್ಯಾ, ಏ ಮರೀ," ಎಂದು ಕೂಗಿದ.

ಮಹಾದೇವನ ವಯಸ್ಸಿನವನೇ ಆಗಿದ್ದ ಹುಡುಗನೊಬ್ಬ ಒಳಗಿನಿಂದ ಧಾವಿಸಿ ಬಂದ.

"ಈ ತಮ್ಮನಿಗೆ ಮೊದಲು ಊಟಕ್ಕೆ ಹಾಕು ಶಂಕರಯ್ಯ. ಬಹಳ ಹಸಿದಿದ್ದಾನೆ. ಹೋಗಪ್ಪ ಮಗೂ. ಉಂಡು ನಿಧಾನವಾಗಿ ಬಾ. ಆಮೇಲೆ ಮಾತಾಡೋಣ."

ಮಹಾದೇವ ಆಶ್ಚರ್ಯಪಟ್ಟುಕೊಳ್ಳುತ್ತ ಎದ್ದು ಶಂಕರನೊಡನೆ ಒಳಗಡೆ ಹೋದ.

ಅಡಿಗೆಯ ಮನೆಯಲ್ಲಿ ಹತ್ತು ಹನ್ನೊಂದು ಹುಡುಗರು ಪಂಕ್ತಿಯಲ್ಲಿ ಊಟಕ್ಕೆ ಕುಳಿತಿದ್ದರು. ಕೈಕಾಲು ಮುಖ ತೊಳೆದುಕೊಂಡು ಬಂದು ಮಹಾದೇವನೂ ಅವರೊಡನೆ ಕುಳಿತುಕೊಂಡ. ಶಂಕರನೇ ಬಡಿಸುತ್ತಲಿದ್ದ.

ಅವರೆಲ್ಲರೂ ಆಶ್ರಮದ ಹುಡುಗರೆಂಬುದು ಗೊತ್ತಾಯಿತು. ಮಹಾದೇವನ ವಿಚಾರವಾಗಿ ಹಲವು ಪ್ರಶ್ನೆ ಕೇಳಿ ಹುಡುಗರೆಲ್ಲ ಅವನ ವಿಷಯವನ್ನೂ ತಿಳಿದುಕೊಂಡರು.

ಶಂಕರ ಕಣ್ಣು ಮಿಟುಕಿಸುತ್ತ ಪಿಸುದನಿಯಲ್ಲಿ,

"ಏನಡ್ಡಿಯಿಲ್ಲಸಾ. ನಿನ್ನಂಥ ಹೊಸಬನೊಬ್ಬ ಬೇಕಾಗಿದ್ದ. ನೀ ಬಂದಿ. ಚಲೋ ಆತೇಳು," ಎಂದ.

ಆ ಮಾತು ಕೇಳಿ ದೊಡ್ಡ ಹುಡುಗರು ಬಾಯಿ ಬಿಗಿ ಹಿಡಿದುಕೊಂಡು ನಕ್ಕರು. ಅವರೇಕೆ ಹಾಗೆ ನಕ್ಕರೆಂಬುದು ಮಹಾದೇವನಿಗಾಗ ಗೊತ್ತಾಗಲಿಲ್ಲ.

ಊಟವಾದ ತರುವಾಯ ಆಶ್ರಮದ ಹುಡುಗರೆಲ್ಲ ಶಾಲೆಗಳಿಗೆ ತೆರಳಿದರು. ಪುಸ್ತಕ ಹಿಡಿದುಕೊಂಡು ಶಂಕರನೂ ಹೊರಟುಹೋದ. ಚೌಡೇಶ್ವರನೂ ಊಟ ತೀರಿಸಿಕೊಂಡು ಹೊರಗಡೆ ಬಂದು ಆಸನದ ಮೇಲೆ ಮಂಡಿಸಿ, "ಶಿವಶಿವಾ, ಮಹಾದೇವಾ," ಎಂದು ಪುಟುಪುಟಿಸುತ್ತ ಮಹಾದೇವನತ್ತ ತಿರುಗಿ ಅವನ ವೃತ್ತಾಂತವನ್ನೆಲ್ಲ ಕೇಳಿಕೊಂಡ.

"ಸರಿ. ಸರಿ. ಶಾಲೆ ಸುರು ಆಗುವವರೆಗೂ ನೀನು ಆಶ್ರಮದಲ್ಲಿರಲು ನನ್ನದೇನೂ ಅಡ್ಡಿಯಿಲ್ಲ. ನಿನ್ನಂಥ ಅನಾಥರಿಗಾಗಿಯೆ ಅಲ್ಲವೇ ನಾನೀ ಆಶ್ರಮ ಸ್ಥಾಪಿಸಿದ್ದು? ನಿಮಗಾಗಿ ನನ್ನ ಜೀವನವನ್ನೇ ಮೀಸಲಾಗಿರಿಸಿದ್ದೇನೆ. ನಿಜ ಹೇಳಬೇಕಾದರೆ ನಾನು ಪೂರಾ ಸನ್ಯಾಸಿಯಾಗಿ ಹಿಮಾಲಯಕ್ಕೆ ಹೋಗಿಬಿಡುವವನಿದ್ದೆ. ಪೂಜ್ಯರಾದ ಮಹಾತ್ಮಾ ಗಾಂಧಿಯವರು ಬೇಡವೆಂದರು. ಹಿಮಾಲಯಕ್ಕೆ ಹೋಗುವುದಕ್ಕಿಂತ ಇಲ್ಲಿಯೇ ಇದ್ದುಕೊಂಡು ವಿಧಾಯಕ ಕಾರ್ಯದಲ್ಲಿ ತೊಡಗಿ ಸೇವೆ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ಅಂದೇ ಈ ಆಶ್ರಮ ಸ್ಥಾಪಿಸಲಾಯಿತು. ಮಹಾತ್ಮರ ಪುಣ್ಯ

ದಿಂದ ಅನೇಕ ಶ್ರೀಮಂತರು ಸಹಾಯ ಮಾಡುತ್ತಿದ್ದಾರೆ. ಹನ್ನೆರಡು ಮಂದಿ ಮಕ್ಕಳಿಗೆ ಆಶ್ರಯ ದೊರೆತಿದೆ. ನೀನು ಹವಿನೂರನೆಯವನು. ಸಂತೋಷ, ಬಹಳ ಸಂತೋಷ. ಇನ್ನು ಆರು ತಿಂಗಳು ಬೇಕು ಶಾಲೆ ಸುರು ಆಗಲು. ಅಲ್ಲಿಯವರೆಗೆ ನಾನೇ ನಿನಗೆ ಹಿಂದಿಯನ್ನೂ ಸಂಸ್ಕೃತವನ್ನೂ ಕಲಿಸುವೆನಂತೆ," ಎಂದು ಭಾಷಣದ ಧಾಟಿಯಲ್ಲಿ ಬಡಬಡನೆ ನುಡಿದ ಚೌಡೇಶ್ವರ. ಅವನ ಮಾತಿನಲ್ಲಿ ಅರ್ಧಕ್ಕರ್ಧ ಅರ್ಥವಾಗಲಿಲ್ಲ ಮಹಾದೇವನಿಗೆ.

"ಏನು ಹೇಳುತ್ತಿದ್ದೆ ಈಗ ತಾನೆ?" ಎಂದು ಮತ್ತೆ ಮೈಸೂರು ಧಾಟಿಯಲ್ಲಿ ಆರಂಭಿಸಿದ ಚೌಡೇಶ್ವರ. "ನಾನು ಆಡುವುದೆಲ್ಲ ನಿನಗೆ ಅರ್ಥವಾಗುತ್ತದೆಯೊ ಇಲ್ಲವೊ. ಈ ನಗರದ ದೊಡ್ಡ ದೊಡ್ಡ ಪ್ರಮುಖರಿಗೇ ಅರ್ಥವಾಗುವುದಿಲ್ಲವಂತೆ. ಉಪಾಯವಿಲ್ಲ. ಚಿಕ್ಕವಯಸ್ಸಿನಿಂದಲೂ ಹರ್ಡೇಕರ ಮಂಜಪ್ಪನವರ ಹತ್ತಿರ ಬೆಳೆದವನಾದ್ದರಿಂದ ಅವರ ಭಾಷೆಯೇ ನನಗೂ ರೂಢಿಯಾಗಿದೆ. ಅಶುದ್ಧ ಮಾತಾಡುವುದಕ್ಕೇ ಆಗುವುದಿಲ್ಲ. ನಮ್ಮ ಆಶ್ರಮದಲ್ಲಿರುವ ಹುಡುಗರಿಗೆಲ್ಲ ಶುದ್ಧವಾಗಿ ಮಾತಾಡುವುದನ್ನು ಕಲಿಸಲು ಬಹಳ ಕಷ್ಟಪಡುತ್ತಿದ್ದೇನೆ. ಇನ್ನೂ ಫಲ ದೊರೆತಿಲ್ಲ. ನೀನಾದರೂ ವ್ಯಾಕರಣ ಶುದ್ಧವಾಗಿ ಮಾತಾಡಲು ಕಲಿಯಬೇಕಯ್ಯ ಮಗೂ. ಸರಿ, ಸರಿ. ಊರಿನಲ್ಲಿ ಯಾರು ಯಾರು ಇದ್ದಾರೆಂದು ಹೇಳಿದೆ?"

"ತಾಯಿಯೊಬ್ಬಳೇ."

"ತಾಯಿಯೇ? ವಯಸ್ಸೆಷ್ಟು ಆಕೆಗೆ?"

"ನಲವತ್ತೈದು ಐವತ್ತು ಆಗಿದ್ದೀತುರಿ."

"ಹಾ, ಹಾ. ತಪ್ಪಿದೆ ಕಣಯ್ಯಾ, ತಪ್ಪಿದೆ. ಆಗಿದ್ದೀತು ರೀ ಎಂದೆಲ್ಲ ಆಡಬಾರದು. ಸುಂದರವಾದ ಕನ್ನಡವನ್ನು ಕೆಡಿಸಬಾರದು," ಎಂದು ನುಡಿದು ತನ್ನ ಶುಭ್ರ ದಂತಪಂಕ್ತಿಯ ಪ್ರದರ್ಶನ ಮಾಡಿದ ಚೌಡೇಶ್ವರ.

"ತಾಯಿಯೊಬ್ಬಳೇ. ಬೇರೆ ಯಾರೂ ಇಲ್ಲ. ತಾಯಿಯ ಜೀವನ ಹೇಗೆ?"

"ಎಲ್ಲಾ ತ್ರಾಸ ಐತಿರೀ. ಆವಳ ಮೈಯಾಗ ಶಕ್ತಿಯೂ ಇಲ್ಲ. ನಾನs ಇಲ್ಲಿ ಏನಾರ ಕೆಲಸಾಮಾಡಿ ಅವಳಿಗೆ ಕಳಿಸಬೇಕಂತ ಮಾಡಿದ್ದಿನಿ."

"ಕೆಲಸ ಮಾಡಬೇಕು? ಆಗಲಿ. ಅದಕ್ಕೇನಂತೆ. ಆಶ್ರಮದಲ್ಲಿಯೆ ಕುಳಿತು ಮಾಡಬಹುದು. ನಮ್ಮಲ್ಲಿ ಒಂದು ಕೈಗಾರಿಕೆ ವಿಭಾಗವಿದೆ. ಮಕ್ಕಳು ಬೇರೆ ಬೇರೆ ತರದ ಕೆಲಸ ಕಲಿಯುತ್ತಾರೆ. ಅದರೊಡನೆ ಕೊಂಚ ಸಂಪಾದನೆಯನ್ನೂ ಮಾಡುತ್ತಾರೆ."

"ನಾ ಇಲ್ಲಿ ಕುಂತು ಮೊಚ್ಚೆ ಹೊಲಿದರs ?"

"ಓಹೋ. ಆಗಬಹುದಲ್ಲ? ನಿನಗೆ ಸಾಹಿತ್ಯವನ್ನೆಲ್ಲ ತರಿಸಿಕೊಡುತ್ತೇನೆ. ಆಶ್ರಮದ ಬಾಲಕ ತಯಾರಿಸಿದ ಮೊಚ್ಚೆ ಎಂದು ಹೆಚ್ಚು ಬೆಲೆ ಕೊಟ್ಟು ಕೊಳ್ಳುವ ಉದಾರಿಗಳಿಗೇನೂ ಕೊರತೆಯಿಲ್ಲ."

ಮಹಾದೇವನಿಗೆ ಪರಮಸಂತೋಷವಾಯಿತು. ಚೌಡೇಶ್ವರನ ಆಶ್ರಯ ಲಭಿಸಿದುದು ತನ್ನ ಮಹಾಭಾಗ್ಯವೆಂದು ಆತ ಭಾವಿಸಿದ. ಊಟದ ಚಿಂತೆ ತಪ್ಪಿದುದಲ್ಲದೆ ಕೆಲಸಮಾಡಿ ನಾಲ್ಕೈದು ರೂಪಾಯಿ ಸಂಪಾದಿಸಿ ತಾಯಿಗೆ ಕಳುಹಿಸುವುದಕ್ಕೂ ಅನುಕೂಲತೆಯೊದಗಿತೆಂದು ಆತ ಹಿಗ್ಗಿದ.

೨೧

ಚೌಡೇಶ್ವರನ ಅನಾಥಾಶ್ರಮದಲ್ಲಿ ಮಹಾದೇವನ ಜೀವನ ನೆಮ್ಮದಿಯಿಂದ ಸಾಗತೊಡಗಿತು. ಬೆಳಿಗ್ಗೆ ಸಾಯಂಕಾಲ ಎರಡು ಹೊತ್ತು ಹಿಂದೀ ಪಾಠ ಹೇಳಿಕೊಡುತ್ತಿದ್ದ ಚೌಡೇಶ್ವರ. ಮಾತುಕೊಟ್ಟ ಮೇರೆಗೆ ಮೊಚ್ಚೆ ಹೊಲಿಯುವ ಆಯುಧಗಳನ್ನೂ ಚರ್ಮವನ್ನೂ ತರಿಸಿಕೊಟ್ಟಿದ್ದ. ಮಧ್ಯಾಹ್ನದ ಊಟ ಮುಗಿದ ತರುವಾಯ ಆಶ್ರಮದ ಅಂಗಳದಲ್ಲಿ ಕುಳಿತು ಮೊಚ್ಚೆ ಹೊಲಿಯುವ ಕಾಯಕದಲ್ಲಿ ತೊಡಗುತ್ತಿದ್ದ ಮಹಾದೇವ. ಆಶ್ರಮಕ್ಕೆ ಬರುತ್ತಿದ್ದ ದೊಡ್ಡ ಮನುಷ್ಯರೆದುರಿಗೆ ತನ್ನ ಹರಿಜನ ಶಿಷ್ಯನನ್ನು ಹೆಮ್ಮೆಯಿಂದ ತೋರಿಸಿ ಅವನ ಕೈಯ ಕೌಶಲವನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಿದ್ದ ಚೌಡೇಶ್ವರ. ಎರಡು ದಿನಗಳೊಳಗಾಗಿ ಎಂಟು ಜೊತೆ ಮೊಚ್ಚೆಗಳಿಗೆ ಬೇಡಿಕೆಯನ್ನೂ ದೊರಕಿಸಿಕೊಟ್ಟ. ಮಹಾದೇವನಿಗೆ ಸ್ವರ್ಗವೇ ಕೈಗೆ ಸಿಕ್ಕಂತಾಯಿತು. ಚೌಡೇಶ್ವರ ಆ ಸ್ವರ್ಗದ ಅಧಿದೇವತೆಯೆಂದು ಆತ ಭಾವಿಸಿದ. ತದೇಕಚಿತ್ತನಾಗಿ ಚಿತ್ರ ಬರೆಯುವ ಕಲಾವಿದನಂತೆ ಒಂದು ದಿನವೆಲ್ಲ ಚರ್ಮದ ಕೆಲಸಮಾಡಿ ಒಂದು ಜೊತೆ ಸುಂದರವಾದ ಮೊಚ್ಚೆ ತಯಾರಿಸಿ ಅತ್ಯಂತ ಭಕ್ತಿಯಿಂದ ಚೌಡೇಶ್ವರನಿಗರ್ಪಿಸಿ ಅವನ ಪಾದಗಳಿಗೆರಗಿದ ಮಹಾದೇವ.

ಚೌಡೇಶ್ವರ ಮಹಾದೇವನನ್ನೆತ್ತಿ ಬಿಗಿದಪ್ಪಿಕೊಂಡು, "ಧನ್ಯನಾದೆ, ಧನ್ಯನಾದೆ. ಶಿವಶರಣ ಮಹಾನುಭಾವ ಹರಳಯ್ಯನ ದರ್ಶನವೇ ಆದಂತಾಯಿತು. ಧನ್ಯ. ಧನ್ಯ," ಎಂದು ಉದ್ಗಾರ ತೆಗೆದ.

ಆ ರಾತ್ರಿ ಹನ್ನೊಂದು ಗಂಟೆಯವರೆಗೂ ಆತ ಮಹಾದೇವನನ್ನು ತನ್ನ

ಬಳಿ ಕೂಡಿಸಿಕೊಂಡು ಹರಳಯ್ಯ ಮಧುವಯ್ಯಗಳ ರೋಮಾಂಚಕಾರಕ ಕತೆಯನ್ನೆಲ್ಲ ಹೇಳಿದ.

"ಇಪ್ಪತ್ತನೆಯ ಶತಮಾನದಲ್ಲಿ ಮಹಾತ್ಮರು ಸಾಧಿಸಲೆತ್ನಿಸುತ್ತಿರುವುದನ್ನು ಎಂಟುನೂರು ವರ್ಷಗಳ ಹಿಂದೆಯೆ ನಮ್ಮ ಬಸವಣ್ಣನವರು ಸಾಧಿಸಿದರು. ಬ್ರಾಹ್ಮಣರ ಕುಟಿಲ ಕಾರಸ್ಥಾನದಿಂದಾಗಿ ಅವರ ಕ್ರಾಂತಿ ವಿಫಲವಾಯಿತು. ಮಹಾತ್ಮರ ಕ್ರಾಂತಿ ಕಾರ್ಯಕ್ಕೂ ಈ ಬ್ರಾಹ್ಮಣರೇ ಕೊಡಲಿಯ ಪೆಟ್ಟು ಹಾಕುವುದು ಖಂಡಿತ," ಎಂದ ಚೌಡೇಶ್ವರ.

"ನಿಮಗ ನಿದ್ದೆ ಬರ್‍ತಿರಬಹುದು. ನಾ ಹೋಗುತೀನಿ ಮಲಗಲಿಕ್ಕೆ," ಎಂದು ಮಹಾದೇವ ಮೇಲಕ್ಕೇಳುತ್ತಿದ್ದ ಹಾಗೆ ಚೌಡೇಶ್ವರ ಅವನ ಕೈಹಿಡಿದು ಮೆಲ್ಲಗೆ ಎಳೆಯುತ್ತ,

"ಮತ್ತೇಕೆ ಒಳಗಡೆ ಹೋಗುತ್ತೀಯಪ್ಪ? ಇಲ್ಲಿಯೆ ಮಲಗಿಕೊಂಡು ಬಿಡು,'' ಎಂದ.

"ಬ್ಯಾಡರಿ, ನಾ ಒಳಗs ಹೋಗುತೀನಿ," ಎಂದು ಸಂಕೋಚದ ದನಿಯಲ್ಲಿ ನುಡಿದು ಹುಡುಗರು ಮಲಗುವ ಸ್ಥಳಕ್ಕೆ ಹೋದ ಮಹಾದೇವ.

ಮಾರನೆಯ ರಾತ್ರಿಯೂ ಬಹಳ ಹೊತ್ತಿನವರೆಗೆ ಮಹಾದೇವನನ್ನು ತನ್ನ ಹತ್ತಿರ ಕೂಡಿಸಿಕೊಂಡಿದ್ದ ಚೌಡೇಶ್ವರ. ಅಂದು ರಾತ್ರಿಯೂ ಅಲ್ಲಿಯೆ ಮಲಗಿಕೊಳ್ಳಲು ಒತ್ತಾಯಪಡಿಸಿದ. ಸಂಕೋಚದ ಜತೆಗೆ ಒಂದು ಬಗೆಯ ವಿಚಿತ್ರ ಭೀತಿಯೂ ಮಹಾದೇವನನ್ನಾವರಿಸಿಕೊಂಡಿತು.

ಬೆಳಿಗ್ಗೆ ಚೌಡೇಶ್ವರ ವಾಯುವಿಹಾರಕ್ಕೆಂದು ಹೊರಗಡೆ ಹೋಗಿದ್ದಾಗ ಆತ ಶಂಕರನನ್ನು ಒಂದು ಬದಿಗೆ ಕರೆದು,

"ಸ್ವಾಮೇರು ಹಿಂಗ್ಯಾಕ ಮಾಡುತಾರಪಾ?" ಎಂದು ಕೇಳಿದ.

"ಹೆಂಗ ಮಾಡಿದರು?" ಎಂದು ನಗುತ್ತ ಕೇಳಿದ ಶಂಕರ.

ಮಹಾದೇವ ಎಲ್ಲವನ್ನೂ ವಿವರಿಸುತ್ತಲೂ ಶಂಕರನೆಂದ:

"ಹೊಸದಾಗಿ ಬಂದ ಹುಡುಗರಿಗೆಲ್ಲಾ ಹಂಗs ಮಾಡುತಾರೇಳೋ ಅವರು. ನೀ ಅವರ ಸಂಗಡ ಮಲಗಿಕೊಳ್ಳಲಿಲ್ಲ ಹೌದಲ್ಲೋ?"

"ಇಲ್ಲ ಮಾರಾಯ. ನಾ ಹೊಲೆಯವರವ. ಅವರು ಜಂಗಮರು. ಅವರ ಸಂಗಡ ಹೆಂಗ ಮಲಗೂದು?"

"ಹೊಲೆಯರಾದರೇನ? ಹಾರುವ ಆದರೇನು, ನಮ್ಮ ಸ್ವಾಮೇರಿಗೆ ಜಾತಿ ಭೇದ ಏನೂ ಇಲ್ಲ. ಅವರಿಗೊಂದು ವೈ ಸಿಕ್ಕರ ಸಾಕು," ಎಂದ ಶಂಕರ.

"ಅಂದರs?" ಎಂದು ತಬ್ಬಿಬ್ಬಾಗಿ ಕೇಳಿದ ಮಹಾದೇವ.

"ಅಂದರs? ಇನ್ನೂ ತಿಳೀಲಿಲ್ಲೇನು ನಿನಗ?" ಎಂದು ಶಂಕರ ಬಾಗಿ ಮಹಾದೇವನ ಕಿವಿಯಲ್ಲಿ ಪುಟುಪುಟಿಸಿದ.

ಮಹಾದೇವನ ಕಲ್ಪನೆಯ ಸ್ವರ್ಗ ಒಮ್ಮೆಲೆ ಭೂಮಿಗೆ ಬಿದ್ದಂತಾಯಿತು. ಸಾಕ್ಷಾತ್ ದೇವರ ಅವತಾರವೆಂದು ತಾನು ತಿಳಿದಿದ್ದ ಚೌಡೇಶ್ವರ ಇಂಥ ವನೇ? ಛಿ. ಶಂಕರ ಸುಳ್ಳು ಹೇಳುತ್ತಿರಬಹುದು ಎಂದುಕೊಂಡು,

"ನನಗಂತೂ ನಿನ್ನ ಮಾತು ನಂಬಿಕೆಯಾಗುವದಿಲ್ಲಪ್ಪ. ಎಂಥೆಂಥಾ ದೊಡ್ಡ ದೊಡ್ಡ ಕಥಿ ಹೇಳುತಾರ, ಎಷ್ಟು ಚಂದ ಮಾತಾಡುತಾರ, ಅವರು ಇಂಥಾ ಕೆಲಸ ಮಾಡ್ಯಾರೇನು ಎಂದಾದರೂ?" ಎಂದ.

"ಅರೆ! ನಾನೇನು ಸುಳ್ಳು ಹೇಳುತೀನೇನು ಹಂಗಾದರ? ನಾನೂ ಹೊಸದಾಗಿ ಬಂದಾಗ ನನಗೂ ಹಿಂಗs ಮಾಡಿದರು. ನಾನೂ ನಿನ್ನ ಹಂಗs ಅವರ ಮಾತಿಗೆ ಮರುಳಾಗಿ ಅವರು ಮಲಗು ಅಂದಾಗ ಮಲಗಿಬಿಟ್ಟಿದ್ದಿನಿ ಅವರ ಹತ್ತರ. ಆಮ್ಯಾಲ ಅವರ ಆಟ ಎಂಥಾದ್ದು ಅನ್ನೂದರ ಸುಳಿವು ಹತ್ತಿದ ಕೂಡಲೆ ಎದ್ದು ಅವರ ಕಪಾಳಿಗೆ ಹೊಡೆದು ಜಾಗಾ ಬಿಟ್ಟು ಬಂದಿನಿ. ಮುಂಜಾನೆ ಎದ್ದಕೂಡಲೆ ಅವರು ನನ್ನ ಕರದು ಕ್ಷಮಾ ಕೇಳಿದರು. ಮುಂದೆ ಎಂದೂ ಹಂಗ ಮಾಡುವದಿಲ್ಲ ಅಂತ ಅಂದರು. ಹಾಳಾಗಿ ಹೋಗಲಿ ಅಂತ ನಾ ಸುಮ್ಮನಾದಿನಿ. ಹಿಂಗ ಎಲ್ಲಾ ಹುಡುಗರಿಗೂ ಮಾಡಿದ್ದಾರ."

"ಇಶ್ಶಿಶ್ಶಿ! ಇವರು ಸುಮ್ಮನs ಮದುವಿಯಾಕ ಮಾಡಿಕೋ ಬಾರದಪ್ಪ?"

"ಏನೋ ಯಾರಿಗೆ ಗೊತ್ತು! ಬ್ರಹ್ಮಚರ್ಯವ್ರತ ಹಿಡಿದಾರಂತ ಅವರು!"

"ಇದೆಂಥಾ ಬ್ರಹ್ಮಚರ್ಯಪಾ!"

"ಇದಕ್ಕs ಅಂತಾರ ಬ್ರಹ್ಮಚರ್ಯ ಅಂತ!" ಎಂದು ಗಟ್ಟಿಯಾಗಿ ನಕ್ಕ ಶಂಕರ.

"ಈ ಸಂಗತಿ ಊರವರಿಗೆ ಗೊತ್ತಿಲ್ಲೇನು?"

"ಹೆಂಗ ಗೊತ್ತಾಗಬೇಕು? ನಮ್ಮಂಥವರು ಹೇಳಿದರೂ ಯಾರೂ ನಂಬುವದಿಲ್ಲ. ಒಳ್ಳೆ ಸನ್ಯಾಸಿಯ ಸೋಗು ಹಾಕಿ, ಬಣ್ಣದ ಮಾತಾಡಿ ಜನರನ್ನ ಮರುಳು ಮಾಡಿದಾರ ಸ್ವಾಮೇರು."

ಅತ್ಯಂತ ಸುಸಂಸ್ಕೃತನಂತೆ ಕಾಣುವ ಚೌಡೇಶ್ವರ ಹೀಗೆ ಅಸಂಸ್ಕೃತ ನಂತೆ ವರ್ತಿಸಲು ಕಾರಣವೇನೆಂಬುದನ್ನು ಎರಡು ದಿನಗಳಲ್ಲಿಯೆ ತಿಳಿದು ಬಂದಿತು ಮಹಾದೇವನಿಗೆ. ಅಂದು ಚೌಡೇಶ್ವರ ಊರಿನಲ್ಲಿರಲಿಲ್ಲ. ಆಶ್ರಮಕ್ಕೆ ನಿಧಿಯೆತ್ತಲೆಂದು ಪರವೂರಿಗೆ ಹೋಗಿದ್ದ. ಪಾಠವನ್ನು ಮುಂದುವರಿಸುವುದ ಕ್ಕೆಂದು ಹಿಂದೀ ಪುಸ್ತಕವನ್ನು ಹುಡುಕುತ್ತಿದ್ದ ಮಹಾದೇವನಿಗೆ ಚೌಡೇಶ್ವರನ ಪೆಟ್ಟಿಗೆಯಲ್ಲಿ ಒಂದು ಟಿಪ್ಪಣಿ ಪುಸ್ತಕ ಕಾಣಿಸಿತು. ಸಹಜವಾಗಿ ಅದನ್ನಾತ ತೆರೆದು ನೋಡಿದಾಗ ಚೌಡೇಶ್ವರನ ಸುಂದರ ಹಸ್ತಾಕ್ಷರಗಳಲ್ಲಿ ಬರೆಯಲ್ಪ ಟ್ಟಿದ್ದ ಕೆಲವು ಸಾಲು ಕಾಣಿಸಿದುವು.

"ಪೂಜ್ಯ ಮಂಜಪ್ಪನವರ ಪಾದಗಳನ್ನು ಮುಟ್ಟಿ ಬ್ರಹ್ಮಚರ್ಯದ ಪ್ರತಿಜ್ಞೆ ಸ್ವೀಕರಿಸಿದ್ದಾಗಿದೆ. ದೇಶದ ಸೇವೆಗಾಗಿ ಬ್ರಹ್ಮಚಾರಿಗಳ ತಂಡ ವೊಂದು ಅವಶ್ಯವೆಂದು ಅವರ ಅಭಿಪ್ರಾಯ – ಅಲ್ಲ – ಹಟ.

"ಆದರೆ, ಬ್ರಹ್ಮಚರ್ಯ ಪಾಲಿಸುವುದು ಅವರು ತಿಳಿದುಕೊಂಡಷ್ಟು ಸುಲಭವಲ್ಲ. ತಾರುಣ್ಯದಲ್ಲಂತೂ ಅದು ಬಹಳ ಕಠಿಣ. ಅದೊಂದು ಅಸಿ ಧಾರಾವ್ರತ.

"ಸ್ವೀಕರಿಸಿದ ಪ್ರತಿಜ್ಞೆಯನ್ನು ಮುರಿದು ಮದುವೆಯಾಗುವ ಮನಸ್ಸಿಲ್ಲ. ಈಗ ನಾನು ಸಂಸಾರಿಯಾದಲ್ಲಿ ನನ್ನ ಪೂಜ್ಯ ಗುರುಗಳಿಗೆ ದ್ರೋಹ ಬಗೆ ದಂತಾಗುವುದು. ಅವರ ಮನಸ್ಸಿಗೆ ಬಹಳ ನೋವಾಗುವುದು.

"ಆದರೆ, ಮೈಯಲ್ಲಿ ತುಂಬಿ ಹೊರಸೂಸಲು ಕಾದಿರುವ ಈ ಯೌವನದ ಬಯಕೆಯನ್ನು ಹತ್ತಿಕ್ಕಲೂ ಅಸಾಧ್ಯವಾಗುತ್ತಿದೆ. ಧುಮ್ಮಿಕ್ಕಿ ಬರುವ ಜಲಪಾತವನ್ನು ತಡೆಯುವುದೆಂತು?

"ನನಗೀಗ ಉಭಯಸಂಕಟಕ್ಕಿಟ್ಟುಕೊಂಡಿದೆ. ಅನಾಥಾಶ್ರಮವನ್ನೇನೊ ಸ್ಥಾಪಿಸಿದ್ದಾಗಿದೆ. ಹನ್ನೆರಡು ಜನ ಅನಾಥ ಬಾಲಕರಿಗೆ ಆಶ್ರಯವನ್ನೊದಗಿಸಿಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದೇನೆ. ನನ್ನಿಂದ ಅಲ್ಪವಾದರೂ ಸೇವೆ ಸಲ್ಲುತ್ತಿದೆ ಸಮಾಜಕ್ಕೆ. ಆದರೆ...

"ಆದರೆ ...ನನ್ನ ವಾಸನಾಭೂತಕ್ಕೆ ಈ ಅನಾಥ ಮಕ್ಕಳು ಬಲಿಯಾಗುವುದು ಎಂಥ ಭಯಂಕರ ವಿಷಯ. ಇದು ತಪ್ಪು, ಇದು ಪಾಪ, ಇದು ಪತನ ನೀಚತನ ಎಂಬುವೆಲ್ಲ ನನಗೆ ಗೊತ್ತು. ಆದರೂ, ವಿಕಾರದ ಜಲಪಾತವನ್ನು ತಡೆಯಲಾಗುತ್ತಿಲ್ಲ. ಅದು ನೊಕ್ಕಿ ಧುಮುಕುತ್ತಿದೆ.

"ಅಯ್ಯೋ ದೇವರೆ, ವಿವೇಕಾನಂದಸ್ವಾಮಿಯೆ, ಗಾಂಧೀಜಿಯೆ, ಬಸವಪ್ರಭುವೆ, ಮಂಜಪ್ಪಣ್ಣನವರೆ, ಈ ತೊಡಕಿನಿಂದ ಪಾರಾಗುವ ದಾರಿ ಯಾವುದು ?"

ಚೌಡೇಶ್ವರನ ದಿನಚರಿಯ ಆ ಭಾಗವನ್ನೋದಿ ಮುಗಿಸುತ್ತಲೂ ಅವನ ಬಗೆಗೆ ಕನಿಕರ ಬರದಿರಲಿಲ್ಲ ಮಹಾದೇವನಿಗೆ. "ಪ್ರಪಂಚ ಎಷ್ಟು ವಿಚಿತ್ರವಿದೆಯಲ್ಲಾ!'' ಎಂದು ಅವನು ತನಗೆ ತಾನೆ ಹೇಳಿಕೊಂಡ.

ಎರಡು ದಿನಗಳ ತರುವಾಯ ಮರಳಿ ಬಂದ ಚೌಡೇಶ್ವರ ಮಹಾದೇವನ ಕೈಗೆ ಹತ್ತು ರೂಪಾಯಿಗಳನ್ನು ಹಾಕಿ, "ನಿನ್ನ ತಾಯಿ ಊರಲ್ಲಿ ಎಷ್ಟು ಕಷ್ಟಪಡುತ್ತಿರುವಳೋ. ಆಕೆಗೆ ಈ ಹಣವನ್ನು ಕಳಿಸು," ಎಂದು ಹೇಳಿದ. "ಬೇಡ, ಬೇಡ," ಎಂದು ಮಹಾದೇವ ಎಷ್ಟುಸಲ ಹೇಳಿದರೂ ಆತ ಕೇಳಲಿಲ್ಲ. ಮನಿಯಾರ್ಡರ್ ಫಾರ್ಮು ತರಿಸಿ ತಾನೇ ಹೆಸರು ವಿಳಾಸ ಬರೆದು ಒಬ್ಬ ಬಾಲಕನ ಮೂಲಕ ಅದನ್ನು ಅಂಚೆ ಕಚೇರಿಗೆ ಕಳುಹಿಸಿಕೊಟ್ಟ.

ರಾತ್ರಿಯ ಊಟ ಮುಗಿಯುತ್ತಲೂ ಆತ ಮಹಾದೇವನನ್ನು ಬರಮಾಡಿಕೊಂಡು,

"ಇವೊತ್ತು ಬಸವೇಶ್ವರ ನಾಟಕವಿದೆ. ಅದರ ವ್ಯವಸ್ಥಾಪಕರು ನನ್ನನ್ನು ಬಹಳ ಪ್ರೀತಿಯಿಂದ ಆಮಂತ್ರಿಸಿದ್ದಾರೆ. ಒಬ್ಬನೇ ಹೋಗುವುದೆಂದರೆ ನನಗೆ ಬೇಸರು. ನೀನೂ ಬಂದು ಬಿಡು,'' ಎಂದು ಹೇಳಿದ.

ಮಹಾದೇವ ಆ ಪ್ರಸಂಗವನ್ನು ನಿವಾರಿಸಲು ಯತ್ನಿಸುತ್ತ,

"ನನಗೆ ತಲೆ ಬಹಾಳ ನೋಯಿಸುತ್ತೈತಿ ಸ್ವಾಮೇರ. ಬ್ಯಾರೆ ಯಾರ ನ್ನಾದರೂ ಕರಕೊಂಡು ಹೋಗ್ರಿ," ಎಂದ.

"ಅವರೆಲ್ಲರೂ ನೋಡಿದ್ದಾರೆ. ನೋಡದೆ ಇರುವವರೆಂದರೆ ನಾನು ನೀನು ಇಬ್ಬರೆ. ಬಸವೇಶ್ವರರಂಥ ಮಹಾತ್ಮರ ನಾಟಕ ನೋಡುವಾಗ ನಿನ್ನ ತಲೆನೋವು ಎಲ್ಲಿ ಉಳಿದೀತು! ಎರಡು ಗಂಟೆಗೆಲ್ಲ ನಾಟಕ ಮುಗಿಯುತ್ತದೆ. ಆ ವೇಳೆ ಬಂದು ಸುಖವಾಗಿ ನಿದ್ದೆ ಮಾಡಬಹುದು."

ಅಂದು ರಾತ್ರಿ ತನ್ನನ್ನು ಬಲೆಗೆ ಬೀಳಿಸಲೆಂದು ಚೌಡೇಶ್ವರ ಹೂಡುತ್ತಿದ್ದ ಹೊಂಚು ಅದು ಎಂಬುದನ್ನು ಯಾವಾಗಲೊ ಅರಿತುಕೊಂಡಿದ್ದ ಮಹಾದೇವ. ನಾಟಕಕ್ಕೆ ಹೋಗುವುದನ್ನು ತಪ್ಪಿಸುವಂತೆಯೂ ಇರಲಿಲ್ಲ. ಆತ ಮನಸ್ಸಿನಲ್ಲಿಯೆ ಒಂದು ನಿರ್ಧಾರಕ್ಕೆ ಬಂದು, ಮೈತುಂಬ ಕಂಬಳಿ ಹೊದೆದುಕೊಂಡು ಚೌಡೇಶ್ವರನೊಡನೆ ಹೊರಟ.

ನಾಟಕಗೃಹ ಸಮೀಪಿಸುತ್ತಲೂ, "ಈಗ ಬರ್ತೀನಿ ಒಂದಕ್ಕ ಹೋಗಿ. ನೀವು ಮುಂದಾಗಿರಿ," ಎಂದು ಹೇಳಿದವನೆ ರಸ್ತೆಯ ಬದಿಗೆ ಹೋಗಿ ಕತ್ತಲೆ ಯಲ್ಲಿ ದೇಹ ಮರೆಸಿಕೊಂಡು ನಿಧಾನವಾಗಿ ಹಿಂದಿರುಗಿ ಆ ಬೀದಿಯನ್ನು ತ್ಯಜಿಸಿ ವೇಗವಾಗಿ ಹೆಜ್ಜೆ ಹಾಕುತ್ತ ಹರಿಜನ ನಿಲಯದ ಕಡೆ ಸಾಗಿದ ಮಹಾದೇವ.

ನಿಲಯದ ಬಾಗಿಲು ಮುಚ್ಚಿದ್ದಿತಾದರೂ ಒಳಗಡೆ ಇನ್ನೂ ದೀಪ ವುರಿಯುತ್ತಿತ್ತು. ಉಗ್ರ ಮುಖದ ದೇವಿಯ ನೆನಪು ಮಾಡಿಕೊಂಡು ಅಂಜುತ್ತಲೇ ಬಂದು ಮಹಾದೇವ, "ಮಾಸ್ತರೇ," ಎಂದು ಮೆಲ್ಲಗಿನ ದನಿ ಯಲ್ಲಿ ಕೂಗಿದಾಗ ಕಚೇರಿ ಕೊಟಡಿಯಲ್ಲಿ ಪುಸ್ತಕ ಓದುತ್ತ ಕುಳಿತಿದ್ದ ಸಾಂಬಯ್ಯನವರೇ ಎದ್ದು ಬಂದು ಬಾಗಿಲು ತೆರೆದು ಅವನನ್ನು ಒಳಗಡೆ ಕರೆದುಕೊಂಡರು. ಹೆದರಿಕೆಯಿಂದ ದೀರ್ಘಶ್ವಾಸ ಬಿಡುತ್ತಿದ್ದ ಅವನನ್ನು ಕಂಡು ಮುಗುಳ್ನಗೆ ಬೀರುತ್ತಾ ಅವರು ಕೇಳಿದರು:

"ಓಡಿಬಂದಿಯೇನಪ್ಪಾ? ಯಾಕ? ಏನಾಯಿತು?"

ಉತ್ತರವೀಯಲೆಂದು ಮಹಾದೇವ ಬಾಯ್ತೆರೆದ. ಮಾತಿಗೆ ಪ್ರತಿಯಾಗಿ ಅವನ ಮುಖದಿಂದ ರೋದನಸ್ವರ ಹೊರಚಿಮ್ಮಿತು.

೨೨

ಮತ್ತೆ ಮಾಸ್ತರರು ಮಾತನಾಡಲಿಲ್ಲ. ಅಳುವ ಕಂದನನ್ನು ಸಂತೈಸಿ ಮಲಗಿಸುವಂತೆ ಮಹಾದೇವನನ್ನು ಸಂತೈಸಿ, ಜಮುಖಾನದ ಮೇಲೆ ಅವನನ್ನು ಮಲಗಿಸಿದರು.

ಬೆಳಗಿನ ಐದು ಗಂಟೆಗೇ ಅವರು ಎದ್ದು ಪ್ರಾತರ್ವಿಧಿಗಳನ್ನು ತೀರಿಸಿ ಕೊಂಡು ಬರುವ ಹೊತ್ತಿಗೆ ಮಹಾದೇವನಿಗೂ ಎಚ್ಚರವಾಯಿತು.

"ತಿರುಗಾಡಿಕೊಂಡು ಬರೋಣವಂತೆ, ನಡೆ," ಎಂದರು ಮಾಸ್ತರರು.

ಬೆಳಗಾವಿಯ ರಸ್ತೆಗುಂಟ ಹೊರಟು ಮೂರು ಮೈಲಿಗಳವರೆಗೆ ನಡೆದು ಹೋಗಿ ಒಂದು ಹೊಲದಲ್ಲಿ ಕುಳಿತುಕೊಂಡರು. ಅಷ್ಟರೊಳಗಾಗಿ ಮಹಾದೇವ ತನ್ನ ವೃತ್ತಾಂತವನ್ನೆಲ್ಲ ಹೇಳಿ ಮುಗಿಸಿದ್ದ.

"ಚೌಡೇಶ್ವರನ ಬಗ್ಗೆ ನಾನೂ ಕೇಳಿದ್ದೀನಿ. ನೀನು ಹೊರಟು ಬಂದದ್ದು ಒಳ್ಳೆಯದೇ ಆಯಿತು," ಎಂದರು ಮಾಸ್ತರರು....

"ಆತು. ಆದರ ಮುಂದೇನು ಮಾಡೂದು ಅಂತ...."

"ನೋಡೋಣ. ಶಿವನಿದ್ದಾನ. ಏನಾದರೂ ಹಾದಿ ತೋರಿಸಿಯಾನು."

ಪ್ರಿಯನ ದರ್ಶನದಿಂದ ಪುಲಕಿತಳಾದ ಯುವತಿಯ ಕೆಂಪೇರಿದ ಕೆನ್ನೆಯಂತೆ ತೋರುತ್ತಿದ್ದ ಮೂಡಲದಿಸೆಯನ್ನು ದಿಟ್ಟಿಸುತ್ತ ಕೆಲಹೊತ್ತು ಸುಮ್ಮನೆ ಕುಳಿತಿದ್ದ ಮಹಾದೇವ. ಅನಂತರ ಮೆಲ್ಲಗೆ ದೃಷ್ಟಿ ಹೊರಳಿಸಿ ಮಾಸ್ತರರ ಮುಖವನ್ನು ನಿಟ್ಟಿಸಿ ನೋಡಿದ. ಕೆಲವೇ ವರ್ಷಗಳ ಅವಧಿಯಲ್ಲಿ ಅವರಿಗೆ ಮುಪ್ಪು ಬಂದಂತೆ ಕಾಣುತ್ತಿತ್ತು. ಮೊದಲಿನಂತೆಯೆ ಅವರ ಮುಖ ಪ್ರಶಾಂತ

ವಾಗಿದ್ದಿತಾದರೂ ಕಣ್ಣುಗಳಲ್ಲಿ ಗೂಢವೇದನೆಯ ಕಪ್ಪುನೆರಳು ಆಡುತ್ತಿದ್ದಂತೆ ಭಾಸವಾಗುತ್ತಿತ್ತು.

"ನೀವು ಹ್ಯಾಂಗ ಇದೀರಿ ಮಾಸ್ತರರೇ?"

"ನಾನೇ? ನನಗೇನಾಗ್ಯದಪ್ಪ? ಚೆನ್ನಾಗೇ ಇದೀನಿ," ಎಂದು ನುಡಿಯುತ್ತಾ ಅವರು ಎಳೆಮುಗುವಿನ ಹಾಗೆ ನಕ್ಕರು. ಅವರ ಮುಖದ ಮೇಲೆ ಯಾವುದೋ ಭಾವನೆಯೊಂದು ಅಸ್ಪಷ್ಟವಾಗಿ ಕಾಣಿಸಿಕೊಂಡು ಅದೃಶ್ಯ ವಾದಂತಾಯಿತು. ನಿಲಯದ ದೇವಿಯ ಉರಿಮುಖವನ್ನು ನೆನೆದು ಮಹಾದೇವ ತನಗೆ ತಾನೆ ಕೇಳಿಕೊಂಡ: ಅವಳಿಂದ ಮಾಸ್ತರರಿಗೂ ತೊಂದರೆಯಾಗುತ್ತಿರ ಲಿಕ್ಕಿಲ್ಲವಷ್ಟೆ? ಇದ್ದರೂ ಇರಬಹುದು. ಹಳ್ಳಿಯಲ್ಲಿ ಒಂದು ಬಗೆಯಿಂದ ತೃಪ್ತ ರಾದಂತಿದ್ದ ಮಾಸ್ತರರನ್ನು ಇಲ್ಲಿ ಅತೃಪ್ತಿ ಕೊರೆಯುತ್ತಿರುವಂತೆ ತೋರು ತ್ತಿದೆ. ಅವರ ಮನಸ್ಸಿಗೆ ನೆಮ್ಮದಿಯಿಲ್ಲವೆಂಬುದಂತೂ ಸ್ಪಷ್ಟವೇ ಇದೆ. ಏನಾಗಿದೆಯೊ ನಿಲಯದಲ್ಲಿ...

ಮಾಸ್ತರರು ಆ ವಿಷಯವನ್ನು ಬೆಳಸಲಿಲ್ಲ. ಮಹಾದೇವ ಮೌನ ತಳೆಯಬೇಕಾಯಿತು.

ನಿಲಯಕ್ಕೆ ಹಿಂದಿರುಗಿದೊಡನೆ ಮಾಸ್ತರರು ಚೆನ್ನಪ್ಪನವರನ್ನು ಕಂಡು ಮಹಾದೇವನ ವಿಚಾರವಾಗಿ ಮಾತನಾಡಿದರು. ನಿಲಯದಲ್ಲಿ ಚಿಕ್ಕಪುಟ್ಟ ಕೆಲಸಗಳನ್ನು ನೋಡಿಕೊಳ್ಳಲು ಒಬ್ಬ ಸೇವಕನ ಅವಶ್ಯಕತೆಯಿತ್ತು. ಮಹಾದೇವನನ್ನು ಆ ಸ್ಥಾನಕ್ಕೆ ನೇಮಿಸಿಕೊಂಡು ತಿಂಗಳಿಗೆ ಎಂಟು ರೂಪಾಯಿ ಸಂಬಳ ಕೊಡಲು ಒಪ್ಪಿಕೊಂಡರು ಚೆನ್ನಪ್ಪ.

ಅವರು ಮಾತನಾಡುತ್ತ ಕುಳಿತಿದ್ದಹಾಗೆ ನಿಲಯದ ದೇವಿಯ ಸವಾರಿ ಅಲ್ಲಿಗೆ ದಯಮಾಡಿಸಿತು.

"ಏನು ನಡಸೀರಿ ಮಸಲತ್ತು?" ಎಂದಾಕೆ ಆರಂಭಿಸುತ್ತಲೂ ಚೆನ್ನಪ್ಪ ದೇಶಾವರಿ ನಗೆ ತುಳುಕಿಸುತ್ತ–"ನಿನಗೆ ತಿಳಿಯದ ಹಾಗೆ ನಾನೆಂಥ ಮಸಲತ್ತು ನಡಸೂದು ಚಂಪಾವತಿ! ನಿಲಯಕ್ಕೆ ಒಂದು ಆಳು ಬೇಕಲ್ಲ. ಈ ಹುಡುಗನ್ನ ತಗೊಂಡು ಬಿಡೂಣು ಅಂತ. ಎಂಟು ರೂಪಾಯಿ ಸಂಬಳ ಅಂದರೇನು ಹೆಚ್ಚಲ್ಲವಲ್ಲ!" ಎಂದರು.

ಚಂಪಾವತಿ ಬಿಗಿದ ತುಟಿಗಳನ್ನು ಸಡಿಲಿಸದೆ ಕುರ್ಚಿಯ ಮೇಲೆ ಗಂಭೀರವಾಗಿ ಕುಳಿತುಕೊಂಡಳು.

ಹೆದರಿಕೆ ತುಂಬಿದ ದೃಷ್ಟಿಯಿಂದ ಹೆಂಡತಿಯನ್ನು ನಿಟ್ಟಿಸಿ ನೋಡುತ್ತ ಚೆನ್ನಪ್ಪ,

"ಏನೆಂದೆ ಚಂಪಾವತೀ? ಆಗಬಹುದಲ್ಲವೆ?" ಎಂದರು.

"ಮೊದಲೇ ಎಲ್ಲಾ ಮಾತಾಡಿ ಗೊತ್ತುವಳಿ ಪಾಸುಮಾಡಿಬಿಟ್ಟು ಈಗ ನನ್ನೇನು ಕೇಳುತೀರಿ?" ಎಂದು ಮುನಿಸಿನಿಂದ ನುಡಿದಳು ಚಂಪಾವತಿ.

"ನೋಡು. ನೀನು ಬ್ಯಾಡಾ ಅಂದರ ಬಿಟ್ಟು ಬಿಡುತೀನಿ. ಈ ನಿಲಯದ ಗವರ್ನರ್ ಜನರಲ್ ಅಲ್ಲವೇ ನೀನು?" ಎಂದು ನುಡಿದು ಲಜ್ಜಾರಹಿತ ನಗೆ ಬೀರಿದರು ಚೆನ್ನಪ್ಪ.

"ಒಂದು ತಿಂಗಳು ಕೆಲಸ ಮಾಡಲಿ. ಆಮ್ಯಾಲ ಸಂಬಳ ಗೊತ್ತು ಮಾಡಲು ಬಂದೀತು," ಎಂದು ದೇವಿಯವರ ಅಪ್ಪಣೆಯಾಯಿತು.

"ಸಾಲೆ ಸುರು ಆಗುವತನಕ ಮಹಾದೇವ ಹಗಲೆಲ್ಲ ಕೆಲಸ ಮಾಡುತ್ತಾನೆ. ಮುಂದೆ ಮಾತ್ರ ಬೆಳಿಗ್ಗೆ ಸಂಜೆಯಷ್ಟೆ ಅವನ ಕೆಲಸ. ಮಧ್ಯಾಹ್ನ ಸಾಲೆಗೆ ಹೋಗುವನ," ಎಂದರು ಮಾಸ್ತರರು.

"ಅಂದರೆ? ಇವನೇನು ಇಲ್ಲಿ ಕೆಲಸಕ್ಕ ಬರುವವನೋ? ಸಾಲೆಗೆ ಹೋಗಲಿಕ್ಕೆ ಬರುವವನೋ?"

"ಮುಖ್ಯವಾಗಿ ಅವ ಇಂಗ್ಲಿಷ್ ಕಲಿಯಬೇಕು. ಅದರೊಟ್ಟಿಗೇ ಕೆಲಸ. ನಲವತ್ತು ಜನರಿದ್ದಾರ. ಇವನೊಬ್ಬನೇನು ಭಾರವಲ್ಲ. ಹುಡುಗ ಕಲಿಯಲಿ ಅನ್ನವರೇ," ಎಂದು ಸಾಂಬಯ್ಯನವರು ಕೇಳಿಕೊಂಡರು.

"ಇರಲೇಳು ಚಂಪಾವತೀ," ಎಂದರು ಚೆನ್ನಪ್ಪ.

"ಆಯಿತಲ್ಲ. ಕೆಲಸವನ್ನು ಮಾತ್ರ ಚುರುಕಾಗಿ ಮಾಡಬೇಕು ನೋಡೋ ಹುಡುಗಾ. ಮೈಗಳ್ಳತನ ಅಂದರ ನನಗೆ ಆಗುವದಿಲ್ಲ. ಕದಿಯೂದು ಗಿದಿಯೂದು ಮುಂತಾದದ್ದು...."

ಮಾಸ್ತರರು ನಡುವೆ ಬಾಯಿಹಾಕಿ,

"ಛೆ. ಛೆ. ನಮ್ಮ ಮಹಾದೇವ ಅಂಥವನಲ್ಲ ಅನ್ನವರೇ," ಎಂದರು.

"ಯಾರಿಗೆ ಗೊತ್ತು ತಾಯಿ! ನೀವೊಬ್ಬ ಭೋಳೇಸಾಂಬನಂಥವರು. ನಿಮಗೆ ತಿಳಿಯುವದು ಅಷ್ಟರಲ್ಲೇ. ನನ್ನ ಇವರಿಗೂ ತಿಳಿಯುವದು ನಿವ್ಮಷ್ಟೇ. ನಿಲಯವನ್ನೆಲ್ಲಾ ನಡಸಿಕೊಂಡು ಹೋಗುವ ದೊಡ್ಡ ಜವಾಬ್ದಾರಿಯನ್ನ ಬಾಪೂಜಿ ನನ್ನ ತಲೆಯ ಮೇಲೆ ಹೊರಸಿದ್ದಾರ. ನಾನೊಬ್ಬಳಿರದಿದ್ದರ ಎಂದೋ ದಿವಾಳಿ ತೆಗೆದು ಹೋಗುತಿತ್ತು ನಿಲಯ," ಎನ್ನುತ್ತಾ ಕುರ್ಚಿಯಿಂದೆದ್ದು ಒಳಗಡೆ ತೆರಳಿದಳು ಚಂಪಾವತಿ.

ಆ ವೇಳೆಗೆ ಅಂಗಳದಲ್ಲಿ ಕಾರು ಬಂದು ನಿಂತ ಸದ್ದಾಯಿತು. "ಸಾವುಕಾರರು ಬಂದರೇನೊ," ಎನ್ನುತ್ತ ಚೆನ್ನಪ್ಪ ಏಳುತ್ತಿದ್ದಂತೆಯೆ, ಆಗ ತಾನೆ ಒಳಗಡೆ ಹೋಗಿದ್ದ ಚಂಪಾವತಿ ಮತ್ತೆ ಹೊರಗೆ ಬಂದು ಮುಖದ ಮೇಲೆ ಸಂತಸದ ಭಾವನನ್ನು ತುಳುಕಿಸುತ್ತ, "ಬರ್ರಿ, ಬರ್ರಿ—ಈಗ ನೆನಪಾಯಿತೇನೋ ಬಡವರಮ!" ಎನ್ನುತ್ತಾ ಸಾಹುಕಾರ ಕುಬೇರಪ್ಪನನ್ನು ಸ್ವಾಗತಿಸಿದಳು.

ಹತ್ತಿರದ ಹಳ್ಳಿಯೊಂದರ ಜಮೀನ್ದಾರ ಕುಬೇರಪ್ಪ. ಏಳು ನೂರು ಎಕರೆ ಭೂಮಿಯ ಒಡೆಯ. ವರ್ಷವೊಂದಕ್ಕೆ ಹದಿನೈದರಿಂದ ಇಪ್ಪತ್ತು ಸಾವಿರದ ವರೆಗೂ ಅವನ ಸಂಪಾದನೆ. ಆಸಾಮಿ ಲೋಭಿಯೇನೂ ಅಲ್ಲ. ಧಾರಾಳವಾಗಿ ಹಣ ಖರ್ಚುಮಾಡುವ ಸ್ವಭಾವ. ಸಾಮಾನ್ಯವಾಗಿ ಇಂಥ ಶ್ರೀಮಂತರ ಸುತ್ತಲೂ ಸ್ವಾರ್ಥಿಗಳವೊಂದು ಗುಂಪೇ ಸೇರಿಕೊಂಡಿದ್ದು ಅವರನ್ನು ಹಲವಾರು ದುಶ್ಚಟಗಳಿಗೆ ಸಿಲುಕಿಸಿ ಅವರಿಂದ ಹಣ ದೋಚುವ ಕಾಯಕದಲ್ಲಿ ತೊಡಗಿರುತ್ತವೆ. ಕುಬೇರಪ್ಪನ ಹಣದ ಮೇಲೆ ಕಣ್ಣಿಟ್ಟುಕೊಂಡಿದ್ದ ಹಿಂಬಾಲಕರಿಗೂ ಕೊರತೆಯಿರಲಿಲ್ಲ. ಕುಬೇರಪ್ಪನಿಗೆ ಮೊದಲಿನಿಂದಲೂ ಹೆಣ್ಣಿನ ಗೀಳು ವಿಪರೀತ. ಹಳ್ಳಿಯಲ್ಲಿಯೆ ಇಬ್ಬರು ಹೆಂಗಸರನ್ನು ಮಡಗಿದ್ದುದಲ್ಲದೆ ನಗರಗಳಲ್ಲೂ ರಹಸ್ಯ ಪ್ರೇಯಸಿಯರನ್ನು ಸಾಕಿಕೊಂಡಿದ್ದ ಕುಬೇರಪ್ಪ. ಅವನ ಹಣದ ಗಾಳಕ್ಕೆ ಬಲಿಯಾಗುವ ಮೀನುಗಳಿಗೂ ಕೊರತೆಯಿರಲಿಲ್ಲ.

ಹೆಣ್ಣಿನ ಹುಚ್ಚಿನ ತರುವಾಯ ಕುಬೇರಪ್ಪನಿಗಂಟಿಕೊಂಡಿದ್ದ ಇನ್ನೊಂದು ದೊಡ್ಡ ಹುಚ್ಚು ಹೆಸರಿನದು. ಹಣದ ಬಲದಿಂದ ಈ ಜಗತ್ತಿನಲ್ಲಿ ಏನನ್ನಾದರೂ ಸಾಧಿಸಬಹುದೆಂಬ ಸತ್ಯವನ್ನು ಕಂಡುಕೊಂಡಿದ್ದ

ಕುಬೇರಪ್ಪ ಕಾಂಗ್ರೆಸ್ ಸಂಸ್ಥೆಗೆ ಸೇರಿ ಖಾದಿ ಬಟ್ಟೆ ತೊಟ್ಟು, ಮೊತ್ತ ಮೊದಲು ತಮ್ಮ ತಾಲ್ಲೂಕಿನ ಕಾರ್ಯಕರ್ತರನ್ನೆಲ್ಲ ತನ್ನ ಹಣದ ಬುಟ್ಟಿಗೆ ಬೀಳಿಸಿಕೊಂಡು "ಸರ್ವಾನುಮತದಿಂದ ಅವಿರೋಧವಾಗಿ" ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷನಾಗಿ ಆರಿಸಿ ಬಂದಿದ್ದ. ತಾಲ್ಲೂಕಿನಿಂದ ಜಿಲ್ಲೆಗೆ ಮುಂದಿನ ಮೆಟ್ಟಲು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಯಾಗಲು ಕುಬೇರಪ್ಪ ಈಚೆಗೆ ಯತ್ನಿಸುತ್ತಿದ್ದ. ಅವನ ಯತ್ನ ಸಫಲವಾಗುವಂತೆ ಪ್ರಭಾವ ಬೀರುತ್ತಿದ್ದ ಅನೇಕ ಕಾರ್ಯಕರ್ತರಲ್ಲಿ ಚೆನ್ನಪ್ಪ ಚಂಪಾವತಿ ಇಬ್ಬರೂ ಮುಖ್ಯರಾಗಿದ್ದರು. ಅದಕ್ಕೆ ಪ್ರತಿಫಲವೆಂದು ಕುಬೇರಪ್ಪ ಹರಿಜನ ನಿಲಯಕ್ಕೆ ಉದಾರವಾಗಿ ಸಹಾಯ ಸಲ್ಲಿಸುತ್ತಿದ್ದ. ಪ್ರತಿ ವರ್ಷವೂ ಹತ್ತು ಚೀಲಗಳಷ್ಟು ಜೋಳವನ್ನು ನಿಲಯಕ್ಕೆ ಕಾಣಿಕೆಯಾಗಿ ಒಪ್ಪಿಸುತ್ತಿದ್ದುದಲ್ಲದೆ ಚೆನ್ನಪ್ಪ ಕೇಳಿದಾಗ ಕೇಳಿದಷ್ಟು ಹಣವನ್ನೂ ಕೊಡುತ್ತ ಬಂದಿದ್ದ. ಗೊಬ್ಬೂರಿಗೆ ಬಂದಾಗಲೆಲ್ಲ ಅವನು ಬಿಡಾರ ಹೂಡುತ್ತಿದ್ದುದು ಹರಿಜನ ನಿಲಯದಲ್ಲಿಯೆ. ಕಚೇರಿ ಕೊಟಡಿಯ ಹಿಂಬದಿಯಲ್ಲಿದ್ದ ಖಾಸಾ ಕೊಟಡಿಯೊಂದು ಕುಬೇರಪ್ಪನಿಗಾಗಿ ಕಾದಿರಿಸಲ್ಪಟ್ಟದ್ದಿತು. ವಾರದಲ್ಲಿ ಎರಡು ಮೂರು ದಿನಗಳನ್ನಾದರೂ ಆತ ಅಲ್ಲಿಯೆ ಕಳೆಯುತ್ತಿದ್ದುದಿತ್ತು. ಅವನು ಅಲ್ಲಿಗೆ ಬಂದು ಹೋಗುವುದರ ಬಗ್ಗೆ ಯಾವ ನಿಯಮ ನಿರ್ಬಂಧಗಳೂ ಇರಲಿಲ್ಲ. ಚೆನ್ನಪ್ಪ ಊರಲ್ಲಿದ್ದಾಗ ಬರುತ್ತಿದ್ದಂತೆ ಅವರು ನಿಲಯಕ್ಕೆ ನಿಧಿಯೆತ್ತಲು ಸಂಚಾರ ಹೋಗಿದ್ದಾಗಲೂ ಬರುತ್ತಿದ್ದ. "ಸಾಹುಕಾರರೂ ನಮ್ಮ ಮನೆಯವರಲ್ಲೊಬ್ಬರು," ಎಂದು ಚೆನ್ನಪ್ಪ ಹೇಳುವುದು ವಾಡಿಕೆಯಾಗಿತ್ತು. ಕುಬೇರಪ್ಪನ ಕಾರಿನಲ್ಲಿ ಕುಳಿತುಕೊಂಡು ಪೇಟೆಯಲ್ಲಿ ಸುತ್ತಿ ಮೆರೆದು ಬರುವುದೆಂದರೆ ಚಂಪಾವತಿಗೂ ಅತ್ಯಂತ ಸಂತಸದ ವಿಷಯವಾಗಿತ್ತು. ಬಡವರ ಮನೆಯಲ್ಲಿ ಹುಟ್ಟಿ ಬೆಳೆದು ಬಡವನ ಕೈಹಿಡಿದು ಬಡತನವೆಂದರೆ ಜುಗುಪ್ಸೆಗೊಂಡಿದ್ದ ಆಕೆಗೆ ಕುಬೇರಪ್ಪನ ಸಾನ್ನಿಧ್ಯ ತುಂಬ ಪ್ರಿಯಕರವಾಗಿ ಪರಿಣಮಿಸಿತ್ತು. ಅವಳಿಗೂ ಕುಬೇರಪ್ಪನಿಗೂ ರಹಸ್ಯಸಂಬಂಧ ಬೆಳೆದು ಬಂದಿದೆಯೆಂದು ಗೊಬ್ಬೂರಿನಲ್ಲೆಲ್ಲ ವದಂತಿ ಹರಡಿತ್ತು. ಚಂಪಾವತಿಯಾಗಲಿ ಚೆನ್ನಪ್ಪನಾಗಲಿ ಅದಕ್ಕೆ ಗಮನವನ್ನೆ ಕೊಟ್ಟಿರಲಿಲ್ಲ. ಕುಬೇರಪ್ಪನಿ

ಗಂತೂ ಜನರ ಮಾತಿನ ಕಡೆಗೆ ಕೊಂಚವೂ ಲಕ್ಷ್ಯವಿರಲಿಲ್ಲ. ವೈಯಕ್ತಿಕ ಶೀಲ ಚಾರಿತ್ರ್ಯಗಳಿಗೆ ಅವನ ದೃಷ್ಟಿಯಲ್ಲಿ ಕೊಂಚವೂ ಬೆಲೆಯಿರಲಿಲ್ಲ.

ಕಾರಿನಿಂದಿಳಿದ ಕುಬೇರಪ್ಪ ತನ್ನ ಗುಂಡೋದರದ ಮೇಲೆ ಕೈಯಾಡಿ ಸುತ್ತ, ಚಂಪಾವತಿಯನ್ನು ಕಂಡು ಮುಗುಳ್ನಗೆ ಬೀರುತ್ತ ನಿಲಯದ ಮೆಟ್ಟಲುಗಳನ್ನೇರಿ ಮೇಲೆ ಬಂದು ತನ್ನ ಖಾಸಾ ಕೊಟಡಿಯತ್ತ ಸಾಗಿದ.

"ಮತ್ತೆ ಹೊಟ್ಟೆನೋವೇನ್ರೀ ?" ಎಂದು ಕೇಳಿದಳು ಚಂಪಾವತಿ.

"ಅದೇನು ಬಿಡು, ಇದ್ದದ್ದೇ. ಮೊನ್ನೆ ಗಾಣವಾಯಿತಲ್ಲ ನಮ್ಮದು. ಆಗ ಏನೋ ಸ್ವಲ್ಪ ಕಬ್ಬಿನ ಹಾಲು ಕುಡಿದೆ. ಅಷ್ಟಕ್ಕೇ ಮತ್ತೆ ನೋವು ಮರುಕಳಿಸಿತು."

"ಇಲ್ಲೇ ಒಂದೆರಡು ವಾರವಿದ್ದು ಪೂರಾ ವಿಶ್ರಾಂತಿ ಪಡೆಯಬೇಕು ನೀವು. ಪ್ರವಾಸ ನಿಲ್ಲಿಸಬೇಕು," ಎಂದಳು ಚಂಪಾವತಿ.

ವಿರಾಮ ಕುರ್ಚಿಯ ಮೇಲೆ ದೇಹವನ್ನೊರಗಿಸುತ್ತ, ತಲೆಯ ಮೇಲಿನ ಗಾಂಧಿ ಟೋಪಿಯನ್ನು ತೆಗೆದು ತೊಡೆಯ ಮೇಲಿರಿಸಿಕೊಂಡು ಕುಬೇರಪ್ಪ ಹೇಳಿದ:

"ಪ್ರವಾಸ ಮಾಡದಿದ್ದರ ನಡದೀತು ಹ್ಯಾಂಗ ಚಂಪಾ ? ಎಲೆಕ್ಶನ್ ಬ್ಯಾರೆ ಹತ್ತರ ಬಂತು. ಜಿಲ್ಲೆಯಲ್ಲೆಲ್ಲಾ ಪ್ರಚಾರವಾಗಬೇಕಲ್ಲ."

"ಹೌದೌದು. ಅದೂ ಖರೆ. ಈ ಸಾರೆ ನೀವೂ ನಿಲ್ಲುವವರು ಹೌದಲ್ಲೋ ಎಲೆಕ್ಶನಕ್ಕ ?"

"ಇವರು ನಿಲ್ಲದಿದ್ದರ ಇನ್ಯಾರು ನಿಲ್ಲುವವರು ?" ಎಂದ ಚೆನ್ನಪ್ಪ. "ಎಲೆಕ್ಶನ್ ಅಂದರ ಸಾಧಾರಣ ಮಾತೇನು ? ಏನಿಲ್ಲೆಂದರೂ ಇಪ್ಪತ್ತುಸಾವಿರ ರೂಪಾಯಿ ಬೇಕು ಖರ್ಚಿಗೆ. ನಮ್ಮಂಥವರು ನಿಂತರೆ ಎಲ್ಲಿಂದ ತರೂದು ರೂಪಾಯಿ ?"

"ಅದಕ್ಯಾಕೃತಕ್ಕ ಚಿಂತೀ ಮಾಡುತೀರಿ ಬಿಡ್ರೀ. ಇಪ್ಪತ್ತು ಸಾವಿರ ಅಂದರೇನು ದೊಡ್ಡದು. ನಿಮ್ಮನ್ನೂ ನಿಲ್ಲಿಸೂಣು. ಚಂಪಾವತಿಯನ್ನೂ ನಿಲ್ಲಿಸೂಣು," ಎಂದು ಹೇಳುತ್ತ ಕುಬೇರಪ್ಪ ಚಂಪಾವತಿಯನ್ನು ಓರೆನೋಟ ದಿಂದ ದಿಟ್ಟಿಸಿದ.

ಚಂಪಾವತಿ ಕೊಂಚ ಮಟ್ಟಿಗೆ ಕನ್ನಡ ಓದುಬರೆಹ ಕಲಿತವಳು. ಚೆನ್ನಪ್ಪನವರನ್ನು ಮದುವೆಯಾದ ಬಳಿಕ ಅವರೊಡನೆ ಕಾಂಗ್ರೆಸ್ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತ ಬಂದು ಸಭೆಗಳಲ್ಲಿ ಭಾಷಣ ಮಾಡುವುದನ್ನೂ ಕಲಿತುಕೊಂಡಿದ್ದಳು. ತುಂಬಿದ ಸಭೆಯಲ್ಲಿ ನಿಂತು ಮಹಿಳೆಯೊಬ್ಬಳು ದಿಟ್ಟತನದಿಂದ ಮಾತನಾಡುವುದೆಂದರೆ ಆಗಿನ ಕಾಲದಲ್ಲಿ ಅದೊಂದು ಅಭೂತಪೂರ್ವ ವಿಷಯವೇ ಆಗಿತ್ತು. ಚಂಪಾವತಿಯ ಭಾಷಣ ಕೇಳುವುದಕ್ಕಿಂತ ಹೆಚ್ಚಾಗಿ ಅವಳನ್ನು ನೋಡುವುದಕ್ಕೇ ಜನ ನೆರೆಯುತಿತ್ತು. ಅವಳು ತಕ್ಕಮಟ್ಟಿಗೆ ಚೆಲುವೆ. ಖಾದಿಯ ಸೀರೆ ರವಿಕೆಗಳಲ್ಲಿ ಆ ಚಲುವಿಕೆಗೆ ಒಂದು ಬಗೆಯ ಆಕರ್ಷಣೆಯೂ ಉಂಟಾಗುತಿತ್ತು. “ಕರ್ನಾಟಕದ ಸರೋಜಿನಿಯಪ್ಪಾ ನಮ್ಮ ಚಂಪಾವತಿ !” ಎಂದು ಹೇಳುತ್ತಿದ್ದವರಿಗೂ ಕೊರತೆಯಿರಲಿಲ್ಲ. ಈ ಅಗ್ಗದ ಜನಪ್ರಿಯತೆಯಿಂದಾಗಿ ಚಂಪಾವತಿಯ ಅಹಂಕಾರವೂ ಇಮ್ಮಡಿ ಮುಮ್ಮಡಿಯಾಗಿ ಬೆಳೆದು ಆಕೆ ಗಂಡನನ್ನೂ ನಿರ್ಲಕ್ಷಿಸುವ ಹಾಗಾಗಿತ್ತು. ಚುನಾವಣೆಗೆ ಹುರಿಯಾಳಾಗಿ ನಿಂತು ಆರಿಸಿ ಬಂದು ಶಾಸನಸಭಾ ಸದಸ್ಯಳಾಗಿ ಮೆರೆಯುವ ಮಹತ್ವಾಕಾಂಕ್ಷೆಯನ್ನೂ ಇರಿಸಿಕೊಂಡಿದ್ದಳಾಕೆ. ಕುಬೇರಪ್ಪನಂಥ ಧನಿಕ ಆರಾಧಕರು ಅವಳ ಆಕಾಂಕ್ಷೆಗಳು ಸಫಲವಾಗುವಂತೆ ನೋಡಿಕೊಳ್ಳಲು ಸಿದ್ಧರಿದ್ದರು.

೨೩

" ಅಲ್ಲಿ ಕೂಡು ಆ ಮೂಲೆಯೊಳಗ."

ವರ್ಗದ ಉಪಾಧ್ಯಾಯರ ಆ ನಿಷ್ಠುರ ನುಡಿ ಮಹಾದೇವನ ಕಿವಿಗಳಲ್ಲಿ ದುಮುದುಮಿಸುತಿತ್ತು. ಹಳ್ಳಿಯ ಪ್ರಾಥಮಿಕ ಶಾಲೆಯಲ್ಲೂ ಆತ ಕೂತಿರುತ್ತಿದ್ದುದು ಮೂಲೆಯಲ್ಲಿಯೆ. ಹೈಸ್ಕೂಲಿನಲ್ಲಿಯೂ ಅವನಿಗೆ ಅದೇ ಪ್ರತ್ಯೇಕ ಸ್ಥಾನ ಲಭಿಸಿತ್ತು. ಹಳ್ಳಿಯಲ್ಲೂ ಹಾಗೆಯೆ, ನಗರದಲ್ಲೂ ಹಾಗೆಯೆ. ಈ ಸಮಾಜದಲ್ಲಿ ತಮ್ಮ, ಹೊಲೆಯರ ಸ್ಥಾನ ತೀರ ಕೆಳಗಿನದು. ಎಲ್ಲರೂ ತಮ್ಮನ್ನು ನೋಡುವುದು ತುಚ್ಛತೆಯ ದೃಷ್ಟಿಯಿಂದ.

ಆ ದಿನ ಯಾವ ಯಾವ ಉಪಾಧ್ಯಾಯರು ಏನೇನನ್ನು ಹೇಳಿದರೆಂಬುದು ಮಹಾದೇವನಿಗೆ ನೆನಪಿರಲಿಲ್ಲ. ಹೈಸ್ಕೂಲಿನ ಮೊದಲದಿನದಂದು ತನಗೆ ಲಭಿಸಿದ ಅವಹೇಳನಕಾರಕ ಸ್ವಾಗತ ಅವನ ಮನಸ್ಸನ್ನೆಲ್ಲ ಕಹಿಯಾಗಿಸಿತ್ತು. ಹಾಜರಿ ತೆಗೆದುಕೊಳ್ಳುತ್ತಾ ಉಪಾಧ್ಯಾಯರು ತನ್ನ ಹೆಸರನ್ನೋದಿ ಕ್ಷಣಕಾಲ ತಡೆದು ಕೇಳಿದ್ದರು:

" ನೀನು ಹೊಲೆಯರವನೇನಪಾ ?"

ತಲೆ ತಗ್ಗಿಸಿಕೊಂಡು ಎದ್ದು ನಿಂತು ತಾನು ಹೇಳಿದ್ದ:

" ಹೌದ್ರೀ."

" ಹಾಗಾದರೆ ಅಲ್ಲಿ ಕೂಡು, ಆ ಮೂಲೆಯೊಳಗ."

ಕುಳಿತ ಸ್ಥಳವನ್ನು ತ್ಯಜಿಸಿ, ಪುಸ್ತಕಗಳನ್ನು ಹಿಡಿದುಕೊಂಡು ಇತರ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿದ್ದ ಬೆಂಚಿಗೆ ಹೋಗುತ್ತಿದ್ದ ಹಾಗೆ ತನ್ನ ಕಾಲುಗಳೆರಡೂ ಶಕ್ತಿಹೀನವಾದಂತೆ ಅನುಭವವಾಗಿತ್ತು. ವರ್ಗದಲ್ಲಿನ

ಮೂವತ್ತು ಹುಡುಗರೂ ಇಬ್ಬರು ಹುಡುಗಿಯರೂ ತನ್ನನ್ನೇ ಕುತೂಹಲ ದಿಂದ ದಿಟ್ಟಿಸಿನೋಡುತ್ತಿದ್ದರು. ಅವರೆಲ್ಲರಿಗೂ ತಾನೊಂದು ವಿಚಿತ್ರ ಪ್ರಾಣಿ ಯಂತೆ ಕಾಣಿಸಿರಲು ಸಾಕು. ಮೊದಲನೆಯ ದಿನವೆ ಎಂಥ ಅವಮಾನ.... ಅಲ್ಲಿಯೆ ಹಠಾತ್ತಾಗಿ ತನಗೆ ಸಾವು ಬಂದರೆ ಎಷ್ಟು ಚೆನ್ನ ಎಂದೂ ಅನ್ನಿಸಿತ್ತು. ಮೂಲೆಯಲ್ಲಿನ ಬೆಂಚಿನ ಮೇಲೆ ಕುಳಿತೊಡನೆಯೆ ಕತ್ತು ಬಿಗಿದು ಬಂದಿತ್ತು. ತುಟಿಗಳನ್ನು ಬಿಗಿಯಾಗಿ ಕಚ್ಚಿ ಹಿಡಿದು ಅಳುವನ್ನು ತಡೆಹಿಡಿದುದಾಗಿತ್ತು.

"ಅಲ್ಲಿ ಕೂಡು ಆ ಮೂಲೆಯೊಳಗ...."

ಮೂಲೆ... ಕಸವನ್ನು ಬಿಸುಟುವ ಮೂಲೆ. ಪೊರಕೆಯನ್ನಿರಿಸುವ ಮೂಲೆ. ಪಾದತ್ರಾಣಗಳನ್ನಿಡುವ ಮೂಲೆ.

ಕಸ ... ಪೊರಕೆ.... ಪಾದತ್ರಾಣ...

ಹಿಂದೂ ಸಮಾಜದ ಈ ಉಚ್ಚ ಜಾತಿಗಳ ಜನರು, ಹೊಲೆಯರಾದ ತಮಗೆ ಕೊಡುವ ಬೆಲೆಯೂ ಅಷ್ಟೆ. ಕಸ....

ತನ್ನ ತಾಯಿ....ಶರಣಪ್ಪ...ಸಿದ್ದಗೌಡ....

ಚಂದ್ರಾ....ಸಂಗಣ್ಣ....ಲಚುಮಿ.

ತಮ್ಮ ಹೆಣ್ಣುಮಕ್ಕಳು ಹುಟ್ಟಿ ಬಂದಿರುವುದು ಈ ಉಚ್ಚ ಜಾತಿಯ ಜನರ ಸುಖೋಪಭೋಗಕ್ಕಾಗಿ....

ತಮ್ಮನ್ನು ಈ ದುಃಸ್ಥಿತಿಯಿಂದ ದೂರಗೊಳಿಸುವ ಸೋಗು ಹಾಕಿ ಸ್ವಾರ್ಥ ಸಾಧಿಸಿಕೊಳ್ಳುವ ದೇಶಭಕ್ತರು...

ಹರಿಜನ ನಿಲಯದಲ್ಲೂ ಸಹ ತಮ್ಮ ಜತೆಗೆ ನೀಚವರ್ತನೆಯೇ ಈ ಜನರದು. ಅಲ್ಲಿಯೂ ತಮ್ಮ ಸ್ಥಾನ ಮೂಲೆಯಲ್ಲಿನದೇ. ತಮ್ಮನ್ನು ಕಸಕ್ಕಿಂತ ಕಡೆಯಾಗಿ ಕಾಣುವ ಚಂಪಾವತಿ....

"ಮಾದೇವಾ,"

ಅದು ಕಸ್ತೂರಿಯ ದನಿ. ಅವಳೂ ಹೈಸ್ಕೂಲಿನಿಂದ ಬರುತ್ತಿದ್ದಳು. ಅವಳು ಓದುತ್ತಿದ್ದುದು ಎರಡನೆಯ ತರಗತಿಯಲ್ಲಿ.

"ಹ್ಯಾಂಗನ್ನಿಸಿತು ಹೈಸ್ಕೂಲು ಮಾದೇವಾ ?"

"ಏನು ಹೈಸ್ಕೂಲೋ, ಏನು ಜನರೋ, ಏನು ಅಭ್ಯಾಸವೋ...." ಎಂದು ಬೇಸರವ ದನಿಯಲ್ಲಿ ನುಡಿದ ಮಹಾದೇವ.

"ಮೊದಲನೇ ದಿವಸಕ್ಕೇ ಬ್ಯಾಸರು ಬಂತೇನು?" ನಗುತ್ತ ಕೇಳಿದಳು ಕಸ್ತೂರಿ.

"ನಾವೂ ಮನುಷ್ಯ ಪ್ರಾಣಿಗಳು ಅನ್ನೂದರ ನೆನಪೇ ಇಲ್ಲ ಕಸ್ತೂರೀ, ಈ ಮಂದಿಗೆ," ಎಂದು ಆರಂಭಿಸಿ ವರ್ಗವಲ್ಲಿ ನಡೆದುದೆಲ್ಲವನ್ನೂ ವರದಿಯೊಪ್ಪಿಸಿದ ಮಹಾದೇವ.

"ಇವನ್ನೆಲ್ಲಾ ಇಷ್ಟು ಮನಸಿಗೆ ಹಚ್ಚಿಕೊಂಡರ ನಡೆಯೂ ಹಾಂಗಿಲ್ಲ ಮಾದೇವಾ. ಇದೆಲ್ಲಾ ಏನು ಹೊಸದೇನು ನಮಗ? ನಾನೂ ಹೈಸ್ಕೂಲಿಗೆ ಹೋದ ಮೊದಲನೇ ದಿನ ನನಗೂ ಹೀಂಗs ಹೇಳಿದ್ದರು. ಈಗಲೂ ನಾ ಬ್ಯಾರೆ ಜಾಗದಾಗs ಕೂಡುತೀನಿ. ಎಲ್ಲಾ ರೂಢಿಯಾಗ್ಯದ ನನಗ. ರೂಢಿ ಮಾಡಿಕೊಳ್ಳಾಕs ಬೇಕಲ್ಲ?"

ಒಂದು ಕ್ಷಣ ಸುಮ್ಮನಿದ್ದು ಕಸ್ತೂರಿ ಮತ್ತೆ ಹೇಳಿದಳು:

"ನಿಲಯದೊಳಗ ನನಗ ಎಷ್ಟು ಗೋಳಾಟ ಅದ ಅನ್ನೂದು ನಿನಗ ಪೂರಾ ಗೊತ್ತಿದ್ದಂಗ ಕಾಣೂದಿಲ್ಲ. ನಾ ಅಂತ ತಾಳಿಕೊಂಡು ಉಳಿದೀನಿ. ನಿನಗs ಏನಾದರೂ ನನ್ನಂಥಾ ಪ್ರಸಂಗ ಬಂದಿದ್ದರ ಇಷ್ಟು ಹೊತ್ತಿಗೆ ಓಡಿ ಹೋಗಿ ಬಿಡುತಿದ್ದಿ."

"ಯಾಕ? ಅಂಥಾದ್ದೇನು ಆಗ್ಯದs ನಿನಗ?"

"ನಿನಗಿನ್ನೂ ಏನೂ ಗೊತ್ತಿಲ್ಲೇನು?"

ನಿಲಯದಲ್ಲಿ ಕಸ್ತೂರಿ ತುಂಬ ಕೆಲಸ ಮಾಡಬೇಕಾಗುತ್ತಿದ್ದುದು ಮಹಾದೇವನಿಗೆ ಗೊತ್ತಿದ್ದಿತು. ತನ್ನ ಹಾಗೆ ಅವಳೂ ಬೆಳಗಿನ ಐದು ಗಂಟೆಗೆಲ್ಲ ಹಾಸಿಗೆಯಿಂದೆದ್ದು ಬಾವಿಯಿಂದ ನೀರೆಳೆಯುವ ಕೆಲಸಕ್ಕೆ ನಿಲ್ಲಬೇಕಾಗುತಿತ್ತು. ನಿಲಯದಲ್ಲಿದ್ದ ಹುಡುಗಿಯವರಲ್ಲೆಲ್ಲ ಅವಳೇ ದೊಡ್ಡವಳಾದುದರಿಂದ ಚಂಪಾವತಿ ಅವಳಿಂದ ನಿಷ್ಠುರವಾದ ರೀತಿಯಲ್ಲಿ ಕೆಲಸ ತೆಗೆದುಕೊಳ್ಳುತ್ತಿದ್ದಳು. ನಿಲಯಕ್ಕೆ ಅವಶ್ಯವಿದ್ದ ನೀರು ಸಂಗ್ರಹಿಸುವುದಲ್ಲದೆ ಕಸ ಗುಡಿಸುವುದು, ಪಾತ್ರೆ ತೊಳೆಯುವುದು, ಚೆನ್ನಪ್ಪ ಚಂಪಾವತಿಯರ ಸ್ನಾನಕ್ಕೆ ನೀರು

ಕಾಯಿಸುವುದು, ಚಂಪಾವತಿಯ ಸೀರೆ ರವಿಕೆಗಳನ್ನು ತೊಳೆಯುವುದು, ಮುಸುರೆ ತೆಗೆಯುವುದು ಇತ್ಯಾದಿ ಕೆಲಸಗಳನ್ನೂ ಮಾಡಬೇಕಾಗಿತ್ತು ಕಸ್ತೂರಿ. ಸ್ಕೂಲಿಗೆ ರಜವಿದ್ದಾಗ ಅವಳಿಗೆ ಒಂದು ನಿಮಿಷವೂ ಬಿಡುವು ದೊರೆಯುತ್ತಿರಲಿಲ್ಲ. ಬೆಳಗಿನಿಂದ ರಾತ್ರಿಯವರೆಗೆ ಅವಳು ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಂಡಿರಬೇಕಾಗುತಿತ್ತು. ಮಹಾದೇವನಿಗೂ ಅಷ್ಟೆ. ಅವನ ಎಳೆಯ ಮೈ ಸೋತು ಬಳಲುವಷ್ಟು ಕೆಲಸವಿರುತಿತ್ತು.

"ದುಡಿತಕ್ಕ ನಾನೆಂದೂ ಬ್ಯಾಸರಪಟ್ಟುಕೊಂಡಿಲ್ಲ ಮಾದೇವಾ ಸಿಲಯದಾಗ ನಮಗ ಆಶ್ರಯ ಸಿಕ್ಕದ ಅಂದಮ್ಯಾಲ ನಾವು ದುಡಿಯಾಕs ಬೇಕು. ಆದರs," ಎಂದಳು ಕಸ್ತೂರಿ. "ಆಕೆ ಇದಾಳಲ್ಲಾ ಸಿಲಯದ ಯಜಮಾನಿ, ಅವಳ ನಡತೆ ಹ್ಯಾಂಗದ ಗೊತ್ತಾಗಿರಬೇಕಲ್ಲ ನಿನಗ?"

ಅದೂ ಸ್ವಲ್ಪಮಟ್ಟಿಗೆ ಗೊತ್ತಾಗಿದ್ದಿತು ಮಹಾದೇವನಿಗೆ. ಕುಬೇರಪ್ಪ ನಿಗೂ ಚಂಪಾವತಿಗೂ ಇದ್ದ ಸಲುಗೆಯನ್ನು ಕಂಡು ಅವನಿಗೂ ಸಂದೇಹ ಬಂದಿರದಿರಲಿಲ್ಲ. ಚೆನ್ನಪ್ಪ ಇಲ್ಲದಿದ್ದಾಗಲೂ ಕುಬೇರಪ್ಪ ಅಲ್ಲಿಗೆ ಬರುತ್ತಿದ್ದುದು, ಒಳಗಿನ ಕೊಟಡಿಯಲ್ಲಿ ರಾತ್ರಿಯನ್ನು ಕಳೆಯುತ್ತಿದ್ದುದು, ಚಂಪಾವತಿ ಯಾವಾಗಲೂ ಅವನ ಜತೆಯಲ್ಲಿಯೆ ಇರುತ್ತಿದ್ದುದು ಎಲ್ಲವನ್ನೂ ಆತ ಎಂದೋ ಕಂಡುಕೊಂಡಿದ್ದ.

"ಕುಬೇರಪ್ಪ ಅದಾನಲ್ಲಾ ಆ ದೊಡ್ಡ ದೇಶಭಕ್ತ....ಅವನ್ನ ಚಂಪವ್ವ ಇಟ್ಟುಕೊಂಡಾಳ. ಗೊತ್ತದ ಇಲ್ಲೋ ನಿನಗ?" ಎಂದು ಕೇಳಿದಳು ಕಸ್ತೂರಿ.

"ನನಗೂ ಅನ್ನಿಸಿತ್ತು, ಇದ್ದರೂ ಇರಬಹುದು ಅಂತ. ಆದರs ಅದನ್ನ ತಗೊಂಡೇನು ಮಾಡೂದು ಅಂತ ಸುಮ್ಮನಿದ್ದುಬಿಟ್ಟೇನಿ. ನಾನಿಲ್ಲಿ ಬಂದಿರೂದು ಸಾಲಿ ಕಲಿಯೂದಕ್ಕ. ಇವರು ಹ್ಯಾಂಗಿದ್ದರ ನಮಗೇನಂತೆ!" ಎಂದ ಮಹಾದೇವ.

"ಅವರಷ್ಟಕ್ಕ ಅವರು ಹಾಳು ಬಾವಿ ಬಿದ್ದರೂ ನಾವು ಚಿಂತೀ ಮಾಡಬೇಕಾಗಿಲ್ಲ. ಅದು ಖರೆ. ಆದರs ಈ ಚಂಪವ್ವ ತಾನೊಬ್ಬಳು ಕೆಟ್ಟದ್ದಲ್ಲದs ನಮ್ಮಂಥ ಹುಡುಗೀರನ್ನೂ ಕೆಡಿಸಲಿಕ್ಕೆ ನಿಂತರs?"

ನಗರದ ಕಟ್ಟಡಗಳನ್ನು ಹಿಂದೆ ಬಿಟ್ಟು ಅವರು ನಿಲಯದ ಸಮೀಪ ಬಂದಿದ್ದರು. ಕಸ್ತೂರಿಯ ಮಾತು ಕೇಳಿ ಮಹಾದೇವ ಬೆಚ್ಚಿ ನಡಿಗೆಯನ್ನು ನಿಲ್ಲಿಸಿ,

"ನೀ ಹೇಳೂದರ ಅರ್ಥ ಏನು ಕಸ್ತೂರೀ? ನಿನಗೂ ಗಂಟು ಬಿದ್ದದ ಏನು ಆ ಶನಿ?" ಎಂದು ಕೇಳಿದ.

ಕಸ್ತೂರಿಯ ಮುಗ್ಧ ನೇತ್ರಗಳಲ್ಲಿ ಕಂಬನಿಗಳು ಕಾಣಿಸಿಕೊಂಡುವು. ಸೀರೆಯ ಸೆರಗಿನಿಂದ ಅವುಗಳನ್ನು ಮಿಡಿದುಕೊಳ್ಳುತ್ತ ಅವಳು ಹೇಳಿದಳು:

"ಈಗ ಎರಡು ಮೂರು ತಿಂಗಳಾಯಿತು ಮಾದೇವಾ. ಒಂದೇಸಮನೆ ಕಾಡಿಸಹತ್ತಿದಾಳ."

"ಅರೆ, ನನಗ ಗೊತ್ತಾಗಲಿಲ್ಲಲ್ಲ ಇಲ್ಲಿಯತನಕ?"

"ಹ್ಯಾಂಗ ಗೊತ್ತಾಗೂದು? ನಿನ್ನ ಕೆಲಸs ನಿನಗ ಸಾಕಾಗಿರುತದ. ಇನ್ನು ಇದೆಲ್ಲಾ ತಿಳಿಯೂದು ಹ್ಯಾಂಗ?"

"ಅವಳು ನಿನಗ ಹೇಳೂದಾದರೂ ಏನು ಕಸ್ತೂರೀ?"

"ಆ ಸಾವುಕಾರಗ ನನ್ನ ಮ್ಯಾಲ ಕಣ್ಣು ಬಿದ್ದದ. ಅದಕ್ಕ ಇವಳ ಪ್ರಯತ್ನ. ಕೇಳಿದಷ್ಟು ರುಪಾಯಿ ಕೊಡಿಸುತೀನಿ, ಸೀರಿ ಕುಬುಸ ಕೊಡಿಸುತೀನಿ ಅಂತ ಗಂಟು ಬಿದ್ದಾಳ.

ಮಹಾದೇವ ಹಲ್ಲು ಕಡಿಯುತ್ತ ಕೇಳಿದ:

"ನೀನೇನು ಹೇಳಿದೆ ಕಸ್ತೂರೀ?"

"ಏನು ಹೇಳಲಿ ಮಾದೇವಾ? ಏನೂ ತಿಳೀದ್ಹಾಂಗ ಆಗೇದ. ಇಷ್ಟು ದಿನ ಹ್ಯಾಂಗೋ ತಪ್ಪಿಸಿಕೊಂಡೀನಿ."

"ಇದು ಸಾಂಬಯ್ಯ ಮಾಸ್ತರರಿಗೆ ಗೊತ್ತಿಲ್ಲೇನು?"

"ಗೊತ್ತಿರಾಕs ಬೇಕು. ನಿಲಯದಾಗ ನಡಿಯೂದೆಲ್ಲಾ ಗೊತ್ತಿರಾಕs ಬೇಕಲ್ಲ? ಆದರವರು ಸಂಭಾವಿತರು. ಕಣ್ಣು ಮುಚ್ಚಿಕೊಂಡು ಸುಮ್ಮ ನಿರುತಾರ."

"ಚೆನ್ನಪ್ಪ ಆದರೂ ಯಾಕ ಸುಮ್ಮನಿದ್ದಾರ ಅನ್ನೂದು ನನಗ ತಿಳೀದಾಂಗ ಆಗ್ಯದ ಕಸ್ತೂರೀ."

"ಸುಮ್ಮನಿರದೇನು ಮಾಡುತಾರ? ಚಂಪವ್ವ ಅವರಿಗೆ ಮಣಿಯುವ ಹೆಂಗಸಲ್ಲ. ಅವರೇನಾದರೂ ಅಂದರಂದರ ಗದ್ದಲ ಎಬ್ಬಿಸಿ ಅವಮಾನ ಮಾಡಿಬಿಡುತಾಳ. ಮಂದಿಯೆದುರಿಗೆ ಮಾನ ಕಳಕೊಳ್ಳೂದು ಯಾಕ ಅಂತ ಬಾಯಿ ಮುಚ್ಚಿಕೊಂಡು ಸುಮ್ಮನಿದಾರ ಚೆನ್ನಪ್ಪನವರು. ಅದೂ ಅಲ್ಲದ ಅವರಿಗೂ ಅಸೆಂಬ್ಲಿ ಮೆಂಬರಾಗುವ ಆಶಾ ಬಹಳ. ಕುಬೇರಪ್ಪ ಸಹಾಯ ಮಾಡದಿದ್ದರ ಇವರು ಚುನಾವಣೆಗೆ ನಿಲ್ಲೂದೇ ಶಕ್ಯ ಇಲ್ಲ. ಅದಕ್ಕ ಬಾಯಿ ಹೊಲಿದುಕೊಂಡು ಗಪ್ಪs ಇದಾರ ಚೆನ್ನಪ್ಪ."

ಮತ್ತೊಂದು ಸಂಜೆ ಶಾಲೆಯಿಂದ ಬರುತ್ತಾ ಕಸ್ತೂರಿ ತನ್ನ ಕಥೆಯನ್ನೆಲ್ಲ ಹೇಳಿದಳು: ಧಾರವಾಡದ ಹತ್ತಿರದ ಹಳ್ಳಿಯೊಂದರಲ್ಲಿ ಹರಿಜನ ಕುಟುಂಬವೊಂದರಲ್ಲಿ ಅವಳ ಜನನವಾಯಿತು. ಆ ಹಳ್ಳಿಯ ಸಾಹುಕಾರರೊಬ್ಬರಲ್ಲಿ ಅವಳ ತಂದೆ ಜೀತದಾಳಾಗಿ ದುಡಿಯುತ್ತಿದ್ದ. ಅವನ ಸಂಪಾದನೆ ಹೊಟ್ಟೆ ಬಟ್ಟೆಗೂ ಸಾಲುತ್ತಿರಲಿಲ್ಲ. ತಾಯಿ ಅಲ್ಲಿ ಇಲ್ಲಿ ತಿರಿದು ತಂದು ಸಂಸಾರ ಸಾಗಿಸುತ್ತಿದ್ದಳು. ಒಮ್ಮೆ ಆ ಸಾಹುಕಾರರ ಬಣವೆಯೊಂದಕ್ಕೆ ಅಕಸ್ಮಾತ್ತಾಗಿ ಬೆಂಕಿ ಬಿದ್ದಿತು, ಕಸ್ತೂರಿಯ ತಂದೆಯ ಅಜಾಗರೂಕತೆಯಿಂದಾಗಿಯೆ ಆ ಅನಾಹುತ ನಡೆಯಿತೆಂದು ಭಾವಿಸಿದ ಸಾಹುಕಾರ ಅವನನ್ನು ಬಾರಕೋಲಿನಿಂದ ಬಾರಿಸಿದನಂತೆ. ಏಟುಗಳನ್ನು ತಡೆದುಕೊಳ್ಳಲಾರದೆ ಆತ ಊರನ್ನೇ ತ್ಯಜಿಸಿ ಓಡಿಹೋದನಂತೆ. ಎರಡು ಮೂರು ವರ್ಷಗಳುರುಳಿದರೂ ಅವನು ಹಿಂದಿರುಗಿ ಬರಲಿಲ್ಲ. ಕಸ್ತೂರಿಯ ತಾಯಿ ದುಡಿದು ದುಡಿದು ಸೋತು ರೋಗಗ್ರಸ್ತಳಾಗಿ ತೀರಿಕೊಂಡಳು. ಅನಾಥೆಯಾದ ಕಸ್ತೂರಿಯನ್ನು ಯಾರೋ ಕರೆದು ತಂದು ಹರಿಜನ ನಿಲಯದಲ್ಲಿ ಬಿಟ್ಟು ಹೋದರು. ಎಂಟು ವರ್ಷಗಳಿಂದ ಅವಳು ನಿಲಯದಲ್ಲಿಯೆ ಬೆಳೆದು ಬಂದಿರುವುದು.

ತನ್ನ ಕಥೆಯನ್ನು ಹೇಳಿ ಮುಗಿಸಿ ಕಸ್ತೂರಿಯೆಂದಳು:

"ನನ್ನೊಬ್ಬಳದಷ್ಟೇ ಯಾಕೆ, ನಿಲಯದಲ್ಲಿರುವ ಹುಡುಗಿಯರದೆಲ್ಲಾ ಸ್ವಲ್ಪ ಸ್ವಲ್ಪ ನನ್ನಂಥಾ ಕಥೀನೇ. ಮಹಾದೇವಿ ಅಂತ ಎಂಟು ವರ್ಷದ ಹುಡುಗಿಯಿದಾಳಲ್ಲಾ, ಪಾಪ, ಅವಳಂತೂ ತಂದೆ ತಾಯಿ ಇಬ್ಬರನ್ನೂ

ಕಂಡಿಲ್ಲ. ಅವಳು ಒಂದು ತಿಂಗಳ ಕೂಸಿದ್ದಾಗ ಅವಳ ತಾಯಿಯೋ ಇನ್ಯಾರೋ ನಿಲಯದ ಬಾಗಿಲಲ್ಲಿ ಅವಳನ್ನು ಮಲಗಿಸಿ ಹೋಗಿದ್ದರು. ಆಕಳಿನ ಹಾಲಿನಿಂದ ಬೆಳೆದಿದ್ದಾಳೆ ಮಹಾದೇವಿ."

ನಿಲಯದಲ್ಲಿನ ನಲವತ್ತು ಹುಡುಗಿಯರಲ್ಲಿ ಒಬ್ಬರ ಮುಖದ ಮೇಲೂ ಸಂತೋಷವಾಗಲಿ ಸಮಾಧಾನವಾಗಲಿ ಕಾಣಿಸುತ್ತಿರಲಿಲ್ಲ. ಹದಿನೈದು ವರ್ಷಗಳೊಳಗಿನ ಆ ಮಕ್ಕಳೆಲ್ಲ ಐವತ್ತು ವರ್ಷಗಳ ವೃದ್ಧರಂತೆ ಚಿಂತಾ ಗ್ರಸ್ತರಾಗಿ ತೋರುತ್ತಿದ್ದರು. ಚಂಪಾವತಿ ನಿಲಯದಲ್ಲಿರುವಾಗಲೂ ಎಲ್ಲ ರನ್ನೂ ಭೀತಿ ಆವರಿಸಿಕೊಂಡಿರುತ್ತಿತ್ತು. ನಿಲಯದಲ್ಲಿ ಶಿಸ್ತು ಕಾಯಲು ಅಂಥ ಕಠೋರತೆ ಅವಶ್ಯವೆಂದೇ ಚಂಪಾವತಿ ನಂಬಿಕೊಂಡಿದ್ದಳು.

ಸಾಂಬಯ್ಯ ಮಾಸ್ತರರನ್ನು ಮಾತ್ರ ಎಲ್ಲ ಹುಡುಗಿಯರೂ ಮನಸಾರೆ ಪ್ರೀತಿಸುತ್ತಿದ್ದರು. ಪರದೇಶಿಗಳಾಗಿದ್ದ ಆ ಬಾಲಿಕೆಯರ ಪಾಲಿಗೆ ಮಾಸ್ತರ ರೊಬ್ಬರು ತಂದೆಯಂತೆಯೆ ತೋರುತ್ತಿದ್ದರು. ಚಂಪಾವತಿ ನಿಲಯದಲ್ಲಿಲ್ಲ ದಾಗ ಅವರ ಸುತ್ತಲೂ ಮಕ್ಕಳು ಸೇರಿ ಬಗೆಬಗೆಯ ಪ್ರಶ್ನೆ ಕೇಳುತ್ತಿದ್ದರು. ಅವರನ್ನೂ ಸೇರಿಸಿಕೊಂಡು ಕಣ್ಣುಮುಚ್ಚಾಲೆಯಾಟವಾಡುತ್ತಿದ್ದರು. ಚಂಪಾವತಿ ಬಂದೊಡನೆಯೆ ತೋಳ ಹೊಕ್ಕ ದೊಡ್ಡಿಯಲ್ಲಿನ ಕುರಿಗಳಂತೆ ಎಲ್ಲರೂ ಚದರಿ ಹೋಗುತ್ತಿದ್ದರು.

ನಾಲ್ಕೈದು ತಿಂಗಳು ಕಳೆದ ಬಳಿಕ ಮಹಾದೇವನಿಗೆ ನಿಲಯದ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವ ಹೊಣೆಗಾರಿಕೆಯ ಕೆಲಸ ಒಪ್ಪಿಸಲ್ಪಟ್ಟಿತು. ಚೆನ್ನಪ್ಪ ಚಂಪಾವತಿ ಕೊಡುತ್ತಿದ್ದ ಕಚ್ಚಾ ವಹಿಯನ್ನು ನೋಡಿಕೊಂಡು ಲೆಕ್ಕದ ಪುಸ್ತಕದಲ್ಲಿ ಬರೆಯುವ ಆ ಕಾರ್ಯವನ್ನು ಮಹಾದೇವ ಅಚ್ಚುಕಟ್ಟಾಗಿ ನೆರವೇರಿಸುತ್ತ ಬಂದು ಚೆನ್ನಪ್ಪನವರ ಮೆಚ್ಚುಗೆಯನ್ನೂ ಗಳಿಸಿಕೊಂಡ. ಒಂದೆರಡು ತಿಂಗಳುಗಳಲ್ಲಿಯೆ ಲೆಕ್ಕದಲ್ಲಿ ಅವನಿಗೆ ಅದ್ಭುತವಾದ ಜಾಣ್ಮೆಯಿರು ವುದು ಕಂಡು ಬಂದಿತು. ಆ ಜ್ಞಾನ ಲಭಿಸಿದಂತೆಲ್ಲಾ ನಿಲಯದ ಹಣಕಾಸಿನ ರಹಸ್ಯಗಳೂ ಅವನಿಗೆ ಒಂದೊಂದಾಗಿ ತಿಳಿದು ಬರಲಾರಂಭಿಸಿದುವು. ಪ್ರತಿ ಯೊಂದು ಖರ್ಚಿನ ಬಾಬಿಗೂ ಸುಳ್ಳು ಲೆಕ್ಕ ಒಪ್ಪಿಸಲ್ಪಡುತ್ತಿದ್ದುದನ್ನು ಆತ ಕಂಡುಕೊಂಡ. ಒಂದು ಡಬ್ಬ ಎಣ್ಣೆ ತಂದು ನಾಲ್ಕು ಡಬ್ಬ ತಂದುದಾಗಿ

ಬರೆಯುವುದು, ಒಂದು ಸೇರು ತುಪ್ಪ ತಂದು ಹತ್ತು ಸೇರು ತಂದುದಾಗಿ ಬರೆಯುವುದು. ಹಳ್ಳಿಗಳಿಂದ ಕಾಣಿಕೆಯಾಗಿ ಬರುತ್ತಿದ್ದ ಕಾಳಿನ ಲೆಕ್ಕ ವಂತೂ ಕೊಂಚವೂ ಸರಿಯಾಗಿರಲಿಲ್ಲ. ನೂರಾರು ರೂಪಾಯಿಗಳಷ್ಟು ಜೋಳವನ್ನು ಚಂಪಾವತಿ ಕಳ್ಳತನದಿಂದ ವಿಕ್ರಯಿಸುತ್ತಿದ್ದಳು. ಸ್ಥಳೀಯ ವರ್ತಕರಿಂದ ವರ್ಷ ವರ್ಷವೂ ದೊರೆಯುತ್ತಿದ್ದ ಚಂದಾಹಣಕ್ಕೆ ರಸೀತಿ ಕೊಡುವುದರಲ್ಲೂ ಮೋಸ ನಡೆಯುತ್ತಿತ್ತು. ಹರಿಜನ ನಿಧಿಯಿಂದ ದೊರೆಯು ತ್ತಿದ್ದ ಹಣ, ಸರಕಾರದಿಂದ ದೊರೆಯುತ್ತಿದ್ದ ಸಹಾಯ ಧನಗಳಲ್ಲಿ ಅರ್ಧ ಕ್ಕಿಂತ ಹೆಚ್ಚು ಭಾಗ ಚಂಪಾವತಿಯ ಪೆಟ್ಟಿಗೆಗೆ ಹೋಗುತಿತ್ತು. ಕುಬೇರಪ್ಪ ನಂಥವರು ನಿಲಯಕ್ಕೆಂದು ಕೊಡುತ್ತಿದ್ದುದಂತೂ – ಅರ್ಥಾತ್ – ಲೆಕ್ಕದ ಪುಸ್ತಕದಲ್ಲಿ ಜಮೆಯಾಗುತ್ತಲಿರಲೇ ಇಲ್ಲ.

ಸತ್ಯದ ಆರಾಧಕ ಗಾಂಧೀಜಿಯವರ ಶಿಷ್ಯರೆಂದು ಹೇಳಿಕೊಳ್ಳುತ್ತಿದ್ದ ಆ ಜನರ ಅಪ್ರಾಮಾಣಿಕತನವನ್ನೂ ವಂಚಕ ವೃತ್ತಿಯನ್ನೂ ಕಂಡುಕೊಂಡ ಹಾಗೆಲ್ಲ ಮಹಾದೇವನ ಮೈಯೆಲ್ಲ ಉರಿಯತೊಡಗಿತು. ಹೊಲೆಯರ ಉದ್ಧಾರ ಮಾಡುವ ನೆಪದಿಂದ ತಾವೇ ಹೊಲೆಯರಾಗುತ್ತಿದ್ದ ಆ ದಂಪತಿಗಳ ಸಹವಾಸದಲ್ಲಿರುವುದಕ್ಕೂ ಸಹ ಅವನಿಗೆ ಹೇಸಿಕೆಯಾಗತೊಡಗಿತು.

ಚೆನ್ನಪ್ಪ – ಚಂಪಾವತಿ ಇಬ್ಬರೂ ಊರಿನಲ್ಲಿಲ್ಲದ ಸಂಧಿ ಸಾಧಿಸಿ ಆತ ಒಂದು ದಿನ ಸಾಂಬಯ್ಯನವರನ್ನು ಕೇಳಿದ:

" ಇಲ್ಲಿ ನಡಿಯೂದೆಲ್ಲಾ ನಿಮಗ ಗೊತ್ತದs ಇಲ್ಲರೀ ಮಾಸ್ತರರೆ ?"

" ಗೊತ್ತದಪ್ಪಾ."

" ಮತ್ತೆ ? ಎಲ್ಲಾ ನೋಡಿಯೂ ನೀವು ಹೆಂಗ ಸುಮ್ಮನಿದೀರೋ ಏನೊ."

" ಸುಮ್ಮನಿರೂದೇ ಚಲೋದು ತಮ್ಮಾ. ಈಗ ನಾನು ವಿರೋಧ ಮಾಡಿದೆ ಅಂತ ತಿಳಿದುಕೋ, ನಾಳೆಯೆ ಇಲ್ಲಿಂದ ಎದ್ದು ಬಿಡಬೇಕಾಗುವದು. ಹೌದೋ ಅಲ್ಲವೋ ?''

" ಇಂಥಲ್ಲಿ ಇರುವದಕ್ಕಿಂತ ಹೊರಟು ಹೋಗೂದೇ ಚಲೋ ಅಲ್ಲೇನ್ರೀ ಮಾಸ್ತರರೇ ?"

"ನೀನೇನೋ ಇನ್ನೂ ಹುಡುಗ. ಹೋಗಬಲ್ಲೆ. ಆದರೆ ನಾನೋ ಮುದುಕ. ಏನೋ ಒಂದು ಉದ್ದೇಶ ಇಟ್ಟುಕೊಂಡು ಈ ನಿಲಯಕ್ಕೆ ಬಂದು ನಿಂತದ್ದಾಯಿತು. ಚೆನ್ನಪ್ಪ-ಚಂಪಾವತಿ ಹ್ಯಾಂಗೇ ಇದ್ದರೂ ನೀವು ನಲವತ್ತು ಜನ ಹರಿಜನ ಮಕ್ಕಳಿಗೆ ಅನ್ನ ಆದರೂ ಹಾಕುತ್ತಿದಾರಲ್ಲಾ. ಅಷ್ಟೇ ಸಮಾಧಾನ ನನಗೆ."

"ನಿಲಯದಾಗ ಹಗಲು ದರೋಡೆ ನಡಸಿದಾರಲ್ಲಾ ಮಾಸ್ತರರೇ?"

ಮಾಸ್ತರರು ಶುಷ್ಕನಗೆ ಬೀರುತ್ತ ಹೇಳಿದರು:

"ದರೋಡೆ ಅಂದೆಯಾ! ಇದು ಬಹಳ ಸಣ್ಣ ದರೋಡೆ ತಮ್ಮಾ. ಒಬ್ಬರನ್ನೊಬ್ಬರು ಹರಿದು ತಿನ್ನುವದೇ ನಿಯಮವಾಗಿರುವ ಈ ಪ್ರಪಂಚದಲ್ಲಿ ಇಂಥ ದರೋಡೆ ನಡೆಯುವದು ಸ್ವಾಭಾವಿಕ. ಪಾಪ, ಚೆನ್ನಪ್ಪ ಚಂಪಾವತಿಯರ ತಪ್ಪೂ ಇಲ್ಲ ಇದರಲ್ಲಿ. ಅವರೂ ಬದುಕಬೇಕಲ್ಲ ತಮ್ಮಾ? ಉಳಿದ ಜನರಂತೆ ಆಸ್ತಿಪಾಸ್ತಿ ಮಾಡಿಕೊಳ್ಳಬೇಕಲ್ಲ? ಅದಕ್ಕಾಗಿ ಸ್ವಲ್ಪ ದರೋಡೆ ಮಾಡುತಾರೆ, ಅಷ್ಟೆ. ಕೋಟಿ ಕೋಟಿ ಹಣ ದರೋಡೆ ಮಾಡುವ ದೊಡ್ಡ ದೊಡ್ಡ ದರೋಡೆಗಾರರ ಮುಂದೆ ಇವರೇನು ಬಿಡು...."

ಮಾಸ್ತರರ ಮಾತುಗಳೆಲ್ಲ ವಿಲಕ್ಷಣವೆನ್ನಿಸದಿರಲಿಲ್ಲ ಮಹಾದೇವನಿಗೆ. ವಯಸ್ಸು ಹೆಚ್ಚಿದ ಹಾಗೆ ಅವರು ಹೆಚ್ಚು ಹೆಚ್ಚು ಶಾಂತವೃತ್ತಿಯವರಾಗುತ್ತಿದ್ದುದು ಎದ್ದು ಕಾಣುತ್ತಿದ್ದಿತು. ತಮಗೆ ಒಪ್ಪಿಸಲ್ಪಟ್ಟ ನಿಧಿ ಸಂಗ್ರಹದ ಕಾರ್ಯವನ್ನು ಶ್ರದ್ಧೆಯಿಂದಲೂ ನಿಷ್ಠೆಯಿಂದಲೂ ನೇರವೇರಿಸುತ್ತ ಪ್ರತಿದಿನವೂ ದೊರೆತ ಹಣವನ್ನೆಲ್ಲ ಚಂಪಾವತಿಗೊಪ್ಪಿಸುತ್ತ, ಬೇರಾವ ವಿಷಯವನ್ನೂ ತಲೆಗೆ ಸೇರಿಸಿಕೊಳ್ಳದೆ ಒಂದು ಬಗೆಯ ನಿರ್ಲಿಪ್ತ ವೃತ್ತಿಯಿಂದ ದಿನಗಳೆಯುತ್ತಿದ್ದರು ಮಾಸ್ತರರು. ಆದರೂ ಅವರ ಚಿತ್ತದಲ್ಲಿ ಆಗಾಗ ಚಿಕ್ಕಪುಟ್ಟ ಬಿರುಗಾಳಿ ಬೀಸಿ ಅವರನ್ನು ಅಸ್ವಸ್ಥವಾಗಿಸದಿರುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲೆಲ್ಲ ಅವರು ನಿಲಯವನ್ನು ಬಿಟ್ಟು ಒಬ್ಬರೇ ಬಹಳ ದೂರದವರೆಗೂ ಅಲೆಯುತ್ತ ಹೋಗಿ ರಾತ್ರಿ ಬಹಳ ವೇಳೆಯಾದ ತರುವಾಯ ಹಿಂದಿರುಗಿ ಬರುವುದು ವಾಡಿಕೆಯಾಗಿತ್ತು. ಹೊರಗಡೆಯ ಪಡಸಾಲೆಯಲ್ಲಿ ಮಲಗಿಕೊಂಡಿರುತ್ತಿದ್ದ ಮಹಾದೇವನೇ ಎದ್ದು ಬಾಗಿಲು ತೆಗೆಯುತ್ತಿದ್ದ.

ದೀಪಾವಳಿಯ ರಜೆ ಬಂದಿತು. ನಾಲ್ಕು ದಿನಗಳ ಮಟ್ಟಿಗೆ ರಜೆ ಬೇಡಿ ಪಡೆದುಕೊಂಡು ಮಹಾದೇವ ಹಳ್ಳಿಗೆ ಹೋಗಿ ತಾಯಿಯನ್ನು ನೋಡಿಕೊಂಡು ಬಂದ. ದಿನಗಳೆದ ಹಾಗೆಲ್ಲ ಶಿವಗಂಗೆಯ ಶಕ್ತಿ ಕಡಮೆಯಾಗುತ್ತ ಬಂದು ಮನೆಬಿಟ್ಟು ಹೊರಡಲಾರದ ಸ್ಥಿತಿಗೆ ತಲಪಿದ್ದಳಾಕೆ.

"ಸಾಲೀ ಬಿಟ್ಟು ಬಿಟ್ಟು ಇಲ್ಲೇ ಇರಲೇನು ಅವ್ವಾ?" ಎಂದು ಮಹಾದೇವ ಕೇಳಿದಾಗ ಅವಳು,

"ಛಿ. ಸಾಲೀ ಯಾಕ ಬಿಡುತೀಯಪಾ? ನಂದೇನು ಇವತ್ತು ನಾಳೆ ಬಿದ್ದು ಹೋಗುವ ಜೀವ. ನೀನಿನ್ನೂ ಕಲೀಬೇಕು. ದೊಡ್ಡ ನೌಕರಿ ಹಿಡೀಬೇಕು,'' ಎಂದು ಹೇಳಿದಳು.

ನೌಕರಿ! ಮಹಾದೇವನಿಗೆ ನಗೆ ಬರದಿರಲಿಲ್ಲ. ನೌಕರಿ ಅವನ ಗುರಿಯಾಗಿರಲಿಲ್ಲ, ಎಂದೂ. ಹಾಗಾದರೆ ತನ್ನ ಗುರಿ ಯಾವುದು? ಇಂಗ್ಲಿಷು ಕಲಿತು ತಾನೂ ಮಾಡಬೇಕೆಂದಿರುವ ಮಹಾಕಾರ್ಯವೇನು? ಮಹಾದೇವ ತನಗೆ ತಾನೆ ಈ ಪ್ರಶ್ನೆ ಕೇಳಿಕೊಂಡ. ಅವುಗಳಿಗೆ ಸ್ಪಷ್ಟವಾದ ಉತ್ತರ ಅವನಲ್ಲೂ ಇರಲಿಲ್ಲ. ಭವಿತವ್ಯ ಅಸ್ಪಷ್ಟವಾಗಿತ್ತು. ಮ್ಯಾಟ್ರಿಕ್‌ನವರೆಗಾದರೂ ಕಲಿಯಬೇಕು ಎಂಬುದೊಂದೆ ಆಗ ಅವನೆದುರಿಗಿದ್ದ ಸ್ಪಷ್ಟ ಯೋಜನೆ.

ಹನುಮನ ಮನೆಯ ಬಾಗಿಲಿಗೆ ಬೀಗ ಬಿದ್ದಿದ್ದಿತು. ಹನುಮ ಚಂದ್ರಾ ಇಬ್ಬರೂ ಅಲ್ಲಿ ಕಾಣಿಸಲಿಲ್ಲ.

"ಅವರೆಲ್ಲಾ ಎಲ್ಲಿಗೆ ಹೋದರವ್ವಾ?'' ಎಂದು ಕೇಳಿದಾಗ ಶಿವಗಂಗೆ ಹೇಳಿದಳು:

"ಸಂಗಣ್ಣ ಅವರನ್ನ ಕರಕೊಂಡು ಮುಂಬಯಿ ತೋರಿಸೂದಕ್ಕ ಹೋಗಿದಾನ."

ರಜೆಗೆಂದು ಹಳ್ಳಿಗೆ ಬಂದಿದ್ದ ಕಾಳನ ಭೆಟ್ಟಿಯಾಯಿತು. ಅವನ ವೇಷ ಭೂಷೆಗಳಲ್ಲಿ ಪೂರ್ತಿಯಾಗಿ ಬದಲಾವಣೆಯಾಗಿತ್ತು. ಅಂಗಿ ಧೋತರಗಳಿಗೆ ಬದಲಾಗಿ ಸೂಟು; ಟೊಪ್ಪಿಗೆಗೆ ಬದಲಾಗಿ ಕ್ಯಾಪು. ತನ್ನ ಹೆಸರನ್ನೂ ಕೂಡ ಅವನು ಬದಲಿಸಿಕೊಂಡಿದ್ದ.

"ಏನು ಕಾಳಣ್ಣಾ, ಆರಾಮು ಇದೀಯಾ?" ಎಂದು ಮಹಾದೇವ ಕೇಳುತ್ತಲೂ ಆತ "ಚ್, ಚ್," ಎಂದು ದನಿ ತೆಗೆದು, "ಹಾಂಗೆಲ್ಲ ಕರಿಯ ಬ್ಯಾಡ ನನ್ನ. ನನ್ನ ಹೆಸರು ಕಾಲದೂತ," ಎಂದು ಗಂಭೀರವಾಗಿ ಹೇಳಿದ.

ಮಹಾದೇವ ನಗುತ್ತಾ, "ಕಾಲದೂತ! ಯಾರಿಗಪ್ಪ ಮಹಾರಾಯ?" ಎಂದು ಕೇಳಿದ.

"ಯಾರಿಗಂದರೆ? ಈ ನೀಚ ಹಿಂದೂಗಳಿಗೆ. ಇವರನ್ನೆಲ್ಲಾ ನೆಲಸಮ ಮಾಡಬೇಕು. ವರ್ಣಾಶ್ರಮ ಧರ್ಮವನ್ನು ನಿರ್ಮೂಲ ಮಾಡಬೇಕು. ಅದಕ್ಕೆಲ್ಲಾ ಬೇಕು ನನ್ನಂಥ ಕಾಲದೂತರು. ನಮ್ಮ ಡಾಕ್ಟರ್ ಅಂಬೇಡಕರರು...."

ಅಂಬೇಡಕರ ಎಂಬ ಹೆಸರನ್ನು ಮಹಾದೇವನೂ ಕೆಲವು ಸಲ ಕೇಳಿದ್ದ. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಭಾಷಣಗಳ ವರದಿಗಳನ್ನೂ ಓದಿ ನೋಡಿದ್ದ. ಅವರ ಮುಂದಾಳುತ್ವದಲ್ಲಿ ದಲಿತ ಜನರ ಸಂಘಟನೆಯೊಂದು ಕೆಲಸ ಮಾಡುತ್ತಿದ್ದ ವಿಷಯವನ್ನೂ ಅವನು ತಿಳಿದುಕೊಂಡಿದ್ದ.

"ನೀನೂ ರಾಜಕಾರಣಿಯಾಗುವವನೇನಪಾ ಕಾಳ...ಅಂ....ಕಾಲ ದೂತ?" ಎಂದು ಕೇಳಿದ ಮಹಾದೇವ.

"ಮತ್ತೆ? ರಾಜಕಾರಣ ಎಲ್ಲಾ ಈ ಸವರ್ಣಹಿಂದೂಗಳಿಗೇ ಗುತ್ತಿಗೆ ಕೊಟ್ಟೈದ ಏನು? ನಾವು ಅಸ್ಪೃಶ್ಯರು ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಬಂದು ಕೆಲಸ ಮಾಡದ ಹೊರ್ತು ನಮ್ಮ ಉದ್ಧಾರ ಆಗುವ ಹಾಂಗಿಲ್ಲ. ಆ ಗಾಂಧಿ ಒಬ್ಬ ಢೋಂಗೀ. ಅವನ ಶಿಷ್ಯರು ಆ ಗಾಂಧಿ ಟೊಪ್ಪಿಗೆ ಮಂದಿ ಅವನಿಗಿಂತ ಢೋಂಗಿಗಳು. ಅವರಿಂದ ಹೊಲೆಯರ ಉದ್ಧಾರವಾಗುವದು ಶಕ್ಯವೇ ಇಲ್ಲ."

"ಗಾಂಧಿಯವರನ್ನು ನೀ ಹಾಂಗೆಲ್ಲ ಬಯ್ಯಬ್ಯಾಡ ಕಾಳ...ಅಂ.... ಕಾಲದೂತಾ. ಅವರ ಶಿಷ್ಯರು ಢೋಂಗಿಗಳಿದಾರ ಅನ್ನೂದೇನೂ ಸುಳ್ಳಲ್ಲ," ಎಂದು ಮಹಾದೇವ ಹರಿಜನನಿಲಯದ ವೃತ್ತಾಂತವನ್ನೆಲ್ಲ ಸ್ವಲ್ಪದರಲ್ಲಿಯೆ ವಿವರಿಸಿ ಹೇಳಿದ.

"ಇದೆಲ್ಲಾ ಎಂದೋ ಗೊತ್ತಾಗಿತ್ತು ನಮಗ. ನಮ್ಮ ಸಂಘದ ಪತ್ರಿಕೆಯೊಳಗ ಈ ನಿಲಯದ ಕಥಿಯೆಲ್ಲಾ ಪ್ರಕಟವಾಗಿ ಬಂದದ," ಎಂದು

ನುಡಿದು ಕಾಲದೂತ, “ಆ ಹೊಲಸು ನಿಲಯದಾಗ ಯಾತಕ್ಕ ಸಾಯು ತೀಯೋ ಮಹಾದೇವಾ ? ಮುಂದಿನ ವರ್ಷ ನಿನಗ ಸರಕಾರಿ ಹಾಸ್ಟೆಲಿನೊಳಗ ಸೀಟು ಕೊಡಿಸುತೀನಿ. ಸ್ಕಾಲರ್‌ಶಿಪ್ ಕೂಡಾ ಸಿಕ್ಕೀತು. ಅಲ್ಲಿಗೇ ಬಂದು ಬಿಡು,” ಎಂದ.

“ಮುಂದಿನ ವರ್ಷ ಹೌದಲ್ಲೋ ? ಈ ವರ್ಷ ಪರೀಕ್ಷೆ ಮುಗಿದ ವ್ಯಾಲ ನೋಡೂಣು. ಹೌದೋ ಕಾಳ....ಅಂ...ಕಾಲದೂತಾ, ಸಾಲೀ ಕಲಿತು ಏನು ಮಾಡಬೇಕಂತ ವಿಚಾರ ಮಾಡಿದ್ದೀಯಪಾ ?”

“ಇಂಗ್ಲಂಡಿಗೆ ಹೋಗಿ ಬರಬೇಕಂತ ಮಾಡೀನಿ.”

“ಮುಂದೆ ?”

“ಐ. ಸಿ. ಎಸ್. ಆಗಿ ಬಂದು ಕಲೆಕ್ಟರ್ ಆಗುತೀನಿ.”

“ನೀ ಒಬ್ಬ ಕಲೆಕ್ಟರ್ ಆದರ ನಮ್ಮ ಜಾತಿಯವರೆಲ್ಲರ ಉದ್ಧಾರ ಆಗುತದ ಏನಪಾ ?”

“ಒಮ್ಮೆಲೆ ಹೆಂಗಾದೀತು ? ನನ್ನಂಥವರು ದೊಡ್ಡ ದೊಡ್ಡ ಅಧಿಕಾರದ ಜಾಗಾಕ್ಕ ಬಂದರ ನಮ್ಮವರಿಗೂ ನೌಕರಿ ಸಿಗುತಾವ.”

“ನೌಕರಿ ಅಂದರ ಕಲಿತವರಿಗೆ ಮಾತ್ರ ಹೌದಲ್ಲೋ ?”

“ಮತ್ತೇನು ಮೊಚ್ಚೀ ಹೊಲಿಯುವ ಹುಂಬರಿಗೆ ಸಿಗುತಾವೇನು ? ಅವರೆಲ್ಲಾ ಮೊದಲು ಕಲಿತು ವಿದ್ಯಾವಂತರಾಗಲಿಕ್ಕೆ ಬೇಕು.”

“ಕಲಿಯಬೇಕಾದರ ಮೊದಲು ಅವರ ಪರಿಸ್ಥಿತಿ ನೆಟ್ಟಗಿರಬೇಕಾಗುತದ. ನೀನೇ ನೋಡಿದ್ದೀಯಲ್ಲ, ನನಗೇ ಎಷ್ಟು ತ್ರಾಸ ಆಗಲಿಕ್ಕೆ ಹತ್ತೇದ. ಈ ಬ್ರಿಟಿಷ ಸರಕಾರ ಹೋಗುವ ತನಕ ನನ್ನ ಜನರ ಸ್ಥಿತಿ ನೆಟ್ಟಗಾಗೂದಿಲ್ಲ.”

“ಏ, ಹುಚ್ಚಾ ! ನಿನಗೇನು ಗೊತ್ತು ಸರಕಾರದ ಸುದ್ದಿ ? ಏನೋ ಅವರಿದ್ದಾರಂತ ನಮ್ಮ ಜನಕ್ಕ ಸ್ವಲ್ಪಿಲ್ಲ ಸ್ವಲ್ಪ ಸೌಲತ್ತು ಸಿಕ್ಕಾವ. ನಮ್ಮ ಹುಡುಗರಿಗೂ ವಿದ್ಯಾಭ್ಯಾಸಕ್ಕ ಅನುಕೂಲವಾಗಲಿ ಅಂತ ಹಾಸ್ಟೆಲು ಇಟ್ಟಾರ. ಸ್ಕಾಲರಶಿಪ್ ಇಟ್ಟಾರ. ಸವರ್ಣ ಹಿಂದೂಗಳ ರಾಜ್ಯ ಇದ್ದಿದ್ದರ ನಾನೂ ಕಲಿಯೂದಕ್ಕಾಗುತಿರಲಿಲ್ಲ, ನಿನಗೂ ಆಗುತಿರಲಿಲ್ಲ. ಶೂದ್ರರಿಗೆ ವೇದಾಭ್ಯಾಸ ನಿಷೇಧ. ಗೊತ್ತದೋ ಇಲ್ಲೋ ?”

"ಹೌದೌದು."

"ಇಂಗ್ಲಿಷರು ಬಂದಮ್ಯಾಲ ನಾವೂ ಏನೋ ಸ್ವಲ್ಪ ಆದರೂ ಮನುಷ್ಯರ ಸಾಲಿನಾಗ ಜಮಾ ಆಗಿದ್ದೀವಿ. ಅವರು ಬರೂದಕ್ಕ ಮೊದಲು ನಮ್ಮನ್ನ ಹಂದಿಗಳ ಹಾಂಗ ನಡಿಸಿಕೊಳ್ಳುತಿದ್ದರು ಈ ಹಿಂದೂ ಮಂದಿ. ಬ್ಲಡೀ ರ್‍ಯಾಸ್ಕಲ್ಸ್," ಎಂದು ಆವೇಶದಿಂದ ನುಡಿದ ಕಾಲದೂತ.

"ನೀನೇನಾದ್ರೂ ಕ್ರಿಸ್ತ ಧರ್ಮಕ್ಕ ಹೋದಿಯೋ ಏನೋ ಕಾಲದೂತಾ?"

"ಥೂ. ಅದಕ್ಯಾಕ ಹೋಗಲಿ? ಅವರಿಂದ ನಮಗ ಎಷ್ಟು ಉಪಯೋಗವಾಗುತದೋ ಅಷ್ಟು ಮಾಡಿಕೊಳ್ಳೂದು. ಧರ್ಮಗಿರ್ಮ ಡ್ಯಾಮ್," ಎಂದ ಕಾಲದೂತ.

೨೪

ಆ ವರ್ಷದ ಪರೀಕ್ಷೆಯಲ್ಲಿ ವರ್ಗದ ವಿದ್ಯಾರ್ಥಿಗಳಲ್ಲೆಲ್ಲ ಮೊದಲನೆಯ ನಂಬರು ದೊರಕಿಸಿ ತೇರ್ಗಡೆ ಹೊಂದಿದ ಮಹಾದೇವ. ಸ್ಕಾಲರ್‌ಶಿಪ್ ಪರೀಕ್ಷೆಯಲ್ಲೂ ಕೇಂದ್ರಕ್ಕೆ ಮೊದಲನೆಯವನಾಗಿ ಪಾಸಾಗಿ ತನ್ನ ಹೈಸ್ಕೂಲಿಗೆ ಹೆಸರು ತಂದುಕೊಟ್ಟ. ಶಿಕ್ಷಕರೆಲ್ಲ ಅವನನ್ನು ಪ್ರಶಂಸಿಸಿದರಾದರೂ ವರ್ಗದಲ್ಲಿ ಅವನಿಗಿದ್ದ ಸ್ಥಾನಮಾನಗಳಲ್ಲಿ ಮಾತ್ರ ಬದಲಾವಣೆಯಾಗಲಿಲ್ಲ. ಮೊದಲಿನಂತೆಯೆ ಆತ ಮೂಲೆಯಲ್ಲಿನ ಸ್ಥಳದಲ್ಲಿಯೆ ಉಳಿಯಬೇಕಾಯಿತು.

ಪರೀಕ್ಷೆಗಳಲ್ಲಿ ತಾನು ಪಡೆದ ಅದ್ಭುತ ಯಶಸ್ಸಿನ ವಿಚಾರವಾಗಿ ತಾಯಿಗೆ ಪತ್ರ ಬರೆದು ಮಹಾದೇವ ಊರಿಗೆ ಹೊರಡುವ ಸಿದ್ಧತೆಗೆ ತೊಡಗಿದ. ಬೇಸಗೆಯ ರಜಕ್ಕಾರಂಭವಾಗುತ್ತಲೂ ಆತ ಹೊರಡಬೇಕಿದ್ದಿತು. ಅದರ ಮುನ್ನಾದಿನ ಸಾಯಂಕಾಲ ಕಸ್ತೂರಿ ಅವನನ್ನು ನಿಲಯದ ಹಿಂಬದಿಯಲ್ಲಿದ್ದ ಬಯಲಿಗೆ ಕರೆದೊಯ್ದು ಹೇಳಿದಳು :

“ನೀನಂತೂ ಹೊಂಟುಬಿಟ್ಟೆ ಮಾದೇವಾ. ಇನ್ನು ಬರೂದು ಎರಡು ತಿಂಗಳಿಗೆ.”

ಮಹಾದೇವನ ಎದೆಯಲ್ಲಿ ಅವಳ ಬಗ್ಗೆ ಕಳವಳ ತುಂಬಿಬರುತಿತ್ತು. ಒಂದೂವರೆ ವರ್ಷದ ಸಹವಾಸದಲ್ಲಿ ಕಸ್ತೂರಿ ಅವನಿಗೆ ತುಂಬ ಆತ್ಮೀಯಳಾಗಿದ್ದಳು. ಆ ಸರಳ ಮನಸ್ಸಿನ ಮುಗ್ಧ ಸ್ವಭಾವದ ಅನಾಥ ಹುಡುಗಿಯ ವಿಚಾರವಾಗಿ ಅವನಲ್ಲಿ ಅಪಾರವಾದ ಸ್ನೇಹ ಉದಯವಾಗಿದ್ದಿತು. ತನಗೊಂದು ಮನೆಯಾದರೂ ಇದೆ, ಒಬ್ಬಳು ತಾಯಿಯಾದರೂ ಇದ್ದಾಳೆ,

ರಜಾ ಕಾಲದಲ್ಲಿ ತಾನು ಅಲ್ಲಿಗೆ ಹೋಗಬಹುದು, ತಾಯಿಯೊಡನೆ ಎರಡು ತಿಂಗಳು ಇದ್ದು ಬರಬಹುದು. ಪಾಪ, ಈ ಅನಾಥೆ ಎಲ್ಲಿಗೆ ಹೋಗಬೇಕು? ಯಾರಿದ್ದಾರೆ ಅವಳಿಗೆ? ಯಾರೂ ಇಲ್ಲ. ನರಕಸಮಾನವಾದ ಈ ನಿಲಯುವನ್ನು ಬಿಟ್ಟರೆ ಬೇರೆ ಆಸರ ಆವಳಿಗಿಲ್ಲ. ನಿಲಯದಲ್ಲಿನ ಇನ್ನೂ ಅನೇಕ ಮಕ್ಕಳಿಗೂ ಅಷ್ಟೆ.

"ನೀನೂ ಬರ್ತೀಯಾ ಕಸ್ತೂರೀ ನಮ್ಮೂರಿಗೆ?" ಎಂದು ಆತ ಕನಿಕರದ ದನಿಯಲ್ಲಿ ಕೇಳಿದ.

ಕಣ್ಣುಗಳಲ್ಲಿ ತುಂಬಿ ಬಂದ ಅಶ್ರುಗಳನ್ನು ಮಿಡಿದುಕೊಳ್ಳುತ್ತ ಕಸ್ತೂರಿಯೆಂದಳು:

"ಬರಬೇಕು ಅಂದರೂ ಬಿಡಬೇಕಲ್ಲ ಚಂಪವ್ವ?"

"ಹೌದೌದು. ಅದೂ ಖರೆ."

ಒಂದೆರಡು ನಿಮಿಷ ಇಬ್ಬರೂ ಮೌನವಾಗಿದ್ದರು.

"ಈ ಸೂಟಿಯ ಕಾಲದಾಗ ನನ್ನ ಗತಿ ಏನಾಗುತದೋ, ಏನೋ. ಇತ್ತಿತ್ತಲಾಗಿ ಚಂಪವ್ವನ ಕ್ವಾಟ ವಿಪರೀತವಾಗೇದ," ಎಂದಳು ಕಸ್ತೂರಿ.

ಮಹಾದೇವನ ಮನಸ್ಸಿನಲ್ಲೂ ಆ ವಿಚಾರವಾಗಿ ಭೀತಿ ಕುದಿಯುತ್ತಲೇ ಇದ್ದಿತು. ತಾನು ಊರಿಗೆ ಹೋದ ಸಂಧಿ ಸಾಧಿಸಿ ಚಂಪಾವತಿ ಕಸ್ತೂರಿಯನ್ನು ಕುಬೇರಪ್ಪನ ಕಾಮುಲಾಲಸೆಗೆ ಬಲಿಕೊಡಬಹುದೆಂದು ಆತನೂ ಯೋಚಿಸುತ್ತಿದ್ದ. ಆ ನೀಚಕೃತ್ಯವನ್ನು ತಡೆಯುವ ಸಾಮರ್ಥ್ಯ ಸಾಂಬಯ್ಯನವರಲ್ಲಂತೂ ಕೊಂಚವೂ ಇರಲಿಲ್ಲ. ಅವರೊಬ್ಬರನ್ನು ಬಿಟ್ಟರೆ ನಿಲಯದಲ್ಲಿ ಬೇರೆ ಗಂಡಸರಿಲ್ಲ. ಎಲ್ಲರೂ ಹುಡುಗಿಯರು. ಪಾಪ, ಅವರೇನನ್ನು ತಾನೆ ಮಾಡಲು ಸಮರ್ಥರಾದಾರು?

"ನಿಲಯವನ್ನ ಬಿಟ್ಟು ಎಲ್ಲಿಗಾದರೂ ಹೋಗಿಬಿಡಬೇಕು ಅಂತಲೂ ಅನಿಸುತದ ಒಮ್ಮೊಮ್ಮೆ," ಎಂದಳು ಕಸ್ತೂರಿ.

"ಎಲ್ಲಿಗೆ ಹೋಗುವಾಕೆ ಕಸ್ತೂರೀ?"

"ನಮ್ಮ ಕ್ಲಾಸ್‌ಮೇಟ್ ಲೂಸಿ ಅಂತ ಕ್ರಿಶ್ಚಿಯನರಾಕೆ ಒಬ್ಬಾಕೆ ಇದಾಳೆ. ನನಗೂ ಅವಳಿಗೂ ಬಹಳ ಗೆಳೆತನ. ನನ್ನ ಪರಿಸ್ಥಿತಿಯೆಲ್ಲಾ

ಗೊತ್ತದ ಅವಳಿಗೆ. ನಿಲಯವನ್ನ ಬಿಟ್ಟು ಬಂದು ಬಿಡು, ಅಂತ ಅವಳೂ ಹೇಳುತಾ ಇದಾಳ."

"ಅಂವರು ಅವರ ಧರ್ಮಕ್ಕ ಹೋಗಬೇಕಾಗುತದ ಹೌದಲ್ಲೋ ?"

"ಹೌದು. ಕಾನ್ವೆಂಟಿನಾಗ ಕರೆದುಕೊಳ್ಳುತಾರ. ಬಿ.ಎ. ತನಕ ಕಲಿಸುತಾರ. ಏನಾದರೊಂದು ನೌಕರಿ ಕೊಡಿಸುತಾರ."

ಮಹಾದೇವ ತನಗೆ ತಾನೆ ಹೇಳಿಕೊಂಡ: ಕ್ರೈಸ್ತಧರ್ಮ ಸ್ವೀಕರಿಸಿದಲ್ಲಿ ಈ ಕಸ್ತೂರಿಗೂ ಒಂದು ಒಳ್ಳೆಯ ಭವಿತವ್ಯ ಲಭಿಸೀತು. ಅವಳಿಗೊಂದು ಕೆಲಸವನ್ನೂ ಅವರು ಕೊಡಿಸುವರು. ಯೋಗ್ಯವರನೊಬ್ಬನೊಡನೆ ಅವಳ ಮದುವೆಯನ್ನೂ ಮಾಡುವರು. ಅವಳದೂ ಒಂದು ಸಂಸಾರವಾಗಬಹುದು, ಅವಳೂ ಒಬ್ಬಳು ಮನುಷ್ಯಳಾಗಬಹುದು. ಇಲ್ಲಿ, ಈ ನಿಲಯದಲ್ಲಿಯೆ ಇದ್ದುಬಿಟ್ಟಲ್ಲಿ ಮಾತ್ರ ಅವಳ ಭವಿಷ್ಯ ಅಂಧಕಾರಮಯವಾದೀತು. ಅವಳ ಶೀಲ ಹರಣವೂ ಆದೀತು. ಮುಂದೆ ಅವಳೇನನ್ನು ಮಾಡಬೇಕು ? ಅವಳನ್ನು ಮದುವೆಯಾಗುವವರಾರು ? ಈ ನಿಲಯದಲ್ಲಿದ್ದು ಮನುಷ್ಯತ್ವಕ್ಕೆ ಎರವಾಗುವುದಕ್ಕಿಂತ ಕ್ರೈಸ್ತಧರ್ಮ ಸ್ವೀಕರಿಸುವುದೇ ಮೇಲೆಂದು ತೋರುತ್ತದೆ....

"ನಾ ಏನು ಮಾಡಬೇಕಂತೀ ಮಾದೇವಾ ?"

ಅವನೇನನ್ನು ತಾನೆ ಹೇಳಿಯಾನು ? ಅರಿಯದ ಹುಡುಗಿ ಅವನಿಂದ ಮಾರ್ಗದರ್ಶನವನ್ನಾಶಿಸುತ್ತಾಳೆ. ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ಹಾದಿಯನ್ನೆಂತು ತೋರಿಸಬಲ್ಲ ?- ಅವನೂ ಕೂಡ ಇನ್ನೂ ಅನನುಭವಿಕನೇ.

"ಇವರೇನಾದರೂ ಬಹಳ ಕಾಡಿಸಿದರಂದರ ಓಡಿಹೋಗಿ ಕಾನ್ವೆಂಟ್ ಸೇರಿಕೋತೀನಿ," ಎಂದಳು ಕಸ್ತೂರಿ.

ಹಠಾತ್ತಾಗಿ ಮರಿದಾಸನ ನೆನಪು ಬಂತು ಮಹಾದೇವನಿಗೆ. ತಾನು ಕೇಳಿದ್ದ ಪ್ರಶ್ನೆಗಳಿಗೆ ಆತ ಸಮಾಧಾನಕಾರಕ ಉತ್ತರವೀಯಲು ಸಮರ್ಥನಾಗಿರಲಿಲ್ಲ. ಕ್ರೈಸ್ತಧರ್ಮದ ಕಡೆ ಒಲೆಯುತ್ತಿದ್ದ ತನ್ನ ಮನಸ್ಸು ಅಷ್ಟಕ್ಕೇ ತಟಸ್ಥವಾಗಿತ್ತು.

"ನಾ ಹಳ್ಳಿಯೊಳಗಿದ್ದಾಗ ಬೈಬಲಿನ ಕೆಲವು ಕಥೆ ಓದಿದ್ದಿನಿ ಕಸ್ತೂರೀ. ಯೇಸುಕ್ರಿಸ್ತನ ಮಾತುಗಳಿಂದ ಕೆಲದಿನ ನನಗ ಹುಚ್ಚೇ ಹಿಡಿದಂತಾಗಿತ್ತು.

ಆದರೂ ಎಷ್ಟೋ ಸಂಶಯಗಳಿದ್ದವು. ಅವುಗಳಿಗೆ ಕ್ರಿಶ್ಚಿಯನ್ನರಿಂದ ಸರಿಯಾದ ಉತ್ತರ ಸಿಗಲಿಲ್ಲ. ಅವರು ಹೇಳೂದೇ ಬ್ಯಾರೆ, ಮಾಡೂದೇ ಬ್ಯಾರೆ ಅಂತ ಅನ್ನಿಸಿತು ನನಗ. ಹಿಂದುಗಳು ಮಾಡುವದೂ ಹಂಗೇ ಅಲ್ಲೇನು? ಲಿಂಗಾಯತರೂ ಹಂಗೇ ಅಲ್ಲೇನು? ಹೆತ್ತ ತಾಯಿ ಹೊಲತಿ ಕಾಣಿರೋ! ಅಂತ ಹೇಳಿ ಜಾತಿ ಭೇದ ತೆಗೆದುಹಾಕಲು ಯತ್ನಿಸಿದ ಲಿಂಗಾಯತರೇ ಈಗ ನಮ್ಮನ್ನ ಮುಟ್ಟಿಸಿಕೊಳ್ಳುತಾರೇನು?"

"ಮುಟ್ಟಿಸಿಕೊಳ್ಳೂದಂದರ ನಮ್ಮಂಥ ಹೆಂಗಸರನ್ನ ಮಾತ್ರ! ಅದೂ ತಮ್ಮ ತಿಂಡಿ ತೀರಿಸಿಕೊಳ್ಳೂತನಕ, ಅಷ್ಟೇ," ತಿರಸ್ಕಾರ ತುಂಬಿದ ದನಿಯಲ್ಲಿ ನುಡಿದಳು ಕಸ್ತೂರಿ.

"ಅದಕ್ಕs ನಾ ಒಂದು ಗಟ್ಟಿ ಮಾಡೀನಿ. ಬ್ಯಾರೆ ಧರ್ಮಕ್ಕ ಶರಣು ಹೋಗುವದರಿಂದ ನಮ್ಮ ಸ್ಥಿತಿಯೇನೂ ಸುಧಾರಿಸುವದಿಲ್ಲ. ಇಲ್ಲಿದ್ದುಕೊಂಡೇ ನಾವು ಹೊಡೆದಾಡಬೇಕು."

"ಹಂಗಾದರ ನಾ ಕಾನ್ವೆಂಟಿಗೆ ಹೋಗೂದು ಬ್ಯಾಡ ಅಂತೀಯಾ?"

"ನೋಡು. ನಿನಗ ಸರಿ ಅನ್ನಿಸಿದಂಗ ಮಾಡು. ಯಾವದಕ್ಕೂ ಅವಸರ ಮಾತ್ರ ಮಾಡಬ್ಯಾಡ," ಎಂದ ಮಹಾದೇವ.

ಚಿಂತೆಗಳಿಂದ ಭಾರವಾದ ಹೃದಯವನ್ನು ಹೊತ್ತು ಊರಿಗೆ ಬಂದ ಮಹಾದೇವ. ಹಳ್ಳಿಯಲ್ಲಾದರೂ ತನ್ನ ಮನಸ್ಸಿಗೆ ನೆಮ್ಮದಿ ಲಭಿಸಬಹುದೆಂದು ಆತ ಆಶಿಸಿದ್ದುದು ವ್ಯರ್ಥವಾಯಿತು.

ಆತ ಬರುವುದಕ್ಕೆ ಎಂಟು ದಿನಗಳಿಗೆ ಮೊದಲೇ ಊರಲ್ಲಿ ಕಾಲರಾ ಬೇನೆಯ ಹಾವಳಿಗಾರಂಭವಾಗಿದ್ದುದು ಹರಿಜನ ಕೇರಿಗೂ ಹರಡಿಕೊಂಡಿದ್ದಿತು. ಪೂಜಾರಿ ಮಾದ, ಭರಮಜ್ಜ, ಮತ್ತು ಮೂರು ಹುಡುಗರು ಆಗಲೆ ಸತ್ತುಹೋಗಿದ್ದರು. ಲಚುಮಿಯೂ ಇನ್ನು ಕೆಲವರೂ ಹಾಸಿಗೆ ಹಿಡಿದುಬಿಟ್ಟುಕೊಂಡಿದ್ದರು. ಅವರಲ್ಲಿ ಶಿವಗಂಗೆಯೂ ಒಬ್ಬಳಾಗಿದ್ದಳು. ಮಹಾದೇವ ಮನೆಗೆ ಬಂದಾಗ ಅವಳ ಮೈಮೇಲೆ ಪ್ರಜ್ಞೆಯಿರಲಿಲ್ಲ. ಗುಡಿಸಲಿನಲ್ಲೆಲ್ಲ ದುರ್ನಾತವೆದ್ದು ಸಹಿಸಲಸಾಧ್ಯವಾಗಿ ಪರಿಣಮಿಸಿತ್ತು.

ಮೊದಲು ಗುಡಿಸಲನ್ನು ಶುಚಿಗೊಳಿಸಿ ಅನಂತರ ತಾಯಿಯನ್ನುಪಚರಿಸ ತೊಡಗಿದ ಮಹಾದೇವ. ಕಾಲರಾ ರೋಗಕ್ಕೆ ಏನು ಔಷಧ? ಮಹಾದೇವನಿಗಾದರೂ ಏನು ಗೊತ್ತು? ಹದಿನೈದು ಮೈಲುಗಳಷ್ಟು ದೂರ ಒಂದು ಸರಕಾರಿ ಆಸ್ಪತ್ರೆಯಿತ್ತು. ಅಲ್ಲಿಯತನಕ ಹೊತ್ತುಕೊಂಡು ಹೋದರೆ ತಾಯಿ ಬದುಕಿದರೂ ಬದುಕಬಹುದು. ಆದರೆ ಅವಳನ್ನು ಅಲ್ಲಿಗೆ ಸಾಗಿಸುವ ಬಗೆ ಹೇಗೆ? ಎತ್ತಿನ ಬಂಡಿಯಂತೂ ಅತ್ಯಗತ್ಯ. ಎಲ್ಲಿಂದ ತರುವುದು ಬಂಡಿಯನ್ನು?

ಪ್ರಯತ್ನವನ್ನಾದರೂ ಮಾಡಿದರಾಯಿತೆಂದು ಆತ ಗೌಡನಲ್ಲಿಗೆ ಧಾವಿಸಿ ಹೋದ. ಸ್ವತಃ ಸಿದ್ಧಗೌಡನೇ ಹಾಸಿಗೆ ಹಿಡಿದಿದ್ದುದು ಗೊತ್ತಾಗುತ್ತಲೂ ಶರಣಪ್ಪನ ಮನೆಗೆ ಬಂದ. ಅಜ್ಜಿ ಅವನನ್ನು ಗುರುತಿಸಿ ಕನಿಕರದಿಂದ ಕೇಳಿದಳು:

"ಯಾವಾಗ ಬಂದಿಯೋ ಮಾದೇವಾ? ಹ್ಯಾಂಗೈತಿ ನಿಮ್ಮ ಅವ್ವಗ?"

"ಮೈಯಾಗ ಎಚ್ಚರಿಲ್ಲವ್ವ. ಏನಾರ ಮಾಡಿ ಅವಳನ್ನ ಉಳಿಸಿ ಪುಣ್ಯಾ ಕಟ್ಟಿಕೊಳ್ರಿ."

"ನಮ್ಮ ಕೈಯಾಗಾದರೂ ಏನೈತಪಾ? ಮೊನ್ನೆ ನಮ್ಮ ಮಲ್ಲವ್ವನೂ ಹೋಗಿ ಬಿಟ್ಟಳು," ಎಂದು ಕಂಬನಿದುಂಬಿ ನುಡಿದಳು ಅಜ್ಜಿ.

"ಹಾ! ಡಾಕ್ತರರು ಬಂದಿರಲಿಲ್ಲೇನವ್ವಾ?"

"ಬಂದಿದ್ದರು. ಆದರ ಶಿವನ ಮನಸ್ಸು. ಮಲ್ಲವ್ವ ಉಳೀಲಿಲ್ಲ. ಸಂಗಣ್ಣ ಊರಾಗಿಲ್ಲದಿರೂದೂ ಚಲೋದೇ ಆತು. ಅವನಾದರೂ ಪಾರಾದ."

"ಅವ ಇನ್ನೂ ಬರಲಿಲ್ಲೇನು ಅಜ್ಜವ್ವ?"

"ಇಲ್ಲಪಾ. ಮಲ್ಲವ್ವ ಅವನ ಮಾರೀಸದ್ದಾ ನೋಡದೆ ಹೋಗಿ ಬಿಟ್ಟಳು."

ಆ ರಾತ್ರಿ ಸಿದ್ಧಗೌಡನನ್ನು ನೋಡಲೆಂದು ಬಂದ ಡಾಕ್ಟರರನ್ನು ಕಂಡು ಕಾಡಿ ಬೇಡಿ ಕೇರಿಗೆ ಕರೆದುತಂದ ಮಹಾದೇವ. ಅವರು ರೋಗಿಯನ್ನು ಪರೀಕ್ಷಿಸಿ ನೋಡಿ ಭುಜಗಳನ್ನು ಕುಣಿಸಿ ಎದ್ದುಬಿಟ್ಟರು:

"ಒಂದು ಇಂಜಕ್ಶನ್ ಆದರೂ ಕೊಡ್ರಿ ಡಾಕ್ಟರೇ."

"ಏನೂ ಉಪಯೋಗವಿಲ್ಲ. ಇದು ಹೋಪ್‌ಲೆಸ್ ಕೇಸು. ಕೈಮೀರಿ ಹೋಗಿಬಿಟ್ಟಿದೆ," ಎಂದಿಷ್ಟೆ ನುಡಿದು ಅವರು ಹೋಗಿ ಬಿಟ್ಟರು.

ಕೊನೆಯಬಾರಿ ವಾಂತಿ ಭೇದಿಯಾಯಿತು. ಶಿವಗಂಗೆ ಕಣ್ಣು ತೆರೆದು ಮಗನನ್ನು ಗುರುತಿಸಿ ತುಟಿಗಳನ್ನು ಬಿಚ್ಚಿ ಏನನ್ನೋ ಹೇಳಲು ಯತ್ನಿಸಿದಳು. ಮಾತು ನಿಂತುಹೋಗಿತ್ತು.

ಮಗನನ್ನು ಸಮೀಪಕ್ಕೆ ಕರೆದು ಅವನ ತಲೆಯ ಮೇಲಾಡಿಸಲೆಂದು ಕೈ ಎತ್ತಲು ಯತ್ನಿಸಿದಳು. ಸಾಧ್ಯವಾಗಲಿಲ್ಲ.

ಅಂದು ನಟ್ಟಿರುಳಿನ ವೇಳೆಗೆ ಈ ಲೋಕದಲ್ಲಿನ ತನ್ನ ನರಕಯಾತ್ರೆಯನ್ನು ಮುಗಿಸಿ ಹೊರಟಳು ಶಿವಗಂಗೆ.

೨೫

ಸಾಂಬಯ್ಯ ಮಾಸ್ತರರು ಕನ್ನಡಕವನ್ನು ತಗಲಿಸಿಕೊಂಡು ಪುಸ್ತಕವನ್ನು ಕೈಗೆತ್ತಿಕೊಂಡರು. ಕಪ್ಪು ಬಣ್ಣದ ಅಕ್ಷರಗಳ ಸಾಲು ಸಾಲು, ಅಷ್ಟೆ. ತಾವು ಓದುತ್ತಿರುವುದೇನು? ಯಾವುದೂ ಅರ್ಥವಾಗದು. ತಲೆಯೆಲ್ಲ ಜುಮ್ ಎನ್ನುತಿತ್ತು. ಮಿದುಳು ತನ್ನ ಕಾಯಕವನ್ನೆ ನಿಲ್ಲಿಸಿದ ಹಾಗಿತ್ತು.

ಪುಸ್ತಕವನ್ನು ಅದರ ಸ್ಥಳದಲ್ಲಿಟ್ಟು, ಎದುರಿನ ಗೋಡೆಯ ಮೇಲೆ ನೇತಾಡುತ್ತಿದ್ದ ಗಾಂಧೀಜಿಯ ಭಾವಚಿತ್ರದ ಕಡೆ ದೃಷ್ಟಿ ತಿರುಗಿಸಿದರು. ಹರಿಜನ ಬಾಲಿಕೆಯೊಬ್ಬಳ ಭುಜದ ಮೇಲೆ ಕೈಯೂರಿ ನಗುತ್ತಲಿದ್ದ ಗಾಂಧೀಜಿ. ಆ ಚಿತ್ರದ ಎಡ ಬಲಗಳಲ್ಲಿ ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದರ ಚಿತ್ರಗಳಿದ್ದುವು. ಬಲಗಡೆಯ ಗೋಡೆಯ ಮೇಲೆ ಬಸವಣ್ಣ, ಯೇಸು, ಬುದ್ಧ....

ಮಾಸ್ತರರು ಲಜ್ಜೆಯಿಂದ ದೃಷ್ಟಿಯನ್ನು ತಗ್ಗಿಸಿದರು. ಆ ಮಹಾನುಭಾವರ ಚಿತ್ರಗಳನ್ನು ಅಲ್ಲಿ ತೂಗಹಾಕುವುದೂ ಪಾಪವೆಂದು ಅವರಿಗೆನ್ನಿಸಿತು.

ಪಾಪ...

ಎಂಥ ಪಾಪಕೃತ್ಯ ನಡೆದಿತ್ತು ನಿಲಯದಲ್ಲಿ – ಮುನ್ನಾದಿನದ ರಾತ್ರಿ....

ಅಂಥ ನೀಚಕೃತ್ಯ ಅಲ್ಲಿ ನಡೆಯಬಹುದೆಂದು ತಾವು ನಿರೀಕ್ಷಿಸಿರಲಿಲ್ಲ.

ಹೌದು. ತಮಗೆ ಗೊತ್ತಿದ್ದಿತು. ಚಂಪಾವತಿಯ ಚಾರಿತ್ರ್ಯ ಒಳ್ಳೆಯದಲ್ಲವೆಂಬುದೇನೊ ಗೊತ್ತಿದ್ದಿತು. ಅವಳಿಗೂ ಕುಬೇರಪ್ಪನಿಗೂ ಇದ್ದ ಸಂಬಂಧವೂ ತಮಗೆ ತಿಳಿದಿದ್ದಿತು.

ವಿಶಾಲವಾದ ಈ ಪ್ರಪಂಚದಲ್ಲಿ ಅಂಥ ಹೆಂಗಸರೆಷ್ಟೊ ಜನ. ಅವರಲ್ಲೊಬ್ಬಳಷ್ಟೆ ಚಂಪಾವತಿ. ಏನೋ ಕಾಲು ಜಾರಿದೆ ಅವಳದು. ಅದರಿಂದ ತನಗಾಗಬೇಕಾದುದೇನು? ಎಂದು ಸುಮ್ಮನಿದ್ದು ಬಿಟ್ಟುದಾಗಿದ್ದಿತು.

ಆದರೆ, ತಾನೊಬ್ಬಳು ವ್ಯಭಿಚಾರದ ಕುಂಡದಲ್ಲಿ ಬಿದ್ದುದು ತೃಪ್ತಿಯಾಗದೆ ಬೇರೆಯವರನ್ನೂ ಅದರಲ್ಲಿ ತಳ್ಳುವಂಥ ಅಧಮವೃತ್ತಿ ಅವಳದಾಗಿರಬಹುದೆಂದು ಮಾತ್ರ ಅವರು ಭಾವಿಸಿರಲಿಲ್ಲ.

ಬೇರೆಯವರೆಂದರೇನು! ನಿಲಯದಲ್ಲಿ ಆಶ್ರಯಕ್ಕಾಗಿ ಬಂದಿರುವ ಅನಾಥ ಹುಡುಗಿ ಕಸ್ತೂರಿ. ಅವಳನ್ನು ತನ್ನ ಮಗಳ ಹಾಗೆ ನೋಡಿಕೊಳ್ಳಬೇಕು ಚಂಪಾವತಿ. ಅವಳಿಗೆ ವಿದ್ಯಾಭ್ಯಾಸ ಮಾಡಿಸಿ ಯೋಗ್ಯ ವರನನ್ನು ಹುಡುಕಿ ವಿವಾಹ ಮಾಡಿಕೊಡಬೇಕು. ಅದು ಅವಳ ಕರ್ತವ್ಯ.

ಅದನ್ನು ಬಿಟ್ಟು, ಮಗಳ ಹಾಗಿರುವ ಕಸ್ತೂರಿಯನ್ನು ಕುಬೇರಪ್ಪನಂಥ ಕಾಮುಕನಿಗೆ ಬಲಿಕೊಡುವ ನೀಚ ಕೆಲಸ!

"ಛೆ. ಛೆ. ನೆನಪು ಮಾಡಿಕೊಂಡರೂ ಮೈಮೇಲೆ ಮುಳ್ಳು ಬರುತ್ತವೆ," ಎಂದು ತನಗೆ ತಾನೆ ಹೇಳಿಕೊಳ್ಳುತ್ತ ಮಾಸ್ತರರು ಕೊಟಡಿಯನ್ನು ತ್ಯಜಿಸಿ ಅಂಗಳಕ್ಕಿಳಿದು ಬಂದರು.

ಬಾವಿಯ ಕಟ್ಟೆಯ ಮೇಲೆ ನಿಂತು ನೀರೆಳೆಯುತ್ತಿದ್ದಳು ಕಸ್ತೂರಿ. ಕಂಬನಿದುಂಬಿದ ಕಣ್ಣುಗಳಿಂದ ಅವಳನ್ನು ಒಂದೆರಡುಕ್ಷಣ ದಿಟ್ಟಿಸುತ್ತಿದ್ದರು ಮಾಸ್ತರರು. ಕೊಡವನ್ನೆತ್ತಿಕೊಂಡು ಅವಳು ಇತ್ತ ತಿರುಗಿದಾಗ ಬಾಡಿ ಒಣಗಿದ ಹೂವಿನಂತೆ ಕಾಣುತ್ತಿದ್ದ ಅವಳ ಮುಖ ಅವರ ಕರುಳನ್ನು ಕಲಮಲಗೊಳಿಸಿತು. ಮುಖವನ್ನು ತಗ್ಗಿಸಿಕೊಂಡು ಅವಳು ಹೊರಟು ಹೋದಳು. ಅಲ್ಲಿ ನಿಲ್ಲಲಾರದೆ ಮಾಸ್ತರರು ಅಂಗಳವನ್ನು ತ್ಯಜಿಸಿ ಬಯಲಿನ ಕಡೆ ನಡೆದರು.

ಕೊಂಚ ದೂರದಲ್ಲಿದ್ದ ಖಾಲಿ ಜಾಗದಲ್ಲಿ ಕೂಲಿಯಾಳುಗಳ ಚಟುವಟಿಕೆಗಾರಂಭವಾಗಿತ್ತು. ಮೇಲಕ್ಕೇರಿ ಬರುತ್ತಿದ್ದ ಸೂರ್ಯನ ಬೆಳಕಿನಲ್ಲಿ ಅವರ ಗುದ್ದಲಿ ಸಲಿಕೆಗಳು ಹೊಳೆಯುತ್ತಿದ್ದುವು. ಸನಿಯದಲ್ಲಿ ನಿಂತುಕೊಂಡು ಆಳುಗಳಿಗೆ ಸೂಚನೆ ಕೊಡುತ್ತಿದ್ದಳು ಚಂಪಾವತಿ. ಅವಳಿಂದ

ತುಸುದೂರದಲ್ಲಿ ಒಂದು ಕಲ್ಲಿನ ಮೇಲೆ ಕುಳಿತು ಹಲ್ಲುಜ್ಜಿಕೊಳ್ಳತೊಡಗಿದ್ದರು ಚೆನ್ನಪ್ಪ.

"ಮುಂದಿನ ತಿಂಗಳೊಳಗಾಗಿ ಮನೆ ತಯಾರಾಗಬೇಕು. ನೀವು ಹೀಂಗ ಮೆಲ್ಲಮೆಲ್ಲಗ ಕೆಲಸ ಮಾಡಿದರ ನಡಿಯೂದಿಲ್ಲ," ಎನ್ನುತ್ತಿದ್ದಳು ಚಂಪಾವತಿ. ಕೂಲಿಯಾಳುಗಳು ಮಾತನಾಡದೆ ರಭಸದಿಂದ ಗುದ್ದಲಿಗಳನ್ನು ಬೀಸುತ್ತಿದ್ದರು. ಕಟ್ಟಡದ ಅಡಿಪಾಯ ಸಿದ್ಧವಾಗ ತೊಡಗಿದ್ದಿತು.

ಬೇವಿನಗಿಡದ ಕೆಳಗಡೆ ಕುಳಿತುಕೊಂಡು ಕಟ್ಟಡದ ಕಾಮಗಾರಿಯನ್ನು ನಿರೀಕ್ಷಿಸುತ್ತ ಮಾಸ್ತರರು ತನಗೆ ತಾನೆ ಹೇಳಿಕೊಂಡರು: ಒಂದು ತಿಂಗಳಿನೊಳಗಾಗಿ ಕಟ್ಟಡವೂ ಸಿದ್ಧವಾಗುವುದು. ಎರಡು ಅಂತಸ್ತುಗಳ ಕಾಂಕ್ರೀಟ್ ಕಟ್ಟಡ. ಚೆನ್ನಪ್ಪನವರಿಗೊಂದು ಮನೆಯಾಗುವುದು.

ಮಾಸ್ತರರ ವಿಷಾದಪೂರಿತ ದೃಷ್ಟಿ ನಿಲಯದ ಮುರುಕು ಕಟ್ಟಡದತ್ತ ತಿರುಗಿತು. ಅಲ್ಲಲ್ಲಿ ಉದುರಿಬಿದ್ದ ಮಣ್ಣು, ಹಾರಿಹೋದ ಛಾವಣಿ, ಬಣ್ಣಗೆಟ್ಟ ಗೋಡೆಗಳು, ಹೆಗ್ಗಣಗಳ ಬೀಡಾದ ನೆಲ, ಮಳೆಗಾಲದಲ್ಲಿ ನೀರು ಸೋರಿ ಏಳುವ ದುರ್ವಾಸನೆ. ಅದು ನಿಲಯ, ಹರಿಜನ ನಿಲಯ. ಅನಾಥರಿಗಾಗಿ ಮೀಸಲಾಗಿರುವ ಅನಾಥ ಕಟ್ಟಡ. ಐದು ಸಾವಿರ ರೂಪಾಯಿಗಳಿಗೆ ಅದನ್ನು ಖರೀದಿಮಾಡಿ ಏಳು ಸಾವಿರವೆಂದು ಲೆಕ್ಕ ಬರೆದು ಎರಡು ಸಾವಿರವನ್ನು ಜೇಬಿಗೆ ಬಿಟ್ಟಿದ್ದರು ಚೆನ್ನಪ್ಪ. ಖರೀದಿಯಾದಂದಿನಿಂದ ಒಂದು ಸಲವೂ ಅದನ್ನು ರಿಪೇರಿ ಮಾಡಿಸಿರಲಿಲ್ಲವಾದರೂ ಪ್ರತಿ ವರ್ಷವೂ ರಿಪೇರಿಯ ಖಾತೆಗೆ ನೂರಾರು ರೂಪಾಯಿ ಖರ್ಚು ಹಾಕಲಾಗುತ್ತಿದ್ದಿತು. ಹೊಸ ಹಂಚುಗಳನ್ನು ಹೊದಿಸಲಾಗಿದೆಯೆಂದು ಹೇಳಿ ಏಳು ನೂರು ರೂಪಾಯಿಗಳನ್ನು ಗಿಟ್ಟಿಸಲಾಗಿದ್ದಿತು. ಹಾಗೆ ನಿಲಯದ ಹಣ ತಿಂದು ಹಾಕಿದುದಕ್ಕೆ ಒಂದು ಲೆಕ್ಕವೆ! ನಿಲಯವನ್ನು ಸ್ಥಾಪಿಸಿದಂದಿನಿಂದ ಏನಿಲ್ಲವೆಂದರೂ ಹದಿನೈದು ಇಪ್ಪತ್ತು ಸಾವಿರದಷ್ಟನ್ನಾದರೂ ಎತ್ತಿ ಹಾಕಿರಬಹುದು ಚೆನ್ನಪ್ಪ. ಆ ಹಣದಿಂದ ಸಿದ್ಧವಾಗುತ್ತಿರುವ ಈ ಮನೆ....

ಮಾಸ್ತರರನ್ನು ಕಂಡು ಚೆನ್ನಪ್ಪ ಅವರ ಬಳಿ ಬಂದು ಮಾತನಾಡಿದರು:

"ಕಟ್ಟಡ ಹೇಗಾಗಬಹುದು ಮಾಸ್ತರರೇ? ನೀವೇನನ್ನುತ್ತೀರಿ?"

ಏನೆನ್ನಬೇಕು ಮಾಸ್ತರರು ? ಅವರು ಹುಸಿನಗು ಬೀರಿ ಸುಮ್ಮನಿದ್ದರು.

ಚೆನ್ನಪ್ಪ ಹಲ್ಲು ಕಿರಿಯುತ್ತ ಹೇಳಿದರು :

" ಅಂತೂ ವೃದ್ಧಾಪ್ಯಕ್ಕೆ ಆಧಾರವಾಗಿ ಇದೊಂದು ಮನೆಯಾಯಿತಲ್ಲಾ ಅಂತ ಸಮಾಧಾನ. ಚಂಪಾವತಿ ಬಹಳ ದಿನಗಳಿಂದ ಬಡಿದುಕೊಳ್ಳುತಿದ್ದಳು - ಮನೆ ಮನೆ ಅಂತ. ಈಗ ನೋಡಿದಿರಿಲ್ಲೋ ಅವಳ ಉತ್ಸಾಹ ! ಆಳುಗಳ ಮೇಲೆ ಹ್ಯಾಗೆ ದರಬಾರು ನಡಸುತ್ತಿದಾಳೆ !"

" ದರಬಾರು ನಡಸುವುದಕ್ಕೇ ಹುಟ್ಟಿ ಬಂದಿರೂದು ಅವಳು !" ಎಂದು ಮನಸ್ಸಿನಲ್ಲೆ ಹೇಳಿಕೊಂಡರು ಮಾಸ್ತರರು. ವೃದ್ಧಾಪ್ಯದಲ್ಲಿ ಆಧಾರ... ತನಗೂ ವೃದ್ಧಾಪ್ಯ ಬಂದಿದೆ. ದೇಹದಲ್ಲಿನ ಶಕ್ತಿ ಕಡಿಮೆಯಾಗುತ್ತಿದೆ. ತನಗೆ ಯಾರ ಆಧಾರ ? ಏನು ಆಧಾರ ?

" ನಿಜ ಹೇಳಬೇಕೆಂದರೆ ನನಗೇನು ಅವಸರವಿರಲಿಲ್ಲ. ಮನೆ ಕಟ್ಟಿಸೂದರದು, ಮೊದಲು ನಿಲಯಕ್ಕೊಂದು ಒಳ್ಳೆಯ ಕಟ್ಟಡವಾಗಬೇಕಾಗಿತ್ತು."

" ಹಾಗಾದರೆ ಅದನ್ನೇ ಮೊದಲು ಕಟ್ಟಿಸಬೇಕಾಗಿತ್ತು ?"

ಚೆನ್ನಪ್ಪ ಬೆಚ್ಚಿಬಿದ್ದು, " ಹೌದೌದು. ಅದನ್ನೇ ಮೊದಲು ಕಟ್ಟಿಸಬೇಕಾಗಿತ್ತು. ಆದರೆ ಚಂಪಾವತಿಯ ಹಟ. ಏನು ಮಾಡೂದು ಹೇಳಿರಿ. ಇದೇ ವರ್ಷವೇ ಹೊಸಮನೆ ತಯಾರಾಗಬೇಕು ಅಂತ ಹಟ ಹಿಡಿದು ಬಿಟ್ಟಳು. ಅದಕ್ಕೊಂದು ಕಾರಣವೂ..."

" ಕಾರಣ....?"

ಚೆನ್ನಪ್ಪ ನಾಚಿಕೆಯ ನಗೆಯೊಂದಿಗೆ ಹೇಳಿದರು :

" ಅಂದರೆ....ಹೀಗೆ...ಬಹಳ ವರ್ಷಗಳಿಂದ ಮಕ್ಕಳಿರಲಿಲ್ಲ. ಈಗ.... ಈಗ...."

ಮಾಸ್ತರರಿಗೆ ಅರ್ಥವಾಯಿತು. ಬಹಳ ವರ್ಷಗಳಿಂದ ಮಕ್ಕಳಾಗಿರಲಿಲ್ಲ ಚಂಪಾವತಿಗೆ. ಮೊದಲು ಹುಟ್ಟಿದ್ದ ಮಕ್ಕಳೆರಡು ಬಾಲ್ಯದಲ್ಲಿಯೆ ಹೋಗಿಬಿಟ್ಟಿದ್ದುವು. ಈಗ ಮತ್ತೆ ಅವಳು ಗರ್ಭಿಣಿ. ಮುಂದಿನ ವರ್ಷದೊಳಗಾಗಿ ತಾಯಿಯಾಗುವವಳು

"ಅದಕ್ಕೇ ಅಷ್ಟು ಅವಸರ ಅವಳದು....ಅದೂ ಸಹಜ ಅನ್ನಿರಿ. ಹೌದೋ ಅಲ್ಲವೋ ?" ಎಂದರು ಚೆನ್ನಪ್ಪ.

"ಹೌದೌದು," ಎಂದರು ಮಾಸ್ತರರು.

ಒಂದು ಕ್ಷಣ ಸುಮ್ಮನಿದ್ದು ಅವರು ಮತ್ತೆ ಹೇಳಿದರು :

"ನಾನು ಇವೊತ್ತು ನಿಲಯವನ್ನ ಬಿಟ್ಟು ಹೋಗಿಬಿಡಬೇಕೆಂದು ಮಾಡಿದ್ದೇನೆ ಅಣ್ಣನವರೆ."

"ಹಾ ? ಯಾಕೆ ? ಯಾಕೆ ?"

"ಯಾಕೆ ಅನ್ನೂದು ನಿಮಗೂ ಗೊತ್ತು, ಅಣ್ಣನವರೆ. ನಿನ್ನೆ ರಾತ್ರಿ ನಡೆದ ಘಟನೆ...."

ಚೆನ್ನಪ್ಪ ಎದ್ದು ನಿಂತು ವಿಚಿತ್ರವಾಗಿ ಕೈ ಬೀಸುತ್ತ, "ರಾತ್ರಿ ? ಏನು ನಡೆಯಿತು ? ನೀವನ್ನುವದಾದರೂ ಏನು ?" ಎಂದರು.

"ಏನು ಅನ್ನುವದನ್ನ ಮತ್ತೆ ಯಾಕೆ ಹೇಳಬೇಕು ನಾನು ? ಸ್ವಲ್ಪ ವಿಚಾರಮಾಡಿ ನೋಡಿರಿ ಅಣ್ಣನವರೆ. ಇಂಥಾದ್ದೆಲ್ಲಾ ನಿಮಗೆ ಸರಿಬರುವದೇ ? ಎಂಥಾ ಅನ್ಯಾಯ, ಎಂಥಾ ಪಾಪ....ನೀವು ನಿಲಯ ಸ್ಥಾಪಿಸಿದ್ದು ಯಾತಕ್ಕೆ ? ಇಲ್ಲಿ ನಡೆಯುತ್ತಿರೂದೇನು ?"

"ನೀವು ಹೇಳೂದೇನು ಅನ್ನೂದೇ ನನಗರ್ಥವಾಗುವದಿಲ್ಲ ಅಂತೀನಿ. ನಿಮಗೇನೊ ಕನಸು ಬಿದ್ದಿರಬೇಕು ರಾತ್ರಿಯಲ್ಲಿ."

"ಕನಸು !" ಮಾಸ್ತರರು ಹುಚ್ಚು ಹುಚ್ಚಾಗಿ ನಗುತ್ತ ನುಡಿದರು : "ಅದು ಕನಸೇ ಆಗಿದ್ದರೆ ಎಷ್ಟು ಚೆನ್ನಾಗುತಿತ್ತು. ಆದರದು ಕನಸಲ್ಲ.... ಕನಸಲ್ಲ. ನಿಜವಾಗಿ ನಡೆದ ನೀಚಕೃತ್ಯ ...ಹೂಂ. ನಾನು ಮುದುಕನಾದೆ. ಅದನ್ನು ತಡೆಯುವದು ನನ್ನಿಂದಲೂ ಸಾಧ್ಯವಾಗಲಿಲ್ಲ. ಆದರೆ ಇಂಥ ಸ್ಥಳದಲ್ಲಿ ಇನ್ನು ಮಾತ್ರ ನಾನಿರಲಾರೆ...."

"ನೀವು ಏನೇನನ್ನೊ ಕಲ್ಪಿಸಿಕೊಳ್ಳುತ್ತಿದ್ದೀರಿ. ನಿಮ್ಮ ತಲೆ ಸರಿಯಾಗಿದ್ದಂತೆ ತೋರುವದಿಲ್ಲ," ಎಂದು ಚೆನ್ನಪ್ಪ ದನಿ ಯೇರಿಸಿ ನುಡಿದರು. ಅವರ ದನಿ ಕೇಳಿ ಚಂಪಾವತಿಯೂ ಎದ್ದು ಬಂದಳು.

"ಏನ್ರಿ, ಏನು ವಾದ ವಿವಾದ?"

"ರಾತ್ರಿ ಏನೋ ಮಾಡೀವಿ ನಾವು ಅಂತ ಆರೋಪ ಮಾಡ್ತಾ ಇದಾರೆ ಮಾಸ್ತರು."

ಅವಳು ಕೆರಳಿದ ಸರ್ಪದಂತೆ ಬುಸುಗುಡುತ್ತಾ, "ಇದೇನು ಎಲ್ಲಾ ಹುಡುಗಾಟ ಅಂತ ತಿಳಿದಿದ್ದೀರೇನ್ರೀ ಮಾಸ್ತರ್? ನೀವು ಬಾಯಿ ಮುಚ್ಚಿಕೊಂಡು ಸುಮ್ಮನಿರುತ್ತೀರೋ ಇಲ್ಲೋ?" ಎಂದಳು.

"ಸುಮ್ಮನಿರೂದೂ ಬೇಡ. ಇನ್ನು ನಿಮ್ಮ ಸಹವಾಸವೂ ಬೇಡ. ನಾನು ಹೋಗಿ ಬಿಡ್ತೀನಿ."

ಚಂಪಾವತಿ ಕೈ ತಿರುಗಿಸುತ್ತ ಹೇಳಿದಳು:

"ಹೋಗಿಬಿಡ್ತೀರೇನು? ಯಾವಾಗ ಹೋಗ್ತೀರಿ?"

"ಈಗ ಹೊರಟೇಬಿಟ್ಟೆ."

"ಹಾದಿ ಇಲ್ಲೇ ಅದ ನೋಡಿರಿ," ಎಂದು ನುಡಿದವಳೆ ಅವಳು ಮುಖ ತಿರುಗಿಸಿ ನಿಲಯದತ್ತ ನಡೆದು ಹೋದಳು.

ಸಾಂಬಯ್ಯನವರು ನಿಧಾನವಾಗಿ ಹೆಜ್ಜೆಯಿಡುತ್ತ ತಮ್ಮ ಕೊಟಡಿಗೆ ಬಂದು ಸಾಮಾನುಗಳನ್ನು ಕಟ್ಟತೊಡಗಿದರು. ಅವರ ಸಾಮಾನಗಳೂ ವಿಶೇಷವಾಗಿರಲಿಲ್ಲ. ಹಾಸುವ ಕಂಬಳಿಯೊಂದು, ಹೊದೆಯುವ ಕಂಬಳಿಯೊಂದು, ಒಂದು ಧೋತರ, ಒಂದು ಅಂಗಿ, ಒಂದು ಅಂಗವಸ್ತ್ರ. ಅವುಗಳನ್ನೆಲ್ಲ ಬಗಲು ಚೀಲದಲ್ಲಿ ತುಂಬಿದುದಾಯಿತು. ನಿಲಯದ ಮಕ್ಕಳನ್ನೆಲ್ಲ ಕೊನೆಯ ಬಾರಿ ನೋಡಿ ಮಾತನಾಡಿಸಿ ಮೈದಡವಿ ಮುದ್ದಿಸಿದುದಾಯಿತು. ನಿಲಯದ ಪುಸ್ತಕಗಳನ್ನೂ, ನಿಲಯದ ಹಣವನ್ನೂ ಚೆನ್ನಪ್ಪನವರಿಗೊಪ್ಪಿಸಿದುದಾಯಿತು.

"ಈಗಲೂ ನನ್ನ ಮಾತು ಕೇಳಿರಿ ಮಾಸ್ತರರೇ. ನಿಮಗೇನೋ ಭ್ರಾಂತಿಯಾಗಿರಬೇಕು. ರಾತ್ರಿ ಏನೂ ನಡೆದಿಲ್ಲ. ನನ್ನ ಮಾತು ನಂಬಿರಿ," ಎಂದರು ಚೆನ್ನಪ್ಪ.

ಇಲ್ಲ, ಅದು ಭ್ರಾಂತಿಯಾಗಿರಲಿಲ್ಲ. ಮಾಸ್ತರರ ಕಣ್ಣುಗಳೆದುರಿಗೇ ನಡೆದ ಘಟನೆ. ಅದನ್ನವರು ನಂಬದಿರುವುದೆಂತು?

ಕಸ್ತೂರಿ ಓಡಿ ಬಂದು ಮಾಸ್ತರರ ಕಾಲುಗಳನ್ನಪ್ಪಿಕೊಂಡು ಅಳ ಲಾರಂಭಿಸಿದಳು. ಆ ಅನಾಥ ಅಸಹಾಯ ಬಾಲಿಕೆಯ ತಲೆಯನ್ನು ನೇವರಿ ಸುತ್ತಿದ್ದ ಹಾಗೆ ಮಾಸ್ತರರ ಕಣ್ಣುಗಳಲ್ಲೂ ನೀರೂರಿತು.

"ಏಳು ಮಗಳೇ. ಏಳು ಮ್ಯಾಲಕ್ಕ. ಸಮಾಧಾನ ತಂದುಕೋ," ಎಂದು ಅವರು ಕಂಪಿಸುವ ದನಿಯಲ್ಲಿ ನುಡಿದರು.

ಚಂಪಾವತಿ ಬಾಗಿಲಲ್ಲಿ ಬಂದು ನಿಂತು ಕಸ್ತೂರಿಯನ್ನು ಗದರಿಸುತ್ತ, "ಅಳಲಿಕ್ಕೇನಾಯಿತು ಧಾಡಿ ನಿನಗ? ಎದ್ದು ನಡೆ ಒಳಗಡೆ," ಎಂದಳು.

ಕಸ್ತೂರಿ ಏಳಲಿಲ್ಲ. "ನನ್ನ ಬಿಟ್ಟು ಹೋಗಬ್ಯಾಡಿರಿ ಮಾಸ್ತರರೇ. ಹೋಗುವದಾದರ ನನ್ನೂ ಕರಕೊಂಡು ಹೋಗಿರಿ."

ಅವಳನ್ನೂ ಕರೆದೊಯ್ಯುವದು....ಛೆ. ಅದೆಲ್ಲ ಆಗದ ಮಾತು. ತಾವು ಹೋಗುವುದೆಲ್ಲಿಗೆ ಎನ್ನುವುದೇ ನಿರ್ಧರವಿಲ್ಲ. ಇಲ್ಲಿ ಇರಲಾರದೆ ಹೊರಟು ಬಿಟ್ಟುದಾಗಿದೆ. ಇಷ್ಟು ವರ್ಷಗಳ ಕಾಲ ಏನೋ ಸ್ವಲ್ಪ ಸೇವೆ ಸಲ್ಲಿಸಿದು ದಾಯಿತು. ಇಲ್ಲಿಗೆ ಈ ನಿಲಯದ ಋಣ ಮುಗಿದಂತಾಯಿತು. ಇನ್ನು ಬೇರೆ ಯಾವುದಾದರೊಂದು ಸೇವಾಕ್ಷೇತ್ರವನ್ನು ಹುಡುಕಿಕೊಂಡು ಈ ಘಟ ಬೀಳುವ ತನಕ ದುಡಿಯಬೇಕು. ತಾನೊಬ್ಬ ಮುದುಕ. ತನ್ನ ಚಿಂತೆಯೇನೂ ತನ ಗಿಲ್ಲ. ಎಲ್ಲಿಗಾದರೂ ಹೋಗಬಹುದು, ಎಲ್ಲಿಯಾದರೂ ಮಲಗಬಹುದು. ಕಸ್ತೂರಿಯಾದರೋ ಹೆಣ್ಣು ಜೀವ. ಹೊಸ ಹರೆಯದ ಹುಡುಗಿ. ತನ್ನ ಹಾಗೆ ಅವಳು ತಿರುಗುವಂತಿಲ್ಲ. ಕುಬೇರಪ್ಪನಂಥ ಕಾಮುಕರಿಂದ, ಚಂಪಾ ವತಿಯಂಥ ತಲೆಹಿಡುಕರಿಂದ ಶೀಲವನ್ನು ಕಾಪಾಡಿಕೊಂಡಿರಲು ಒಂದು ಸುರಕ್ಷಿತ ತಾಣ ಬೇಕು ಅವಳಿಗೆ. ಅಂಥ ರಕ್ಷಣೆಯನ್ನೊದಗಿಸುವುದು ತನ್ನಿಂದ ಸದ್ಯಕ್ಕಂತೂ ಸಾಧ್ಯವಾಗದು.

"ಹಾಗಾದರೆ ಅವಳೇನನ್ನು ಮಾಡಬೇಕು ಈಗ?" ಮಾಸ್ತರರು ತನಗೆ ತಾನೆ ಕೇಳಿಕೊಂಡರು.

ಏನು ಮಾಡಬೇಕು ಕಸ್ತೂರಿ? ನಿಲಯದ ಬಗೆಗೆ ಜುಗುಪ್ಸೆಗೊಂಡು ತಾನಂತೂ ಹೊರಟುಬಿಟ್ಟುದಾಯಿತು. ಅವಳಿಗೂ ಜುಗುಪ್ಸೆಯಾಗಿದೆ, ತಿರಸ್ಕಾರ ಹುಟ್ಟಿದೆ, ಹೇಸಿಕೆಯಾಗಿದೆ. ಸಾಧ್ಯವಾದಷ್ಟು ಬೇಗ ಈ ಸ್ಥಳವನ್ನು

ತೊರೆದು ಹೋಗಬೇಕೆಂಬ ತೀವ್ರ ಬಯಕೆ ಅವಳೆದೆಯಲ್ಲೂ ಕುದಿಯುತ್ತಿದೆ. ಅವಳು ಹೊಲೆಯರವಳಾದರೂ ಪರದೇಶಿಯಾದರೂ ಸಹ ಶೀಲವನ್ನು ಕಾದು ಕೊಂಡು ಒಳ್ಳೆಯ ಬಾಳು ನಡಸುವ ಆಕಾಂಕ್ಷೆ ಅವಳಿಗಿದೆ. ಆ ಆಕಾಂಕ್ಷೆ ಯನ್ನು ನಿರ್ಮೂಲಗೊಳಿಸಿ ಅವಳನ್ನು ಕುಬೇರಪ್ಪನ ಕಾಮದ ದಾಸಿಯನ್ನಾಗಿ ಮಾಡುವ ಈ ಜಾಗದಲ್ಲಿರಲು ಅವಳು ಸಿದ್ಧಳಿಲ್ಲ.

"ನಾನೂ ಬರ್ತೀನಿ ಮಾಸ್ತರೇ," ಕಸ್ತೂರಿ ಮತ್ತೆ ಹಲುಬಿದಳು.

"ಹೋಗುತ್ತೀಯೇನು ನೀನೂ? ಹೋಗು ಹಾಗಾದರೆ. ಇಲ್ಲಿ ಒಂದು ಗಳಿಗೆಯೂ ನಿಲ್ಲಬ್ಯಾಡ. ಉಟ್ಟ ಸೀರೆಯ ಮ್ಯಾಲ ಹೊರಟು ಬಿಡು," ಎಂದಳು ಚಂಪಾವತಿ.

ದೀನಳಾಗಿ ಕಂಬನಿಗರೆಯುತ್ತಿದ್ದ ಕಸ್ತೂರಿಯ ಮೈಯಲ್ಲಿ ಪ್ರಚಂಡ ವಾದ ರೋಷಾಗ್ನಿ ಸಂಚರಿಸಿದಂತಾಯಿತು. ಥರಥರ ನಡುಗುತ್ತಾ ಅವಳು ಎದ್ದು ಚಂಪಾವತಿಯ ಕಡೆ ತಿರುಗಿ ಹೇಳಿದಳು:

"ಹೋಗ್ತೀನಿ. ಹೀಂಗs ಹೋಗ್ತೀನಿ. ಹೋಗಿ ನಿನ್ನ ಹೊಲಸುತನದ ಕಥಿಯೆಲ್ಲಾ ಊರಾಗ ಡಂಗುರ ಸಾರುತೀನಿ. ಹೊಲೆಯರನ್ನ ಉದ್ಧಾರ ಮಾಡುವ ಸೋಗು ಹಾಕಿರುವ ನೀವಿಬ್ಬರೂ ಎಂಥಾ ಹೊಲೆಯರಿದ್ದೀರಿ ಅಂಬೂದನ್ನ ಜಗತ್ತಿಗೆಲ್ಲಾ ತಿಳಿಸುತೀನಿ. ಪೇಪರಿನಾಗ ಕೊಡುತೀನಿ. ಗಾಂಧಿಯವರಿಗೆ ಪತ್ರ ಬರೀತೀನಿ...."

"ಬಾಯಿ ಮುಚ್ಚು. ಎಷ್ಟದು ಒದರಾಡೂದು?" ಎನ್ನುತ್ತಾ ಚಂಪಾ ವತಿ ಕಸ್ತೂರಿಯನ್ನು ಹಿಡಿಯಲೆಂದು ಮುಂದೆ ಬಂದಳು.

ಕಸ್ತೂರಿ ಥಟ್ಟನೆ ಹಿಂದೆ ಸರಿದು ಮಾಸ್ತರರನ್ನು ತಬ್ಬಿಕೊಂಡು ನಿಂತು ಚಂಪಾವತಿಯ ಕಡೆ ದೃಷ್ಟಿ ತಿರುಗಿಸಿ ಆವೇಶದಿಂದ ನುಡಿದಳು:

"ನೀ ನನ್ನ ಮುಟ್ಟಬ್ಯಾಡ....ಮುಟ್ಟಬ್ಯಾಡ. ಮುಟ್ಟಿದಿಯಂದರ ನಿನ್ನ ಕೂದಲು ಕಿತ್ತು ಕೈಯಾಗ ಕೊಡ್ತೀನಿ."

"ಸಮಾಧಾನ ಕಸ್ತೂರೀ. ಸಮಾಧಾನ," ಎಂದರು ಮಾಸ್ತರರು.

"ನೀನು ಸ್ವಲ್ಪ ಸುಮ್ಮನಿರು ಚಂಪಾವತೀ. ನಿಲಯದಾಗ ಗದ್ದಲ ಬೇಡ. ಹೊರಗಡೆ ಆಳುಗಳಿದ್ದಾರ," ಎಂದರು ಚೆನ್ನಪ್ಪ. ಕಸ್ತೂರಿಯ

ಮಾತುಗಳಿಂದಾಗಿ ಅವರು ತುಂಬ ಭೀತರಾಗಿದ್ದರು. ಚಂಪಾವತಿ ಮಾತ್ರ ಕೊಂಚವೂ ಅಪ್ರತಿಭಳಾಗಿರಲಿಲ್ಲ. ಅಣಕದ ನಗು ಬೀರುತ್ತ ಅವಳೆಂದಳು :

"ನನ್ನ ಅಂಜಿಸಬೇಕಂತ ಮಾಡಿಯೇನು? ನಿನ್ನಂಥಾ ಚೋಟುದ್ದದ ಹುಡುಗಿಯೇ ನನ್ನ ಅಂಜಿಸೂದು? ಹೋಗು. ನೀ ಏನು ಬೇಕಾದ್ದು ಎಲ್ಲಿ ಬೇಕಾವಲ್ಲಿ ಜೊಗಳಿಕೋ ಹೋಗು. ಗಾಂಧಿಯವರಿಗಾದರೂ ಬರೆದುಕೋ. ಠಕ್ಕರ್ ಬಾಪ್ಪಾಗಾದರೂ ಬರೆದುಕೋ. ಯಾರೂ ನಿನ್ನ ನಂಬುವದಿಲ್ಲ. ಪೇಪರಿನವರ್‍ಯಾರೂ ನಿನ್ನ ಹತ್ತರ ಕರಕೊಳ್ಳುವದಿಲ್ಲ. ಮಾಡು. ಬೇಕಾದಷ್ಟು ಗದ್ದಲ ಮಾಡು. ಒಂದು ದಿವಸದಾಗ ನಿನ್ನ ಹಿಡಿಸಿ ಜೇಲಿಗೆ ಕಳಿಸುತೀನಿ."

ಕಸ್ತೂರಿಯನ್ನು ನಿಧಾನವಾಗಿ ಬದಿಗೆ ಸರಿಸಿ ಸಾಂಬಯ್ಯನವರು ಹೊರಟುಬಿಟ್ಟರು, ಕೈಸಾಲೆಯಲ್ಲಿ ಕಣ್ಣೀರು ಸುರಿಸುತ್ತ ನಿಂತಿದ್ದ ನಿಲಯದ ಮಕ್ಕಳನ್ನೆಲ್ಲ ಕಡೆಯಸಲ ನೋಡಿ ನಿಟ್ಟುಸಿರು ಬಿಟ್ಟರು, ಬಗಲು ಚೀಲವನ್ನು ಹೆಗಲಿಗೇರಿಸಿ ಕೋಲನ್ನೂರುತ್ತ ಮೆಟ್ಟಿಲುಗಳನ್ನಿಳಿದು ಮುಂದೆ ಸಾಗಿದರು. ಕಸ್ತೂರಿ ಅವರನ್ನು ಹಿಂಬಾಲಿಸಿಕೊಂಡು ಹೊರಟದ್ದಂತೆಯೆ ಚಂಪಾವತಿ ಧಾವಿಸಿ ಬಂದು ಬಾಗಿಲನ್ನು ಮುಚ್ಚಿ ಅಡ್ಡವಾಗಿ ನಿಂತುಕೊಂಡಳು. ಅಸಹಾಯಳಾಗಿ ರೋದಿಸುತ್ತಾ ಅಲ್ಲಿಯೆ ಕುಸಿದುಬಿದ್ದಳು ಕಸ್ತೂರಿ.

೨೬

ಇದ್ದವಳೊಬ್ಬಳು ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿದ್ದ ಮಹಾದೇವ. ಒಂದು ತಿಂಗಳು ಹೇಗೋ ಕಳೆದು ಹೋಗಿದ್ದಿತು. ಬೇಸಗೆಯ ಉಗ್ರತೆ ಬಲಿತ ಹಾಗೆ ಕಾಲರಾ ಪಿಡುಗು ಹಿಮ್ಮೆಟ್ಟುತ್ತ ಬಂದು ಕೊನೆಗೆ ತೊಲಗಿ ಹೋದುದೂ ಆಗಿದ್ದಿತು. ಹಳ್ಳಿಯಲ್ಲೂ ಕೇರಿಯಲ್ಲೂ ಹಲವರು ಸತ್ತುಹೋಗಿದ್ದರು. ಕೆಲವು ಮನೆಗಳು ಬರಿಯವಾಗಿದ್ದುವು. ಸಾಮಾನ್ಯವಾಗಿ ಎಲ್ಲ ಮನೆಗಳಲ್ಲೂ ಸಾವಿನ ನಂತರದ ಶೋಕ ತುಂಬಿಕೊಂಡಿದ್ದಿತು.

ಪಿಡುಗು ಇಳಿತರಕ್ಕೆ ಬರುತ್ತಿದ್ದ ಹಾಗೆ ಸಂಗಣ್ಣನ ಸವಾರಿ ತನ್ನ ಪರಿವಾರದೊಂದಿಗೆ ಆಗಮಿಸಿದ್ದಿತು. ತಂದೆಯ ನಿಧನದ ತರುವಾಯ ಎಂಟು ದಿನ ಮನೆ ಹಿಡಿದು ಕುಳಿತ ಹಾಗೆ ಈಗಲೂ ಕೆಲವು ದಿನ ಮನೆಯಲ್ಲಿದ್ದು ಆನಂತರ ಹರಿಜನ ಕೇರಿಗೆ ಬಂದು ಹೋಗುವ ಕಾಯಕವನ್ನು ಮುಂದುವರಿಸಿದ್ದ ಸಂಗಣ್ಣ.

ಚಂದ್ರಳ ವೇಷಭೂಷೆಗಳಲ್ಲಿ ಅದ್ಭುತವಾದ ಪರಿವರ್ತನೆಯಾಗಿದ್ದಿತು. ಮುಂಬಯಿಯಿಂದ ಬರುತ್ತಾ ಹಲವು ರೇಶಿಮೆ ಸೀರೆಗಳನ್ನೂ ಹೊಸ ಮಾದರಿಯ ಪತ್ತಲಗಳನ್ನೂ ಜರಿಯ ರವಿಕೆಗಳನ್ನೂ ಸಂಗ್ರಹಿಸಿಕೊಂಡು ಬಂದಿದ್ದಳು. ಕೊರಳಲ್ಲೊಂದು ಚಿನ್ನದ ಹಾರವೂ ಮೆರೆಯುತಿತ್ತು. ಬೆರಳುಗಳಲ್ಲಿ ಎರಡು ಉಂಗುರ. ಹಾಸುವುದಕ್ಕೆ ಮೆತ್ತೆಯ ಗಾದಿ, ಮಗ್ಗಲಾಸಿಗೆ, ಹೊದೆಯುವುದಕ್ಕೆ ದಪ್ಪನೆಯ ನುಣ್ಣನೆಯ ರಗ್ಗು ಚದ್ದರಗಳು. ಮಣ್ಣಿನ ಮಡಕೆಗಳಿಗೆ ಪ್ರತಿಯಾಗಿ ಹಿತ್ತಾಳೆಯ ಪಾತ್ರೆಗಳು. ಕೇರಿಯ ಜನರೆಲ್ಲ ಆ ವೈಭವವನ್ನು ಕಂಡು ಬೆರಗಾಗದಿರಲಿಲ್ಲ.

ಮುಂಬಯಿ ಪ್ರವಾಸ ಹನುಮನನ್ನೂ ಹೊಸ ಮನುಷ್ಯನನ್ನಾಗಿ ಮಾಡಿದ್ದಿತು. ಮೊದಲಿನ ಹರಕು ಅಂಗಿಯ ಕುರುಚಲು ಗಡ್ಡದ ಕೊಳಕು ಹನುಮ ಈಗ ಖಾಕಿಯ ಕೋಟು, ಚಣ್ಣ ಧರಿಸಿ ತಲೆಯ ಮೇಲೆ ಕ್ರಾಪು ಬಿಡಿಸಿ ಅದನ್ನು ಸೊಗಸಾಗಿ ಬಾಚಿಕೊಳ್ಳುತ್ತಿದ್ದ. ಹೊರಗಡೆ ಹೋಗುವಾಗ ಕಂಕುಳಲ್ಲಿ ಸಣ್ಣದೊಂದು ಬೆತ್ತವನ್ನಿಟ್ಟುಕೊಳ್ಳುತ್ತಿದ್ದ. ಹುಟ್ಟಿದಂದಿನಿಂದ ಚಪ್ಪಲಿಗಳನ್ನೂ ಕಾಣದಿದ್ದ ಅವನ ಕಾಲುಗಳಲ್ಲೀಗ ಬೂಟುಗಳು ಮೆರೆಯುತ್ತಿದ್ದುವು.

ರೋಗದ ಬಾಯಿಗೆ ಸಿಲುಕಿ ಹೇಗೋ ಬದುಕಿ ಉಳಿದಿದ್ದ ಲಚುಮಿ ಹನುಮನ ನೂತನ ಅವತಾರವನ್ನು ಕಂಡು ಮುಸಿಮುಸಿ ನಗುತ್ತಾ ಹೇಳುವಳು:

"ಇನ್ನೇನು ಬಿಡೋ ಹನುಮಾ, ನೀನೇ ಫೌಜದಾರ ಆದಿ ಈ ಊರಿಗೆ! ಗೌಡನೂ ಅಂಜಬೇಕು ನಿನ್ನ ದಿರಿಸು ನೋಡಿ!"

ಹನುಮ ಬಿಂಕದಿಂದ ಬೆತ್ತವನ್ನು ಕುಣಿಸುತ್ತ ಕಣ್ಣು ಮಿಟುಕಿಸಿ ನುಡಿಯುವನು:

"ಗೌಡ ಒಬ್ಬನೇ ಯಾಕ, ಊರಿಗೆ ಊರೆಲ್ಲಾ ಅಂಜಬೇಕು!"

ಬಟ್ಟೆ ಬರೆಗಳಿಗೆ ತಕ್ಕ ಹಾಗೆ ವಾಸದ ಮನೆಯೂ ಇರಬೇಡವೆ? ರೇಶಿಮೆ ಸೀರೆಗಳನ್ನುಡುವ ತಾನು ಇಂಥ ತಡಿಕೆಯ ಗುಡಿಸಲಿನಲ್ಲಿರುವುದೆಂದರೇನು! ಎಂದು ಯೋಚಿಸಿ ಸಂಗಣ್ಣನೆದುರಿಗೆ ಉಪಾಯವಾಗಿ ಆ ವಿಚಾರವನ್ನೆತ್ತಿದಳು ಚಂದ್ರಾ.

ಆತ ಮಹಾ ಉದಾರಿಯಂತೆ ಥಟ್ಟನೆ ಹೇಳಿದ:

"ಬಿಡು ಬಿಡು. ಅದೇನು ದೊಡ್ಡದು. ನಾಳಿನಿಂದಲೇ ಸುರೂಮಾಡಿ ಬಿಡೂಣು ಹೊಸಾ ಮನೆಯನ್ನ!"

ಮಾತನಾಡಿದ ಹಾಗೆ ಮರುದಿನದಿಂದ ಆತ ಚಂದ್ರಳಿಗಾಗಿ ಮನೆ ಕಟ್ಟಿಸಲು ಮೊದಲುಮಾಡಿದ. ಗುಡ್ಡದಿಂದ ಕಲ್ಲುಗಳು ಬಂದು ಬಿದ್ದುವು. ಒಡ್ಡರು ಬಂದು ಕಲ್ಲೊಡೆಯ ತೊಡಗಿದರು. ಕಟ್ಟಿಗೆ ಬಂತು; ತೊಲೆಗಳು ಬಂದುವು, ಬಾಗಿಲು ಬಂದುವು, ಬಿದಿರುಗಳು ಬಂದುವು. ನಿರುದ್ಯೋಗ

ದಿಂದಾಗಿ ಉಪವಾಸ ನರಳುತ್ತಿದ್ದ ಹರಿಜನರಿಗೆಲ್ಲ ಕೆಲಸ ದೊರೆಯಿತು. ಕೇರಿಯಲ್ಲೆಲ್ಲ ಉತ್ಸಾಹದ ಹುಚ್ಚು ಹೊಳೆ ಹರಿದಂತಾಯಿತು.

ಸಂಗಣ್ಣನ ಅಜ್ಜಿ ಗಾಬರಿಗೊಂಡು ಅಪನ ಮಾವನಿಗೆ ಹೇಳಿ ಕಳಿಸಿ ಬರಮಾಡಿಕೊಂಡಳು. ಸಂಗಣ್ಣನನ್ನು ಹೀಗೆಯೆ ಬಿಟ್ಟರೆ ಆತ ಚಂದ್ರಳಿಗಾಗಿ ಮನೆಯನ್ನೆಲ್ಲ ಹಾಳುಮಾಡುವನೆಂಬ ವಿಷಯದಲ್ಲಿ ಯಾರಿಗೂ ಸಂದೇಹ ವುಳಿಯಲಿಲ್ಲ. ಅವನನ್ನು ತಡೆಯಲೇಬೇಕಾಗಿದ್ದಿತು, ತಡೆದು ಸಂಸಾರಕ್ಕೆ ತೊಡಗಿಸಬೇಕಾಗಿದ್ದಿತು. ಆದರೆ, ಹೊಸ ಪ್ರಾಯದ ಮತ್ತಿನಿಂದ ಅಂಧನಾಗಿದ್ದ ಸಂಗಣ್ಣ ಯಾರ ಬುದ್ಧಿವಾದಕ್ಕೂ ಕಿವಿಗೊಡುವಂತಿರಲಿಲ್ಲ.

"ಹ್ಯಾಂಗ ಮಾಡೂದು ಲಿಂಗಣ್ಣಾ, ಒಳೇ ಪೇಚು ಬಂತಲ್ಲ. ಹುಡುಗನ್ನ ಹ್ಯಾಂಗ ತರೂದು ಹಾದಿಗೆ?" ಎಂದಳು ಅಜ್ಜಿ.

ಲಿಂಗಣ್ಣ ಪ್ರೌಢವಯದ ಅನುಭವಿಕ ಆಸಾಮಿ; ಹೆಣ್ಣಿನ ಹುಚ್ಚು ಹಿಡಿದ ತರುಣರನ್ನು ಹಾದಿಗೆ ತರುವುದು ಬಹಳ ಕಷ್ಟವೆಂಬುದನ್ನು ಚೆನ್ನಾಗಿ ಬಲ್ಲವನು.

"ನಮ್ಮ ಹುಡುಗಿಯೂ ಇನ್ನೂ ದೊಡ್ಡದಾಗಲಿಲ್ಲ. ಆಗಿದ್ದರ ಸಂಗಣ್ಣನ್ನ ಸಂಸಾರಕ್ಕ ಹಚ್ಚಲಿಕ್ಕೆ ಬರುತಿತ್ತು. ಈಗ ಏನು ಮಾಡೂದು? ಬ್ಯಾರೆ ಉಪಾಯ ಇಲ್ಲ ಅಜ್ಜೀ."

"ನಮ್ಮ ಮನೆತನದಾಗ ಈ ಹೊರಗಿನ ಸಂಬಂಧ ಏನು ಹೊಸಾದಲ್ಲ. ಶರಣಪ್ಪನೂ ಮಾಡುತಿದ್ದ. ಆದರ ಅಪನದೆಲ್ಲಾ ಒಂದು ಹಿಡಿತದಾಗ ಇತ್ತು. ಹೀಂಗ ಉಧೋ ಅಂತ ಮನಸಿಗೆ ಬಂದಾಂಗ ಖರ್ಚು ಮಾಡೂದು, ಆ ಹೆಣ್ಣು ಹೇಳಿದ ಹಾಂಗ ಕುಣಿಯೂದು ಎಲ್ಲಾ ಇರಾಕಿಲ್ಲ. ಏನೋ ತಿಂಗಳಿ ಗೊಂದಿಷ್ಟು ಕೊಡಬಹುದನ್ನು. ಆದರಿವನೋ ಇರೂದನ್ನೆಲ್ಲಾ ಹಾರಿಸ ಹತ್ತಿದಾನಲ್ಲ ಅವಳ ಮ್ಯಾಲ? ಮನಿ ಯಾರಾದರೂ ಕಟ್ಟಿಸಿಕೊಡಾಕ ಹೋಗುತಾರೇನಪಾ ಲಿಂಗಣ್ಣಾ? ಅದಕ್ಕೆಷ್ಟು ಸಾವಿರ ಖರ್ಚು ಮಾಡು ತಾನೋ ಏನೊ. ಊರಾಗಿನ ಮಂದಿ ಎಲ್ಲಾ ನಗಾಕ ಹತ್ತಿದಾರ ಇವನ ಕಾರಭಾರಾ ನೋಡಿ."

"ನಗದ ಬಿಟ್ಟಾರೇನು ಅಜ್ಜೀ?" ಎಂದ ಲಿಂಗಣ್ಣ.

ಮಧ್ಯಾಹ್ನದ ಊಟಕ್ಕೆ ಮನೆಗೆ ಬಂದ ಸಂಗಣ್ಣ ಮಾವನನ್ನು ಕಂಡು, ಆದರದಿಂದಲೇ ಮಾತನಾಡಿಸಿದ, ತನ್ನ ಜತೆಯಲ್ಲೇ ಅವನನ್ನೂ ಊಟಕ್ಕೆಬ್ಬಿಸಿದ.

ಊಟ ಮುಗಿಯುವವರೆಗೂ ಲಿಂಗಣ್ಣ ಚಂದ್ರಳ ಮಾತನ್ನೆತ್ತಲಿಲ್ಲ. ಅಳಿಯನನ್ನು ಎದುರಿಗೆ ಕೂಡಿಸಿಕೊಂಡು ವಿರಾಮವಾಗಿ ಮಾತನಾಡುವುದೆಂದು ಆತ ಎಣಿಕೆ ಹಾಕಿಕೊಂಡಿದ್ದ. ಮಾವನ ಮನಸ್ಸಿನಲ್ಲಿನ ಯೋಜನೆಯನ್ನು ಸಂಗಣ್ಣ ಅರಿತುಕೊಂಡನೊ ಏನೊ. ಊಟ ಮುಗಿದೊಡನೆ ಆತ ಕೋಟು ಹಾಕಿಕೊಂಡು ಹೊರಗಡೆ ಹೊರಟುಬಿಟ್ಟ.

"ಸ್ವಲ್ಪ ನಿಲ್ಲಪಾ ಸಂಗಣ್ಣಾ. ಮಾತಾಡೂದೈತಿ," ಎಂದ ಲಿಂಗಣ್ಣ.

ನಿಲ್ಲಲಿಲ್ಲ ಸಂಗಣ್ಣ. "ಜರೂರು ಕೆಲಸೈತಿ. ರಾತ್ರಿ ಬರುತೀನಲ್ಲ," ಎಂದು ನುಡಿದವನೆ ನಡೆದುಬಿಟ್ಟ.

ರಾತ್ರಿಯಾಯಿತು. ಸಂಗಣ್ಣ ಚಂದ್ರಳ ಮನೆ ಬಿಟ್ಟು ಹೊರಡಲಿಲ್ಲ. ಹತ್ತಿಪ್ಪತ್ತು ಬಾಳೆಯಹಣ್ಣು ತರಿಸಿ ತಿಂದು ಹಾಲು ಸೇವಿಸಿ ಅಲ್ಲಿಯೇ ತಳವೂರಿದ.

ಬೆಳಗಾಯಿತು. ಸಂಗಣ್ಣ ಮನೆಗೆ ಹೋಗಲಿಲ್ಲ.

ಅಳಿಯ ಬೇಕೆಂತಲೇ ತನ್ನ ಮುಖ ತಪ್ಪಿಸಿ ಕುಳಿತಿದ್ದುದರ ಕಲ್ಪನೆ ಬರುತ್ತಲೂ ಲಿಂಗಣ್ಣ ಅವನನ್ನು ಮಾತನಾಡಿಸುವ ಗೊಡವೆಗೆ ಹೋಗದೆ ಮಧ್ಯಾಹ್ನದ ಊಟ ತೀರಿಸಿಕೊಂಡು ಊರಿಗೆ ಹೊರಟುಬಿಟ್ಟ.

ಆತ ಹೊರಟುಹೋದ ಸಮಾಚಾರ ತಿಪ್ಪುವಿನಿಂದ ತಿಳಿಯುತ್ತಲೂ ಸಂಗಣ್ಣ ಎದ್ದು ನಗುತ್ತಾ ಮನೆಗೆ ನಡೆದ.

ಪುಸ್ತಕವೊಂದನ್ನು ಹಿಡಿದುಕೊಂಡು ತನ್ನ ಬಾಗಿಲಲ್ಲಿ ಕುಳಿತಿದ್ದ ಮಹಾದೇವ. ಸಂಗಣ್ಣ ಅವನನ್ನು ಕಂಡು, "ಏನು ಮಾದೇವಾ, ಅಭ್ಯಾಸ ಬಹಾಳ ಜೋರೇನು?" ಎಂದು ಕೇಳಿದ.

"ಇದು ಅಭ್ಯಾಸದ ಪುಸ್ತಕವಲ್ಲ ಸಂಗಣ್ಣ."

"ಮತ್ತೆ?"

"ಇದು ಬೇರೆ ತರದ ಪುಸ್ತಕ. ಗಾಂಧೀಜಿ ಬರೆದದ್ದು."

"ಓ ಹೊ ಹ್ಹೊ. ನೀನೂ ಒಬ್ಬ ದೇಶಭಕ್ತ ಆಗುವವ ಅಂದಂಗಾತು. ಏನಡ್ಡಿಯಿಲ್ಲ," ಎಂದು ನುಡಿದು ಸಂಗಣ್ಣ ನಗುನಗುತ್ತ ಮುಂದಕ್ಕೆ ಅಡಿಯಿಟ್ಟು, ಮತ್ತೆ ನಿಂತು ಸಹಾನುಭೂತಿಯ ಸ್ವರದಲ್ಲಿ ಹೇಳಿದ :

"ನಿಮ್ಮ ಅವ್ವ ಪಾಪ ತೀರಿಕೊಂಡಳು. ನೀನೊಬ್ಬನೇ ಆದಿ."

ತನ್ನ ತಾಯಿಯೂ ತೀರಿಕೊಂಡದ್ದು ನೆನಪಾಗಿ ಅಲ್ಲಿ ನಿಲ್ಲದೆ ಮುಂದೆ ಸಾಗಿದ ಸಂಗಣ್ಣ.

ಅವರಿಬ್ಬರ ಮಾತುಗಳನ್ನಾಲಿಸಲೆಂದು ಬಾಗಿಲಿಗೆ ಬಂದು ನಿಂತಿದ್ದ ಚಂದ್ರಾ, ಸಂಗಣ್ಣ ದೂರ ಹೋಗುತ್ತಲೂ ಮಹಾದೇವನ ಹತ್ತಿರ ಬಂದು ಕುಳಿತು ನುಡಿದಳು: "ನೀ ಪರದೇಶಿಯಾದಿಯಲ್ಲೋ ಮಾದೇವಾ." ಅವಳ ಕಣ್ಣುಗಳಲ್ಲಿ ಕಂಬನಿಗಳು ಚಿಮ್ಮಿ ಬಂದವು.

"ಅತ್ತಿಯನ್ನ ನೋಡಲಿಕ್ಕಾಗಲಿಲ್ಲ. ನನ್ನ ಮ್ಯಾಲ ಎಷ್ಟು ಪ್ರೀತಿ ಇತ್ತು ಅವಳಿಗೆ. ಅವ್ವನ್ನ ಕಳಕೊಂಡು ಪರದೇಶಿಯಾಗಿದ್ದ ನನ್ನ ಹೊಟ್ಟೆಯ ಮಗಳ ಹಾಂಗ ನೋಡಿಕೊಂಡಿದ್ದಳು ಪುಣ್ಯವಂತಿ."

ಮಹಾದೇವ ಮಾತನಾಡಲಿಲ್ಲ. ಅವನ ಕೊರಳೂ ಬಿಗಿದು ಬಂದಿದ್ದಿತು.

ದುಃಖದ ಆವೇಗ ಕೊಂಚ ಇಳಿದ ತರುವಾಯ ಚಂದ್ರಾ ಕುತೂಹಲದಿಂದ ಕೇಳಿದಳು :

"ಈಗ ಯಾವ ಯತ್ತೇದೊಳಗ ಇದೀಯಪಾ ಮಾದೇವಾ ?"

"ಈ ವರ್ಷ ಐದನೆಯತ್ತೆಗೆ ಹೋಗುತೀನಿ."

"ಪಟ್ಟಣದಾಗ ಖರ್ಚು ಬಹಳ ಬರ್ತಿರಬೇಕಲ್ಲ ಮಾದೇವಾ ? ಎಲ್ಲಾ ಹ್ಯಾಂಗ ಮಾಡುತಿದ್ದೀಯಪಾ ?"

"ಏನೋ ಹೆಂಗೋ ನಡಸೀನಿ."

"ನೀನೇನೂ ತ್ರಾಸ ಮಾಡಿಕೋಬ್ಯಾಡಪಾ. ಈಗ ನನಗೇನೂ ಕಡಿಮೆಯಾಗಿಲ್ಲ. ಅವರು ಬಾಳ ದೊಡ್ಡ ಮನಸಿನವರು. ಕೇಳಿದಷ್ಟು ರುಪಾಯಿ ಕೊಡುತಾರ. ನಿನಗೆಷ್ಟು ಬೇಕು ಹೇಳು ಕೊಡುತೀನಿ."

"ಅವರು !"

ಮಹಾದೇವ ನಗತೊಡಗಿದ, ಬಿದ್ದು ಬಿದ್ದು ನಗತೊಡಗಿದ, ಹೊಟ್ಟೆ ಹಿಡಿದುಕೊಂಡು ನಗತೊಡಗಿದ. ದಿಗಿಲುಗೊಂಡು ಎದ್ದು ನಿಂತಳು ಚಂದ್ರಾ. ಮಹಾದೇವ ಒಮ್ಮಿಂದೊಮ್ಮೆಲೆ ಹಾಗೆ ನಗಲು ಕಾರಣವೇನೆಂಬುದು ಆವಳಿಗೆ ತಿಳಿಯಲಿಲ್ಲ, ತಿಳಿಯುವಂತೆಯೂ ಇರಲಿಲ್ಲ.

ಎಲ್ಲವ್ವನ ಗುಡ್ಡದಲ್ಲಿನ ಆ ಬೆಳದಿಂಗಳಿರುಳಿನ ಜ್ಞಾಪಕ ಬಂತು ಮಹಾದೇವನಿಗೆ. ಮಳಲ ಹಾಸಿಗೆಯ ಮೇಲೆ ಪವಡಿಸಿದ್ದ ಚಂದ್ರಳ ಮೂರ್ತಿ ಬಗೆಗಣ್ಣಿನೆದುರಿಗೆ ಕಾಣಿಸಿಕೊಂಡಿತು. ರೋಷದಿಂದ ಅವಳ ಕೆನ್ನೆಗೆ ಬಿಗಿದು ತಾನು ನಡೆದು ಹೋದುದರ ನೆನಪು ಬಂತು. "ಅವರು!" ಮಹಾದೇವನಿಗೆ ನಗೆಯನ್ನು ತಡೆಯಲಾಗಲಿಲ್ಲ. ಅಜ್ಞಾನಿಯೂ ಅಶಿಕ್ಷಿತೆಯೂ ಆದ ಚಂದ್ರಳ ಬಗೆಗೆ, ಅವಳಂತೆಯೆ ಮೂಢತನದ ಮಡುವಿನಲ್ಲಿ ಮುಳುಗಿದ್ದ ತನ್ನ ಸಮಾಜದ ಬಗೆಗೆ, ಹರಿಜನ ನಿಲಯದ ಅನಾಥ ಬಾಲಿಕೆಯರ ಬಗೆಗೆ, ಕಸ್ತೂರಿಯ ಬಗೆಗೆ, ಎಲ್ಲರ ಬಗೆಗೂ ಕನಿಕರವುಕ್ಕೇರಿ ಬಂದು ವಿಲಕ್ಷಣವೂ ವಿಕೃತವೂ ಆದ ನಗೆಯನ್ನು ಹೊರಹೊಮ್ಮಿಸಿತು ಅವನ ಮುಖದಿಂದ.

ಅವಮಾನಿತಳಾದವಳಂತೆ ಮುಖ ಮುದುರಿಸಿಕೊಂಡು ತನ್ನ ಗುಡಿಸಲಿನಲ್ಲಿ ಸೇರಿಕೊಂಡಳು ಚಂದ್ರಾ. ಮಹಾದೇವನಿಗೂ ಅಲ್ಲಿ ಕುಳಿತಿರಲಾಗಲಿಲ್ಲ. ಪುಸ್ತಕವನ್ನು ಕಂಕುಳಲ್ಲಿರಿಸಿಕೊಂಡು ಆತ ಕೇರಿಯಿಂದ ಹೊರಟುಬಿಟ್ಟ.

ನಡುಹಗಲಿನ ಬಿಸಿಲು ನಿಷ್ಠುರವಾಗಿ ಬಾರಿಸುತ್ತಿತ್ತು, ಭೂಮಿಯನ್ನು. ಕೇರಿಯನ್ನು ದಾಟಿ ಕಾಳನ ಹೊಲಕ್ಕೆ ಬಂದ ಮಹಾದೇವ. ಹೊಲದ ನಡುವಿನ ಹುಣಿಸೆಯ ಗಿಡದ ನೆರಳಿನಲ್ಲಿ ಕಂಬಳಿ ಹಾಸಿಕೊಂಡು ಕಾಳ ಮಲಗಿದ್ದುದು ಕಾಣಿಸಿತು. ಮಹಾದೇವ ಅತ್ತ ನಡೆದ.

ಕಾಳ ನಿದ್ದೆ ಹೋಗಿರಲಿಲ್ಲ. ಕಂಬಳಿಯ ಮೇಲೊರಗಿಕೊಂಡಿದ್ದ ಹಾಗೆ ಮೇಲೆ ಹರಡಿದ ಆಕಾಶದ ನೀಲವನ್ನು ದಿಟ್ಟಿಸುವುದರಲ್ಲಿ ಮಗ್ನನಾಗಿದ್ದ. ಮಹಾದೇವನ ಹೆಜ್ಜೆಯ ಸದ್ದು ಕೇಳಿಸಿದರೂ ಆತ ದೃಷ್ಟಿ ತಿರುಗಿಸಲಿಲ್ಲ.

"ಏನು ಕಾಳಣ್ಣಾ, ಕವಿಯಾದಿಯೇನು?" ಎನ್ನುತ್ತ ಮಹಾದೇವ ಅವನ ಬಳಿ ಕುಳಿತುಕೊಂಡ.

"ಎಲ್ಲಿಯ ಕವಿಯೋ! ಕವಿಗಳಿಗೂ ನನಗೂ ಬದ್ಧವೈರ," ಎಂದು ನಗುತ್ತ ನುಡಿದು ಕಾಳ ಎದ್ದು ಕುಳಿತ.

ಆ ಮಾತು ಈ ಮಾತು ನಡೆಯಿತು. ಕಾಳ ತನ್ನ ಕಾರ್ಯಕ್ರಮವನ್ನು ತಿಳಿಸಿದ.

"ನೀನೇನು ಮಾಡವವ ಮಹಾದೇವಾ? ಈ ಸಾರಿಯಾದರೂ ಆ ಆಶ್ರಮ ಬಿಡುವವನೋ ಇಲ್ಲವೋ?"

"ನಾನಾಗೇ ಯಾಕೆ ಬಿಡಬೇಕು ಅಂತ ಇದ್ದೀನಿ. ಅವರಾಗೇ ಬ್ಯಾಡ ಅಂದಾಗ ನೋಡಿದರಾತು. ಅದೂ ಅಲ್ಲದೆ ನನಗೆ ಈ ವಿದ್ಯಾಭ್ಯಾಸ ಅಂದರೆ ಬಹಳ ಬ್ಯಾಸರು ಬರಲಿಕ್ಕೆ ಹತ್ತೇದ."

"ಬ್ಯಾಸರು? ಯಾಕೆ?"

"ಈ ಅಲ್ಜಿಬ್ರಾ, ಈ ಜಾಮೆಟ್ರಿ, ಈ ಇಂಗ್ಲೀಷು ಇದೆಲ್ಲಾ ಕಲಿತು ಏನುಪಯೋಗ ಅಂತ...."

"ಓಹ್ಹೊ. ನೀನೂ ಒಬ್ಬ ದೇ. ಭ. ಆಗಲಿಕ್ಕೆ ಹತ್ತಿದಾಂಗ ಕಾಣುತದ!" ಎಂದು ಕಾಳ ಅಣಕವಾಡಿದ.

"ಕಲಿತು ನೋಕರಿ ಮಾಡಬೇಕು ಅನ್ನುವವಂಗೇನೋ ಈ ಶಿಕ್ಷಣದಿಂದ ಉಪಯೋಗ ಆಗಬಹುದು."

"ನಿನಗೇನು ನೋಕರಿ ಬ್ಯಾಡಾಗ್ಯದೇನು?"

"ನಾವೆಲ್ಲಾ ನೋಕರಿ ಹಿಡಿಯೂದರಿಂದ ನಮ್ಮ ಸಮಾಜದ ಉದ್ಧಾರ ಆದೀತೇನು?"

"ಮತ್ತ ಹ್ಯಾಂಗ ಆಗೂದು ಉದ್ಧಾರ?"

"ನಾವು ಅಲ್ಪಸ್ವಲ್ಪ ಕಲಿತವರು ನೌಕರಿ ಹಿಡಿದು ಸಾಹೇಬರಾಗಿ ದೊಡ್ಡ ಸಂಬಳ ಹೊಡೀತಾ ಕೂತುಬಿಟ್ಟರೆ ಮುಂದೆ ನಮ್ಮಾ ಜನರ ನೆನಪಾದರೂ ಆದೀತೇನೋ ಕಾಳಣ್ಣಾ?"

ಕಾಳಣ್ಣಾ ಅಂತ ಕರೀಬ್ಯಾಡೋ ನನ್ನ. ಕಾಲದೂತ ಅನ್ನು."

"ನೋಡು. ನಿನ್ನ ತಂದೆ ತಾಯಿ ಇಟ್ಟ ಹೆಸರು ಕೂಡಾ ಬದಲು ಮಾಡಿ

ಕೊಂಡಿ ನೀ. ಹೆಚ್ಚು ಹೆಚ್ಚು ಕಲಿತ ಹಾಂಗ ನೀನೂ ಬದಲಾಗುತೀ. ಆಮ್ಯಾಲ ನಮ್ಮ ಜನರನ್ನ ಕಂಡರೂ ಅಸಹ್ಯ ಅನ್ನಿಸಬಹುದು ನಿನಗ."

"ಏನೇನೋ ನಾನ್ಸೆನ್ಸ್ ಎಲ್ಲಾ ಮಾತಾಡ್ತಾ ಇದ್ದೀ ನೀನು," ಎಂದು ಕೊಂಚ ಕೋಪದಿಂದ ನುಡಿದ ಕಾಲದೂತ.

"ನಾನೂ ನಿನ್ನ ಹಾಂಗs ಆಗಬಾರದಂತಿದ್ದರ ಇಲ್ಲಿಗೇ ಕಲಿಯುವದನ್ನ ಬಿಟ್ಟು ಬಿಡಬೇಕು."

"ಬ್ಯಾಡ ಅನ್ನುವವರ್‍ಯಾರು ನಿನಗ? ಬಿಟ್ಟು ಬಿಡಲ್ಲ. ಏನ್ಮಾಡುವವ ಬಿಟ್ಟು?"

"ಹಳ್ಳಿಪಳ್ಳಿ ತಿರುಗಬೇಕು. ನಮ್ಮ ಜನರನ್ನ ಜಾಗೃತಗೊಳಿಸಬೇಕು. ಮಕ್ಕಳಿಗೆ ವಿದ್ಯಾ ಕಲಿಸಲಿಕ್ಕೆ ಹೇಳಬೇಕು. ಸ್ವಲ್ಪ ಸ್ವಲ್ಪ ಕಲಿತರೂ ಸಾಕು."

"ಏನಡ್ಡಿಯಿಲ್ಲ. ನಡೀಲಿ ನಿನ್ನ ಸೇವಾ. ಆ ಸಾಂಬಯ್ಯ ಮಾಸ್ತರರ ಶಿಷ್ಯನಲ್ಲೇನು ನೀ?"

"ಅವರ ಶಿಷ್ಯನಾದದ್ದರಿಂದಲೇ ಇಂಥಾ ವಿಚಾರ ನನ್ನ ತಲೆಯೊಳಗ ಬಂದದ್ದು. ಅವರೂ ನಾನೂ ಇಬ್ಬರೂ ಕೂಡಿಕೊಂಡೇ ಹಳ್ಳಿಪಳ್ಳಿ ತಿರುಗಬೇಕಂತ ವಿಚಾರ ಮಾಡಿದ್ದೇವಿ. ಎಲ್ಲನ್ವಾಗ ಸೂಳಿ ಬಿಡುವ ಕೆಟ್ಟ ಪದ್ಧತಿಯನ್ನ ಮೊದಲು ನಿಲ್ಲಿಸಬೇಕು ನಾವು. ಪಾಪ, ಚಂದ್ರಾನಂಥ ಹುಡುಗಿಯರು..."

"ಪಾಪ ಏನು ಬಂತು ಬಿಡೋ. ಸದ್ಯದ ಸ್ಥಿತಿಯೊಳಗ ಅವಳು ಸೂಳಿಯಾದದ್ದೇ ನೆಟ್ಟಗಾತು ಅಂತ ನನ್ನ ಅಭಿಪ್ರಾಯ. ಎಲ್ಲರ ಹಾಂಗ ಅವಳೂ ಲಗ್ನ ಮಾಡಿಕೊಂಡಿದ್ದರ ತುತ್ತು ಕೂಳಿಲ್ಲದೆ ಸಾಯುತಿದ್ದಳಲ್ಲಾ? ಸೂಳಿಯಾದದ್ದರಿಂದ ನೋಡು, ಎಂಥಾ ಸುಖ ಉಣ್ಣುತಾ ಇದಾಳು...."

"ಸುಡಬೇಕು ಇಂಥಾ ಸುಖವನ್ನ. ಶೀಲ ದೊಡ್ಡದೋ, ಸುಖ ದೊಡ್ಡದೋ?"

"ಶೀಲ....ಶೀಲ....ಶೀಲ! ಆ ಹಾರುವರು ಬರೆದ ಪುಸ್ತಕ ಓದಿ ಏನೇನೋ ಹುಚ್ಚು ಕಲ್ಪನೆ ತಲೆಯೊಳಗ ತುಂಬಿಕೊಂಡಿದ್ದೀ ನೀನು. ನಮ್ಮ

ಜಾತಿಯನ್ನೆಲ್ಲ ಊರಹೊರಗಿಟ್ಟು ನಮ್ಮನ್ನ ನಾಯಿ ಹಂದಿಗಳ ಹಾಂಗ ನಡಸಿ ಕೊಳ್ಳುತಾರಲ್ಲಾ ಇವರು, ಇದಕ್ಕ ಶೀಲ ಅಂತಾರೇನು ಕೇಳು ಅವರಿಗೆ! ತಮ್ಮ ಸ್ವಾರ್ಥಕ್ಕಾಗಿ ತಮ್ಮ ಸುಖಕ್ಕಾಗಿ ಅರ್ಥವಿಲ್ಲದ ಶಬ್ದಗಳನ್ನ ತಯಾರಿಸಿದ್ದಾರ ಅವರು. ನಮ್ಮ ಅಂಬೇಡಕರ್ ಸಾಹೇಬರು ಈ ಹಾರುವರ ಬಣ್ಣವನ್ನೆಲ್ಲಾ ಬಯಲಿಗೆಳೆದಿದ್ದಾರ. ನೀನೂ ಓದಬೇಕು ಅವರ ಪುಸ್ತಕಗಳನ್ನ," ಎಂದ ಕಾಲದೂತ.

ಮುಂದಿನ ಮೂರು ನಾಲ್ಕು ದಿನಗಳನ್ನು ತುಂಬ ತೊಳಲಾಟದಲ್ಲಿ ಕಳೆದ ಮಹಾದೇವ. ಗಾಂಧೀಜಿಯವರ ಬರೆಹಗಳಿಂದ ಪ್ರಭಾವಿತನಾಗಿದ್ದ ಅವನ ಯುವಕ ಹೃದಯ ತನ್ನ ಸಮಾಜಕ್ಕೆ ಸೇವೆ ಸಲ್ಲಿಸುವ ಉತ್ಸಾಹದಿಂದ ತುಡಿಯುತಿತ್ತು. ಸೇವೆಯ ರೀತಿ ಮಾತ್ರ ಸ್ಪಷ್ಟವಾಗಿರಲಿಲ್ಲ. ಚಂದ್ರಳಂಥವರನ್ನು ಹನುಮನಂಥವರನ್ನು ಸುಧಾರಿಸುವುದು ಹೇಗೆ? ಅವರ ಮುಂದೆ ತನ್ನ ಉಪದೇಶದ ಆಟ ನಡೆಯಲಾರದು. ಹಾಗಾದರೆ ಉಪದೇಶದಿಂದಲಾದರೂ ಏನು ಪ್ರಯೋಜನ?

ಹನುಮನ ಗುಡಿಸಲಿನಲ್ಲಿ ಮಧ್ಯರಾತ್ರಿಯವರೆಗೂ ಗಾಯನ ವಾದನಗಳ ಗದ್ದಲ ನಡೆಯುತಿತ್ತು. ತಂದೆಯ ಡಪ್ಪದ ತಾಳಕ್ಕೆ ಗೆಜ್ಜೆಯ ಶೃತಿಯನ್ನು ಕೂಡಿಸಿ ನರ್ತಿಸುತ್ತಿದ್ದಳು ಚಂದ್ರಾ. ಲಾವಣಿಗಳು, ಜೀ ಜೀ ಪದಗಳು, ಬಯಲಾಟದ ಹಾಡುಗಳು. ಚಂದ್ರಳಿಗೆ ನಾಯಿಕೆಯ ಪಾತ್ರ ವಹಿಸಿಕೊಟ್ಟು ನಾಟಕವೊಂದನ್ನು ತಯಾರಿಸುವ ಮಾತೂ ನಡೆಯುತಿತ್ತು. ಹಳ್ಳಿಯ ರಸಿಕ ಶಿಖಾಮಣಿಗಳೆಲ್ಲ ಹನುಮನ ಮನೆಯಲ್ಲಿ ಒಟ್ಟುಗೂಡುತ್ತಿದ್ದರು. ಇಸ್ಪೀಟು, ಮದ್ಯ, ಸಿಗರೇಟು, ಅಶ್ಲೀಲ ಮಾತು ಅಕಟ ವಿಕಟ ನಗೆ, ಕೇಕೆ, ಕೂಗಾಟ.

ಇದನ್ನೆಲ್ಲ ನಿಲ್ಲಿಸುವುದು ಹೇಗೆ?

ತಾನು ಬೇಡವೆಂದರೆ ಬಿಡುವರೇ ಇವರು? ಹಾಗೆ ತಾನು ಹೇಳಲು ಹೋದರೆ ನಕ್ಕು ತನ್ನನ್ನು ಅವಮಾನಿಸಿ ಕಳಿಸಬಹುದು.

ಪ್ರತಿಯೊಂದು ಹಳ್ಳಿಯಲ್ಲೂ ಪ್ರತಿಯೊಂದು ಹರಿಜನ ಕೇರಿಯಲ್ಲೂ ಇದೇ ದೃಶ್ಯ. ತಮ್ಮ ಜಾತಿಯ ಹೆಂಗಸರು ಕಲಾವಂತರಂತೆ! ಆ ಕಲೆಯ

ನೆಪ ಮುಂದೆಮಾಡಿ ಪೋಲಿಪೋಕರಿಗಳೆಲ್ಲ ಮೋಜು ಮಾಡುವುದು. ಜೀವನದ ಸುಖವೆಂದರೆ ಇದೇ ಎಂದು ತಮ್ಮ ಜನರೂ ಭ್ರಮಿಸಿದ್ದಾರೆ. ಅವರ ಭ್ರಾಂತಿಯನ್ನು ನಿವಾರಿಸುವುದು ಹೇಗೆ?

ಅನೇಕ ಸಮಸ್ಯೆಗಳು, ಅನೇಕ ಪ್ರಶ್ನೆಗಳು.

ಮಹಾದೇವನ ಬಳಿ ಅವುಗಳಿಗೆ ಉತ್ತರಗಳಿರಲಿಲ್ಲ.

" ಗೊಬ್ಬೂರಿಗಂತೂ ಹೋಗುವುದು, ಮಾಸ್ತರರೆದುರಿಗೆ ತನ್ನೆಲ್ಲ ಸಮಸ್ಯೆಗಳನ್ನೂ ಮಂಡಿಸುವುದು, ಅವರು ಸಲಹೆಯಿತ್ತ ಹಾಗೆ ನಡೆದುಕೊಳ್ಳುವುದು.

ಆ ರೀತಿ ಯೋಚಿಸಿ ಗೊಬ್ಬೂರಿಗೆ ಹೊರಡುವ ಸಿದ್ಧತೆಗೆ ತೊಡಗಿದ ಮಹಾದೇವ.

೨೭

ಹರಿಜನ ನಿಲಯವನ್ನು ತ್ಯಜಿಸಿ ಹೊರಟ ಸಾಂಬಯ್ಯನವರು ಸುಮ್ಮನೆ ಕುಳಿತುಕೊಂಡಿರಲಿಲ್ಲ. ನಿಲಯದಲ್ಲಿ ನಡೆಯುತ್ತಿದ್ದ ಅಕೃತ್ಯಗಳನ್ನೆಲ್ಲ ಕಂಡು ಅವರ ಮನಸ್ಸು ಹೇಸಿಕೊಂಡಿತ್ತು. ಅಲ್ಲಿನ ಹೊಲಸನ್ನೆಲ್ಲ ತೆಗೆದುಹಾಕಲು ಯತ್ನಿಸುವುದು ತಮ್ಮ ಕರ್ತವ್ಯವೆಂಬ ಭಾವನೆ ಅವರಲ್ಲಿ ಮೂಡಿ ಅವರನ್ನು ನಿಷ್ಠುರರನ್ನಾಗಿ ಮಾಡಿತ್ತು. ನಿಲಯಕ್ಕೆ ನಿಧಿಯನ್ನೂ ದವಸಧಾನ್ಯಗಳನ್ನೂ ಶೇಖರಿಸಲು ಆ ಭಾಗವನ್ನೆಲ್ಲ ಅನೇಕ ಬಾರಿ ಸುತ್ತಿದ್ದ ಮಾಸ್ತರರಿಗೆ ದಾತೃಗಳೊಡನೆ ಗಾಢ ಪರಿಚಯವಿದ್ದಿತು. ಈಗ ಅವರನ್ನೆಲ್ಲ ಕಂಡು ನಿಲಯದಲ್ಲಿ ನಡೆಯುತ್ತಿದ್ದ ಕೃತ್ಯಗಳನ್ನು ವಿವರಿಸಿ ಹೇಳುವುದು ಮಾಸ್ತರರ ನಿತ್ಯಕ್ರಮವಾಯಿತು. ಸಹಜವಾಗಿಯೆ ಜನರಿಗೆಲ್ಲ ವಿಪರೀತ ಆಶ್ಚರ್ಯವಾಗುತ್ತಿದ್ದಿತು. ಅಂಥ ಸಂಗತಿಗಳು ಅವರ ಕಿವಿಗೆ ಬೀಳುತ್ತಿದ್ದುದು ಅದೇ ಮೊದಲಸಲ.

" ಹೀಂಗೆಲ್ಲಾ ನಡದದ ಏನು? ನೀವು ನಮಗೆ ಮೊದಲೇ ಯಾಕ ಹೇಳಲಿಲ್ಲ?'' ಎಂದು ಕೆಲವರು ಆಕ್ಷೇಪಿಸುತ್ತಿದ್ದರು.

" ನಿಲಯದಲ್ಲಿ ನಲವತ್ತು ಪರದೇಶಿ ಮಕ್ಕಳಿವೆ. ಚೆನ್ನಪ್ಪ ಚಂಪಾವತಿ ಇಬ್ಬರೂ ಹಾಗೇ ಇದ್ದರೂ ಆ ಮಕ್ಕಳ ಮುಖ ನೋಡಿ ಎಲ್ಲ ಸಹಿಸಿಕೊಂಡು ಸುಮ್ಮನಿದ್ದುಬಿಟ್ಟೆದ್ದೆ. ಈಗಲೂ ಅಷ್ಟೆ. ನಿಲಯಕ್ಕೆ ಸಹಾಯ ಮಾಡುವವನ್ನು ನೀವ್ಯಾರೂ ನಿಲ್ಲಿಸಬಾರದು," ಎನ್ನುತ್ತಿದ್ದರು ಮಾಸ್ತರರು.

" ಚಲೋನೇ ಹೇಳ್ತೀರಲ್ಲ! ಹರಿಜನ ಹುಡುಗರ ನೆವದಿಂದ ಚೆನ್ನಪ್ಪ ಆಸ್ತಿ ಮಾಡಿಕೊಳ್ಳೂದಕ್ಕ ನಾವ್ಯಾಕ ಸಹಾಯ ಮಾಡಬೇಕ್ರೀ?''

"ಸಹಾಯ ಮಾಡಬೇಕು. ಆದರೆ ಆಸ್ತಿ ಮಾಡಿಕೊಳ್ಳುವದಕ್ಕೆ ಅವಕಾಶ ಕೊಡಬಾರದು."

"ಅದೆಲ್ಲಾ ಹ್ಯಾಂಗ ಸಾಧಿಸಬೇಕು?"

"ಲೆಕ್ಕ ಪತ್ರ ಸರಿಯಾಗಿ ಇಡಲಿಕ್ಕೆ ಹೇಳಿರಿ ಅವರಿಗೆ. ಆಗಾಗ ಅಲ್ಲಿಗೆ ಹೋಗಿ ನೋಡಿಕೊಂಡು ಬರ್ರಿ. ಅವರು ಮೋಸ ಮಾಡದ ಹಾಗೆ ನೋಡಿಕೊಳ್ಳಿರಿ."

"ಆ ಉಸಾಬರಿಯೆಲ್ಲಾ ಯಾರಿಗೆ ಬೇಕ್ರೀ? ನಮ್ಮ ಹೊಲಾಮನೀ ಕೆಲಸಾ ಬಿಟ್ಟು ಈ ಕಾರಭಾರ ಮಾಡೂದಕ್ಕ ಪುರಸತ್ತು ಎಲ್ಲ್ಯದ ನಮಗ?" ಎನ್ನುತ್ತಿದ್ದರು ಜನರು.

ಕಸ್ತೂರಿಯ ಮೇಲೆ ನಡೆದ ಅತ್ಯಾಚಾರದ ಕತೆಯನ್ನು ಮಾಸ್ತರರು ಹೇಳಿದಾಗ ಕೆಲವರೆಂದರು:

"ಆಗಿಂದಾಗ ನೀವು ಪೋಲೀಸರಿಗೆ ಯಾಕ ತಿಳಿಸಲಿಲ್ಲರೀ?"

"ಪೋಲೀಸರೆಂದರೇನು, ಚೆನ್ನಪ್ಪ ಕುಬೇರಪ್ಪರ ಕಿಸೆಯಲ್ಲಿ ಇರುವವರು. ಈಗ ಇವರಿಬ್ಬರೂ ಅಸೆಂಬ್ಲಿ ಸದಸ್ಯರು ಬೇರೆ. ಇವರದೇ ರಾಜ್ಯ. ಇನ್ನು ಪೋಲೀಸರು ಇವರಿಗೆ ಕೈ ಹಚ್ಚುವದು ಹ್ಯಾಗೆ?"

"ಅದೂ ಖರೇನss ಅನ್ರಿ. ಆ ಕುಬೇರ್ಯಾ ಬದ್ಮಾಷ ಅದಾನನ್ನೋದು ಎಲ್ಲಾರಿಗೂ ಗೊತ್ತದ," ಎಂದು ನುಡಿದು ಜನರು ಸುಮ್ಮನಾಗುತ್ತಿದ್ದರು.

ಕುಬೇರಪ್ಪನ ದುಶ್ಚರಿತ್ರದ ಸಂಗತಿ ಜಿಲ್ಲೆಗೆಲ್ಲ ಚೆನ್ನಾಗಿ ಗೊತ್ತಿದ್ದಿತು. ಮಾಸ್ತರರ ಸಂಚಾರದಿಂದಾಗಿ ಚೆನ್ನಪ್ಪ ಚಂಪಾವತಿಯರ ದುಷ್ಟತನವೂ ಪ್ರಚುರವಾಗತೊಡಗಿತು. ನಿಲಯಕ್ಕಾಗಿ ನಿಧಿಯನ್ನೆತ್ತಲು ಚೆನ್ನಪ್ಪ ಹೋದ ಕಡೆಗಳಲ್ಲೆಲ್ಲ ಜನರು ಹಣ ಕೊಡಲು ನಿರಾಕರಿಸತೊಡಗಿದರು...ಮಾಸ್ತರರ ಪ್ರಚಾರವೇ ಅದಕ್ಕೆ ಕಾರಣವೆಂದು ಚೆನ್ನಪ್ಪನವರಿಗೆ ತಿಳಿಯಲೂ ತಡವಾಗಲಿಲ್ಲ.

ಅವರು ಹೋದ ಕಡೆಗಳಲ್ಲೆಲ್ಲ ಜನರು ಅವರಿಗೆ ಬಗೆ ಬಗೆಯ ಪ್ರಶ್ನೆ ಕೇಳತೊಡಗಿದರು.

“ ಹರಿಜನ ಸೇವಾದ ಹೆಸರಿನಾಗ ಇದುವರೆಗೆ ಎಷ್ಟು ಸಾವಿರದ ಆಸ್ತಿ ಮಾಡಿಕೊಂಡೀರಿ ?”

“ ಹರಿಜನ ನಿಲಯಕ್ಕ ಕಟ್ಟಡ ಕಟ್ಟಿಸೂದನ್ನ ಬಿಟ್ಟು ನಿಮಗಾಗಿ ಸ್ವಂತ ಮನಿ ಕಟ್ಟಿಸ್ತಾ ಇದೀರಂತಲ್ಲ. ಅದಕ್ಕೆ ರುಪಾಯಿ ಎಲ್ಲಿಂದ ತಂದಿರಿ ?”

“ ಕುಬೇರಪ್ಪನವರ ಹತ್ತರ ಸಾಲ ತಂದೀವಿ,” ಎಂದು ತಬ್ಬಿಬ್ಬಾಗಿ ಉತ್ತರಿಸುತ್ತಿದ್ದರು ಚೆನ್ನಪ್ಪ.

ಜನರು ಅರ್ಥಗರ್ಭಿತ ನಗೆ ಬೀರುತ್ತ, “ ನಿಮಗೇನು ಹೊಲ ಇಲ್ಲ, ಆಸ್ತಿ ಇಲ್ಲ. ಅವರ ಸಾಲಕ್ಕ ಏನು ಅಡವು ಇಟ್ಟೀರಿ?” ಎಂದು ಕೇಳು ತ್ತಿದ್ದರು. ಚೆನ್ನಪ್ಪ ಮುಖಭಂಗಿತರಾಗಿ ಅಲ್ಲಿಂದ ಹೊರಟುಬಿಡುತ್ತಿದ್ದರು.

ಹತ್ತು ಹಳ್ಳಿಗಳಲ್ಲಿ ಈ ರೀತಿ ಫಜೀತಿಯಾಗುತ್ತಲೂ ಚೆನ್ನಪ್ಪ ಚಂಪಾ ವತಿ ಇಬ್ಬರಿಗೂ ಪಿವಂಚನೆಗಿಟ್ಟುಕೊಂಡಿತು. ಚೆನ್ನಪ್ಪನವರಂತೂ ತುಂಬ ಗಾಬರಿಗೊಂಡರು. ಮಾಸ್ತರರ ಪ್ರಚಾರಕಾರ್ಯ ಹೀಗೆಯೆ ಮುಂದುವರಿದಲ್ಲಿ ಕೆಲದಿನಗಳೊಳಗಾಗಿ ನಿಲಯವನ್ನು ಮುಚ್ಚಿಬಿಡುವ ಪ್ರಸಂಗ ಬರಬಹು ದೆಂದೂ ಅವರಿಗೆನ್ನಿಸದಿರಲಿಲ್ಲ.

ಚೆನ್ನಪ್ಪನವರಿಗಿಂತ ನೂರುಪಾಲು ಗಟ್ಟಿಗಳು ಚಂಪಾವತಿ. ಹಳ್ಳಿಗಳಲ್ಲಿ ಹರಡಿದ ಸುದ್ದಿಗಳಿಂದಾಗಿ ಅವಳ ಮನಸ್ಸಿಗೆ ಕಿರಿಕಿರಿಯಾಯಿತಾದರೂ ಆಕೆ ಧೈರ್ಯ ಕಳೆದುಕೊಳ್ಳಲಿಲ್ಲ. ಗಂಡಾಂತರದ ಸಂದರ್ಭಗಳಲ್ಲೇ ಹೆಚ್ಚು ಪ್ರಖರ ವಾಗುತ್ತಿದ್ದ ವ್ಯಕ್ತಿತ್ವ ಅವಳದು.

ಹಣೆಗೆ ಕೈಯಿಟ್ಟು ಚಿಂತಿಸುತ್ತ ಕುಳಿತ ಗಂಡನನ್ನು ತನ್ನ ತೀಕ್ಷ್ಣ ಮಾತುಗಳಿಂದ ತಿವಿದು ಎಬ್ಬಿಸುತ್ತ ಚಂಪಾವತಿ ಹೇಳಿದಳು :

“ ಇಷ್ಟಕ್ಕೆಲ್ಲಾ ಕೈಕಾಲು ಕಳಕೊಂಡು ಕೂತುಬಿಟ್ಟರ ಮುಂದ ಹ್ಯಾಗೆ ನಡೀಬೇಕು ? ಏಳ್ರಿ, ಏಳ್ರಿ.”

“ ನನಗೇನೂ ಹೊಳೀಲೊಲ್ಲದು,” ಚೆನ್ನಪ್ಪ ಬೇಸರದ ದನಿಯಲ್ಲಿ ನುಡಿದರು.

“ ನಾಳೆ ನಿಲಯವನ್ನ ಮುಚ್ಚುವ ಪ್ರಸಂಗ ಬಂತು ಅಂದರ ಹೊಳೀ ತದ ನಿಮಗ ! ನಿಮ್ಮಂಥ ಅಳುಬುರುಕರನ್ನ ಎಲ್ಲಿಯೂ ನೋಡಲಿಲ್ಲ ನಾನು.

ಆ ಸೊಟ್ಟ ಮಾಸ್ತರರ ಬಾಯಿ ಮುಚ್ಚಿಸುವದೇನು ದೊಡ್ಡ ಕೆಲಸವೋ! ನೀವು ಯಾತಕ್ಕಾದರೂ ಎಂ. ಎಲ್. ಎ. ಆಗಿದೀರೋ! ನಿಮ್ಮ ಬದಲು ನಾನೇ ಗಂಡಸಾಗಿದ್ದರೆ ಮಂತ್ರಿಯಾಗಿ ದರಬಾರು ನಡಸುತ್ತಿದ್ದೆ."

"ಈಗೇನು ಮಾಡು ಅಂತೀ ನೀನು?"

"ಸಾವುಕಾರರು ಯಾಕೋ ಬಹಳ ದಿನದಿಂದ ಬರಲಿಲ್ಲ. ಅವರ ಸಂಗಡ ಮಾತಾಡಿ ಎಲ್ಲಾ ನಿಶ್ಚಯಿಸೂಣಂತೆ. ಮೊದಲು ಅವರನ್ನ ಕರೆ ಕಳಿಸಿರಿ."

ಮಾರನೆಯ ದಿನ ಕುಬೇರಪ್ಪ ಆಗಮಿಸುತ್ತಲೂ ಚಂಪಾವತಿಯ ಕೊಟಡಿಯಲ್ಲಿ ಆಪ್ತಾಲೋಚನೆ ನಡೆಯಿತು.

"ನೀವು ಆ ಮುದುಕನನ್ನು ಇಲ್ಲಿಂದ ಕಳಿಸಬಾರದಿತ್ತು. ಅವನಿಲ್ಲೇ ಇದ್ದಿದ್ದರೆ ಅಂಥ ಬೊಬ್ಬಾಟವೇನೂ ಆಗುತ್ತಿರಲಿಲ್ಲ," ಎಂದರು ಕುಬೇರಪ್ಪ.

"ಈಗಲಾದರೂ ಅವನಿಂದ ಅಂಥ ಹಾನಿಯೇನು ಆದೀತು ಬಿಡ್ರಿ. ಎರಡು ದಿನಗಳಲ್ಲಿಯೆ ಅವನ್ನ ಜೇಲಿಗೆ ಕಳಿಸುವ ವ್ಯವಸ್ಥಾ ಮಾಡಿದರಾಯಿತು," ಎಂದು ಚಂಪಾವತಿ ತಾನು ಮೊದಲೇ ಸಿದ್ಧಗೊಳಿಸಿದ್ದ ಯೋಜನೆಯೊಂದನ್ನು ವಿವರಿಸಿದಳು.

ಕುಬೇರಪ್ಪ ಮೌನವಾಗಿದ್ದರು. ಚೆನ್ನಪ್ಪನವರಿಗೆ ಮಾತ್ರ ಆ ಯೋಜನೆ ಒಪ್ಪಿಗೆಯಾಗಲಿಲ್ಲ.

"ಸುಳ್ಳು ಆರೋಪ ಹ್ಯಾಗೆ ಹೊರಿಸುವದು ಅವರ ಮೇಲೆ? ಇಂಥಾದ್ದೆಲ್ಲಾ ಬೇಡ ಚಂಪಾ. ಇದೆಲ್ಲಾ ಚಲೋದಲ್ಲ."

ಚಂಪಾವತಿ ಕೆರಳಿ ನುಡಿದಳು.

"ಚಲೋದಲ್ಲ! ಚಲೋದಲ್ಲ! ನೀವೊಬ್ಬರೇ ಚಲೋ ಮನುಷ್ಯರು ಪ್ರಪಂಚದೊಳಗೆ. ನಾವೆಲ್ಲಾ ಪಶುಗಳು, ಅಲ್ಲೇನು! ಈ ಪ್ರಸಂಗವನ್ನ ತಪ್ಪಿಸಬೇಕಾದರೆ ಚಲೋದೋ ಕೆಟ್ಟದೋ ಏನಾದರೊಂದು ಹಾದಿ ತೆಗೀಲಿಕ್ಕೆ ಬೇಕು. ಯಾಕ್ರೀ ಸಾವುಕಾರರೆ?"

ಕುಬೇರಪ್ಪನವರೂ ಆ ಯೋಜನೆಯನ್ನು ಮನಃಪೂರ್ವಕವಾಗಿ ಒಪ್ಪಿರಲಿಲ್ಲ. ಆದರೆ, ಪ್ರೇಯಸಿಯ ಮಾತನ್ನು ವಿರೋಧಿಸುವುದಾದರೂ ಹೇಗೆ?

“ಆಗಲಿ. ಆಗಲಿ. ಹಾಗೇ ಆಗಲಿ,” ಎಂದರು ಕುಬೇರಪ್ಪ.

ಅದೇ ದಿನವೆ ಪೋಲೀಸ್ ಕಚೇರಿಗೆ ದೂರು ಕೊಡಲ್ಪಟ್ಟಿತ್ತು ನಿಲಯದಲ್ಲಿದ್ದ ಆರು ನೂರು ರೂಪಾಯಿಗಳಷ್ಟು ಹಣವನ್ನು ಅಪಹರಿಸಿಕೊಂಡು ಮಾಸ್ತರರು ಫರಾರಿಯಾಗಿರುವರೆಂದು. ಕುಬೇರಪ್ಪನವರ ಕಾರಿನಲ್ಲಿ ಕುಳಿತು ಸ್ವತಃ ಚಂಪಾವತಿಯೆ ಹೋಗಿ ಇನಸ್ಪೆಕ್ಟರನ್ನು ಕಂಡು ದೂರು ಕೊಟ್ಟು ಬಂದಳು.

ಮಾಸ್ತರರು ನಿಲಯವನ್ನು ತೊರೆದು ಚೆನ್ನಪ್ಪ ಚಂಪಾವತಿಯರ ವಿರುದ್ಧ ಪ್ರಚಾರ ನಡಸುತ್ತಿದ್ದ ವಾರ್ತೆ ತಿಳಿಯುತ್ತಲೂ ಹಿರೇಮಠದ ಚೌಡೇಶ್ವರನಿಗೆ ಹಾಲು ಸಕ್ಕರೆ ಸೇವಿಸಿದ ಹಾಗಾಯಿತು. ಮೊದಲಿನಿಂದಲೂ ಆತ ಚೆನ್ನಪ್ಪನವರು ತನ್ನ ಪ್ರತಿಸ್ಪರ್ಧಿಯೆಂದೇ ಭಾವಿಸಿಕೊಂಡು ಬಂದಿದ್ದವನು, ಅವರ ನಿಲಯದೊಂದಿಗೆ ಒಂದು ಬಗೆಯ ಸ್ಪರ್ಧೆಯನ್ನೇ ನಡಸುತ್ತ ಬಂದವನು, ಸರಕಾರದಿಂದಲೂ ಹರಿಜನ ನಿಧಿಯಿಂದಲೂ ನಿಲಯಕ್ಕೆ ಸಿಕ್ಕುತ್ತಿದ್ದ ಧನ ಸಹಾಯವನ್ನು ತಪ್ಪಿಸಿ ಅವನ್ನು ತನ್ನ ಆಶ್ರಮಕ್ಕೆ ದೊರಕಿಸಲೆಂದು ಅನೇಕ ಲಾಗಗಳನ್ನು ಹಾಕಿದವನು. ಚೆನ್ನಪ್ಪ ಚಂಪಾವತಿಯರಿಗಿದ್ದ ಪ್ರಭಾವ ಅವನಿಗಿರಲಿಲ್ಲವಾದುದರಿಂದ ಅವನ ಯತ್ನ ಫಲಿಸಿರಲಿಲ್ಲ. ಅದರಿಂದಾಗಿ ಒಳಗೊಳಗೇ ಉರಿಯುತ್ತ ಬಿದ್ದ ಚೌಡೇಶ್ವರನಿಗೆ ನಿಲಯದ ಬಗೆಗೆ ಅಪಪ್ರಚಾರ ನಡೆದುದನ್ನು ಕೇಳುತ್ತಲೂ ಆನಂದವುಂಟಾದುದರಲ್ಲಿ ಆಶ್ಚರ್ಯವಿರಲಿಲ್ಲ. ಹರಿಜನ ನಿಲಯದ ಆಧಾರ ಸ್ತಂಭದಂತಿದ್ದ ಸಾಂಬಯ್ಯನವರನ್ನು ತನ್ನ ಆಶ್ರಮದ ಮುಖ್ಯ ಕಾರ್ಯಕರ್ತರನ್ನಾಗಿ ಸೇರಿಸಿಕೊಂಡು ಬಿಟ್ಟಲ್ಲಿ ಕೆಲವೇ ದಿನಗಳಲ್ಲಿ ತನ್ನ ಆಶ್ರಮ ಪ್ರಭಾವಿಯಾಗಿ ಹರಿಜನ ನಿಲಯಕ್ಕೆ ದೊಡ್ಡ ಪೆಟ್ಟು ಬೀಳಬಹುದೆಂದು ಊಹಿಸಿಕೊಂಡು ಆತ ಒಡನೆಯೆ ಅವರನ್ನು ಹುಡುಕಿಕೊಂಡು ಹೋಗಿ ಒಂದು ಹಳ್ಳಿಯಲ್ಲಿ ಭೇಟಿ ಮಾಡಿ ತನ್ನ ಮನೀಷೆಯನ್ನು ವ್ಯಕ್ತಗೊಳಿಸಿದ. ತಿಂಗಳೊಂದಕ್ಕೆ ಇಪ್ಪತ್ತು ರೂಪಾಯಿ ಸಂಬಳ ಕೊಡುವುದಾಗಿಯೂ ಆಸೆ ತೋರಿಸಿದ. ಮಾಸ್ತರರ ಚಾರಿತ್ರ್ಯವೆಂಥದೆಂಬುದು ಚೌಡೇಶ್ವರನಿಗೆ ತಿಳಿದಿರಲಿಲ್ಲ. ಈಗ ತಿಳಿಯಿತು.

“ಮಾಸ್ತರ ಕೆಲಸಕ್ಕೆ ರಾಜೀನಾಮೆ ಕೊಟ್ಟಾಗಲೇ ಸಂಬಳದ ಆಸೆ

ಬಿಟ್ಟುಬಿಟ್ಟಿದ್ದೇನೆ ಚೌಡೇಶ್ವರ. ಈಗ ನನಗೆ ಯಾವ ನೌಕರಿಯೂ ಬೇಡ."
ಎಂದು ಅವರು ಸ್ಪಷ್ಟವಾಗಿ ಹೇಳಿದರು.

"ನೌಕರಿ ಎಂದು ನೀವು ತಿಳಿದುಕೊಳ್ಳಬಾರದು ಮಾಸ್ತರರೆ. ನನ್ನ ಸಹಾಯಕರಾಗಿ ನನ್ನ ಹಿರಿಯರಾಗಿ ಬಂದು ಆಶ್ರಮದಲ್ಲಿರಿ. ಈ ಚೆನ್ನಪ್ಪ ನಿಮ್ಮನ್ನು ಬಹಳ ಕೆಟ್ಟರೀತಿಯಿಂದ ನಡಸಿಕೊಂಡರೆಂದು ಕೇಳಿ ನನಗೆ ಬಲು ವಿಷಾದವಾಗಿದೆ. ನಿಮ್ಮಂಥ ಕಾರ್ಯಕರ್ತರನ್ನು ದೊರಕಿಸಬೇಕಾದರೆ ಏಳು ಜನ್ಮಗಳ ಪುಣ್ಯ ಬೇಕು," ಎಂದೆಲ್ಲ ಬಣ್ಣದ ಮಾತು ಹಾರಿಸಿದ ಚೌಡೇಶ್ವರ.

"ಅವರೇನೂ ನನ್ನನ್ನು ಕೆಟ್ಟರೀತಿಯಿಂದ ನಡಸಿಕೊಂಡಿಲ್ಲ ಚೌಡೇಶ್ವರ. ನಾನಾಗಿಯೆ ನಿಲಯವನ್ನ ಬಿಟ್ಟು ಬಂದಿದ್ದೇನೆ."

"ಅಲ್ಲಿ ನಡೆಯುವುದನ್ನು ನೋಡಲಾರದೆ ಬಿಟ್ಟು ಬಂದಿರಿ ಅಲ್ಲವೇ?"

"ಹೌದು."

"ಹೀಗೆ ಬಂದುಬಿಟ್ಟ ಮಾತ್ರಕ್ಕೆ ಏನಾದಂತಾಯಿತು? ಮನುಷ್ಯ ಆಶಾವಾದಿಯಾಗಿರಬೇಕು. ಹಿಡಿದ ಕೆಲಸವನ್ನು ಬಿಡಬಾರದು. ಅದಕ್ಕೇ ನಾನು ನಿಮ್ಮನ್ನು ಕೇಳಿಕೊಳ್ಳುವದು, ನಮ್ಮ ಆಶ್ರಮಕ್ಕೆ ಬನ್ನಿ ಅಂತ...."

"ನಿಮ್ಮ ಆಶ್ರಮದಲ್ಲೂ ನಡೆಯಬಾರದ ಕೆಲಸಗಳೆಷ್ಟೋ ನಡೆಯುತವೆ, ಹೌದಲ್ಲೋ?"

ಚೌಡೇಶ್ವರ ತಬ್ಬಿಬ್ಬಾಗಿ ಕೈ ಹಿಸುಕಿಕೊಳ್ಳುತ್ತ, "ಅಂಥದೇನು ಅಕೃತ್ಯ ಕಂಡಿದ್ದೀರಿ ಮಾಸ್ತರರೆ? ನಮ್ಮ ವೈರಿಗಳಾರೋ ನಿಮಗೆ ಏನನ್ನೋ ಹೇಳಿರಬೇಕು," ಎಂದ.

"ವೈರಿಗಳೇಕೆ ಹೇಳಬೇಕು? ನಿಮ್ಮ ಆಶ್ರಮದಲ್ಲಿ ನಾಲ್ಕು ದಿನ ಇದ್ದ ವಿದ್ಯಾರ್ಥಿಗಳೇ ಹೇಳಿದ್ದಾರೆ. ಹೋಗಲಿ. ಅದೆಲ್ಲಾ ಈಗ ಬೇಡ. ಅಂತೂ ಈ ಆಶ್ರಮಗಳು, ನಿಲಯಗಳು ಅಂದರೇನೇ ನನಗೆ ಅಪನಂಬಿಕೆಯಾಗಿದೆ. ಇಂಥಾ ಸಂಸ್ಥೆಗಳು ವ್ಯಕ್ತಿಗಳ ಕೈಯಲ್ಲಿರಲೇಬಾರದು, ಸರಕಾರವೇ ಇವನ್ನು ನಡಸಬೇಕು ಅಂತ ನನಗನ್ನಿಸುತದೆ," ಎಂದರು ಮಾಸ್ತರರು.

"ಹೇಳಿ ಕೇಳಿ ಪರಕೀಯ ಸರಕಾರ. ಅದೇನು ಮಾಡೀತು ಇಂಥ ಕೆಲಸ?"

"ಸುಮ್ಮನೆ ಎಲ್ಲದಕ್ಕೂ ಸರಕಾರವನ್ನ ದೂರುವದು ಚಲೋದಲ್ಲ. ಪರಕೀಯ ಸರಕಾರವಾದರೇನಾಯಿತು, ಹರಿಜನರಿಗಾಗಿ ಬೋರ್ಡಿಂಗುಗಳ ನ್ನಿಟ್ಟಿಲ್ಲವೇನು? ಸ್ಕಾಲರ್‌ಶಿಪ್ ಇಟ್ಟಿಲ್ಲವೇನು? ಈ ನಿಲಯ, ಆಶ್ರಮ ಗಳನ್ನೂ ಸರಕಾರವೇ ವಹಿಸಿಕೊಂಡು ಬಿಟ್ಟರೆ ಉತ್ತಮವಾದೀತು," ಎಂದರು ಮಾಸ್ತರರು.

"ನೀವಿನ್ನು ಹಾಗೆ ಪ್ರಚಾರ ಮಾಡುವದೊಂದು ಉಳಿಯಿತು," ಎಂದು ಅಣಕದ ದನಿಯಲ್ಲಿ ನುಡಿದ ಚೌಡೇಶ್ವರ.

"ನನಗೆ ಸತ್ಯ ಅಂತ ಅನ್ನಿಸಿದ್ದನ್ನ ಹೇಳುವದಕ್ಕೆ ಯಾರ ಹಂಗೇನು?" ಎಂದರು ಮಾಸ್ತರರು.

ಚೌಡೇಶ್ವರ ನಿರಾಶನಾಗಿ ಗೊಬ್ಬೂರಿಗೆ ಹಿಂದಿರುಗಿದ.

ಎರಡು ದಿನಗಳೊಳಗಾಗಿಯೆ ಮಾಸ್ತರರು ಬಂಧಿಸಲ್ಪಟ್ಟರು. ತನ್ನ ಮೇಲೆ ಹೊರಿಸಲ್ಪಟ್ಟ ಆಪಾದನೆಯೇನೆಂಬುದು ಗೊತ್ತಾಗುತ್ತಲೂ ಅವರು ಕೊಂಚ ನಕ್ಕರು, ಅಷ್ಟೆ. ಪೋಲೀಸರೆದುರಿಗೆ ಏನನ್ನೂ ಹೇಳಲಿಲ್ಲ.

ಮರುದಿನದ ಪತ್ರಿಕೆಗಳಲ್ಲಿ ಅವರ ಬಂಧನದ ವಾರ್ತೆ ಪ್ರಕಟವಾಗಿ ಬಂದಿತು. ಅದನ್ನೋದಿದಾಗಲೂ ಮಾಸ್ತರರು ತುಸು ನಕ್ಕರಷ್ಟೆ.

ಕೆಲದಿನಗಳ ತರುವಾಯ ವಿಚಾರಣೆಗಾರಂಭವಾಯಿತು. ತಮ್ಮ ಮೇಲಿನ ಆಪಾದನೆಗಳನ್ನು ಅಲ್ಲಗಳೆದು ನಿಲಯದಲ್ಲಿ ನಡೆಯುತ್ತಿದ್ದ ನೈಜ ಘಟನೆಗಳನ್ನೆಲ್ಲ ನ್ಯಾಯಾಧೀಶರೆದುರಿಗೆ ವಿಶದವಾಗಿ ತಿಳಿಸಿದರು ಮಾಸ್ತರರು.

"ದೇವರನ್ನು ಸ್ಮರಿಸಿ ಸತ್ಯವನ್ನು, ಸಂಪೂರ್ಣ ಸತ್ಯವನ್ನು ಹೇಳುತ್ತಿದ್ದೇನೆ ಸಾಹೇಬರೆ. ಈಗ ಯಾರು ಅಪರಾಧಿಗಳೆಂದು ನೀವೇ ನಿರ್ಣಯಿಸಿರಿ."

ನ್ಯಾಯಾಧೀಶರು ಭುಜ ಕುಣಿಸಿ ಹೇಳಿದರು:

"ಸತ್ಯವೆಂದು ಹೇಳಿದ ಮಾತ್ರಕ್ಕೆ ನಡೆಯುವದಿಲ್ಲ. ಸಾಕ್ಷಿ ಬೇಕು, ಪುರಾವೆ ಬೇಕು. ನಿಮ್ಮ ಅಪರಾಧದ ಬಗ್ಗೆ ಸಾಕ್ಷಿಗಳಿವೆ, ಆಧಾರವಿದೆ. ಈ ಸಾಕ್ಷಿ ಪುರಾವೆ ಸುಳ್ಳೆಂದು ಸಿದ್ಧಮಾಡಿಕೊಡುವಿರಾ?"

ಹಾಗೆ ಸಿದ್ಧಪಡಿಸುವುದು ಸಾಧ್ಯವಿರಲಿಲ್ಲ. ಮಾಸ್ತರರು ಹಣ ಕದ್ದುದು ನಿಜವೆಂದೇ ನ್ಯಾಯಾಲಯ ಒಪ್ಪಿಕೊಂಡಿತು.

ಆರು ತಿಂಗಳುಗಳ ಶಿಕ್ಷೆ ಹೊತ್ತು ಮಾಸ್ತರರು ಸೆರೆಮನೆ ಸೇರಿಕೊಂಡರು.

೨೮

ಹಾಸಿಗೆಯ ಸುರುಳಿಯನ್ನು ಹೆಗಲಮೇಲೆ ಹೊತ್ತುಕೊಂಡು ಮಹಾದೇವ ನಿಲಯದ ಹತ್ತಿರ ಬರುತ್ತಲೂ ಬಲಗಡೆಗೆ ಎದ್ದುನಿಂತಿದ್ದ ಹೊಸ ಕಟ್ಟಡ ಅವನ ದೃಷ್ಟಿ ಸೆಳೆಯಿತು. "ಯಾರೋ ಅವಸರದಲ್ಲಿ ಮನೆ ಕಟ್ಟಿಸಿದ್ದಾರೆ," ಎಂದುಕೊಳ್ಳುತ್ತ ಆತ ಮೆಟ್ಟಲುಗಳನ್ನೇರಿ ಮೇಲೆ ಬರುತ್ತಿದ್ದ ಹಾಗೆ ಎದುರಿನಿಂದ ಬಂದ ಕಸ್ತೂರಿ ಅವನನ್ನು ಕಂಡು ತಲೆ ತಗ್ಗಿಸಿಕೊಂಡು ಸರ್‍ರನೆ ಒಳಗಡೆ ಹೊರಟುಹೋದಳು. ಮಹಾದೇವನ ಎದೆ ವೇಗವಾಗಿ ತುಡಿಯತೊಡಗಿತು. ತನ್ನನ್ನು ಕಂಡೊಡನೆ ಕಸ್ತೂರಿ ತಲೆ ತಗ್ಗಿಸಿದುದೇಕೆ? ಮುಖ ತೋರಿಸಲು ನಾಚಿಕೊಂಡವಳಂತೆ ಮಾಯವಾದುದೇಕೆ?

ಎರಡು ತಿಂಗಳ ಹಿಂದೆ ತಾನು ಅವಳನ್ನು ಬೀಳ್ಕೊಂಡು ಹಳ್ಳಿಗೆ ಹೊರಟು ನಿಂತಾಗ ನಡೆದ ಮಾತುಕತೆ ಜ್ಞಾಪಕಕ್ಕೆ ಬಂದು ಅವನ ಕರುಳು ಕುದಿಯತೊಡಗಿತು. ಯಾವುದು ನಡೆಯಬಾರದೆಂದು ತಾನು ಬಯಸುತ್ತಿದ್ದನೋ ಆ ಘಟನೆ ನಡೆದೇ ಹೋಗಿರಬಹುದೇ ಹೇಗೆ? ಕಸ್ತೂರಿಗಂತೂ ಆ ವಿಷಯವಾಗಿ ಭಯವಿದ್ದೇ ಇದ್ದಿತು. ತನಗೂ ಸಂದೇಹವಿದ್ದಿತು. ಅದು.... ಆ ಘಟನೆ ನಿಜಕ್ಕೂ ಸಂಭವಿಸಿರಬಹುದೇ?

ಕಚೇರಿ ಕೊಟಡಿಯಲ್ಲಿ ಮಾಸ್ತರರು ಬೇರೆ ಇರಲಿಲ್ಲ. ಅವರ ಬಟ್ಟೆ ಬರೆ, ಕೈಕೋಲು ಯಾವುದೂ ಇರಲಿಲ್ಲ. ನಿಧಿಯನ್ನೆತ್ತಲು ಸಂಚಾರ ಹೋಗಿರುವರೇನೋ ಎಂದುಕೊಳ್ಳುತ್ತ, ಮಹಾದೇವ ತನ್ನ ಹಾಸಿಗೆಯನ್ನು ಕೊಟಡಿಯಲ್ಲಿಟ್ಟು ಕೈಕಾಲು ಮುಖ ತೊಳೆದುಕೊಳ್ಳಲೆಂದು ಬಚ್ಚಲುಮನೆಗೆ ನಡೆದ.

ಅಡುಗೆಯ ಮನೆಯಲ್ಲಿ ಈರುಳ್ಳಿ ಹೆರಚುತ್ತಲಿದ್ದ ಚಂಪಾವತಿ ಅವನನ್ನು ಕಂಡು ನಸುನಗೆ ಬೀರುತ್ತ ಕೇಳಿದಳು:

"ಯಾವಾಗ ಬಂದಿಯಪಾ ಮಹಾದೇವಾ? ಎಲ್ಲಾ ನೆಟ್ಟಗ ಹೌದಲ್ಲೋ?"

ಮತ್ತೂ ಆಶ್ಚರ್ಯ ಮಹಾದೇವನಿಗೆ. ತನ್ನೊಡನೆ ಮಾತನಾಡುವಾಗ ಚಂಪಾವತಿಯ ಮುಖದ ಮೇಲೆ ನಸುನಗೆ ಮೂಡಿದುದನ್ನು ಎಂದೂ ಕಂಡಿರಲಿಲ್ಲ ಆತ. ಕ್ಷೇಮಸಮಾಚಾರದ ಪ್ರಶ್ನೆಗಳನ್ನೂ ಎಂದೂ ಕೇಳಿದವಳಲ್ಲ ಆಕೆ. ಈ ಎರಡು ತಿಂಗಳ ಅವಧಿಯಲ್ಲಿ ಅವಳ ಸ್ವಭಾವವೇ ಬದಲಾಯಿಸಿದೆಯೋ ಹೇಗೆ? ಅಥವಾ...ಚಂಪಾವತಿಯ ಮನಸ್ಸಿನಲ್ಲಿ ಯಾವುದಾದರೊಂದು ತಂತ್ರ ಅವಿತಿದೆಯೋ?

"ನನ್ನ ತಾಯಿ ತೀರಿಕೊಂಡಳು ಅವ್ವನವರೆ."

ಚಂಪಾವತಿ ಎದ್ದು ಬಂದು ಕನಿಕರವನ್ನು ನಟಿಸುತ್ತ ಹೇಳಿದಳು.

"ಪಾಪ, ಪಾಪ. ಈಗಂತೂ ನೀನು ಪೂರಾ ಪರದೇಶಿಯಾದ ಹಾಗಾಯಿತು."

"ಮಾಸ್ತರು ಎಲ್ಲಿ ಹೋಗಿದಾರ ಅವ್ವನವರೆ?"

"ಮೊದಲು ಊಟ ಮಾಡಪ್ಪ. ಸಾವಕಾಶವಾಗಿ ಹೇಳುತೀನಂತೆ ಎಲ್ಲಾ," ಎಂದಳು ಚಂಪಾವತಿ.

ಅಂದು ಮಹಾದೇವನಿಗೆ ಅವಳೇ ಊಟ ಬಡಿಸಿದಳು. ಅದೂ ಕೂಡ ಹೊಸ ವಿಷಯವೇ ಆಗಿದ್ದಿತು. ಮಹಾದೇವ ನಿಲಯಕ್ಕೆ ಬಂದಂದಿನಿಂದಲೂ ಕೂಲಿಯಾಳುಗಳನ್ನು ನಡಸಿಕೊಳ್ಳುವ ಹಾಗೆಯೆ ಅವನನ್ನು ನಡಸಿಕೊಂಡು ಬಂದಿದ್ದವಳು ಚಂಪಾವತಿ. ಅವನನ್ನು ಗದರಿಸುವುದು, ಬೈಯುವುದು, ಹೀಯಾಳಿಸುವುದು. ಎಷ್ಟೋ ಸಲ ಆತ ತಂಗಳು ರೊಟ್ಟಿ ತಿಂದು ಹಸಿವೆಯನ್ನು ಹೋಗಲಾಡಿಸಿಕೊಳ್ಳಬೇಕಾಗಿ ಬಂದಿದ್ದಿತು. ಆತನೂ ಒಬ್ಬ ಮನುಷ್ಯ ಪ್ರಾಣಿ, ಅವನನ್ನೂ ಸರಿಯಾಗಿ ನೋಡಿಕೊಳ್ಳಬೇಕು ಎಂಬ ವಿಚಾರವೇ ಅವಳಲ್ಲಿರಲಿಲ್ಲ. ಅಂಥ ಚಂಪಾವತಿ ಈಗ ಹಠಾತ್ತಾಗಿ ಹೀಗೆ ಮಮತೆಯನ್ನು ಪ್ರದರ್ಶಿಸುವುದೂ ವಿಚಿತ್ರವೇ ಆಗಿದ್ದಿತು.

ಮಹಾದೇವ ಊಟ ಮಾಡುತ್ತಿದ್ದ ಹಾಗೆಯೆ ಮಾಸ್ತರರ 'ಕಳ್ಳತನ'ದ ಕಥೆಯನ್ನೆಲ್ಲ ಅವಳು ನಿಧಾನವಾಗಿ ಹೇಳಿದಳು.

"ಅವರನ್ನ ನಾವು ಪೂರಾ ನಂಬಿಕೊಂಡಿದ್ದಿವಿ. ಕೂದಲೆಳೆಯಿಂದ ಕುತ್ತಿಗೆ ಕೊಯ್ದರಪ್ಪ. ಛೆ. ಛೆ. ಯಾವ ಹುತ್ತದಾಗ ಎಂಥಾ ಹಾವು ಅದsನೋ ದೇವರಿಗೇ ಗೊತ್ತು."

ಮಾಸ್ತರರು ಸೆರೆಮನೆಯಲ್ಲಿರುವ ಸಂಗತಿ ಗೊತ್ತಾಗುತ್ತಲೂ ಮಹಾದೇವನ ಕೈತುತ್ತು ತಟ್ಟೆಯಲ್ಲಿಯೆ ಉಳಿಯಿತು. ಮುಂದೆ ಅವನಿಗೆ ಊಟ ಮಾಡಲಾಗಲಿಲ್ಲ - ಮಾಸ್ತರರ ವಿರುದ್ಧ ದೊಡ್ಡದೊಂದು ಕಾರಸ್ಥಾನ ನಡೆದಿದ್ದುದಂತೂ ಸ್ಪಷ್ಟವಾಗಿದ್ದಿತು. ಚಂಪಾವತಿಯ ಒಂದು ಮಾತನ್ನೂ ನಂಬುವಂತಿರಲಿಲ್ಲ. ಮಾಸ್ತರರು ಕಳವು ಮಾಡುವುದೆಂದರೇನು....ಛೆ. ಜೀವ ಹೋಗುವ ಪ್ರಸಂಗ ಬಂದರೂ ಅಂಥ ಕೃತ್ಯ ಅವರಿಂದಾಗದು. ಮಾಸ್ತರರ ವಿಷಯ ತನಗೆ ತಿಳಿಯದೇ ? ಎಲ್ಲವನ್ನೂ ಹುಟ್ಟಿಸಿಕೊಂಡು ಹೇಳುತ್ತಿದಾಳೆ ಚಂಪಾವತಿ. ಅದರಲ್ಲೇನೂ ಸಂದೇಹವಿಲ್ಲ.

ಆತ ಊಟ ಮುಗಿಸಿ ಎದ್ದು ಬಿಡುತ್ತಲೂ ಚಂಪಾವತಿ ಕೇಳಿದಳು: "ಯಾಕಪಾ, ಈಗs ಎದ್ದಿ ? ಉಣ್ಣಲಿಲ್ಲ ನೆಟ್ಟಗs ?"

"ಸಾಕಾಯಿತು ಅವ್ವನವರೆ," ಎಂದಿಷ್ಟೆ ನುಡಿದು ಆತ ಎದ್ದು ಹೋದ.

ಸಂಜೆಯವರೆಗೂ ಕಸ್ತೂರಿ ಅವನ ದೃಷ್ಟಿಗೆ ಬೀಳದೆ ದೂರವಾಗಿದ್ದಳು. ಸಾಯಂಕಾಲ ಚಂಪಾವತಿ ಪೇಟೆಗೆ ಹೋದ ಸಂಧಿ ಸಾಧಿಸಿ ಮಹಾದೇವ ಅವಳನ್ನು ಹುಡುಕಿಕೊಂಡು ಹೋಗಿ,

"ಹೀಂಗ್ಯಾಕ ಮಾಡುತಾ ಇದ್ದೀ ಕಸ್ತೂರಿ? ಏನಾಯಿತು ನಿನಗ?" ಎಂದು ಕೇಳಿದ.

ಗೋಡೆಗೊರಗಿಕೊಂಡು ನಿಂತಿದ್ದ ಕಸ್ತೂರಿ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಮಹಾದೇವನಿಗೆ ಇನ್ನು ಸಂದೇಹವುಳಿಯಲಿಲ್ಲ. ಕೋಪ, ಕನಿಕರ, ಜುಗುಪ್ಸೆ ಮೊದಲಾದ ಹಲವು ಭಾವನೆಗಳು ಅವನ ಮಿದುಳಿನಲ್ಲಿ ತಾಂಡವವಾಡತೊಡಗಿದುವು. ಕಸ್ತೂರಿಯ ಹತ್ತಿರ ಹೋಗಿ ಅವಳ ಭುಜಗಳನ್ನು ಹಿಡಿದು ಕೇಳಿದ:

"ಮಾತಾಡು ಕಸ್ತೂರೀ, ಮಾತಾಡು. ಈ ಕೆಟ್ಟ ಜನ ನಿನಗೆ..."

ಅಲ್ಲಿ ನಿಲ್ಲುವುದಕ್ಕಾಗಲಿಲ್ಲ ಕಸ್ತೂರಿಗೆ ಮಹಾದೇವನ ಕೈಗಳಿಂದ ತಪ್ಪಿಸಿಕೊಂಡು ಅವಳು ಅಡುಗೆಯ ಮನೆಯತ್ತ ಓಡಿಹೋದಳು.

ಅವಳು ಬಾಯಿಬಿಟ್ಟು ಹೇಳುವ ಅವಶ್ಯಕತೆಯುಳಿದಿರಲಿಲ್ಲ. ಮಹಾದೇವನಿಗೆ ಎಲ್ಲವೂ ಮನವರಿಕೆಯಾಗಿದ್ದಿತು. ಅವನ ಮುಷ್ಟಿಗಳೆರಡೂ ತಾನಾಗಿಯೆ ಮುಚ್ಚಿಕೊಂಡು ಕಲ್ಲಿನಂತೆ ಬಿರುಸುಗೊಂಡುವು. ಅವನೆದೆಯಲ್ಲಿ ಹುಚ್ಚು ಕ್ರೋಧ ಕೆರಳಿ ಬಂದಿತು. ಯಾರನ್ನಾದರೂ ಹೊಡೆಯಬೇಕು, ಭಯಂಕರವಾಗಿ ಹೊಡೆಯಬೇಕು, ರಕ್ತ ಚಿಮ್ಮುವವರೆಗೂ ಹೊಡೆಯಬೇಕು ಎಂದೆನ್ನಿಸತೊಡಗಿತು. ಆ ಸಮಯದಲ್ಲಿ ಕುಬೇರಪ್ಪನಾಗಲಿ ಚಂಪಾವತಿಯಾಗಲಿ ಅಲ್ಲಿದ್ದಲ್ಲಿ ಅವರನ್ನು ಆತ ಹೊಡೆದುಬಿಡುತ್ತಿದ್ದನೆಂಬುದರಲ್ಲಿ ಸಂಶಯವಿರಲಿಲ್ಲ.

ಹಲ್ಲುಮುಡಿ ಕಚ್ಚಿಕೊಂಡು ಹೊರಗೆ ಬಂದ ಮಹಾದೇವ. ದೀಪ ಹಚ್ಚುವ ಸಮಯವಾಗಿದ್ದಿತು. ಎದುರಿಗೆ ಸೂರ್ಯಬಿಂಬ ನಿಧಾನವಾಗಿ ಕೆಳಕ್ಕಿಳಿಯುತ್ತಲಿದ್ದಿತು. ಮೋಡಗಳಿಲ್ಲದ ಆಕಾಶ ಸಂಜೆಯ ಶಾಂತಿಯಲ್ಲಿ ಸ್ಮಶಾನದ ನೆನಪನ್ನು ತಂದುಕೊಡುವಂತಿದ್ದಿತು. ಗಾಳಿ ಬೀಸುತ್ತಿರಲಿಲ್ಲ ವಾದುದರಿಂದ ಸುತ್ತಲಿನ ಗಿಡ ಮರಗಳೆಲ್ಲ ಉದಾಸೀನ ಮುದ್ರೆಯಿಂದ ನಿಂತ ಹಾಗಿದ್ದಿತು. ಎಡಗಡೆಗೆ ತಲೆಯೆತ್ತಿ ನಿಂತಿದ್ದ ಹೊಸ ಕಟ್ಟಡ ಆ ಬರಡು ಸಂಜೆಯಲ್ಲಿ ದೊಡ್ಡದೊಂದು ಸಮಾಧಿಯಂತೆ ಕಾಣಿಸುತ್ತಿದ್ದಿತು.

ಎರಡು ಮೂರು ದಿನಗಳ ಕಾಲ ಯಾರೊಡನೆಯೂ ಮಾತನಾಡಲಿಲ್ಲ ಮಹಾದೇವ. ಉದ್ವಿಗ್ನವಾದ ಮನಸ್ಸನ್ನು ಹತೋಟಿಗೆ ತಂದುಕೊಳ್ಳಲು ಯತ್ನಿಸುತ್ತಿದ್ದನಾತ. ಅವನ ಮುಖದ ಮೇಲಿನ ವಿಚಿತ್ರ ಕಳೆಯನ್ನು ಕಂಡು ಚಂಪಾವತಿಯೂ ಆಶಂಕೆಯಿಂದ ಮೌನ ತಳೆದಿದ್ದಳು. ಕಸ್ತೂರಿಯಂತೂ ಅವನ ಎದುರಿಗೆ ನಿಲ್ಲುತ್ತಲೇ ಇರಲಿಲ್ಲ. ಶಾಲೆಗಾರಂಭವಾಗಿದ್ದಿತು. ಮಹಾದೇವ ಯಾಂತ್ರಿಕವಾಗಿ ಶಾಲೆಗೆ ಹೋಗಿ ಬರತೊಡಗಿದ್ದ. ಅಲ್ಲಿಯೂ ಆತ ಯಾರ ಜತೆಗೂ ಮಾತು ಬೆಳಸುತ್ತಿರಲಿಲ್ಲ. ಉಪಾಧ್ಯಾಯರು ಕೇಳಿದ ಪ್ರಶ್ನೆಗಳಿಗಷ್ಟು ಉತ್ತರಿಸುತ್ತಿದ್ದನಷ್ಟೆ.

ಹಳ್ಳಿಗಳಿಗೆ ಹೋಗಿದ್ದ ಚೆನ್ನಪ್ಪ ನಾಲ್ಕನೆಯ ದಿನ ಮರಳಿ ಬಂದವರು ಮಹಾದೇವನನ್ನು ನೋಡಿ, " ಶಾಲೆ ಶುರು ಆಯ್ತೇನು ಮಾದೇವಾ ?" ಎಂದು ವಿಶ್ವಾಸದಿಂದ ಮಾತನಾಡಿಸಿದರು.

" ಆಯಿತು," ಎಂದು ಮಹಾದೇವ.

" ಈ ವರ್ಷ ನೀನು ಸ್ಕಾಲರ್ ಆಸಾ. ನಿನ್ನಿಂದಾಗಿ ನಮ್ಮ ನಿಲಯಕ್ಕೊ ಕೀರ್ತಿ ಬಂತು. ಈ ಸಲವೂ ಮೊದಲನೆಯ ನಂಬರು ಬಿಡಬಾರದು ಹಂ, ಪರೀಕ್ಷೆಯೊಳಗ!" ಎಂದರು ಚೆನ್ನಪ್ಪ.

" ಬರದೇ ಬಿಟ್ಟಾನೇನ್ರಿ!" ಎಂದಳು ಚಂಪಾವತಿ.

ಮಹಾದೇವ ಏನನ್ನೂ ಹೇಳಲಿಲ್ಲ. ಆತ ಮಾತನಾಡುವುದನ್ನೇ ಕಡಿಮೆಮಾಡುತ್ತ ಬಂದ. ಎರಡು ತಿಂಗಳುಗಳು ಹಾಗೆ ಮೌನದಲ್ಲಿ ಕಳೆದು ಹೋದುವು. ನಿಲಯದ ಕೆಲಸವನ್ನು ನೋಡಿಕೊಂಡು ಶಾಲೆಗೆ ಹೋಗಿ ಬರುತ್ತಿದ್ದ ಮಹಾದೇವ. ಕಸ್ತೂರಿಯೂ ಶಾಲೆಗೆ ಬರುತ್ತಿದ್ದಳು.

ಕುಬೇರಪ್ಪನವರೂ ಆಗಾಗ ಬರುತ್ತಿದ್ದವರು ಜೋಸಮನೆಯಲ್ಲಿ ಉಳಿದು ಕೊಳ್ಳುತ್ತಿದ್ದರು. ವಿಶೇಷವಾಗಿ ಅವರು ನಿಲಯದಲ್ಲಿ ಕಾಲಿಡುತ್ತಿರಲಿಲ್ಲ.

ಇದ್ದಬಿದ್ದ ಹಾಗೆ ಒಂದು ದಿನ ಕಸ್ತೂರಿ ನಿಲಯದಿಂದ ಕಣ್ಮರೆ ಯಾದಳು. ಅಂದು ಅವಳು ಹೈಸ್ಕೂಲಿಗೆ ಬಾರದಿದ್ದುದನ್ನು ಗಮನಿಸಿದ ಮಹಾದೇವ ವ್ಯಾಕುಲಚಿತ್ತದಿಂದ ನಿಲಯಕ್ಕೆ ಬಂದವನು ಚಂಪಾವತಿಯನ್ನು ಕೇಳಿದ:

" ಕಸ್ತೂರಿಯೆಲ್ಲಿ ಕಾಣುವದಿಲ್ಲಲ್ಲ, ಅವ್ವನವರೆ ?"

" ಅವಳೇ? ಅವಳ ಅಜ್ಜಿಗೇನೋ ಜಡ್ಡಾಗಿದೆಯಂತೆ. ಒಂದು ವಾರದ ಮಟ್ಟಿಗೆ ಊರಿಗೆ ಹೋಗಿದಾಳ."

ಅವಳ ಹೇಳಿಕೆಯನ್ನು ಮಹಾದೇವ ನಂಬಲು ಸಾಧ್ಯವಿರಲಿಲ್ಲ. ಕಸ್ತೂರಿ ಪೂರ್ಣವಾಗಿ ಪರದೇಶಿಯೆಂಬುದನ್ನು ಆತ ಬಲ್ಲ. ಅವಳಿಗೆ ತಾಯಿ, ಅಜ್ಜಿ, ಇತರ ಬಂಧುಗಳು ಯಾರೂ ಇಲ್ಲವೆಂಬುದೂ ಅವನಿಗೆ ಗೊತ್ತು. ಇಷ್ಟು ವರ್ಷ ಇಲ್ಲದಿದ್ದ ಈ ಅಜ್ಜಿ ಒಮ್ಮಿಂದೊಮ್ಮೆಲೆ ಎಲ್ಲಿಂದ ಬಂದಳು, ಆಕಾಶದಿಂದಲೋ ? ಚಂಪಾವತಿಯ ಮಾತು ಪೂರಾ ಸುಳ್ಳು. ಯಾವುದೋ ದುರುದ್ದೇಶದಿಂದ

ಇವರೇ ಕಸ್ತೂರಿಯನ್ನು ಎಲ್ಲಿಗೋ ಸಾಗಿಸಿರಲು ಸಾಕು - ಎಂದುಕೊಂಡು ಆತ ಹೆಚ್ಚು ಮಾತು ಬೆಳಸದೆ ಮೌನ ತಳೆದ.

ಒಂದು ವಾರ ಕಳೆದ ಬಳಿಕ ಕಸ್ತೂರಿ ಬಂದಳು.

ನಿಲಯದ ಮಕ್ಕಳೆಲ್ಲ ಅವಳ ಸುತ್ತ ಸೇರಿದರು. ಮಹಾದೇವನೂ ಅಲ್ಲಿಗೆ ಬಂದು ನೋಡಿದ.

ನೋಡಿದ. ತನ್ನ ಕಣ್ಣುಗಳನ್ನೆ ನಂಬಲಾಗಲಿಲ್ಲ ಅವನಿಗೆ. ಮಕ್ಕಳ ನಡುವೆ ಕುಳಿತಿದ್ದವಳು ಕಸ್ತೂರಿಯ ಹಾಗೆ ಕಾಣಿಸುತ್ತಿರಲಿಲ್ಲ. ಒಂದೇ ಒಂದು ವಾರದಲ್ಲಿ ಎಂಥ ಪರಿವರ್ತನೆ. ದೀರ್ಘ ಕಾಹಿಲೆಯಿಂದ ಎದ್ದವಳಂತೆ ಸೊರಗಿ ಕಡ್ಡಿಯಂತಾಗಿದ್ದಳು ಕಸ್ತೂರಿ. ಅವಳ ಮೈಬಣ್ಣವೆಲ್ಲ ಬೆಳ್ಳಗಾಗಿತ್ತು. ಮುಖದ ಮೇಲೆ ಹಳದಿಯ ಬಣ್ಣ ಹರಡಿಕೊಂಡಿತ್ತು. ಕಣ್ಣುಗಳು ಆಳಕ್ಕೆ ಇಳಿದುಹೋಗಿದ್ದುವು.

"ಏನಾತೇ ಅಕ್ಕಾ, ನಿನಗ ಏನಾತೇ ?" ಎಂದು ಹುಡುಗಿಯರು ಪ್ರಶ್ನಿಸುತ್ತಿದ್ದರು. ಯಾರಿಗೂ ಉತ್ತರವೀಯದೆ ಶವದಂತೆ ಕುಳಿತಿದ್ದಳು ಕಸ್ತೂರಿ.

"ಯಾಕೆ ಹೀಗಾಯಿತು ?" ಎಂದು ಹುಡುಗಿಯರ ಹಾಗೆ ತಾನೂ ಕೇಳಬೇಕೆನ್ನಿಸಲಿಲ್ಲ ಮಹಾದೇವನಿಗೆ. ಏಕೆ ಹಾಗಾಯಿತೆನ್ನುವುದು ಅವನಿಗಾಗಲೆ ಹೊಳೆದಿದ್ದಿತು. ನಿಲಯದಿಂದ ಕಸ್ತೂರಿ ಅದೃಶ್ಯವಾದಾಗಲೆ ಅವನಿಗೆ ಆ ಬಗೆಗೆ ಅನುಮಾನ ಬಂದಿದ್ದಿತು. ಕಸ್ತೂರಿ ಗರ್ಭಿಣಿಯಾಗಿರಬೇಕು, ಆ ಗರ್ಭವನ್ನು ನಿವಾರಿಸಲೆಂದೇ ಆಕೆಯನ್ನು ಎಲ್ಲಿಗೋ ಸಾಗಿಸಿರಬೇಕು ಚಂಪಾವತಿ...

ಅವನ ಊಹೆ ಸತ್ಯವಾಗಿ ಪರಿಣಮಿಸಿದ್ದಿತು. ಕಸ್ತೂರಿಯನ್ನು ಕೇಳಬೇಕಾದ ಆವಶ್ಯಕತೆಯಿರಲಿಲ್ಲ. ಅವಳಿಗಾದುದೇನೆಂಬುದನ್ನು ಅವಳ ದೇಹದ ಸ್ಥಿತಿಯೆ ಸಾರಿ ಹೇಳುತಿತ್ತು.

ಮತ್ತೆ ಅವನು ಮುಷ್ಟಿಗಳನ್ನು ಬಿಗಿದ, ರೋಷದಿಂದ ಕುದಿಯುತ್ತಾ ಚಂಪಾವತಿಯನ್ನು ಹುಡುಕಿಕೊಂಡು ಹೋದ. ಯಾವುದೋ ಸಭೆಗೆ ಹೋಗಿದ್ದ ಚಂಪಾವತಿ ಅವನ ಕ್ರೋಧದ ಹೊಡೆತಕ್ಕೆ ಸಿಕ್ಕದೆ ಉಳಿದುಕೊಂಡಳು.

ಗಾಯಗೊಂಡ ಹುಲಿಯಂತೆ ಎರಡು ದಿನಗಳವರೆಗೆ ಒಳಗೊಳಗೇ ತಳಮಳಿಸುತ್ತಿದ್ದ ಮಹಾದೇವ. ಚಂಪಾವತಿಯ ಕತ್ತು ಹಿಸುಕಿ ಕೊಲ್ಲಬೇಕು, ಚೆನ್ನಪ್ಪನವರನ್ನು ನೊಚ್ಚಿಯಿಂದ ಥಳಿಸಬೇಕು, ಕುಬೇರಪ್ಪನನ್ನು ಗುಂಡಿಟ್ಟು ಸುಡಬೇಕು - ಎಂದೆಲ್ಲ ಯೋಚಿಸುತ್ತಿದ್ದ. ಆದರೆ ಆ ಯೋಚನೆಗಳೂ ಬಹಳ ಹೊತ್ತು ಉಳಿಯುತ್ತಿರಲಿಲ್ಲ. ಕೊಟಡಿಯಲ್ಲಿದ್ದ ಗಾಂಧೀ ಚಿತ್ರ ದೃಷ್ಟಿಗೆ ಬಿದ್ದ ಹಾಗೆಲ್ಲ ಅವನ ಕ್ರೋಧವಿಳಿದು ಹೋಗುತಿತ್ತು.

ಕೆಲದಿನ ಹಾಗೆ ಕಳೆದ ಬಳಿಕ ಒಂದು ಸಾಯಂಕಾಲ ಚೆನ್ನಪ್ಪ ಮಹಾದೇವನನ್ನು ಒಳಗಿನ ಕೊಟಡಿಗೆ ಬರಮಾಡಿಕೊಂಡು,

"ನಿನ್ನ ಸಂಗತ ಒಂದು ನಾಜೂಕು ಸಂಗತಿ ಮಾತಾಡುವದದ ಮಹಾದೇವಾ," ಎಂದು ಆರಂಭಿಸಿದ.

"ನಮ್ಮಲ್ಲಿ ಇರುವ ಹುಡುಗ ಹುಡುಗಿಯರನ್ನೆಲ್ಲಾ ನಾವು ನಮ್ಮ ಹೊಟ್ಟೆಯ ಮಕ್ಕಳ ಹಾಗೆ ನೋಡಿಕೊಂಡು ಬರುತ್ತಿರೂದು ನಿನಗೆ ಗೊತ್ತೇ ಅದ ಮಹಾದೇವಾ. ನಿಮ್ಮೆಲ್ಲರ ಕಲ್ಯಾಣ ಮಾಡೂದು ನಮ್ಮ ಜವಾಬ್ದಾರಿ."

ಅವರು ಮತ್ತಾವ ಹೊಸ ತಂತ್ರ ಹೂಡುತ್ತಿರುವರೊ ಎಂದು ತನ್ನಲ್ಲಿಯೆ ಯೋಚಿಸುತ್ತ ಮೌನವಾಗಿ ಕುಳಿತಿದ್ದ ಮಹಾದೇವ.

ಚಂಪಾವತಿ ಹೇಳಿದಳು :

"ಬಹಳ ದಿನಗಳಿಂದ ನಾವಿಬ್ಬರೂ ನಿನ್ನ ಕಲ್ಯಾಣ ಕಾರ್ಯದ ಸಂಬಂಧದಲ್ಲಿ ವಿಚಾರ ಮಾಡುತ್ತ ಬಂದೀವಿ. ನಿನಗೂ ವಯಸ್ಸಾಗುತಾ ಬಂತು. ಪ್ರಾಯದವನಾದೆ. ನಿನಗ ಅನುರೂಪಳಾದ ಹುಡುಗೀನ್ನ ನೋಡಿ ಲಗ್ನ ಮಾಡಿಬಿಡೂದು ನೆಟ್ಟಗಂತ ನಿಶ್ಚಯ ಮಾಡಿದ್ದೀವಿ .."

ಮಹಾದೇವ ದಿಗಿಲುಗೊಂಡು ತಲೆ ಎತ್ತಿದ. ಲಗ್ನ ! ಇನ್ನೂ ಹದಿನೆಂಟನೆಯ ವರ್ಷ ಮುಗಿಸದಿರುವ ತನಗೆ ಲಗ್ನ....ಚೆನ್ನಪ್ಪ ಚಂಪಾವತಿಯರ ತಲೆಯಲ್ಲಿ ಇಂಥ ಯೋಚನೆಯಿರಬಹುದೆಂದು ಆತ ನಿರೀಕ್ಷಿಸಿಕೊಂಡಿರಲಿಲ್ಲ.

ಚಂಪಾವತಿ ನಡುವೆಯೆ ತಡೆದಿದ್ದ ಮಾತನ್ನು ಚೆನ್ನಪ್ಪ ಮುಂದುವರಿಸಿದರು :

"ಇಷ್ಟು ಚಿಕ್ಕ ವಯಸ್ಸಿನಲ್ಲೇ ಏನು ಲಗ್ನ ಅಂತ ಆಶ್ಚರ್ಯವಾಗ ಬಹುದು ನಿನಗೆ. ನನಗೇನೂ ಇದರಲ್ಲಿ ತಪ್ಪು ಕಾಣುವದಿಲ್ಲ. ವಯಸ್ಸಿಗೆ ಬಂದ ಹುಡುಗರಿಗೆ ಬೇಗ ಲಗ್ನ ಮಾಡುವದೇ ಒಳ್ಳೆಯದೆಂದು ನನ್ನ ಅಭಿ ಪ್ರಾಯ. ಅದಕ್ಕೆ...."

"ನಮ್ಮ ಕಸ್ತೂರಿ ಎಷ್ಟು ಚಲೋ ಹುಡುಗಿ ಅನ್ನುವದು ಗೊತ್ತೇ ಅದೆಯಲ್ಲ ನಿನಗೆ. ನಿನ್ನ ಕಂಡರೆ ಅವಳಿಗೂ ಬಹಳ ಪ್ರೀತಿ," ಚಂಪಾವತಿ ಮುಸಿಮುಸಿ ನಗುತ್ತಾ ಹೇಳತೊಡಗಿದಳು. "ಆಕೆ ಸಣ್ಣವಳಿದ್ದಾಗಿನಿಂದ ನಮ್ಮ ಮಗಳ ಹಾಗೆ ಜೋಪಾನ ಮಾಡಿದ್ದೀವಿ. ಓದೂದಕ್ಕೆ ಬರೆಯೂದಕ್ಕೆ ಬರುವಷ್ಟು ಇಂಗ್ಲೀಷು ಕೂಡಾ ಕಲಿಸಿದ್ದಾಯಿತು. ಆದರೆ ಇನ್ನು ಮ್ಯಾಲ ಮಾತ್ರ ಆವಳನ್ನ ಹೈಸ್ಕೂಲಿಗೆ ಕಳಿಸಿ ಉಪಯೋಗವಿಲ್ಲ - ಹುಡುಗಿ ದೊಡ್ಡವ ಳಾಗಿದ್ದಾಳೆ. ಅದಕ್ಕೇ ಅವಳನ್ನ ನಿನ್ನ ಉಡಿಗೆ ಹಾಕಿ ಇದೇ ವರ್ಷ ಮದುವೆ ಮುಗಿಸಿಬಿಡಬೇಕಂತ ನಿಶ್ಚಯ ಮಾಡಿದ್ದೀವಿ."

"ನೀನೇನೂ ಗಾಬರಿಯಾಗಬೇಕಾಗಿಲ್ಲ ಮಹಾದೇವಾ. ಮದುವೆ ಯಾಗುವದರಿಂದ ನಿನ್ನ ವಿದ್ಯಾಭ್ಯಾಸ ನಿಂತುಹೋದೀತೆಂದೂ ಹೆದರಬೇಕಾಗಿಲ್ಲ. ನೀನು ನಿನ್ನ ಹೆಂಡತಿ ಇಬ್ಬರೂ ಇಲ್ಲೇ ನಿಲಯದಲ್ಲೇ ಇರಬಹುದು. ಈಗಿನ ಹಾಗೇ ಅವಳು ಕೆಲಸ ಮಾಡಿಕೊಂಡು ಇರುತಾಳ. ಇನ್ನು ಮ್ಯಾಲ ಅವಳಿಗೆ ಸಂಬಳವನ್ನೂ ಕೊಡುತೀವಿ. ನೀನು ಯಾವ ಚಿಂತೆಯನ್ನೂ ಇಟ್ಟುಕೊಳ್ಳದೆ ವಿದ್ಯಾಭ್ಯಾಸ ಮುಂದರಿಸಬಹುದು. ಬಿ. ಎ. ತನಕ ಕಲಿಯುವದಾದರೂ ನಮಗೆ ಸಂತೋಷವೇ," ಎಂದರು ಚೆನ್ನಪ್ಪ.

"ನಿನ್ನ ಜಾಣತನವನ್ನ ನೋಡಿ ಸಾಹುಕಾರರೂ ಬಹಳ ಖುಷಿಯಾಗಿ ದ್ದಾರ ನಿನ್ನ ಮ್ಯಾಲ. ನಿನ್ನ ಶಿಕ್ಷಣಕ್ಕೆ ಬೇಕಾದ ಸಹಾಯ ಮಾಡುತೀನಂತ ಅವರೂ ಹೇಳಿದಾರ," ಎಂದಳು ಚಂಪಾವತಿ.

"ಏನನ್ನುತೀ ಮಹಾದೇವಾ? ಹೊಡೆದು ಬಿಡೂಣು ಹೌದಲ್ಲೋ ಮದುವೀ?"

ಒಂದುಕ್ಷಣ ಸುಮ್ಮನೆ ಕುಳಿತಿದ್ದು ಅನಂತರ ದನಿಯೆತ್ತಿ ಮಹಾದೇವ ಹೇಳಿದ:

" ನಿಮ್ಮ ತಂತ್ರ ಎಲ್ಲಾ ನನಗೂ ತಿಳೀತದ. ನಾನು ಏನೂ ಅರಿಯದ ಕೂಸು ಅಂತ ತಿಳಿದೀರೋ ಏನು ?"

ದಂಪತಿಗಳು ಬೆಚ್ಚಿ, " ಆ!" ಎನ್ನುತ್ತಾ ಕೊಂಚ ಹಿಂದೆ ಸರಿದು ಕುಳಿತರು. ಮಹಾದೇವ ಮುಂದುವರಿಸಿದ:

" ನನಗ ಈಗಲೇ ಮದುವೆಯಾಗುವ ಮನಸಿಲ್ಲ."

" ಅರೆ! ಯಾಕೆ? ಯಾಕೆ?" ಎಂದರು ಚೆನ್ನಪ್ಪ.

" ಯಾಕಿಲ್ಲ, ಏನಿಲ್ಲ. ಅಂತೂ ಈಗ ಮದುವೆಯಾಗುವ ಮನಸ್ಸಿಲ್ಲ."

" ಕಸ್ತೂರಿ...."

" ಆ ಪರದೇಶಿ ಹುಡುಗೀನ್ನ ನೀವೆಲ್ಲಾ ಕೂಡಿ ಯಾವ ಗತಿಗೆ ತಂದೀರಿ ಅನ್ನೂದೂ ನನಗ ಗೊತ್ತದ. ಅವಳನ್ನ ನೋಡಿದಾಗೆಲ್ಲಾ ನನ್ನ ಎದೆಯೊಳಗ ಬೆಂಕಿಯುರೀತದ," ಎಂದು ಹೇಳುತ್ತ ಮಹಾದೇವ ಎದ್ದು ನಿಂತ: " ಹರಿಜನ ನಿಲಯದ ಹೆಸರಿನೊಳಗ ಇಲ್ಲಿ ನೀವು ಸೂಳೆಗೇರಿ ನಡಸುತಾ ಇರೂದನ್ನ ನೋಡೂದಕ್ಕಾಗದೆ ಇಲ್ಲಿಂದ ಹೊರಟುಬಿಡುವ ವಿಚಾರದೊಳಗೇ ನಾನಿದ್ದಿನಿ. ಈ ನರಕದಿಂದ ಆ ಪರದೇಶಿ ಕಸ್ತೂರಿಯನ್ನೂ ಪಾರುಮಾಡ ಬೇಕಂತ ಅಂದುಕೊಂಡಿದ್ದಿನಿ. ಆದರ, ಆದರ...." ಎಂದು ದಡಬಡನೆ ನುಡಿದು ಮಾತನ್ನು ಮುಗಿಸದೆ ಆ ಕೊಟಡಿಯಿಂದ ಹೊರಟ ಮಹಾದೇವ.

ಅವನನ್ನು ಸಂತೈಸಿ ಬುದ್ಧಿವಾದ ಹೇಳಲೆಂದು ಚೆನ್ನಪ್ಪ ಮುಂದಾಗಿ ಬಂದರು.

" ಮಹಾದೇವಾ, ಮಹಾದೇವಾ."

ಆತ ಥಟ್ಟನೆ ಹಿಂದೆ ಹೊರಳಿ ತೀಕ್ಷ್ಣ ದೃಷ್ಟಿಯಿಂದ ಚೆನ್ನಪ್ಪನವರನ್ನು ನಿಟ್ಟಿಸುತ್ತ,

" ನೀ ನನ್ನ ಮುಟ್ಟಬ್ಯಾಡ, ಮುಟ್ಟಬ್ಯಾಡ - ನಿನ್ನಂಥಾ ಹೊಲೆಯನ್ನ, ನಿನ್ನ ಹೆಂಡತಿಯಂಥಾ ಹೊಲತಿಯನ್ನ ನಾನು ಬ್ಯಾರೆ ಎಲ್ಲಿಯೂ ಕಂಡಿಲ್ಲ. ಬೆಂಕಿ ಹಾಕಬೇಕು ನಿಮ್ಮ ಬಾಳಿಗೆ. ಹೊಲೆಯರನ್ನು ಉದ್ಧಾರಮಾಡುವ ಸೋಗು ಹಾಕಿ ನೀವೇ ಹೊಲೆಯರಾದಿರಿ," ಎಂದು ನುಡಿದ.

ಚಂಪಾವತಿ ಕೋಪದಿಂದ ಕಂಪಿಸುತ್ತ ಮಹಾದೇವನನ್ನು ಹೊಡೆಯಲು ಕೈಯೆತ್ತಿ ಮುಂದೆ ಬಂದಳು.

"ಚಂಡಾಲಾ. ನಡೀ ಹೋಗು ಇಲ್ಲಿಂದ. ಬಾಯಿಗೆ ಬಂದದ್ದು ಬೊಗಳುತಾ ನಿಂತಾನ. ಕೃತಘ್ನ. ನಿಮ್ಮಂಥವರಿಗೆ ಆಶ್ರಯ ಕೊಡೂದು ಅಂದರೆ ಹಾವುಗಳಿಗೆ ಆಶ್ರಯ ಕೊಟ್ಟಂತೆ. ಏಳು ನಿನ್ನ ಗಂಟುಮೂಟೆ ಕಟ್ಟಿ ಈಗಿಂದೀಗ ಹೊರಡು."

"ನೀನು ಹೇಳುವ ಮೊದಲೇ ನಾನೇ ಹೊರಟುಬಿಡಬೇಕಂತ ನಿಶ್ಚಯ ಮಾಡಿದ್ದಿನಿ. ನೀನು ಕೂಗುವ ಅಗತ್ಯವೇ ಇಲ್ಲ. ಈಗಲೇ ಹೋಗುತೀನಿ," ಎನ್ನುತ್ತಾ ತನ್ನ ಪುಸ್ತಕಗಳನ್ನೂ ಬಟ್ಟೆಗಳನ್ನೂ ಹಾಸಿಗೆಯಲ್ಲಿ ಸುತ್ತಿ, ಅದನ್ನು ಹೆಗಲ ಮೇಲಿಟ್ಟುಕೊಂಡು ಹೊರಟ ಮಹಾದೇವ.

"ಸ್ವಲ್ಪ ತಾಳು ಮಹಾದೇವಾ. ನನ್ನ ಮಾತು ಸ್ವಲ್ಪ ಕೇಳು. ನಾ ಹೇಳೂದು ಏನಂದರೆ...." ಎಂದು ಚೆನ್ನಪ್ಪ ಸಂಧಾನಕ್ಕೆ ಯತ್ನಿಸುತ್ತಿದ್ದಂತೆಯೆ ಚಂಪಾವತಿ ಅವರ ಬಾಯಿ ಬಡಿದು ಕೂಗಿಕೊಂಡಳು: "ನಡೀ, ನಡೀ. ನನ್ನ ಕಣ್ಣೆದುರು ನಿಲ್ಲಬ್ಯಾಡ."

ಅವಳಿಗೆ ಉತ್ತರವೀಯುವ ಗೊಡವೆಗೆ ಬೀಳದೆ ಮಹಾದೇವ ನಿಲಯವನ್ನು ತ್ಯಜಿಸಿ ನಡೆದ. ನಗರದ ಕಡೆಗೆ ಹೋಗುವ ಮುಖ್ಯ ರಸ್ತೆಗೆ ಬಂದು ಮುಟ್ಟಿದ ಬಳಿಕ ಆತ ನಿಧಾನವಾಗಿ ಹಿಂದಿರುಗಿ ನಿಲಯದ ಕಡೆ ದೃಷ್ಟಿ ತಿರುಗಿಸಿದಾಗ ಕಸ್ತೂರಿ ಮೆಲ್ಲಗೆ ಅಡಿಯಿಡುತ್ತ ತನ್ನನ್ನು ಹಿಂಬಾಲಿಸಿಕೊಂಡು ಬರುತ್ತಿದ್ದುದು ಕಾಣಿಸಿತು. ಚಕಿತನಾಗಿ ಆತ ಅಲ್ಲಿಯೆ ನಿಂತುಕೊಂಡು, ಕಸ್ತೂರಿ ಹತ್ತಿರ ಬರುತ್ತಲೂ ಕನಿಕರಬೆರೆತ ದೃಷ್ಟಿಯಿಂದ ಅವಳನ್ನು ನಿಟ್ಟಿಸುತ್ತ,

"ನನ್ನ ಸಂಗಡ ನೀನೆಲ್ಲಿಗೆ ಹೊರಟೆ ಕಸ್ತೂರೀ?" ಎಂದ.

ದೃಷ್ಟಿಯನ್ನು ಮೇಲಕ್ಕೆತ್ತದೆ ಅವಳು ಕೇಳಿದಳು:

"ನಾನು ಬರೂದು ಬ್ಯಾಡ ಅಂತೀಯಾ ಮಾದೇವಾ?"

ಆತ ಉದ್ವಿಗ್ನನಾಗಿ ನುಡಿದ: "ಎಲ್ಲಿ ಅಂತ ಬರ್ತೀಯೇ ಹುಚ್ಚೀ ನನ್ನ ಸಂಗಡ?"

“ನನ್ನಿಂದ ನಿನಗೇನೂ ತ್ರಾಸ ಆಗದ ಹಾಂಗಿದ್ದರ ನೀ ಹೋದಲ್ಲಿಗೆ ಬರುತೀನಿ ಮಾದೇವಾ.”

“ಆದರs, ಆದರs,” ಎಂದು ನುಡಿದು ಸ್ವಲ್ಪ ತಡೆದು ಅವನು ಕೇಳಿದ: “ನಿನ್ನನ್ನ ಹ್ಯಾಂಗಾದರೂ ಬಿಟ್ಟರವರು ಕಸ್ತೂರೀ?”

“ನಾ ಹೊರಟರ ಸಾಕಾಗಿತ್ತು ಅವರಿಗೆ. ನಿನ್ನ ಹಿಂದ ನಾನೂ ಹೊರಟು ನಿಂತಾಗ ಪೀಡಾ ಹೋಯಿತು ಬಿಡಿರಿ ಅಂದಳು ಚಂಪವ್ವ.”

“ಹಾಂಗಂದಳೇ? ಎಲ ಎಲಾ,” ಎನ್ನುತ್ತಾ ಮಹಾದೇವ ಮಾತನ್ನು ನಿಲ್ಲಿಸಿದ. ಹಠಾತ್ತಾಗಿ ಅವನೆದುರಿಗೆ ಮಹಾಸಮಸ್ಯೆಯೊಂದು ತಲೆಯೆತ್ತಿ ನಿಂತುಕೊಂಡಿದ್ದಿತು. ಅದನ್ನು ಪರಿಹರಿಸುವುದಾದರೂ ಹೇಗೆ? ವಿದ್ಯಾಭ್ಯಾಸಕ್ಕೆ ಇಲ್ಲಿಗೇ ಶರಣು ಹೊಡೆದು ಸೇವಾರಂಗಕ್ಕೆ ದುಮುಕುವುದೆಂದು ತಾನು ಸಂಕಲ್ಪಿಸಿಕೊಂಡುದಾಗಿದ್ದಿತು. ತನ್ನೊಬ್ಬನ ಹೊಟ್ಟೆಯನ್ನು ತಾನು ಹೇಗೂ ತುಂಬಿಸಿಕೊಳ್ಳಬಲ್ಲ. ಮೊಚ್ಚೆ ಹೊಲಿಯುವ ಕಾಯಕವಂತೂ ಇದ್ದೇ ಇದೆಯಲ್ಲ. ಅದನ್ನು ನಡಸಿಕೊಂಡೇ ತನ್ನ ಧ್ಯೇಯವನ್ನೂ ಸಾಧಿಸಲು ದುಡಿಯಬಹುದು. ಆದರೆ....ಈ ಕಸ್ತೂರಿ....ಇವಳನ್ನು ಕಟ್ಟಿಕೊಂಡು ... ಛೆ....ಛೆ....ಒಳ್ಳೆಯ ಪೀಕಲಾಟವೇ ಬಂದಿತಲ್ಲ....

“ನನಗ ಹಂಗಾಯಿತಂತ ನಿನಗೂ ಹೇಸಿಕೆಯಾಗ್ಯದೇನು ಮಾದೇವಾ?” ಕಸ್ತೂರಿ ಮೆಲ್ಲಗಿನ ದನಿಯಲ್ಲಿ ಕೇಳಿದಳು.

“ಛಿ. ಛಿ. ಅಂಥಾದ್ದೇನೂ ಇಲ್ಲ ಕಸ್ತೂರೀ. ನಡದಿದ್ದರಾಗ ನಿನ್ನ ತಪ್ಪೇನೂ ಇಲ್ಲ ಅನ್ನೂದು ನನಗೇನು ಗೊತ್ತಿಲ್ಲೇನು? ಎಲ್ಲಾ ಆ ಪಾಪಿಗಳ ಕಾರಭಾರ ...”

“ಮತ್ತ್ಯಾಕ ಬ್ಯಾಸರ ನಿನಗ ಮಾದೇವಾ? ನಾನೊಬ್ಬಳು ನಿನಗ ಭಾರ ಆಗುತೀನಿ ಅಂತ ಏನು? ನಾನೇನು ಸುಮ್ಮನ ಕೂಡುವದಿಲ್ಲ. ಕೂಲಿ ಆದರೂ ಮಾಡುತೀನಿ. ನಿನಗ ತ್ರಾಸ ಆಗದಹಾಂಗ ಇರುತೀನಿ.”

“ಊಹೂಂ. ಅದೆಲ್ಲಾ ಏನು ದೊಡ್ಡದಲ್ಲ. ಆದರs ಈಗs ಮನೀ ಮಾಡಿಕೊಂಡು ಒಂದು ಕಡೆ ಕಾಯಂ ಆಗಿ ಇರೂದಕ್ಕ ನನಗ ಮನಸಿಲ್ಲ ಕಸ್ತೂರೀ - ಸಾಲೀ ಅಂತೂ ಈಗs ಬಿಟ್ಟದ್ದಾತು. ಇನ್ನು ಮ್ಯಾಲ ಹಳ್ಳಿ ಹಳ್ಳಿ

ತಿರುಗಿ ನಮ್ಮ ಸಮಾಜದಾಗ ಜಾಗ್ರುತಿ ಮಾಡಬೇಕಂತ ವಿಚಾರ ಮಾಡೀನಿ."

ಕಸ್ತೂರಿಯ ಕಳಾಹೀನ ಮುಖದಲ್ಲಿ ನವೀನ ಚೇತನ ಸಂಚರಿಸಿದಂತಾಯಿತು. ಉತ್ಸಾಹಭರಿತ ಸ್ವರದಲ್ಲಿ ಅವಳೆಂದಳು:

"ಹಾಂಗೇ ಮಾಡು ಮಾದೇವಾ. ಯಾರು ಬ್ಯಾಡಂತಾರು ನಿನಗ? ಬೇಕಾದರ ಇಬ್ಬರೂ ಕೂಡಿ ಕೆಲಸ ಮಾಡೂಣು. ನಿನಗದು ಸರಿಬರದಿದ್ದರ ನಾ ಇರುತೀನಿ ಮನಿಯೊಳಗ. ಹೊರಗಡೆ ತಿರುಗಾಡೂದಕ್ಕ ನೀ ಸ್ವತಂತ್ರ ಇದ್ದೀ. ನಾನೇನು ಕಟ್ಟ ಹಾಕುವದಿಲ್ಲಲ್ಲ..."

ಸಂಜೆಯ ರಂಗು ಮೆಲ್ಲಮೆಲ್ಲನೆ ಮಾಯವಾಗಿ ಇರುಳು ಕಪ್ಪು ಸೃಷ್ಟಿಯ ಮೇಲೆ ಸವಾರಿ ಮಾಡತೊಡಗಿದ್ದಿತು. ದಿನವಿಡೀ ಹಾರಾಡುತಿದ್ದ ಹಕ್ಕಿಗಳ ಹಿಂಡು ಗೂಡುಗಳನ್ನು ಸೇರುವ ಆತುರದಿಂದ ಹೊರಟಿದ್ದಿತು. ನಿಲಯದಿಂದ ಹೊರಬಂದ ಕಸ್ತೂರಿಗೂ ಒಂದು ಗೂಡು ಬೇಕು- ಅದು ದೊರೆಯದಿದ್ದಲ್ಲಿ ಅವಳು...

ಆತ ಗಾಬರಿಗೊಂಡ, ಗೊಂದಲಕ್ಕೊಳಗಾದ. ಅವಳನ್ನು ಹಾಗೆಯೆ ಬಿಟ್ಟು ಹೊರಡುವಂತಿಲ್ಲ, ಜತೆಗೆ ಕರೆದೊಯ್ಯಲು ಪೂರ್ಣ ನಿರ್ಧಾರವೂ ಇಲ್ಲ.

"ನೀ ಬ್ಯಾಡಂದರ ನಾನೇನೂ ಬರುವದಿಲ್ಲ ಮಾದೇವಾ" ಎಂದು ಅವಳು ತನ್ನ ಮುಖವನ್ನು ಅತ್ತ ತಿರುಗಿಸಿದಳು.

ಹೊಯ್ದಾಡುತ್ತಿದ್ದ ಮನಸ್ಸನ್ನು ಹತೋಟಿಗೆ ತಂದುಕೊಳ್ಳಲು ಯತ್ನಿಸುತ್ತ ಆತ ಒಂದು ನಿಮಿಷ ಹಾಗೆಯೆ ನಿಂತುಕೊಂಡಿದ್ದ, ಅನಂತರ ದನಿಯೆತ್ತಿ, "ನನ್ನ ಕ್ಷಮಾ ಮಾಡು ಕಸ್ತೂರೀ. ನಾ ಬರ್ತೀನಿ," ಎಂದು ನುಡಿದವನೆ ನಗರದ ಹಾದಿ ಹಿಡಿದು ಹೊರಟುಬಿಟ್ಟ.

ಹತ್ತಿಪ್ಪತ್ತು ಹೆಜ್ಜೆ ನಡೆದುಹೋದ ಬಳಿಕ ಮತ್ತೆ ಅವನ ಮನಸ್ಸು ಹೊಯ್ದಾಡತೊಡಗಿತು. ಆ ಅನಾಥೆಯನ್ನು ಹಾಗೆ ರಸ್ತೆಯ ಮೇಲೆ ಬಿಟ್ಟು ಮುನ್ನಡೆಯುವುದು ಮಹಾ ಹೇಡಿತನವೆಂದು ಅವನಿಗೆನ್ನಿಸತೊಡಗಿತು. ಅಪಾರವಾದ ಮರುಕ ಚಿಮ್ಮಿಬಂತು ಅವನ ಹೃದಯದಲ್ಲಿ: ಅವಳ ಬಗೆಗೆ ಮರುಕ, ಅವಳಂಥ ಎಲ್ಲ ಅನಾಥೆಯರ ಬಗೆಗೆ ಮರುಕ, ಪ್ರಪಂಚದ ಅನಾಥರೆಲ್ಲರ ಪ್ರತೀಕದಂತಿದ್ದ ತನ್ನ ದಲಿತ ಸಮಾಜದ ಬಗೆಗೆ ಮರುಕ.

"ಒಂದು ವ್ಯಕ್ತಿಗೆ ಸಹಾಯ ಮಾಡಲಾರದ ಹೇಡಿ ನೀನು ಒಂದು ಸಮಾಜಕ್ಕೇನು ಸಹಾಯ ಮಾಡಬಲ್ಲೆ?" ಎಂದು ಯಾರೋ ಕೂಗಿದಂತಾಯಿತು ಅವನ ಕಿವಿಗಳಲ್ಲಿ.

ಆತ ಮಿಂಚಿನಂತೆ ಹೊರಳಿದ, ವೇಗವಾಗಿ ಹೆಜ್ಜೆ ಹಾಕುತ್ತಾ ಕಸ್ತೂರಿ ನಿಂತಿದ್ದ ಸ್ಥಳಕ್ಕೆ ಧಾವಿಸಿದ.

ದಟ್ಟವಾಗಿ ಹರಡುತ್ತಿದ್ದ ಕತ್ತಲಲ್ಲಿ ಕಸ್ತೂರಿ ಕಾಣಿಸಲಿಲ್ಲ.

ಆತ ಕಳವಳದಿಂದ ಕೂಗಿಕೊಂಡ: "ಕಸ್ತೂರೀ, ಓ ಕಸ್ತೂರೀ,"

ಕೊಂಚ ದೂರದಿಂದ ಅವಳ ಮರುದನಿ ಕೇಳಬಂದಿತು. ಮಹಾದೇವ ಅತ್ತ ಧಾವಿಸಿದ.

ರಸ್ತೆಯ ಪಕ್ಕದಲ್ಲಿನ ಹೆಮ್ಮರವೊಂದರ ಬೊಡ್ಡೆಗೊರಗಿ ಕುಳಿತು ಕಂಬನಿಗರೆಯುತ್ತಿದ್ದಳು ಕಸ್ತೂರಿ. ಮಹಾದೇವ ತನ್ನ ಬಳಿ ಬಂದುದು ಗೊತ್ತಾದ ಮೇಲೂ ಕೂಡ ಅವಳು ಮೇಲಕ್ಕೇಳಲಿಲ್ಲ.

ಮಮತೆ, ಕರುಣೆ, ಸ್ನೇಹ ತುಂಬಿದೆದೆಯಿಂದ ಮಹಾದೇವ ಅವಳ ಕೈ ಹಿಡಿದು ಮೆಲ್ಲಗೆ ಮೇಲಕ್ಕೆಬ್ಬಿಸಿದ, ತನ್ನ ಧೋತರದ ಅಂಚಿನಿಂದ ಅವಳ ಕಂಬನಿಗಳನ್ನಳಿಸಿ ಮಾತನಾಡಿದ:

"ಬಾ ಕಸ್ತೂರೀ, ಹೋಗೋಣ."

ಮಲಾಮರಡಿ — ಜನವರಿ ೧೯೫೪